
ಬಿಸಿಲ
ಜುಲೈ ೧೯೯೯ ರೂ. ೧೦
■ ವಾಣಿಜ್ಯ ■ ವಿಕಾಸ ■ ಮಾಹಿತಿ ■ ಸಂಪರ್ಕ
ಮಾಸ ಪತ್ರಿಕೆ

ಭ್ರಷ್ಟಾಚಾರ



ತಲೆದಂಡ !

ರೇಲ್ವೇ
'ವಲಯ ರಾಜಕೀಯ'

'ಬಿಸಿಲ ಬದುಕು' ಮಾಸ ಪತ್ರಿಕೆಯ ಸಮಗ್ರ ಬದಲಾವಣೆ ಕುರಿತು ಓದುಗರ ಅಭಿಪ್ರಾಯ ಕೇಳಿದ್ದೆವು. ಓದುಗರು ನಮ್ಮ ನಿರೀಕ್ಷೆಗೂ ಮೀರಿ ಸ್ಪಂದಿಸಿದ್ದಾರೆ. ಹಲವಾರು ಉಪಯುಕ್ತ ಸೂಚನೆ, ಸಲಹೆ ನೀಡಿ ಸಹಕರಿಸಿದ್ದಾರೆ. ಓದುಗರ, ತಜ್ಞರ, ಹಿತೈಷಿಗಳ, ಏಜೆಂಟರ ಅಭಿಪ್ರಾಯ ಕ್ರೋಢೀಕರಿಸಿ 'ಬದುಕು' ಪತ್ರಿಕೆಗೆ ಹೊಸ ರೂಪ ಕೊಡುವ ಕಾರ್ಯ ಭರದಿಂದ ಸಾಗಿದೆ. ಮುಂದಿನ ಸಂಚಿಕೆ ಹೊಚ್ಚ ಹೊಸತನದಿಂದ ನಿಮ್ಮ ನಿರೀಕ್ಷೆ ತಣಿಸಲಿದೆ.

ಮುಂದಿನ ಸಂಚಿಕೆಯಿಂದ ನಿಮ್ಮೆಲ್ಲರ ಆಶಯದಂತೆ

ಬದುಕು ಸಂಪೂರ್ಣ ಬದಲು!

ಬಿಸಿಲ ಬದುಕು

ಜುಲೈ 1999 ಸಂಪುಟ 3 ಸಂಚಿಕೆ 1

ಸಂಪಾದಕ
ಚಂದ್ರಕಾಂತ ವಡ್ಡು

ಕಾರ್ಯನಿರ್ವಾಹಕ ಸಂಪಾದಕ
ಎಂ.ಎಲ್. ದೇಶೀಕರ್

ಸಂಪಾದಕೀಯ ನೆರವು
ಲಿಂಗರಾಜು

ನಿರ್ವಹಣೆ
ಸಿ.ಪಿ. ಸುರೇಶ್

ವಿಳಾಸ
ಬಿಸಿಲ ಬದುಕು ಮಾಸ ಪತ್ರಿಕೆ
ಅಂಕುರ ಪ್ರಕಾಶನ, ಅಂಚೆ ಪೆಟ್ಟಿಗೆ: 7951
ಬಸವೇಶ್ವರ ನಗರ, ಬೆಂಗಳೂರು- 560 079
ದೂರವಾಣಿ: 3307810

Printed, Published and Owned by Chandrakanta Vaddu, 473, I Cross, I Block, III Stage, Near Water Tank Bus Stop, Basaveshwaranagar, Bangalore - 560 079. Tel : 080 3307810 Pager : 9622 738638 Editor : Chandrakanta Vaddu

ಕಾರ್ಗಿಲ್

ಕಾರ್ಗಿಲ್ ರುದ್ರ ರಮಣೀಯ ತಾಣ. ನೀರು ಹಿಮವಾಗಿ ಮೂಡಿ ನಿಂತ ಬೆಟ್ಟಗಳು. ಮುಗಿಲೆತ್ತರದ ಶಿಖರಗಳು. ಪಾತಾಳ ಮುಟ್ಟುವ ಕಂದರಗಳು. ಹರಕು ಹರಕಾದ ಕುರುಚಲು ಗಿಡ. ಇಡೀ ವಾತಾವರಣ ಮೌನದಲ್ಲಿ ಅದ್ದಿ ಇಟ್ಟಂತೆ. ಜೊತೆಗೆ ಮೈ ಹೆಪ್ಪುಗಟ್ಟಿಸುವ ಚಳಿ; ಚಳಿಗಾಲ ಬಂತೆಂದರೆ ಹಕ್ಕಿಗಳು ಕೂಡ ಇಲ್ಲಿ ಹಾರುವುದಿಲ್ಲ. ಬೇಸಿಗೆ ಆರಂಭ ಆಗುತ್ತಿದ್ದಂತೆ ಹಿಮ ಕರಗಲಾರಂಭಿಸುತ್ತದೆ. ನೀರ್ಗಲ್ಲುಗಳು ಉರುಳಿ ಬೀಳಲಾರಂಭಿಸುತ್ತವೆ. ಈಗ ಆ ಗಿರಿ, ಕಂದರಗಳಲ್ಲಿ ಹಗಲು, ರಾತ್ರಿ ತೋಪುಗಳು ಗುಡುಗುವ ಸದ್ದು. ಕಿವಿ ಕಿವುಡಾಗಿಸುವ ಸಿಡಿತದ ಸದ್ದು ಬೆಟ್ಟ, ಕಣಿವೆಗಳಲ್ಲಿ ಅನುರಣಿಸಿ ದಿಕ್ಕು ತಪ್ಪಿಸುತ್ತದೆ.

ಅದೀಗ ರುದ್ರ ನಾಟಕ ಒಂದರ ರಂಗ. ಪಾಕ್ ಬೆಂಬಲದ ತಾಲಿಬಾನ್ ಉಗ್ರಗಾಮಿಗಳ ರಂಗಭೂಮಿ. ಈವರೆಗೆ ನಮ್ಮ ಇನ್ನೂರ ನಲವತ್ತು ಸೈನಿಕರು ಹತರಾಗಿದ್ದಾರೆ. ಸತ್ತ ಎದುರಾಳಿಗಳ ಸಂಖ್ಯೆ ಇನ್ನೂ ಹೆಚ್ಚು. ಅಲ್ಲೀಗ ಯುದ್ಧದ ಸ್ಥಿತಿ. ಪಾಕಿಸ್ತಾನ ತೆರೆಯ ಮರೆಯಲ್ಲಿ ನಿಂತು ಆಡಿಸುತ್ತಿರುವ ಈ ನಾಟಕಕ್ಕೆ, ಜಗತ್ತೆಲ್ಲ ಛೀಮಾರಿ ಹಾಕಿದೆ. ಅವರದೇ ಪತ್ರಿಕೆಗಳು, ಜನ ಕೆಂಡ ಕಾರಿದ್ದಾರೆ. ಆಡಳಿತ ಸರಿಯಾಗಿ ನಡೆಸಲಾಗದ ಅಲ್ಲಿನ ಧುರೀಣರಿಗೆ ಜನರನ್ನು ಭಾವುಕವಾಗಿ ಮರುಳುಗೊಳಿಸುವ ಚಟ. ಇತಿಹಾಸದಿಂದ ಪಾಕ್ ಪಾಠ ಕಲಿತಿಲ್ಲ. ಬಹುಶಃ ಕಲಿಯುವುದೂ ಇಲ್ಲ. ಈಗಾಗಲೇ ಭಾರತದ ಜೊತೆ ಯುದ್ಧಕ್ಕಿಳಿಸಿ ಎರಡು ಬಾರಿ ಆ ದೇಶ ಮಣ್ಣು ಮುಕ್ಕಿದೆ. 1965, 1971ರ ಯುದ್ಧ ಇನ್ನೂ ಹಸಿ ನೆನಪು. ಅದರಲ್ಲೂ 1971ರ ಯುದ್ಧದ ನಂತರ ಪೂರ್ವ ಪಾಕಿಸ್ತಾನ ಕೈಬಿಟ್ಟಿತು. ಅಲ್ಲಿ ಬಾಂಗ್ಲಾದೇಶ ಉದಯಿಸಿತು. ಪಾಕ್ ದಂಡನಾಯಕ ಜನರಲ್ ನಿಯಾಜಿ ಸೋತು ಶರಣಾದರು. ಸಾಮಾನ್ಯ ಸೈನಿಕನಿಗೂ ಕೂಡ ಶರಣಾಗುವುದು ಸಾವಿಗಿಂತ ಹೀನ. ಇಷ್ಟಾದರೂ ಪಾಕಿಸ್ತಾನಕ್ಕೆ ಯುದ್ಧ ಬೇಕು. ಇದು ವಿಪರ್ಯಾಸ.

ಭಾರತ ಆದಷ್ಟೂ ಸಂಯಮದಿಂದ ವರ್ತಿಸುತ್ತಾ ಇದೆ. ಆದರೆ ತನ್ನತನ, ಸ್ವಾತಂತ್ರ್ಯ, ಆಕ್ರಮಿತ ಭೂಮಿಯ ಮರುವಶದ ವಿಚಾರದಲ್ಲಿ ದೃಢವಾಗಿದೆ. ಈಚೆಗೆ ಪ್ರಧಾನಿ ವಾಜಪೇಯಿ ಕಾರ್ಗಿಲ್‌ಗೆ ಭೇಟಿ ನೀಡಿದ್ದರು. ಗಾಯಗೊಂಡ ಸೈನಿಕನೊಬ್ಬ ಕಳಕಳಿಯಿಂದ ಅವರನ್ನು ಕೋರಿಕೊಂಡ : 'ನೀವು ಏನು ಬೇಕಾದರೂ ಮಾಡಿ. ಕದನ ವಿರಾಮ ಮಾತ್ರ ಘೋಷಿಸಬೇಡಿ. ಉಳಿದದ್ದು ನಮಗೆ ಬಿಡಿ.' ಭಾರತೀಯರ ಕೆಚ್ಚು ಮತ್ತು ಸಾಮರ್ಥ್ಯದ ಬಗೆಗಿನ ನಂಬಿಕೆಗೆ ಇದೊಂದು ಸಣ್ಣ ನಿದರ್ಶನ.

ಕಾರ್ಗಿಲ್ ತುಂಬಾ ದೂರ. ಅಲ್ಲಿ ನಮ್ಮ ಬೆಳಗಾವಿ, ಬಿಜಾಪುರ ಮತ್ತು ಕೊಡಗಿನ ಹುಡುಗರು ಕಾದುತ್ತಿದ್ದಾರೆ. ಅವರೆಲ್ಲ ಎಳೆಯ ತರುಣರು. ಕೆಲವರು ಈಗಾಗಲೇ ಕಾದುತ್ತಾ ಜೀವ ತೆತ್ತಿದ್ದಾರೆ. ನಮಗಾಗಿ ಮಡಿದ ಅವರ ತ್ಯಾಗ ದೊಡ್ಡದು. ಆ ತ್ಯಾಗದ ಬಗ್ಗೆ ಕೃತಜ್ಞತೆಯಿಂದ, ಗೌರವದಿಂದ ನಡೆದುಕೊಳ್ಳುವ ಜವಾಬ್ದಾರಿ ಈಗ ನಮ್ಮದು.

ಇಂಥ ಯುದ್ಧ ಬಯಸಿ ತಂದುಕೊಂಡದ್ದಲ್ಲ. ತಾನಾಗಿ ಬಂದದ್ದು. ಅದನ್ನು ವಿಚಕ್ಷಣತೆಯಿಂದ ಎದುರಿಸುವುದಷ್ಟೇ ನಮಗೀಗ ಉಳಿದ ದಾರಿ.

-ಸಂಪಾದಕ

ಹಾಸ್ಯ

ಸೌಂದರ್ಯ ಸುಖಿ

ಬಸ್ ಸ್ಟಾಪಿನಲ್ಲಿ ಆತ ರಮಣಿಗೆ ತನ್ನನ್ನು ಪರಿಚಯಿಸಿಕೊಂಡ.

'ನನ್ನ ಹೆಸರು ರಾಮಸ್ವಾಮಿ ಅಂತ. ನನ್ನ ನಡೆನುಡಿಗಳನ್ನು ಅಕ್ಕಪಕ್ಕದ ಮನೆಯವರೆಲ್ಲಾ ಮೆಚ್ಚಿಕೊಂಡಿದ್ದಾರೆ. ನಾನೊಬ್ಬ ಸಾಹಿತ್ಯ ಪ್ರಿಯ, ಸಂಗೀತ ಪ್ರೇಮಿ, ಸೌಂದರ್ಯಸುಖಿ, ಕನ್ನಡಿ ಎದುರು ನಿಂತು ನೋಡಿಕೊಂಡರೆ ನಾನು ಸುಂದರಾಂಗ ಎನ್ನುವುದರಲ್ಲಿ ಸಂಶಯವಿಲ್ಲ. ಸಾಕಷ್ಟು ವಿದ್ಯಾವಂತ ಶ್ರೇಷ್ಠ ಕ್ರೀಡಾಪಟು ಎಂದು ನನ್ನನ್ನು ನಾನೇ ಹೊಗಳಿಕೊಳ್ಳಲು ಇಷ್ಟವಿಲ್ಲ. ಜೊತೆಗೆ ಆಧುನಿಕತೆಯ ಕೈಗನ್ನಡಿಯಾದ ಸಿನಿಮಾ ಥಿಯೇಟರ್‌ನಲ್ಲಿ ಕೆಲಸ. ಅಂದರೆ ಸ್ಕ್ರೀನ್ ಮೇಲೆ ರೀಲು ಬಿಡುವುದು.

'ಓಹ್! ನಿಮಗೆ ರೀಲು ಬಿಡುವುದಕ್ಕೂ ಬರುತ್ತಾ?' ಕೇಳಿದಳು ರಮಣಿ.

'ನಾನು ಇದುವರೆಗೆ ನಿಮ್ಮ ಮುಂದೆ ಬಿಟ್ಟಿದ್ದು ಇನ್ನೇನು ಅಂತ ತಿಳಿದಿರಿ?'

ಆತ ಅಲ್ಲಿ ನಿಲ್ಲಲಿಲ್ಲ.

ಟಿಕೆಟ್ ಕಲೆಕ್ಟರ್

'ಏನಯ್ಯಾ ಆರ್ಡಿನರಿ ಟ್ರೇನ್ ಟಿಕೆಟ್ ತೊಗೊಂಡಿದಿಯಾ, ಇದು 'ಎಕ್ಸ್‌ಪ್ರೆಸ್' ಗೊತ್ತಿಲ್ವೆ?'

ಪ್ರಯಾಣಿಕ : 'ಏನ್ಮಾಡ್ಲಿ ಸ್ವಾಮಿ? ನನ್ತಪ್ಪೇ? ಡ್ರೈವರ್‍ಗೆ ಹೇಳಿ, ನಿಧಾನವಾಗಿ ಓಡಿಸು' ಅಂತ.

ಬೋರ್ಡುಗಳು

ಕಂಡಕ್ಟರ್: 'ಏನ್ರೀ 'ಧೂಮಪಾನ ಮಾಡಬಾರದು' ಎಂದು ಬೋರ್ಡು ಹಾಕಿದ್ದರೂ ಸಿಗರೇಟು ಸೇದುತ್ತಿದ್ದೀರಲ್ಲಾ?'.

ಪ್ರಯಾಣಿಕ: ಆದರೆ ಹೊರಗೆ ನೋಡಿ ಅಲ್ಲಿ - 'ಯಾವಾಗಲೂ ಪನಾಮಾ ಸಿಗರೇಟನ್ನು ಸೇದಿರಿ' ಎಂದು ಬೋರ್ಡಿದೆಯಲ್ಲ.

ಭಯ

ಬಸ್ಸಿನೊಳಗಿದ್ದ ಹೆಂಡತಿ ತನ್ನ ಗಂಡನೊಂದಿಗೆ ಹೇಳುತ್ತಿದ್ದಳು:

'ನನಗೆ ಭಯವಾಗ್ತಿದೆ ಕಣ್ರೀ, ಈ ಬಸ್ ತುಂಬಾ ವೇಗವಾಗಿ ಹೋಗ್ತಾ ಇದೆ'.

ಗಂಡ ನುಡಿದ : 'ಭಯವಾಗ್ತಿರೋದು ನಿನಗಲ್ಲ ಕಣೇ, ಕಂಡಕ್ಟರ್‌ಗೆ. ಹಿಂದೆ ಚೆಕಿಂಗ್ ಇನ್ಸ್‌ಪೆಕ್ಟರನ ಜೀಪು ಬೆನ್ನು ಹತ್ತಿದೆ!'

'ಸಾರಿ ಅಲ್ಲ ಥ್ಯಾಂಕ್ಸ್'

ಬಸ್ ಬಹಳ ವೇಳೆಯಿಂದ ಆ ನಿಲ್ದಾಣದಲ್ಲಿ ನಿಂತಿತ್ತು. ಒಳಗಾದರೋ ಪ್ರಯಾಣಿಕರು ಕಿಕ್ಕಿರಿದು ಉಸಿರುಕಟ್ಟುವಂತಿತ್ತು. ಇದ್ದಕ್ಕಿದ್ದಂತೆ ಮುಂದಿನ ಸಾಲಿನಲ್ಲಿ ಕುಳಿತಿದ್ದ ದಢೂತಿ ಹೆಂಗಸೊಬ್ಬಳು ನಿಂತಿದ್ದ ಗಂಡಸರ ಮಧ್ಯೆ ನುಗ್ಗಿ ದಾರಿ ಸೀಳಿಕೊಂಡು ಹಿಂದೆ ಇದ್ದ ಬಾಗಿಲಿನ ಕಡೆ ಬರತೊಡಗಿದಳು. ಮೈಕೈ ತಾಗಿದಾಗಲೆಲ್ಲಾ ಸೌಜನ್ಯಕ್ಕಾಗಿ ಆಕೆ 'ಸಾರಿ' ಎನ್ನುತ್ತಾ ಮುಂದುವರಿಯುತ್ತಿದ್ದಳು. ಹಾಗೆ ಒಬ್ಬ ಕಿಲಾಡಿ ಹುಡುಗನನ್ನು ತಳ್ಳಿ ಸರಿಯುತ್ತಾ ಆಕೆ 'ಸಾರಿ' ಅಂದಾಗ, ಅವನೆಂದ : 'ನೀವು ಸಾರಿ ಹೇಳಬೇಕಾಗಿಲ್ಲ ಮೇಡಂ. ಥ್ಯಾಂಕ್ಸ್ ಹೇಳಬೇಕಾದವರು ನಾವು!'

ಉಭಯ ಸಂಕಟ

ಅಪರಿಚಿತನಾದ ಅವನು ಹಾಗೂ ಅವಳು ಬಸ್ಸಿನಲ್ಲಿ ಒಂದೇ ಸೀಟ್ ಮೇಲೆ ಕೂರುವ ಪ್ರಸಂಗ ಬಂದಿತು. ಇನ್ನೇನು ಬಸ್ ಹೊರಡಬೇಕು. ಕಳಿಸಲು ಬಂದ ಅವನ ಗೆಳೆಯ ಅಂದ :

'ಬಣ್ಣದ ಹಕ್ಕಿಯ ಸಂಗದಲ್ಲಿ ಪ್ರವಾಸ ಮಜವಾಗಿರಲಿ ಎಂದು ಹಾರೈಸುತ್ತೇನೆ'

ಇದನ್ನು ಕೇಳಿಸಿಕೊಂಡ ಆಕೆ, ತನ್ನನ್ನು ಕಳಿಸಿಕೊಡಲು ಬಂದ ಗೆಳತಿಗೆ ಎತ್ತರಿಸಿದ ಧ್ವನಿಯಲ್ಲಿ ಹೇಳಿದಳು:

'ನೀಳ ಕೂದಲಿನ ಮೃಗಗಳೊಡನೆ ಅದು ಹೇಗೆ ಹಾರುವೆನೋ ನಾಕಾಣೆ,ಕಣೇ!'

ಪರಿಚಯ ಇಲ್ಲ

ಗಿಜಿಗಿಜಿ ಅಂತಿದ್ದ ಬಸ್ಸಿನಲ್ಲಿ ಒಂದೇ ಕಾಲಲ್ಲಿ ನಿಂತು ಪ್ರಯಾಣಿಸುತ್ತಿದ್ದ ಶುಂಠಿಗೆ ಯಾರೋ ಹಿಂದಿನಿಂದ ತನ್ನ ಪ್ಯಾಂಟ್ ಜೇಬಿನಲ್ಲಿ ಕೈ ಇಡ್ತಿದ್ದಾರೆ ಎನ್ನಿಸಿತು. ಕೂಡಲೇ ಆತ ಕೈ ಹಿಡಿದುಕೊಂಡು 'ಕಳ್ಳ, ಕಳ್ಳ' ಅಂತ ಬೊಬ್ಬೆ ಹಾಕಿದ.

ಎಲ್ಲಾ ಪ್ರಯಾಣಿಕರ ಗಮನ ಅತ್ತ ಕಡೆ ಹೋಯಿತು.

'ನೀವು ತಪ್ ತಿಳ್ಕೊಂಡಿದೀರಿ, ಬೆಂಕಿಪೆಟ್ಟಿಗೆಗಾಗಿ ನಾನು ನಿಮ್ಮ ಜೇಬಿನಲ್ಲಿ ಕೈ ಹಾಕಿದೆ, ಅಷ್ಟೇ' - ಕೈ ಇಟ್ಟಾತ ಸಮಜಾಯಿಷಿ ನೀಡಿದ.

'ನನ್ನ ಕೇಳಬಹುದಿತ್ತಲ್ಲಾ' ಶುಂಠಿ ಬೆವರೊರೆಸಿಕೊಂಡ.

'ನಿಮ್ಮ ಪರಿಚಯ ನನಗಿಲ್ಲವಲ್ಲಾ, ಹೊಸಬರೊಂದಿಗೆ ಮಾತಾಡೋದೆಂದ್ರೆ ನನಗೆ ಸಂಕೋಚ!' ಎಂದುತ್ತರಿಸಿದ ಆ ಮಹಾನುಭಾವ.

ಗುಟ್ಟು

ಚಲಿಸುತ್ತಿರುವ ರೈಲಿನೊಳಗಿದ್ದ ಪ್ರಯಾಣಿಕರಲ್ಲಿ ಇಬ್ಬರು, ಅವರಲ್ಲೆ ಒಬ್ಬ ಮತ್ತೊಬ್ಬನಿಗೆ

'ಸರ್, ಒಂದು ಒಳ್ಳೆಯ ಇಂಪೋರ್ಟೆಡ್ ವಾಚ್ ಇದೆ ತಗೊಳ್ತೀರಾ?' ಎಂದು ಪಿಸುಗುಟ್ಟಿದ.

'ಹೌದಾ? ತೋರ್ಸಿ- ನೋಡೋಣ' ಎಂದು ಕೇಳಿದ ಠೀವಿಯಿಂದ.

'ಉಶ್-ಗಟ್ಟಿಯಾಗಿ ಮಾತಾಡ್ಬೇಡಿ ಸಾರ್, ಪಕ್ಕದಲ್ಲಿರೋ ಆಸಾಮಿಗೆ ಕೇಳಿಸೀತು'

ಕೇಳಿಸ್ಕೊಂಡ್ರೆ ಏನಾಯ್ತು' ಎಂದು ಪ್ರಶ್ನಿಸಿದ ಗಿರಾಕಿ.

'ಮತ್ತೆ, ಆ ಇಂಪೋರ್ಟೆಡ್ ವಾಚ್ ಇನ್ನೂ ಆತನ ಕೈಯಲ್ಲಿರೋದ್ರಿಂದ...!' ಎಂದು ಪಕ್ಕದಲ್ಲಿರುವಾತನ ಕೈ ಕಡೆ ಗಿರಾಕಿಯ ಗಮನಸೆಳೆದ.

ಉಚಿತ ಪ್ರಯಾಣ

ಮೂರು ಮೈಲಿ ದೂರದ 'ಹಾದಿಹಳ್ಳಿ'ಯ ಸ್ನೇಹಿತನನ್ನು ಕಾಣಲು ತಿಮ್ಮ ಬೀದಿ ಬಜಾರ್ ಬಸ್ ನಿಲ್ದಾಣದಲ್ಲಿನ 'ಕ್ಯೂ' ಬಳಿ ಬಂದ. 'ಕ್ಯೂ' ತುದಿಯನ್ನು ಅರಸುತ್ತಾ ಹೊರಟ. ಬಹಳ ಹೊತ್ತಿನ ನಂತರ ತುದಿ ಸಿಕ್ಕಿತು. ನಿಟ್ಟುಸಿರುಬಿಟ್ಟು ಎದುರಿಗೆ ನೋಡಿದರೆ... ಹಾದಿಹಳ್ಳಿ....!

○

ಪ್ರಯಾಣಿಕ : ಸ್ವಾಮಿ, ಕಂಡಕ್ಟರರೇ, ಈ ಬಸ್ಸು ಎಲ್ಲಿ ನಿಲ್ಲುತ್ತೋ?

ಕಂಡಕ್ಟರ್ :ಪೆಟ್ರೋಲು ಕಡಿಮೆ ಇದೆ. ಎಲ್ಲಿ ನಿಲ್ಲುತ್ತೇಂತ ಹೇಳೋದೆ ಕಷ್ಟ.

■ ಟಿ.ವಿ.ವೆಂಕಟರಮಣಯ್ಯ


ಒಳನೋಟ


ಭ್ರಷ್ಟಾಚಾರ

ಭಾರತದಲ್ಲಿ ಎರಡೇ ಬಗೆಯ ಜನರಿದ್ದಾರೆ:
ಭ್ರಷ್ಟಾಚಾರ ಎಸಗಲು ಅವಕಾಶ ಇರುವವರು ಮತ್ತು ಅಂಥ ಅವಕಾಶ ಇಲ್ಲದವರು.










ವಿದ್ಯೆ - ಉದ್ಯೋಗ

ಸ್ಥಿರ ಶೀರ್ಷಿಕೆಗಳು

ಟಪಾಲು



ತಪ್ಪು-ಒಪ್ಪು

ಜೂನ್ ಸಂಚಿಕೆಯ 'ರಸಪ್ರಶ್ನೆ' ವಿಭಾಗದ (ಪುಟ 55) 8ನೇ ಪ್ರಶ್ನೆಯ ಉತ್ತರ ಕಣ್ತಪ್ಪಿನಿಂದಾಗಿ 1917 ಎಂದು ಮುದ್ರಿತವಾಗಿದೆ. ಅದಕ್ಕಾಗಿ ವಿಷಾದಿಸುತ್ತೇವೆ. ಸರಿಯುತ್ತರ Grammer of the Karnataka language - ವಿಲಿಯಂ ಕೇರಿ. 1817, ಶ್ರೀರಾಮಪುರಂ ಪ್ರೆಸ್ (ಕಲ್ಕತ್ತ ಬಳಿ)

- ಸಂ.

ಅರ್ಥಪೂರ್ಣ ವಿವರಣೆ

-ಕೆ.ಎಂ. ಮಲ್ಲಿಕಾರ್ಜುನಯ್ಯ, ಆಲಬನೂರು

ಜೂನ್ 1999ರ 'ಬಿಸಿಲ ಬದುಕು' ಸಂಚಿಕೆಯಲ್ಲಿ ಮೂಡಿಬಂದ ಎಂ.ಎಲ್. ದೇಶೀಕರ್‌ರವರ 'ಮರಣದಂಡನೆ ಏಕೆ? ಹೇಗೆ? ಬೇಕೆ?' ಲೇಖನವು ಸಕಾಲಿಕವೂ ಹಾಗೂ ಚಿಂತನಾರ್ಹವೂ ಆಗಿತ್ತು. ಈ ಲೇಖನದಲ್ಲಿ ದಕ್ಷ ಪೋಲಿಸ್ ಅಧಿಕಾರಿ ಹಾಗೂ ಕನ್ನಡದ ಸುಪ್ರಸಿದ್ಧ ಸಾಹಿತಿಯೂ ಆಗಿರುವ ವಿಜಯ ಸಾಸನೂರುರವರು ಮರಣ ದಂಡನೆಯ ಔಚಿತ್ಯದ ಬಗ್ಗೆ ನೀಡಿರುವ ವಿವರಣೆ ಅರ್ಥಪೂರ್ಣವಾಗಿದೆ. ನಮ್ಮ ನ್ಯಾಯಾಂಗ ವ್ಯವಸ್ಥೆಯ ಬಗ್ಗೆ ಹೆಚ್ಚು ವಿಶ್ವಾಸಾರ್ಹತೆಯನ್ನು ವ್ಯಕ್ತಪಡಿಸಿರುವ ವಿಜಯ ಸಾಸನೂರುರವರ ಅಭಿಪ್ರಾಯವು ನಿಜವಾದರೂ ಅದನ್ನು ಸಂಪೂರ್ಣ ನಿಜವೆನ್ನುವಂತಿಲ್ಲ. ಆದರೂ ನೆರೆಯ ದೇಶವಾದ ಪಾಕೀಸ್ತಾನಕ್ಕೆ ಹೋಲಿಸಿದರೆ ನಮ್ಮ ನ್ಯಾಯಾಂಗ ವ್ಯವಸ್ಥೆ ಉನ್ನತವಾದುದೆಂದರೆ ಯಾವುದೇ ಅತಿಶಯೋಕ್ತಿಯಲ್ಲ. ಅವರು ಹೇಳಿರುವಂತೆ ನಕ್ಸಲಿಯರು ಭಯೋತ್ಪಾದಕರಲ್ಲ ಎಂಬ ಮಾತು ನಿಜವಾದರೂ ಆಂಧ್ರಪ್ರದೇಶದಲ್ಲಿ ನಕ್ಸಲೀಯರ ಕೃತ್ಯಗಳಿಗೆ ಅಮಾಯಕರು ಬಲಿಯಾಗುತ್ತಿರುವುದು ನೋಡಿದರೆ ನಕ್ಸಲೀಯರು ಭಯೋತ್ಪಾದಕರಲ್ಲ ಎಂಬ ಮಾತು ಎಷ್ಟರ ಮಟ್ಟಿಗೆ ಸರಿ ಎಂಬುದನ್ನು ವಿಚಾರ ಮಾಡಬೇಕಾಗಿದೆ.

ಸಾಸನೂರ್‌ಗೆ ಅಭಿನಂದನೆ

-ಪ್ರಕಾಶ ವಿಶ್ವಕರ್ಮ, ಯಾದಗಿರಿ.

ಮರಣ ದಂಡನೆ ಏಕೆ? ಹೇಗೆ? ಬೇಕೆ? ವಿಜಯ ಸಾಸನೂರು ಸಂದರ್ಶನ ತುಂಬ ಚೆನ್ನಾಗಿತ್ತು. ಅವರಿಗೆ ನನ್ನ ಧನ್ಯವಾದಗಳು.

ಮೋಜಿನ ಗಣಿತ ಹೆಚ್ಚಾಗಲಿ

-ಶ್ರೀಶೈಲ ಮಲ್ಲಪ್ಪ, ಮುದ್ದೇಬಿಹಾಳ.

ಜೂನ್ ತಿಂಗಳಿನ ಬಿಸಿಲ ಬದುಕು ಮಾಸ ಪತ್ರಿಕೆಯಲ್ಲಿ 'ಮೋಜಿನ ಗಣಿತ' ವಿಭಾಗದಲ್ಲಿ ಪ್ರಕಟವಾದ 'ಹೊಡೆದು ಹಾಕಿದ ಸಂಖ್ಯೆ ಕಂಡುಹಿಡಿಯುವುದು' ಎಂಬ ಲೇಖನ ಬಹಳ ಚೆನ್ನಾಗಿತ್ತು. ನಾನು ಇದನ್ನು ಕಲಿತು ನನ್ನ ಗೆಳೆಯರಿಗೂ ತಿಳಿಸಿದೆನು. ಅವರೆಲ್ಲರೂ ತಮ್ಮ ಪತ್ರಿಕೆಯಲ್ಲಿ ಬರುವ ಇಂತಹ ಮೋಜಿನ ವಿಷಯಗಳ ಲೇಖನಗಳನ್ನು ತುಂಬಾ ಮೆಚ್ಚುಗೆಯಿಂದ ಸ್ವಿಕರಿಸಿದರು. ಇಂತಹ ಇನ್ನೂ ಅನೇಕ ಉತ್ತಮ ಲೇಖನಗಳು ಬರಲಿ.

ಪ್ರತಿ ಪುಟವೂ ಉಪಯುಕ್ತ

-ತುಳಜಾರಾಮ ಎನ್ ಪತಂಗೆ, ಗಾಜರಕೋಟ.

ಜೂನ್ 99ರ 'ಬಿಸಿಲ ಬದುಕು'' ಮುಖಪುಟ ಅಷ್ಟೊಂದು ಆಕರ್ಷಕವಿಲ್ಲದಿದ್ದರೂ, ಒಂದೊಂದೇ ಪುಟ ತಿರುವಿ ಹಾಕಿದಾಗ ತಿಳಿಯಿತು, 'ಇದರಲ್ಲಿರುವ ಪ್ರತಿಯೊಂದು ಪುಟವೂ ಉಪಯುಕ್ತವಾದುದಾಗಿದೆ' ಎಂದು.

ಮನ ತುಂಬಿದ ಸೇವೆ

-ರಾಜನಗೌಡ ಎ.ಪಿ., ಹನಮನಗುಡ್ಡ.

'ಬಿಸಿಲ ಬದುಕು' ಪತ್ರಿಕೆಯು ನಮ್ಮ ಕುಟುಂಬದ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ. ತಿಂಗಳು ಯಾವಾಗ ಮುಗಿದೀತೊ ಎಂಬ ಕಾತರದಿಂದಿರುತ್ತೇವೆ.

ಜೂನ್ ತಿಂಗಳ ಪತ್ರಿಕೆಯಲ್ಲಿ ಕನ್ನಡದ ಕಂಪು ಹರಡಿದ ವಿಜಯಕುಮಾರರು ನೀಡಿದ ಸೇವೆಯು ಮನ ಮುಟ್ಟುವಂತಾಗಿದೆ. ಕಲಿಯಲು ಯಾವ ಭಾಷೆಯಾದರೇನು, ವಿದ್ಯೆ ಬಲ್ಲವನು ಬದುಕಬಲ್ಲವನಲ್ಲವೆ! ಎಂಬ ನುಡಿ ಮೆಚ್ಚುಗೆಯಾಯಿತು.

ಕಂಪ್ಯೂಟರ್ ಮೂಲಕ ವ್ಯಾಪಾರ

-ವಿ.ಎಸ್. ಕುಲಕರ್ಣಿ, ಬ್ಯಾಡಗಿ.

ಜೂನ್-99ರ ಬಿಸಿಲ ಬದುಕು ಮಾಸ ಪತ್ರಿಕೆಯಲ್ಲಿ ಮೂಡಿ ಬಂದ ಈ ಮಾಲಿಕೆ ತುಂಬಾ ಮಾರ್ಮಿಕವಾಗಿದೆ. ಇಂತಹ ವೈಜ್ಞಾನಿಕ ಲೇಖನಗಳು ಮತ್ತೆ ಮತ್ತೆ ಮೂಡಿ ಬರಲಿ.

ನಿಜ ಸ್ವರೂಪ ತಿಳಿಯಿತು

-ಅನಿಲಕುಮಾರ್ ಎಸ್. ಗಾಜರೆ, ಗುಲ್ಬರ್ಗಾ.

''ಬಿ.ಎಸ್. ಅಬ್ಬಾಯಿ''ಯವರ ಸಂದರ್ಶನ ನಿಜಕ್ಕೂ ದಿಗ್ಭ್ರಾಂತಿ ಮೂಡಿಸಿತು. ಮರಣ ದಂಡನೆ ಹಾಗೂ ನಕ್ಸಲಿಯರ ನಿಜ ಸ್ವರೂಪ ತೋರಿಸಿದಕ್ಕೆ ಹತ್ಪೂರ್ವಕ ಅಭಿನಂದನೆಗಳು.

ನ್ಯಾಯ ದೊರಕೀತೆ?

-ನೊಂದ ವಿದ್ಯಾರ್ಥಿನಿ, ಹುಬ್ಬಳ್ಳಿ.

ನರ್ಸಿಂಗ್‌ನಲ್ಲಿ ವಿಪುಲ ಉದ್ಯೋಗಾವಕಾಶಗಳಿರುವುದು ಸತ್ಯ. ಆದರೆ ಇಲ್ಲಿ ಬಂದ ನಂತರ 'ವಿದ್ಯಾರ್ಥಿ ಮಾನಸಿಕವಾಗಿ, ದೈಹಿಕವಾಗಿ ಹೀನಾಯಮಟ್ಟಕ್ಕೆ ತಲುಪುವನು' ಎಂಬುದು ನೀವು ಅರಿಯಲಾರಿರೆ? ಸರಕಾರದ ಅನುಮೋದಿತ ಶಿಕ್ಷಣ ಸಂಸ್ಥೆಗಳಿದ್ದು, 'ಇವು ಬರಿ ಹಣ ಮಾಡುವ ವ್ಯಾಪಾರಿ ಕೇಂದ್ರಗಳಾಗಿಲ್ಲ' ಎಂಬುದನ್ನು ತಿಳಿಸಿದ್ದೀರಿ. ಇದನ್ನು ಖಂಡಿತ ನಾನು ಒಪ್ಪಲಾರೆ. ಕಾರಣ, ನನಗಾದ ಅನ್ಯಾಯ, ಹಿಂಸೆ, ಮಾನಸಿಕ ನೋವು. ನನ್ನಂತೆ ಇರುವ ಇತರ ನರ್ಸಿಂಗ್ ವಿದ್ಯಾರ್ಥಿ/ನಿಯರಿಗೆ ಆಗಬಾರದು ಎನ್ನುವುದು ನನ್ನ ಉದ್ದೇಶ. ನನಗೆ ನ್ಯಾಯ ಸಿಗುವಂತಿದ್ದರೆ ಖಂಡಿತ ನನಗಾದ ಅನ್ಯಾಯದ ಕುರಿತು, ಆ ನರ್ಸಿಂಗ್ ಸ್ಕೂಲ್‌ನ ಬಗ್ಗೆ ವಿವರಣಾತ್ಮಕವಾಗಿ ಬರೆಯಬಲ್ಲೆ.

ನಿಮ್ಮ ಪತ್ರಿಕೆಯ ಬರವಣಿಗೆಯನ್ನು ನಾನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ನರ್ಸಿಂಗ್

ಟಪಾಲು

ಕೇಂದ್ರಗಳು ದುಡ್ಡಿನ ವ್ಯವಹಾರದ ಕೇಂದ್ರಗಳೆಂದು ತೋರಿಸಿಕೊಡಲು ಸಿದ್ಧಳಿದ್ದೇನೆ.

ಕ್ವಿಜ್ ಹಿಂದೆ ಲೇಖನ ಬೇಡ

-ಚಂ.ಹ. ಹೊಟ್ಟಿಗೌಡರ, ಹಾವೇರಿ.

ಬಿಸಿಲ ಬದುಕು ತುಂಬಾ ಉಪಯುಕ್ತವಾದ ಮಾಸ ಪತ್ರಿಕೆ. ಆ ಬಾಲ ವೃದ್ಧರವರೆಗೆ ಎಲ್ಲರಿಗೂ ಉಪಯುಕ್ತವಾದುದಾಗಿದೆ.

ಇದರಲ್ಲಿ ಬರುವ ಕ್ವಿಜ್ ಹಿಂದೆ ಖಾಲಿ ಹಾಳೆಯಾಗಲಿ ಅಥವಾ ಯಾವುದಾದರೂ ಜಾಹೀರಾತು ಇರಲಿ. ಇದರಿಂದ ಉಪಯುಕ್ತ ಲೇಖನಕ್ಕೆ ತೊಂದರೆಯಾಗದು.

ರಾಷ್ಟ್ರಭಕ್ತರ ಪರಿಚಯ

-ಮಂಜು ಜಿ. ಬಾಣದ, ದೇವಿಹೊಸೂರ.

'ಬದುಕು' ಮಾಸಪತ್ರಿಕೆಯು ಅತ್ಯುತ್ತಮವಾಗಿದ್ದು ಎಲ್ಲರಿಗೂ ಉಪಯೋಗಕರ. ಕೆಳಗಿನ ಲೇಖನಗಳು ಬದುಕಿನಲ್ಲಿರಲೆಂದು ಕೋರುತ್ತೇನೆ, 'ರಾಷ್ಟ್ರಭಕ್ತರು ಮತ್ತು ರಾಷ್ಟ್ರಯೋಧರು, ಯುಗಪುರುಷರು' ಮತ್ತು ಅವರ ಭಾವಚಿತ್ರಗಳು ಪ್ರತಿ ತಿಂಗಳಿಗೊಂದೊಂದು ಪ್ರಕಟಿಸಿ.

ಮರಣ ದಂಡನೆ ಕಡ್ಡಾಯವಾಗಲಿ

-ಬಸವರಾಜ ಚ. ಕರಕರಡ್ಡಿ, ಧಾರವಾಡ.

'ಮರಣ ದಂಡನೆ' ದೀರ್ಘಲೇಖನ ತುಂಬ ಮಾರ್ಮಿಕವಾಗಿ ಬಂದಿದೆ. ಹಿರಿಯರೆಲ್ಲರ ಅನಿಸಿಕೆಗಳು ಮನಸ್ಸಿಗೆ ಒಪ್ಪಿಗೆ ಸೂಚಿಸುವಂತೆ ಸ್ಪಷ್ಟಗೊಂಡಿವೆ. ನಾನೂ ಸಹ 'ಮರಣ ದಂಡನೆ' ಯಂಥ ಕಠಿಣ ಶಿಕ್ಷೆ ನಮ್ಮ ದೇಶದಲ್ಲಿ ಕಡ್ಡಾಯವಾಗಿ ಆದಷ್ಟು ಶೀಘ್ರ ಜಾರಿಗೆ ಬರಲಿ ಎಂದು ಬಯಸುವವನು. ಇದರಿಂದ ದುಷ್ಟರ ಸಂಖ್ಯೆ ಒಂದಿಷ್ಟಾದರೂ ಕಡಿಮೆಯಾಗುವದರಲ್ಲಿ ಸಂದೇಹವಿಲ್ಲ.

ವಿಕಾಸಕ್ಕೆ ಪೂರಕ

-ಸುರೇಶ ಅಂಗಡಿ, ಹೂವಿನ ಹಡಗಲಿ.

ಯಶಸ್ಸಿನ ಸೂತ್ರಗಳನ್ನು ಪ್ರತಿಯೊಬ್ಬ ವ್ಯಕ್ತಿ ಜೀವನದಲ್ಲಿ ಅಳವಡಿಸಿಕೊಂಡರೆ ವ್ಯಕ್ತಿತ್ವ ಖಂಡಿತ ವಿಕಾಸಗೊಳ್ಳುತ್ತದೆ.

ಸಾರ್ಥಕತೆ

-ಮಡಿವಾಳ ಎಸ್. ಪಾಟೀಲ್, ಮೋರಟಗಿ.

ಈ 'ಬಿಸಿಲ ಬದುಕು' ಪತ್ರಿಕೆಯಿಂದಲೇ ನನಗೆ ಮೈಸೂರಿನ ಅಂಗವಿಕಲರ ಕಾಲೇಜಿನಲ್ಲಿ ಸ್ಥಾನ ಸಿಕ್ಕಿತು. ಇಷ್ಟೇ ಉದಾಹರಣೆ ಸಾಕು 'ಬದುಕು' ಪತ್ರಿಕೆ ಸ್ಥಾನ ಎಲ್ಲ ಪತ್ರಿಕೆಗಳಿಗಿಂತ ಹೆಚ್ಚೆಂದು. ಈಗ ನಾನು ವಿದ್ಯಾಭ್ಯಾಸದ ಒಂದನೇ ವರ್ಷ ಮುಗಿಸಿ ರಜೆಗೆ ಊರಿಗೆ ಬಂದಿರುವೆ.

ಇಂಥದ್ದು ಬೇಡ

-ವಸಂತ ಅಗಸೀಮನಿ, ಹುಬ್ಬಳ್ಳಿ.

ಹೆಸರು ಬೇಡ, ಊರು ಬೇಡ ಎನ್ನುವ ಮನಸ್ಸಂಕೋಚ ಪ್ರಶ್ನೆಗಳನ್ನು ಕೇಳಿ ಉತ್ತರಿಸುವ ಲೈಂಗಿಕ ವಿಷಯವನ್ನೊಳಗೊಂಡ ಪ್ರಶ್ನೋತ್ತರ ವಿಭಾಗವು, ಇದೇ ವಿಷಯವನ್ನು ಹೊತ್ತು ತರುವ ಅನೇಕ ಪತ್ರಿಕೆಗಳು ಕನ್ನಡದಲ್ಲಿ ಬರುತ್ತಿರುವುದು ಸಹಜ. ಆದರೆ ಕೌಟುಂಬಿಕ ಪತ್ರಿಕೆ ಎನಿಸಿಕೊಳ್ಳುವಂಥ ಈ 'ಬಿಸಿಲ ಬದುಕು' ಮಾಸ ಪತ್ರಿಕೆಯನ್ನು ಕುಟುಂಬದ ಎಲ್ಲ ಸದಸ್ಯರಾದಿಯಾಗಿ ಸಾರ್ವಜನಿಕ ಓದುಗರು ನಿಸ್ಸಂಕೋಚವಾಗಿ ಸಾರ್ವಜನಿಕ ಸ್ಥಳಗಳಲ್ಲಿ ಪುಟ ತೆರೆದು ಉತ್ಸುಕತೆಯಿಂದ ಓದುವುದಾಗುವುದಿಲ್ಲ. ಈ ಲೈಂಗಿಕತೆಯ ವಿಷಯವನ್ನೊಳಗೊಂಡ ಅಂಕಣವನ್ನು ಓದುವುದು ಸಭ್ಯ ಜನರಿಗೆ ಮನಸ್ಸಂಕೋಚವಾಗುವುದುಂಟು. ದಯವಿಟ್ಟು ಈ ಮೌಲ್ಯವುಳ್ಳ ಪತ್ರಿಕೆಯಲ್ಲಿ ವಯಸ್ಕರಿಗಾಗಿ, ಆಪ್ತ ಸಮಾಲೋಚನೆ ಅಂಕಣವನ್ನು ತೆಗೆದುಹಾಕಿ ಎಲ್ಲರು ನಿರ್ಭಯದಿಂದ ಓದುವಂತಾಗಲಿ.

ಸಾಯಿಸುವ ಹಕ್ಕಿಲ್ಲ

-ಜಿ.ಎಂ. ರಾಜಶೇಖರ, ಚೌಡಯ್ಯದಾನಪುರ.

ಒಬ್ಬ ಮನುಷ್ಯ ಸ್ವಯಂ ಪ್ರೇರಣೆಯಿಂದಾಗಲಿ ಅಥವಾ ನಿರ್ದಿಷ್ಟ ಗುರಿ ಇಟ್ಟುಕೊಂಡು ಯಾವುದೇ ಕೆಲಸ ಸಾಧಿಸುವ ಒಂದು ಗುಂಪಿನಿಂದಾಗಲಿ ವ್ಯಕ್ತಿಗಳ ಸಾವಿಗೆ ಕಾರಣರಾಗುವ ಯಾವುದೇ ವ್ಯಕ್ತಿಯನ್ನು ಅಥವಾ ಒಂದು ಗುಂಪನ್ನು ತಪ್ಪು ಮಾಡಿದಾಗ, ಯಾವ ಕಾರಣದಿಂದ ಇದು ಉಂಟಾಯ್ತು ಎಂಬುವುದನ್ನು ಲಕ್ಷಿಸಿ ಶಿಕ್ಷೆ ನೀಡಬೇಕಾಗುತ್ತದೆ.

ಮಾಡಿದ ಯಾವುದೇ ತಪ್ಪಿಗೂ ಅಥವಾ ಅಪರಾಧಕ್ಕೂ ಉಸಿರು ಇಲ್ಲದಂತೆ ಮಾಡುವುದು ಖಂಡಿತಾ ಮಾನವೀಯವಲ್ಲ. ತಪ್ಪು ಮಾಡಿದವರನ್ನು ಸರಿದಾರಿಗೆ ತರಲೇಬೇಕಾದ ನೈತಿಕ ಶಿಕ್ಷಣ ಕೊಡುವುದು ಸರಕಾರದ, ಸಮಾಜದ, ಕಾನೂನಿನ ಕರ್ತವ್ಯ, ಜವಾಬ್ದಾರಿಯೂ ಹೌದು.

ಅರ್ಥ - ಅಪಾರ್ಥ

ಪಾಕಿಸ್ತಾನದ ಪ್ರಧಾನ ಮಂತ್ರಿ ಅಟಲ್ ಬಿಹಾರಿ ವಾಜಪೇಯಿ ಅವರು ಭಾನುವಾರ ಭಾರತದ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರೊಡನೆ ದೂರವಾಣಿಯಲ್ಲಿ ಮಾತನಾಡಿದರು

[*ಕನ್ನಡ ಪ್ರಭ,* 14.6.99] **-ಟಿ.ಎಸ್. ಪ್ರಸಾದ್,** ಭದ್ರಾವತಿ.

ಕನ್ನಡಕ್ಕೆ ಸುಮಾರು **ಅಪ್ಪತ್ತೂರು** ಸ್ತ್ರೀ ವಾದಿ ಚಿಂತನೆಗೆ ಸಂಬಂಧಿಸಿದ ಪುಸ್ತಕಗಳನ್ನು ಕೊಡುಗೆಯಾಗಿ ನೀಡಿದೆ.

[*ಸಂಕ್ರಮಣ,* ಮೇ 99] **-ಯು.ವಿ. ಆಚಾರ್,** ಬೆಂಗಳೂರು.

ಪ್ರಧಾನ **ಕಾರ್ಯರ್ಶಿ** ಕೆ. ಮಲ್ಲಯ್ಯ ಅವರಿಗೂ ಗ್ರಾಮಸ್ಥರ ಪರವಾಗಿ ಅಭಿನಂದನೆಗಳು.

[*ಬಿಸಿಲ ಬದುಕು,* ಮಾರ್ಚ್ 99] **- ಬಾಷಾ ಆರ್. ವಂಟಿ,** ಹುನಗುಂದ.

ಅಕ್ರಂ ಎರಡನೇ ಓವರ್‌ನಲ್ಲಿ **ಬೌರ್** ಮಾಡಿ ಕಲುವಿತರಣರನ್ನು **ಸಿ.ಬಿ.ಡೂಬ್ಲ್ಯುಗೆ** ಕೆಡವಿಕೊಂಡರು.

[*ಸಂಯುಕ್ತ ಕರ್ನಾಟಕ,* 7.3.99] **-ರಾಘವೇಂದ್ರ ಡಿ. ಸಂಗನಗೌಡ್ರ,** ಸುರೇಬಾನ.

ಭಾರತ 48.2 ಓವರ್‌ಗಳಲ್ಲಿ **4 ವಿಕೆಟ್**‌ಗೆ 205.

(1) ಗಂಗೂಲಿ ಬಿ. (2) ತೆಂಡೂಲ್ಕರ್ ಸಿ. (3) ಜಡೇಜ ಔಟಾಗದೇ (4) ಅಜರುದ್ದೀನ್ ಸಿ. (5) ರಾಬಿನ್ ಸಿ (6) ಮೊಂಗಿಯ ರನ್‌ಔಟ್ (7) ಶ್ರೀನಾಥ್ ಸಿ. (8) ಕುಂಬ್ಳೆ ಸಿ. (9) ವೆಂ. ಪ್ರಸಾದ್ ಎಲ್.ಬಿ.ಡಬ್ಲ್ಯು (10) ಮೊಹಂತಿ ರನ್‌ಔಟ್.

[*ಪ್ರಜಾವಾಣಿ,* 5.6.99] **-ಅರ್ಜುನ್,** ಕನಕಪುರ.

ಕಾರ್ಮಿಕರು ತಮ್ಮ ಸಮಸ್ಯೆ ಪರಿಹಾರಕ್ಕೆ ಆಗ್ರಹಿಸಿ ಕಳೆದ 5 **ದನಗಳಿಂದ** ಆಮರಣ ಉಪವಾಸ ಸತ್ಯಾಗ್ರಹದಲ್ಲಿ ತೊಡಗಿದ್ದಾರೆ.

[*ಪ್ರಜಾವಾಣಿ,* 15.4.99] **-ಭರತೇಶ್ ಬಸ್ತಿ,** ಬಳ್ಳಾರಿ.

ಭ್ರಷ್ಟಾಚಾರ

ಭ್ರಷ್ಟಾಚಾರ.

ಇದರ ಬಗ್ಗೆ ಮಾತಾಡುವುದು ಅರ್ಥಹೀನ ಎಂಬಂಥ ಸ್ಥಿತಿ ತಲುಪಿದ್ದೇವೆ. ಈಗ ನಮ್ಮ ಮುಂದಿರುವುದು ಎರಡೇ ದಾರಿ: ಭ್ರಷ್ಟತೆಯೊಡನೆ ರಾಜಿ ಮಾಡಿಕೊಂಡು ಎಲ್ಲರಂತೆ ಆಗುವುದು. ಇಲ್ಲವೇ ಅದರ ವಿರುದ್ಧ ದನಿ ಎತ್ತಿ ಹುಚ್ಚರೆನಿಸಿಕೊಳ್ಳುವುದು. ಯಾವ ಕಾಲಕ್ಕೂ ಪರಿಪೂರ್ಣ, ಭ್ರಷ್ಟತೆ ಮುಕ್ತ ಸಮಾಜ ಇರುವುದು ಸಾಧ್ಯವಿಲ್ಲ. ಇದನ್ನು ಒಪ್ಪಿಕೊಳ್ಳೋಣ. ಆದರೆ ಭ್ರಷ್ಟಾಚಾರ ಎನ್ನುವುದು ಎಲ್ಲೆ ಮೀರಿ ಹಬ್ಬಿ, ದೊಡ್ಡ ಪಿಡುಗಾದಾಗ ಎದ್ದು ಕುಳಿತು ಚಿಂತಿಸಲೇಬೇಕು. ಅದು ಈಗ ತುರ್ತಾಗಿ ಆಗಬೇಕು.

ಇಂದಿರಾ ಗಾಂಧಿ ಪ್ರಧಾನಿ ಆಗಿದ್ದಾಗ ಭ್ರಷ್ಟಾಚಾರ ವಿಶ್ವದ ಎಲ್ಲಕಡೆ ಇರುವ ಸಾಮಾನ್ಯ ಸಂಗತಿ ಎಂಬ ವ್ಯಾಖ್ಯಾನ ನೀಡಿದ್ದರು. ಅವರು ಹೇಳಿದ್ದು ಸತ್ಯ. ಹಾಗೆ ಹೇಳುವ ಮೂಲಕ ಅವರು ಭ್ರಷ್ಟಾಚಾರಕ್ಕೆ ಈ ದೇಶದಲ್ಲಿ ಮುಕ್ತ ಪರವಾನಗಿ ನೀಡಿದಂತಾಯಿತು. ಅಲ್ಲಿಂದಲೇ ಐತಿಹಾಸಿಕ ತಿರುವು. ಭ್ರಷ್ಟಾಚಾರ ಈಗ ಬ್ರಹ್ಮರಾಕ್ಷಸನಾಗಿ ಬೆಳೆದು ನಿಂತಿದೆ.

ಇದರ ಎದ್ದು ಕಾಣುವ ಪರಿಣಾಮ ನಾವು ಗಮನಿಸಬಹುದು. ನೂರು ಕೋಟಿ ರೂಪಾಯಿ ಮೇವು ಹಗರಣದ ಲಾಲೂ ಪ್ರಸಾದ್ ಯಾದವ್ ಬಿಹಾರದ ಮುಖ್ಯಮಂತ್ರಿ ಆದ. ಜಯಲಲಿತಾ ಎಂಬ ತಮಿಳ್ನಾಡು ಮುಖ್ಯಮಂತ್ರಿ ತನ್ನ ಸಾಕುಮಗನ ಮದುವೆಗೆಂದು ವೆಚ್ಚ ಮಾಡಿದ್ದು ಕೇವಲ ಹಲವು ಸಾವಿರ ಕೋಟಿ ರೂಪಾಯಿ. ಇವು ಗೊತ್ತಿರುವ ಹಗರಣಗಳು.

ಗೊತ್ತಿಲ್ಲದ ಇದಕ್ಕೂ ಮಿಗಿಲಾದ ಇನ್ನೆಷ್ಟು ಹಗರಣಗಳಿವೆಯೋ?

ರಾಜಕಾರಣಿಗಳ ಇಂಥ ಹಗರಣ ಬಯಲಾದಾಗ ಬಾಯಿ ಚಪ್ಪರಿಸಿ ಮಾತಾಡುವ ಜನ ಪರಿಶುದ್ಧರೇ? ಹಾಗಿಲ್ಲ ಎನ್ನುವುದೇ ದುರಂತ. ಭಾರತದಲ್ಲಿ ಎರಡೇ ಬಗೆಯ ಜನರಿದ್ದಾರೆ. ಭ್ರಷ್ಟಾಚಾರ ಎಸಗಲು ಅವಕಾಶ ಇರುವವರು ಮತ್ತು ಅಂಥ ಅವಕಾಶ ಇಲ್ಲದವರು. ಅವಕಾಶ ಇಲ್ಲದ ಕಾರಣಕ್ಕೇ ಶುದ್ಧ ಹಸ್ತರಂತೆ ವರ್ತಿಸುವ ಜನಕ್ಕೆ ಅವಕಾಶ ಕೊಟ್ಟು ನೋಡಿ. ಮೊದಲಿದ್ದವರನ್ನು ಇವರು ಮೀರಿಸುತ್ತಾರೆ. ಇದೇ ದುರಂತ.

ಸಾರ್ವಜನಿಕ ಸ್ತರದಲ್ಲಿ ರಾಮನನ್ನು ಆದರ್ಶ ಪುರುಷನೆಂದೇ ಪರಿಗಣಿಸುವ ವ್ಯಕ್ತಿಗಳು ವೈಯಕ್ತಿಕವಾಗಿ ತಾವೆಲ್ಲ ಕೃಷ್ಣರಾಗಿರಲು ಬಯಸುತ್ತಾರೆ. ಇದು ಎಷ್ಟರ ಮಟ್ಟಿನ ವಿಸಂಗತಿ ಎಂದರೆ, ತನ್ನ ಹೆಂಡತಿ ಸೀತೆಯಂತಿರಬೇಕು ಎಂದೇ ಬಯಸುವ ಗಂಡ, ತಾನು ಮಾತ್ರ ಶ್ರೀಕೃಷ್ಣನಂತಿರಲು ತೀವ್ರವಾಗಿ ಹಂಬಲಿಸುತ್ತಾನೆ. ಇಂಥ ವೈಯಕ್ತಿಕ ವಿಷಮತೆಯ ಸಾರ್ವತ್ರಿಕ ಮೊತ್ತದಲ್ಲಿಯೇ ಸಮಾಜದ ದುರಂತವಿದೆ. ಭ್ರಷ್ಟಾಚಾರದ ಮೂಲ ಬೇರು ಇದೆ.

ಭ್ರಷ್ಟಾಚಾರದ ವಿರುದ್ಧ ಹೋರಾಡಲು ಅಡ್ಡಿ ಏನು? ಮ್ಯಾಗ್ಡಲೀನಾದ ಮರಿಯಾಳನ್ನು ವೇಶ್ಯೆ ಎಂಬ ಕಾರಣಕ್ಕೆ ಕಲ್ಲು ಹೊಡೆದು ಸಾಯಿಸಲು ನಿರ್ಧರಿಸಲಾಯಿತು. ಆ ಸಮಯಕ್ಕೆ ಅಲ್ಲಿ ಬಂದ ಏಸು ಕ್ರಿಸ್ತ 'ಯಾರು ಏನೊಂದೂ ಪಾಪ ಮಾಡಿಲ್ಲವೋ ಅವರು ಮೊದಲ ಕಲ್ಲು ಎಸೆಯಿರಿ' ಎಂದು ಸೂಚಿಸಿದ. ಮರಿಯಾ ಬದುಕಿ ಉಳಿದಳು. ಭ್ರಷ್ಟಾಚಾರ ಇವತ್ತು ವಿಜೃಂಭಿಸುತ್ತಿರುವುದಕ್ಕೆ ಇಂಥದ್ದೇ ಕಾರಣ.

ಹಾಗೆಂದು ಸಜ್ಜನರು, ಪ್ರಾಮಾಣಿಕರು ಇಲ್ಲವೇ? ಪ್ರಶ್ನೆ ಸಹಜ. ಅಂಥವರ ಸಂಖ್ಯೆ ತೀರಾ ಅಂದರೆ ತೀರಾ ಕಡಿಮೆ. ಮುಖ್ಯ ಇವರ್‍ಯಾರಿಗೂ ತಾವು ಮುಂದೆ ನಿಂತು ಭ್ರಷ್ಟಾಚಾರದ ಪಿಡುಗಿನ ವಿರುದ್ಧ ಹೋರಾಡಬೇಕು ಎಂಬ ಮನಸ್ಸಿಲ್ಲ. ತಮ್ಮ ಪಾಡಿಗೆ ತಾವು ಶುದ್ಧವಾಗಿ ಉಳಿಯುವುದೇ ಅವರ ಕಾಳಜಿ ಆದಂತಿದೆ.

ಈ ಹೊತ್ತು ನಾನಾ ಸ್ತರಗಳಲ್ಲಿ ಅಪ್ರಮಾಣಿಕತೆ, ಭ್ರಷ್ಟಾಚಾರ ಹಬ್ಬಿಕೊಂಡಿದೆ. ಮಂತ್ರಿಯೊಬ್ಬನಿಂದ ಕೆಲಸ ಮಾಡಿಸಿಕೊಳ್ಳಲು ಶ್ರೀಮಂತರು ಸೂಟ್‌ಕೇಸ್‌ಗಟ್ಟಲೆ ಹಣ ಚೆಲ್ಲಿದರೆ, ತನ್ನ ಹಳ್ಳಿಯ ಗ್ರಾಮ ಲೆಕ್ಕಿಗನಿಂದ ತನಗೆ ಅಗತ್ಯವಾದ ಸರ್ಟಿಫಿಕೇಟು ಪಡೆಯಲು ಕೈ ಬಿಸಿ ಮಾಡುವುದು ಮಾಮೂಲು ಎನಿಸಿಬಿಟ್ಟಿದೆ. ಹಳ್ಳಿಯ ಮಟ್ಟದಲ್ಲಿ ನಡೆಯುವುದು ಸರಿ ಎಂದು ಒಪ್ಪಿಕೊಂಡ ಸಾಮಾನ್ಯ, ದೊಡ್ಡ ಸ್ತರದ ಲಂಚ, ವಶೀಲಿ, ಅಧಿಕಾರ ದುರುಪಯೋಗದ ವಿರುದ್ಧ ದನಿಯೆತ್ತುವ ಸತ್ವ ನೀಗಿಕೊಳ್ಳುತ್ತಾನೆ.

ಪ್ರತಿ ಮನುಷ್ಯನಲ್ಲೂ ಆಳದಲ್ಲಿ ಸಜ್ಜನಿಕೆ ಮತ್ತು ಸಾತ್ವಿಕ ಸಿಟ್ಟು ಇರುತ್ತದೆ. ಈ ಎರಡು ಗುಣಗಳ ಇಡೀ ಭಾರತ ಜನರ ಸಾಕಾರದಂತಿದ್ದ ಗಾಂಧೀಜಿ, ಅಂದು ಹಿಡಿ ಉಪ್ಪು ತಯಾರಿಸುವ ಮೂಲಕ ಬ್ರಿಟಿಷರನ್ನು ಭಾರತದಿಂದ ತೊಲಗಿಸುವುದಾಗಿ ಘೋಷಿಸಿದಾಗ ಜನಕ್ಕೆ ನಂಬಿಕೆಯಾಗಿರಲಿಲ್ಲ. ಅಧಿಕಾರಸ್ಥ ಬ್ರಿಟಿಷರು ನಕ್ಕು ಹುಬ್ಬು ಹಾರಿ

ಸಿದ್ದರು. ಗಾಂಧೀಜಿಗೆ ಮನುಷ್ಯನ ಆಳದ ಸಜ್ಜನಿಕೆಯಲ್ಲಿ, ಅನ್ಯಾಯ ಅಕ್ರಮಗಳನ್ನು ಕಂಡಾಗ ಮೂಡುವ ಸಾತ್ವಿಕ ಸಿಟ್ಟಿನಲ್ಲಿ ವಿಶ್ವಾಸವಿತ್ತು. ಈ ಎರಡು ಗುಣಗಳಿಗೆ ಅವರು ಬಹಿರಂಗ ರೂಪ ನೀಡಿದ್ದು ಅಸಹಕಾರ ಮತ್ತು ಸತ್ಯಾಗ್ರದಹ ಮೂಲಕ.

ಇಂದು ಬ್ರಿಟಿಷರಿಗಿಂತಲೂ ಕ್ರೂರಿಗಳಾಗಿ, ಅಮಾನುಷರಾಗಿರುವ ಜನರ ವಿರುದ್ಧ ಪ್ರಬಲ ಅಲೆಯೊಂದು ಏಳಬೇಕಿದೆ. ಸಣ್ಣರೀತಿಯಲ್ಲಾದರೂ ಈ ಕಾರ್ಯ ಆರಂಭಗೊಂಡಿದೆ. ಮಹಾರಾಷ್ಟ್ರದಲ್ಲಿ ಅಣ್ಣಾ ಹಜಾರೆ ಅಂಥ ಕೆಲಸ ಆರಂಭಿಸಿದ್ದಾರೆ. ಅವರ ಕಾರ್ಯವ್ಯಾಪ್ತಿ ಕೆಲವೇ ಗ್ರಾಮಗಳಿಗೆ ಸೀಮಿತ. ಆದರೂ ಜನರ ದುಷ್ಟತನ, ಭ್ರಷ್ಟತೆಯ ಕತ್ತಲ ವಿರುದ್ಧ ಹೊತ್ತಿಸಿಟ್ಟ ಸಣ್ಣ ನಂದದ ದೀಪ. ಆದರಿಂದ ಮತ್ತಷ್ಟು ದೀಪಗಳು ಹೊತ್ತುತ್ತವೆ. ಗಾಢ ಕತ್ತಲೆಯ ವಿರುದ್ಧ ಇದು ಪ್ರಚಂಡ ಬೆಳಕಾಗುತ್ತದೆ ಎಂಬ ಭರವಸೆ ನಮ್ಮದು. ಒಂದು ನದಿಯಾಗಲು ಹಲವು ಝುರಿ, ತೊರೆಗಳು ಬೇಕು. ಅಂಥ ಸಣ್ಣ ಝುರಿ ಈಗ ಕಾಣಸಿದೆ. ಮುಂದೆ ಇನ್ನಷ್ಟು ಕಾಣಸಿಕೊಂಡಾವು.

ಅದರ ಪ್ರತೀಕ ಎಂಬಂತೆ ನಮ್ಮ ನಡುವೆಯೇ ಸಣ್ಣ ದನಿಯೊಂದು ಕಾಣಿಸಿಕೊಂಡಿದೆ. ಬಿಜಾಪುರ ಜಿಲ್ಲೆಯ ಗಣಪತ್ ಮಹಾರಾಜ ಕುನ್ನೂರು ಭ್ರಷ್ಟಾಚಾರದ ವಿರುದ್ಧ ತಮ್ಮದೇ ರೀತಿಯಲ್ಲಿ ಮುಂದಾಗಿದ್ದಾರೆ. ಜನರಲ್ಲಿ ಜಾಗೃತಿ ಮೂಡಿಸುವ, ಈವರೆಗೆ ಅಷ್ಟೇನೂ ಗಮನ ಸೆಳೆದಿರದ ಕಾರ್ಯದಲ್ಲಿ ಅವರು ತೊಡಗಿದ್ದಾರೆ.

ಭ್ರಷ್ಟಾಚಾರ

ಭ್ರಷ್ಟಾಚಾರ ವಿರುದ್ಧ ಸೆಣಸಿದ, ಸೆಣಸುತ್ತಿರುವ ಇಬ್ಬರ ಸಂದರ್ಶನ ಇಲ್ಲಿ ನಮ್ಮ ಓದುಗರಿಗಾಗಿ ಕೊಡುತ್ತಾ ಇದ್ದೇವೆ. ಅಂಥವರಲ್ಲಿ ಮೊದಲಿಗರು ಎ.ಕೆ. ಸುಬ್ಬಯ್ಯ; ರಾಜ್ಯ ರಾಜಕೀಯದಲ್ಲಿ ಅಚ್ಚಳಿಯದ ಸತ್ವದ ದನಿಯಾದವರು. ಇನ್ನೊಬ್ಬರು ನಿವೃತ್ತ ನ್ಯಾಯಾಧೀಶ ಕೋ. ಚೆನ್ನಬಸಪ್ಪ; ಅವರೀಗ ಕರ್ನಾಟಕ ಭ್ರಷ್ಟಾಚಾರ ನಿರ್ಮೂಲನಾ ವೇದಿಕೆ ಅಧ್ಯಕ್ಷರು.

ಭ್ರಷ್ಟಾಚಾರ ಅಳಿಯಲು ಚಮತ್ಕಾರವೇ ಆಗಬೇಕು

ಎ.ಕೆ. ಸುಬ್ಬಯ್ಯ

> ಸರ್ ಎಂ. ವಿಶ್ವೇಶ್ವರಯ್ಯನವರು ಅನುಸರಿಸುತ್ತಾ ಇದ್ದ ಪ್ರಾಮಾಣಿಕತೆ ನಮ್ಮ ಮುಂದಿದೆ. ಸ್ವಂತ ಕಾಗದ ಬರೆಯೋದಕ್ಕೆ ಅವರು ಸರ್ಕಾರದ ಮಸಿ ಬಳಸುತ್ತಾ ಇರಲಿಲ್ಲ. ಕಚೇರಿ ಕೆಲಸ ಮುಗಿದು ಸ್ವಂತದ ಕೆಲಸ ಮಾಡೋವಾಗ ಸರ್ಕಾರ ಒದಗಿಸಿದ್ದ ಮೇಣದ ಬತ್ತಿ ಬಳಸ್ತಾ ಇರಲಿಲ್ಲ.

ಬದುಕು : ನಿಮ್ಮ ದೃಷ್ಟಿಯಲ್ಲಿ ಯಾವುದು ಭ್ರಷ್ಟಾಚಾರ?

ಎ.ಕೆ. ಸುಬ್ಬಯ್ಯ : ಸ್ವಂತ ಲಾಭಕ್ಕೆ ಅಧಿಕಾರದ ದುರುಪಯೋಗವೇ ಭ್ರಷ್ಟಾಚಾರ.

ಬದುಕು : ಅಧಿಕಾರಕ್ಕೆ ಮಾತ್ರ ಭ್ರಷ್ಟಾಚಾರ ಸೀಮಿತವೇ? ಒಂದು ಕುಟುಂಬ, ಸಮಾಜದಲ್ಲೂ ಏನೆಲ್ಲ ಆಗಬಹುದಲ್ಲವೇ?

ಸುಬ್ಬಯ್ಯ : ಆಗಲೂ ಹಿರಿಯರು, ನಾಯಕರು ಎಂಬ ಮನ್ನಣೆಯಿಂದ ದೊರೆತ ಅಧಿಕಾರದಿಂದಲೇ ಈ ಭ್ರಷ್ಟಾಚಾರ ನಡೆಯುತ್ತೆ.

ಬದುಕು : ಇವತ್ತು ಭ್ರಷ್ಟಾಚಾರ ಯಾವ ಮಟ್ಟದಲ್ಲಿದೆ?

ಸುಬ್ಬಯ್ಯ : ಒಂದು ಕಾಲಕ್ಕೆ ವಿಶ್ವೇಶ್ವರಯ್ಯನವರು ಅನುಸರಿಸುತ್ತಾ ಇದ್ದ ಪ್ರಾಮಾಣಿಕತೆ ನಮ್ಮ ಮುಂದಿದೆ. ಸ್ವಂತ ಕಾಗದ ಬರೆಯೋದಕ್ಕೆ ಅವರು ಸರ್ಕಾರದ ಮಸಿ ಬಳಸುತ್ತಾ ಇರಲಿಲ್ಲ. ಕಚೇರಿ ಕೆಲಸ ಮುಗಿದು ಸ್ವಂತದ ಕೆಲಸ ಮಾಡುವಾಗ ಸರ್ಕಾರ ಒದಗಿಸಿದ್ದ ಮೇಣದ ಬತ್ತಿ ಬಳಸ್ತಾ ಇರಲಿಲ್ಲ. ಇದು ಆವತ್ತಿನ ರೀತಿ. ಅಂಥ



ಕಟ್ಟುನಿಟ್ಟು ಇವತ್ತಿಗೆ ಅಪ್ರಸ್ತುತ. ಯಾರೂ ಹಾಗೆ ಇರೋಕ್ಕಾಗಲ್ಲ. ಇದು ವಾಸ್ತವ. ಇವತ್ತಿಗೆ ನಾವು ಸಾಕಷ್ಟು ರಾಜಿ ಆಗಿದ್ದೀವಿ. ಅಧಿಕಾರ ಮುಗಿದ ಮೇಲೂ ಒಬ್ಬ ಸಚಿವ ಸರ್ಕಾರಿ ಬಂಗಲೇಲಿ ಇದ್ದರೆ, ಸರ್ಕಾರದ ಸವಲತ್ತು ಬಳಸುತ್ತಾ ಇದ್ದರೆ ಅದು ಭ್ರಷ್ಟಾಚಾರ ಅನ್ನಿಸೋದಿಲ್ಲ, ಅಷ್ಟರ ಮಟ್ಟಿಗೆ ಸಮಾಜ ಇವತ್ತು ರಾಜೀ ಆಗಿದೆ.

ಭ್ರಷ್ಟಾಚಾರ

1968ರಲ್ಲಿ ನಾನು ಶಾಸಕನಾದಾಗ; ಸಚಿವರು, ಅಧಿಕಾರಿಗಳು ಸರ್ಕಾರದ ಕಾರಿನಲ್ಲಿ ಮಕ್ಕಳನ್ನು ಶಾಲೆಗೆ ಕಳಿಸಿದರೆ, ಮಾರ್ಕೆಟ್ಟಿಗೆ ತರಕಾರಿ ತರೋಕ್ಕೆ ಕಾರು ಕಳಿಸಿದರೆ ವಿಧಾನ ಮಂಡಲದಲ್ಲಿ ದೊಡ್ಡ ಗಲಾಟೆ ಆಗ್ತಾ ಇತ್ತು. ಇವತ್ತು ಬಹುಶಃ ಯಾರಾದರೂ ಹಾಗೆ ದುರ್ಬಳಕೆ ಮಾಡಲಿಲ್ಲ ಅಂದರೆ ಅದು ಅಪರಾಧ!

ಬದುಕು : ಇಂಥ ಮನೋಭಾವ ಬದಲಾವಣೆಗೆ ಏನು ಕಾರಣ?

ಸುಬ್ಬಯ್ಯ : ಜನರ ಮನೋಭಾವ ಬದಲಾವಣೆಗೆ ಅಧಿಕಾರ ಚಲಾವಣೆಗೆ ಅವಕಾಶ ನೀಡುವ ಉನ್ನತ ಸ್ಥಾನಗಳಿಗೆ ಬಂದ ಜನ ಒಂದು ಕಾರಣ. ರಾಜಕಾರಣಿ - ಅಧಿಕಾರಶಾಹಿ ಶಾಮೀಲು ಆಗಿದ್ದು ಇನ್ನೊಂದು ಕಾರಣ. ನಮ್ಮ ಜನ ಯಾವತ್ತೂ ನಾಯಕರನ್ನು ಅನುಸರಿಸುವವರು.

ನಾಯಕರಾದವರು ಜನಗಳನ್ನು ಸರಿದಾರಿಯಲ್ಲಿ ಕೊಂಡೊಯ್ಯುವ ಜವಾಬ್ದಾರಿ ನಿರ್ವಹಿಸಲಿಲ್ಲ. ಜನತಂತ್ರ ವ್ಯವಸ್ಥೆಯಲ್ಲಿ ಸಮಾಜದ ಮನೋಭಾವ ಸ್ವಯಂ ಶಕ್ತಿಯಿಂದ ಬದಲಾಗಬೇಕಿತ್ತು. ಹಾಗಾಗಲು ನಾಯಕರು ಜನರಲ್ಲಿ ವಿಚಾರಶೀಲತೆ ಬೆಳೆಸಬೇಕಿತ್ತು. ಇದ್ಯಾವುದೂ ಆಗಲಿಲ್ಲ. ಒಳ್ಳೆಯ ಬದುಕಿಗೆ ಅಗತ್ಯವಾದ ಅರ್ಹತೆ ಜನಗಳಲ್ಲಿ ಬೆಳೆದು ಬರಲಿಲ್ಲ. ಸ್ವಾತಂತ್ರ್ಯ ಸಿಕ್ಕಿದರೂ ಒಂದಲ್ಲ ಒಂದು ರೀತಿಯಲ್ಲಿ ಇವರು ಗುಲಾಮರು. ಮನಸಾರೆ ಗುಲಾಮೀ ಮನೋಭಾವ ಸ್ವೀಕರಿಸಿದವರು.

ಸ್ವಾತಂತ್ರ್ಯ ಅಂದರೆ ಸ್ವೇಚ್ಛಾಚಾರ ಅನ್ನುವ ಭಾವನೆ ಬೆಳೆದಿದೆ. ಸ್ವಾತಂತ್ರ್ಯದಲ್ಲಿ ವ್ಯಕ್ತಿಯ ಜವಾಬ್ದಾರಿಯೂ ಮುಖ್ಯ. ಇದು ಈಗ ಎಲ್ಲೂ ಕಾಣುವುದಿಲ್ಲ. ಹೀಗಾಗಿ ಎಲ್ಲೆಡೆ ಅವ್ಯವಸ್ಥೆ.

ಬದುಕು : ಇದೇ ನಮ್ಮ ಜನ ವಿದೇಶಗಳಲ್ಲಿ ನೆಲೆಸಿದಾಗ ಇಂಥ ವರ್ತನೆ ಕಾಣೋದಿಲ್ಲ. ಅವರು ಸಜ್ಜನರು, ಪ್ರಾಮಾಣಿಕರು, ಕಷ್ಟಪಟ್ಟು ದುಡಿಯುವವರು ಆಗುತ್ತಾರೆ ಅಲ್ಲವೇ?

ಸುಬ್ಬಯ್ಯ : ಅದು ಇನ್ನೊಂದು ರೀತಿಯಲ್ಲಿ ನಮ್ಮ ದಾಸ್ಯ ಮನೋಭಾವ ಬಿಂಬಿಸುತ್ತೆ. ಅಲ್ಲೆಲ್ಲ ಸ್ವಾತಂತ್ರ್ಯ ಇದೆ. ಹಾಗೆಂದು ಸ್ವೇಚ್ಛಾಚಾರಕ್ಕೆ ಅವಕಾಶ ಇಲ್ಲ.

ಬದುಕು : ನಮ್ಮ ಸಮಾಜ ತಿದ್ದಬಹುದು ಅಲ್ಲವೇ?

ಸುಬ್ಬಯ್ಯ : ಇಲ್ಲಿ ಜನ ಸಾಮಾನ್ಯರೇ ಯಜಮಾನರು. ಇವರೆಲ್ಲ ಪರಂಪರೆಯಿಂದಾಗಿ ಇರಬಹುದು; ಗುಲಾಮೀ ಮನೋಭಾವದವರು. ಸಮಾಜ ತಿದ್ದಬಹುದಾದ ಉನ್ನತ ಸ್ಥಾನಗಳಲ್ಲಿ ಕುಳಿತ ವ್ಯಕ್ತಿಯನ್ನೇ ಇವತ್ತು ತಿದ್ದಬೇಕಾಗಿದೆ. ಅಂಥ ಕೆಲಸ ಮಾಡಬಹುದಾದ ನಾಯಕರು ಕಾಣುತ್ತಾ ಇಲ್ಲ. ನಮ್ಮ ಗುಲಾಮತನ ವಿದ್ಯಾವಂತರು, ಬುದ್ಧಿಜೀವಿಗಳನ್ನೂ ಬಿಟ್ಟಿಲ್ಲ. ರಾಜಕೀಯದಲ್ಲಿ ಸ್ವಂತ ಶಕ್ತಿಯಿಂದ ಸ್ಥಾನಮಾನ ಗಳಿಸುವವರು ನೆಹರೂ ನಂತರ ವಿರಳವಾಗುತ್ತಾ ಬಂದರು. ಹೈಕಮಾಂಡ್ ಪೂಜೆ ಮಾಡುತ್ತಾ ಗುಲಾಮಗಿರಿ ಸ್ವೀಕರಿಸಿ, ಬೆಳೆಸಿಕೊಂಡು ಬಂದರು. ದೇಶಕ್ಕೆ ಸ್ವಾತಂತ್ರ್ಯ ಬಂದು, ಪ್ರಜಾಪ್ರಭುತ್ವ ವ್ಯವಸ್ಥೆ ಇದ್ದರೂ ವ್ಯಕ್ತಿಗತ ಸಾಮರ್ಥ್ಯದಿಂದ ಯಶಸ್ಸು ಗಳಿಸುವುದು ಅಸಾಧ್ಯವಾಗುತ್ತಾ ಹೋಯಿತು.

> **ಅಧಿಕಾರ ಮುಗಿದ ಮೇಲೂ ಒಬ್ಬ ಸಚಿವ ಸರ್ಕಾರಿ ಬಂಗಲೇಲಿ ಇದ್ದರೆ, ಸರ್ಕಾರದ ಸವಲತ್ತು ಬಳಸುತ್ತಾ ಇದ್ದರೆ ಅದು ಭ್ರಷ್ಟಾಚಾರ ಅನ್ನಿಸೋದಿಲ್ಲ. ಅಷ್ಟರ ಮಟ್ಟಿಗೆ ಸಮಾಜ ಇವತ್ತು ರಾಜೀ ಆಗಿದೆ.**

ಬದುಕು : ಇಂಥ ಮೌಲ್ಯಗಳ ಪತನ ಯಾವಾಗಿನಿಂದ ಆರಂಭವಾಯಿತು? ಏಕೆ?

ಸುಬ್ಬಯ್ಯ : ಸರಿಯಾಗಿ ಹೇಳಬೇಕೆಂದರೆ 1969ರ ನಂತರ. ನೈತಿಕ ಮೌಲ್ಯಗಳು ನೆಹರೂ ಕಾಲಕ್ಕೇ ಶಿಥಿಲಗೊಳ್ಳುತ್ತಾ ಬಂದಿದ್ದವು. ಗಾಂಧೀವಾದಿಗಳನೇಕರು ಅನುಸರಿಸಬೇಕಾದ ಗುಣಗಳನ್ನು ಬಿಟ್ಟು ಅಧಿಕಾರದ ವ್ಯಾಮೋಹಕ್ಕೆ ಅಂಟಿಕೊಂಡಿದ್ದರು. ಇದು ಯಾಕೆ ಹೀಗಾಯಿತು ಅನ್ನುವ ಕುರಿತು ಸಂಶೋಧನೆ ಮಾಡುವುದು ಒಳ್ಳೆಯದು.

ಅಂಥ ಘಟ್ಟದಲ್ಲಿ ತ್ಯಾಗ, ಮೌಲ್ಯಗಳಲ್ಲಿ ನಂಬಿಕೆ ಇಟ್ಟ ಎಸ್. ನಿಜಲಿಂಗಪ್ಪ ಮತ್ತವರ ಗುಂಪು ಒಂದು ಕಡೆ; ಅಧಿಕಾರ, ಈ ದೇಶದ ಬೇಜವಾಬ್ದಾರಿ ಜನಗಳ ಪುಂಡು ಪೋಕರಿಗಳ ಆಶಾಕಿರಣವಾದ ನಾಯಕಿ ಇಂದಿರಾಗಾಂಧಿ ಇನ್ನೊಂದು ಕಡೆ. ಕಾಂಗ್ರೆಸ್ ಒಡೆಯಿತು. ಹಾಗೆ ಬೇರೆಯಾದ ಇಂದಿರಾ ನೇತೃತ್ವದ ಕಾಂಗ್ರೆಸ್‌ಗೇ ಭಾರೀ ಬಹುಮತ ಚುನಾವಣೆಯಲ್ಲಿ ಬಂತು. ಅದಾದನಂತರವಂತೂ ಅಲ್ಪಸ್ವಲ್ಪ ಗಾಂಧೀಜಿ ತತ್ವದಲ್ಲಿ ನಂಬಿಕೆ ಇರಿಸಿದ್ದವರನ್ನೂ ಆಡಳಿತ ರಂಗದಿಂದ ಹೊರದೂಡಲಾಯಿತು.

ಇಂದಿರಾಗಾಂಧಿಯ ಪುಂಡು ಪೋಕರಿ ಬೇಜವಾಬ್ದಾರಿ ಜನ ಅಧಿಕಾರ, ಅವರ ಹಿಡಿತವೇ ದಿನೇ ದಿನೇ ಬಲವಾಯಿತು. ಅಷ್ಟೇ ವೇಗವಾಗಿ ನೈತಿಕ ಅಧಃಪತನ, ಅಪ್ರಮಾಣಿಕತೆ, ಅರಾಜಕತೆ ಬೆಳೆಯಿತು.

ಬದುಕು : ಇದರಲ್ಲಿ ಅಧಿಕಾರಿಗಳ ಪಾತ್ರ ಏನು?

ಸುಬ್ಬಯ್ಯ : ನಮ್ಮ ಐ.ಎ.ಎಸ್. ಐ.ಪಿ.ಎಸ್ ಅಧಿಕಾರಿಗಳಲ್ಲಿ ಭ್ರಷ್ಟತೆ ತಾಂಡವವಾಡುತ್ತಾ ಇದೆ. ರಾಜಕಾರಣಿ ಭ್ರಷ್ಟನಾದರೂ ಅಧಿಕಾರಿಗಳು ಕಾನೂನು, ಜನಪರತೆ ಗಮನಿಸಿ ಕೆಲಸ ಮಾಡಬಹುದು. ಅಧಿಕಾರಿಗಳು ಪ್ರಾಮಾಣಿಕರಾದರೆ ರಾಜಕಾರಣಿಗಳು ಹದ್ ಬಸ್ತಿನಲ್ಲಿ ಇರುತ್ತಾರೆ.

ಇಲ್ಲಿ ಏನಾಗಿದೆ ಅಂದರೆ; ರಾಜಕಾರಣಿಗಳು ದಡ್ಡ ಅಪ್ರಮಾಣಿಕರು, ಅಧಿಕಾರಿಗಳು ಬುದ್ಧಿವಂತ ಅಪ್ರಾಮಾಣಿಕರು. ಇಂಥ ರಾಜಕೀಯ ವ್ಯಕ್ತಿಗಳ ಯಜಮಾನಿಕೆ ಅಧಿಕಾರಿಗಳಿಗೆ ತೀರಾ ಆನಂದದ ಸಂಗತಿ.

ರಾಜಕಾರಣಿಗೆ ಏನು ಬೇಕು ಅಂತ ಮೊದಲು ಇವರು ತಿಳಕೋತಾರೆ. ಸೆಕ್ರೆಟರಿಗಳು, ಜಿಲ್ಲಾಧಿಕಾರಿಗಳು, ಪೊಲೀಸಿನವರು ಮೊದಲು ಮಾಡೋದೇ ಈ ಕೆಲಸ. ರಾಜಕಾರಣಿಗಳನ್ನು ಸಂತುಷ್ಟಿಗೊಳಿಸುತ್ತಾ, ಅವರಿಗೆ ತೊಂದರೆಯಾಗದ ಹಾಗೆ ಭ್ರಷ್ಟಾಚಾರ ಮಾಡೋದು ಹೀಗೆ ಅಂತ ಇವರೇ ಕಲಿಸಿಕೊಡ್ತಾರೆ. ಆಮೇಲೆ ಇವರಿಗೆ ಬೇಕಾದ್ದು ಇವರು ಮಾಡ್ತಾರೆ. ಒಂದು ರೀತಿ ರಾಜಕಾರಣಿಗಳು, ಅಧಿಕಾರಿಗಳ ನಡುವೆ ನಿಗೂಢ ಒಪ್ಪಂದ ಇದೆ.

ಬದುಕು : ಇದರಿಂದ ಬಿಡುಗಡೆ ಇಲ್ಲವೇ?

ಸುಬ್ಬಯ್ಯ : ಬಿಡುಗಡೆಯ ಲಕ್ಷಣ ಕಾಣಿಸ್ತಾ ಇಲ್ಲ. ಭ್ರಷ್ಟಾಚಾರದಿಂದ ಬಿಡುಗಡೇನ ಜನರೇ ಮಾಡಬೇಕು. ಆದರೆ ಜನ ಇವತ್ತು ಅಧಿಕಾರ ಮತ್ತು ಹಣದ ಪೂಜೆಯಲ್ಲಿ ನಿರತರಾಗಿದಾರೆ.

ಜಾತಿವಾದ ಬೆಳೆದಿದೆ. ರಾಜಕಾರಣಿ ಎಷ್ಟೇ

ಅಕ್ರಮ ನಡೆಸಿದರೂ ಅವನ ಜಾತಿಯ ಜನ ಬೆಂಬಲಕ್ಕೆ ನಿಲ್ಲುತ್ತಾರೆ. ಹಾಗಾಗೇ ಅಂಥವರು ರಾಜಕೀಯವಾಗಿ ಜೀವಂತ ಉಳಿದುಕೊಂಡೇ ಬರುತ್ತಾರೆ.

ಈಗಿನ ಸ್ಥಿತಿ ನೋಡಿದರೆ ಭ್ರಷ್ಟಾಚಾರ ಮತ್ತಷ್ಟು ಬೆಳೆಯಬಹುದೇ ಹೊರತು ಕಡಿಮೆ ಆಗುವ ಲಕ್ಷಣ ಕಾಣ್ತಾ ಇಲ್ಲ. ಅನಿರೀಕ್ಷಿತ ಚಮತ್ಕಾರ ನಡೀಬೇಕು ಅಷ್ಟೆ. ಅಂಥ ಒಂದು ಸಣ್ಣ ಚಮತ್ಕಾರ 1977ರಲ್ಲಿ ಆಯಿತು. ಆದರೆ ಬಹಳ ಕಾಲ ಉಳಿಯಲಿಲ್ಲ.

ಜನಕ್ಕೆ ಪಾಠ ಕಲಿಸುವ ಕಲೆ ಗೊತ್ತಿಲ್ಲ. ಉನ್ನತ ಸ್ಥಾನಗಳಿಗೆ ಸಭ್ಯರು ಬರಬೇಕು. ಇಲ್ಲಿ ಅಂಥ ಅವಕಾಶಗಳಿಲ್ಲ. ಇವತ್ತು ಜಾತಿ, ದುಡ್ಡಿನ ಬೆಂಬಲ ಇಲ್ಲದೆ ಚುನಾವಣೆ ಗೆಲ್ಲೋದು ಸಾಧ್ಯವಾ?

ಪ್ರಾಮಾಣಿಕರಿಗೆ ಹೋರಾಟ ಮಾಡುವ ದೃಢ ಮನಸ್ಸು ಇರಬೇಕು. ಯಶಸ್ಸು ಸಿಗುತ್ತೆ ಅಂತ ಹೇಳಲಾರೆ. ಆತ್ಮಸಾಕ್ಷಿಗೆ ತೃಪ್ತಿ ದೊರೆಯಬಹುದು.

ಬದುಕು : ಹಾಗಾದರೆ ಇಲ್ಲಿ ಭ್ರಷ್ಟಾಚಾರಕ್ಕೆ ಕೊನೆಯೇ ಇಲ್ಲ ಅಂತೀರಾ?

ಸುಬ್ಬಯ್ಯ : ಪ್ರಕೃತಿ ಯಾವುದನ್ನೂ ಮಿತಿ ಮೀರಿದ ಹಂತಕ್ಕೆ ಬಿಡೋದಿಲ್ಲ. ಅದು ಸದಾ ಸಮತೋಲನಕ್ಕೆ ಯತ್ನಿಸುತ್ತಾ ಇರುತ್ತೆ. ನನಗೆ ದೇವರಲ್ಲಿ ವಿಶ್ವಾಸ ಇಲ್ಲ. ಏನಾದರೂ ಪ್ರಕೃತಿಯೇ ಚಮತ್ಕಾರ ಮಾಡಬೇಕು. ಪ್ರಕೃತಿ ಯಾವತ್ತೂ ಅತಿರೇಕಗಳನ್ನು ಸಹಿಸೋದಿಲ್ಲ.

ಇಂದಿರಾ ಯುಗ, ಎಮರ್ಜೆನ್ಸಿ ಅನ್ನೋದು ಕೂಡ ನೋಡ ನೋಡತಾ ತಲೆಕೆಳಗಾಗಿ ಹೋಯಿತು. ಇಂದಿರಾ ಗಾಂಧೀನ್ನೇ ಜನ ಮನೆಗೆ ಕಳಿಸಿದರು.

ಬದುಕು : ರಾಜ್ಯದಲ್ಲಿ ನೀವು ಗಮನಿಸಿದ ಅತಿ ದೊಡ್ಡ ಹಗರಣ ಯಾವುದು?

ಸುಬ್ಬಯ್ಯ : ಆಯಾ ಕಾಲಕ್ಕೆ ದೊಡ್ಡದೆನಿಸುವ ಹಗರಣಗಳ ವಿರುದ್ಧ ನಾನು ಹೋರಾಡಿದ್ದೇನೆ. ಅರಸು ಅವರ ಸ್ವಜನ ಪಕ್ಷಪಾತ, ಅವರ ಅಳಿಯ ಡಾ. ಎಂ.ಡಿ. ನಟರಾಜನ ಹಾವಳಿ ಬಗ್ಗೆ ಪ್ರಸ್ತಾಪ ಮಾಡಿದೀನಿ. ಆನಂತರ ಗುಂಡೂರಾಯರ ಕಾಲದ ಹಲವು ಹಗರಣ ಬಯಲಿಗೆಳೆದೆ. ರೇಣುಕಾ ರಾಜೇಂದ್ರನ್ ಪ್ರಕರಣ, ಸಿ.ಎಂ. ಇಬ್ರಾಹಿಂ ಅವರ ರೋಲೆಕ್ಸ್ ಹಗರಣ..... ಹೀಗೇ,.... ಇವತ್ತು ಕೂತು ಯೋಚಿಸೋವಾಗ ಒಂದೊಂದು ಹಗರಣಾನೂ ಅವತ್ತಿನ ಕಾಲಕ್ಕೆ ತೀರಾ ದೊಡ್ಡದು ಅನ್ನಿಸೋದಾದರೂ, ಇವತ್ತಿಗೆ ಅವು ಏನೇನೂ ಅಲ್ಲ ಅನ್ನಿಸಿಬಿಡುತ್ತವೆ.

ಹಿಂದಿನ ಎಲ್ಲರ ಹಗರಣ ಒಂದು ಕಡೆ, ರಾಮಕೃಷ್ಣ ಹೆಗಡೆಯ ಭ್ರಷ್ಟತೆ ಇನ್ನೊಂದು ಕಡೆ ಇಟ್ಟು ತೂಗಿದರೆ; ಹೆಗಡೆಯ ಭ್ರಷ್ಟತೆ ಹಿಮಾಲಯ ಪರ್ವತ, ಉಳಿದವರ ಎಲ್ಲ ಭ್ರಷ್ಟತೆ ಸೇರಿಸಿದರೆ ಒಂದು ಸಣ್ಣ ಕಲ್ಲಿನ ಗಾತ್ರ ಆಗಬಹುದು.

ಹೆಗಡೆ ಅವರನ್ನು ಮೀರಿಸೋಕ್ಕೆ ಆಗದೇ ಇದ್ದರೂ ಅವರಷ್ಟೇ ಭ್ರಷ್ಟ ವ್ಯಕ್ತಿ ಅಂದರೆ ದೇವೇಗೌಡ. ಸರಿಸುಮಾರಾಗಿ ಅವರು ಹೆಗಡೆ ಹತ್ತಿರ ಹತ್ತಿರ ಬರ್ತಾರೆ.

ನನ್ನ ದೃಷ್ಟಿಯಲ್ಲಿ ರಾಜ್ಯದ ಭ್ರಷ್ಟರನ್ನು ಪಟ್ಟಿ ಮಾಡಿದರೆ ಹೀಗಿರುತ್ತೆ.

1. ರಾಮಕೃಷ್ಣ ಹೆಗಡೆ
2. ದೇವೇಗೌಡ
3. ಬಂಗಾರಪ್ಪ
4. ವೀರಪ್ಪ ಮೊಯ್ಲಿ
5. ದೇವರಾಜ ಅರಸ್

ಅಂಥ ಹೆಗಡೆಯನ್ನು ಇವತ್ತು ಕರ್ನಾಟಕದ ಆಶಾಕಿರಣ ಎಂಬ ಹಾಗೆ ಬಿಂಬಿಸುವ ಯತ್ನ ಪತ್ರಿಕೆಗಳು, ಪತ್ರಕರ್ತರಿಂದ ಆಗುತ್ತಾ ಇದೆ. ಅವರಿಲ್ಲದೇ ಹೋದರೆ ಕರ್ನಾಟಕವೇ ಮುಳುಗುತ್ತೆ ಅನ್ನುವ ಹಾಗೆ ಇವರು ಆಡ್ತಾರೆ.

ಬದುಕು : ಹೆಗಡೆ ಅತ್ಯಂತ ಭ್ರಷ್ಟರು ಅನ್ನಲಿಕ್ಕೆ ಹಣ ಒಂದೇ ಅಳತೆಗೋಲೇ? ಅಥವಾ.........

ಸುಬ್ಬಯ್ಯ : ಆತನ ನಾಜೂಕುತನ ಇಲ್ಲಿ ಮುಖ್ಯ. ಅಪಾರ ಹಣದ ರಾಶಿ ಮಾಡಿಟ್ಟುಕೊಂಡ ಹೆಗಡೆಗೆ ತಾವು ಒಳ್ಳೆಯವರು ಎಂದು ನಂಬಿಸುವ ಕೌಶಲ ಇದೆಯಲ್ಲ ಅದು ಅಪಾಯಕಾರಿ. ಆತನಿಗೆ ಐಡಿಯಾಲಜಿ ಅಂತ ಏನೂ ಇಲ್ಲ. ಸ್ವಂತದ ಲಾಭವೊಂದೇ ಅವರ ಐಡಿಯಾಲಜಿ.

ಭ್ರಷ್ಟಾಚಾರ

ಬದುಕು : ಭ್ರಷ್ಟಾಚಾರ ಕುರಿತಂತೆ ನೀವು ಸ್ಪಷ್ಟವಾಗಿ ಎಲ್ಲ ಹೇಳಿದ್ದೀರ. ಇದನ್ನೂ ಮೀರಿ ನಮ್ಮ ಓದುಗರಿಗೆ ನೀವು ಕೊಡಬಹುದಾದ ಸಂದೇಶ ಏನು?


ಸುಬ್ಬಯ್ಯ : ಭವಿಷ್ಯತ್ ಏನಾಗಬಹುದು ಎಂದು ಜನ ಸಾಮಾನ್ಯರು ಚಿಂತನೆ ಮಾಡುವುದು ಒಳ್ಳೆಯದು. ಎಳೆಯ ಪೀಳಿಗೆ ಈ ಬಗ್ಗೆ ಚಿಂತಿಸಬೇಕು. ಇಲ್ಲದಿದ್ದರೆ ಈ ದೇಶದ ಸ್ವಾತಂತ್ರ್ಯ ಉಳಿಯೋದು ಕೂಡ ಅಸಂಭವ.

ಸ್ವಾರ್ಥ, ಜಾತಿ, ಹಣಕ್ಕೆ ತನ್ನನ್ನು ಅರ್ಪಿಸಿಕೊಳ್ಳುವುದು ಬಿಟ್ಟು ದೇಶಭಕ್ತರಾಗಿ, ನಾಗರಿಕರಾಗಿ ಚಿಂತೆ ಮಾಡುವುದು ಜನ ರೂಢಿಸಿಕೊಳ್ಳಬೇಕು. ಯೋಗ್ಯ ವ್ಯಕ್ತಿಗಳನ್ನು ಗುರುತಿಸಿ, ಚುನಾವಣಾ ರಂಗಕ್ಕೆ ಕರೆತಂದು ನಿಲ್ಲಿಸಿ ಅವರನ್ನು ಗೆಲ್ಲಿಸಬೇಕು. ಈ ಕರ್ತವ್ಯ ಜನ ನಿರ್ವಹಿಸಲಿ ಅಂತ ನಾನು ಆಶಿಸುತ್ತೇನೆ.

ನ್ಯಾಯಾಂಗದಲ್ಲಿ ವಿಶ್ವಾಸ - ವಿಳಂಬ ವಿಷಾದಕರ

ಕೋಚೆ

ಬದುಕು : ನಿಮ್ಮ ಕರ್ನಾಟಕ ಭ್ರಷ್ಟಾಚಾರ ನಿರ್ಮೂಲನಾ ವೇದಿಕೆ ಯಾವಾಗ ಅಸ್ತಿತ್ವಕ್ಕೆ ಬಂತು? ಏಕೆ?



ಕೋಚೆ : ವೇದಿಕೆ ಅಸ್ತಿತ್ವಕ್ಕೆ ಬಂದು ಮೂರು ವರ್ಷ ಆಯಿತು. ನಾನು ಅಧ್ಯಕ್ಷ. ನಿವೃತ್ತ ಎನ್‌ಜಿ ಇ ಎಫ್‌ನ ಚೀಫ್ ಎಂಜಿನಿಯರ್ ಸೋಮಶೇಖರ ರೆಡ್ಡಿ ಕಾರ್ಯದರ್ಶಿ, ಎಂ.ಪಿ. ಈಶ್ವರಪ್ಪ ಮುಂತಾದವರು ವೇದಿಕೆಯ ಉಪಾಧ್ಯಕ್ಷರು.

ನಾವೆಲ್ಲ ಮುಂಚೆಯೂ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಗಳ ಮೂಲಕ ಭ್ರಷ್ಟಾಚಾರ ನಿಯಂತ್ರಣಕ್ಕೆ ಯತ್ನಿಸಿದವರು. ಅವೆಲ್ಲ ವೈಯಕ್ತಿಕ ನೆಲೆಯ ಯತ್ನಗಳು. ಇದೊಂದು ಆಂದೋಲನ ಆಗಬೇಕು. ಸಾರ್ವಜನಿಕರಲ್ಲಿ ತಿಳಿವಳಿಕೆ ಮೂಡಿಸಬೇಕು ಎಂದು ವೇದಿಕೆ ಸ್ಥಾಪಿಸಿದೆವು.

ಬದುಕು : ನಿಮ್ಮ ಮೊಕದ್ದಮೆಗಳಿಂದ ಪರಿಣಾಮ ಆಗಿದೆಯೇ?

ಕೋಚೆ. : ಖಂಡಿತ. ಮಾಜಿ ಕೇಂದ್ರ ಸಚಿವ ಸಿ.ಕೆ. ಜಾಫರ್ ಶರೀಫ್ ಪ್ರಕರಣವನ್ನೇ ನೋಡಿ. ಆದಾಯ ಮೂಲ ಮೀರಿದ ಅವರ ಆಸ್ತಿ, ಭ್ರಷ್ಟಾಚಾರದ ಒಂದು ಮುಖ. ಬೆಂಗಳೂರಿಗೆ ಬರಿಗೈಯಲ್ಲಿ ಬಂದ ಆತ ಬಸ್ ಏಜೆಂಟ್

ಭ್ರಷ್ಟಾಚಾರ

ಆಗಿದ್ದವರು. ಇಲ್ಲಿನ ಓಕಳೀಪುರಂನಲ್ಲಿ ಸಣ್ಣ ಕೋಣೆಯೊಂದರಲ್ಲಿ ವಾಸಿಸುತ್ತಾ ಆಟೋರಿಕ್ಷಾ ಓಡಿಸಿ ಜೀವನ ನಡೆಸುತ್ತಾ ಇದ್ದವರು. ನಿಜಲಿಂಗಪ್ಪನವರ ಸಂಪರ್ಕ, ಸೇವಾದಳ, ಕಾಂಗ್ರೆಸ್ ಮಂತ್ರಿ ಪದವಿ ಅವರು ಏರಿದ ಮೆಟ್ಟಲುಗಳು.

ಹೆಂಡತಿ ಹೆಸರಲ್ಲಿ ಇಂದಿರಾ ನಗರದಲ್ಲಿ ಒಂದು ಕೋಟಿ ಇಪ್ಪತ್ತು ಲಕ್ಷ ಬೆಲೆಯ ಮನೆ ಖರೀದಿಸಿದ್ದಾರೆ. ಇದಲ್ಲದೆ ಹೇಯ್ನ್ಸ್ ರಸ್ತೆಯಲ್ಲಿ ಇನ್ನೊಂದು ಬಂಗಲೆ ಇದೆ. ಇಂದಿರಾ ನಗರದ ಮನೆ ಖರೀದಿಸಲು ಹಣ ಎಲ್ಲಿಂದ ಬಂತು! ಅದಕ್ಕೆ ಅವರಲ್ಲಿ ಸ್ಪಷ್ಟ ವಿವರಣೆ ಇಲ್ಲ. ಹಾಗಾಗಿ ನ್ಯಾಯಾಲಯ ಮೊಕದ್ದಮೆ ಎತ್ತಿ ಹಿಡಿಯಿತು.

ಬದುಕು: ತಮ್ಮ ವಿರುದ್ಧದ ಸಿ.ಬಿ.ಐ. ತನಿಖೆ ರಾಜಕೀಯ ಪ್ರೇರಿತ ಎಂದು ಶರೀಫ್ ಹೇಳಿದ್ದಾರೆ.

ಕೋಚೆ: ಇದು ಕೇವಲ ಹಣದ ಪ್ರಶ್ನೆ ಅಲ್ಲ. ಇಂದಿರಾ ನಗರದಲ್ಲಿ ಪೋಲೀಸ್ ವಸತಿ ಗೃಹ ನಿರ್ಮಿಸಲು ರಾಜ್ಯ ಸರ್ಕಾರ ನಿರ್ಧರಿಸಿತ್ತು. ಆ ಜಮೀನನ್ನು ನೋಟಿಫೈ ಮಾಡಿ, ಮಾಲೀಕರಿಗೆ ನೀಡಬೇಕಾದ ಪರಿಹಾರ ಮೊತ್ತ ಖಜಾನೆಯಲ್ಲಿ ಠೇವಣಿ ಇರಿಸಿಯೂ ಆಗಿತ್ತು. ಆ ಹಂತದಲ್ಲಿ ಶರೀಫ್ ತನ್ನ ಅಧಿಕಾರ ಬಳಸಿ, ಸರ್ಕಾರದ ಭೂಮಿ ಸ್ವಾಧೀನ ನಿರ್ಧಾರವನ್ನೇ ಹಿಂತೆಗೆದುಕೊಳ್ಳುವಂತೆ ಮಾಡಿದರು. ಜಮೀನಿನ ಮಾಲೀಕರಿಂದ ತಾವೇ, ತಮ್ಮ ಪತ್ನಿ ಹೆಸರಲ್ಲಿ ನಿವೇಶನ ಖರೀದಿಸಿದರು.

ಅವರ ಜೀವನ ಚರಿತ್ರೆ 'ಸಾಧಕನ ಬದುಕು' ಓದಿದರೇ ಅವರು ರಾಜಕೀಯವಾಗಿ ಬೆಳೆದ ರೀತಿ ಗೊತ್ತಾಗುತ್ತದೆ. ಅವರೀಗ ಎಲ್ಲವನ್ನೂ ರಾಜಕೀಯ ದುರುದ್ದೇಶ ಎಂದು ಹೇಳುವುದು ಸಹಜ.

ವಿಚಿತ್ರವೆಂದರೆ ನಮ್ಮಲ್ಲಿನ ಅತ್ಯಂತ ಪ್ರಾಮಾಣಿಕ ರಾಜಕಾರಣಿ, ಮುತ್ಸದ್ದಿ ಎಸ್. ನಿಜಲಿಂಗಪ್ಪ ಅವರಂಥವರು ಕೂಡ ದನಿ ಎತ್ತದೇ ಇರುವುದು. 'ಸಾಧಕನ ಬದುಕು' ಪುಸ್ತಕ ಬಿಡುಗಡೆಗೆ ಅವರು ಒಪ್ಪಿಕೊಂಡಿದ್ದರು. ಭ್ರಷ್ಟಾಚಾರದ ಮೊಕದ್ದಮೆ ಎದುರಿಸುತ್ತಾ ಇರುವವರ ಆತ್ಮಚರಿತ್ರೆ ಬಿಡುಗಡೆಗೆ ಬರುವುದು ಒಳ್ಳೆಯದಲ್ಲ ಎಂದು ಕೆಲವರು ಹೇಳಿದರು.

ಆತ ನ್ಯಾಯಾಲಯದಲ್ಲಿ ಅದಕ್ಕೆ ಉತ್ತರ ಕೊಡಲು ಸಿದ್ಧ ಎನ್ನುತ್ತಾರೆ. ಹೀಗಿರುವಾಗ ಬಿಡುಗಡೆ ಕಾರ್ಯಕ್ರಮಕ್ಕೆ ಬರುವುದಿಲ್ಲ ಎಂದು ಹೇಳುವುದು ಸರಿಯಾಗದು ಎಂದೇ ಎಸ್ಸೆನ್ ಹೇಳಿದರಂತೆ.

ಜಾಫರ್‌ಶರೀಫ್ ಎಸ್ಸೆನ್‌ಗೆ ಆತ್ಮೀಯರು. ಇವರು ಎಸ್ಸೆನ್ ಅವರನ್ನು ಈಗಲೂ 'ಅಪ್ಪಾ' ಎಂದೇ ಕರೆಯುತ್ತಾರೆ. ಮೊದಲ ಸಲ ಅವರು ಕೇಂದ್ರದಲ್ಲಿ ಸಚಿವರಾದಾಗ ಬೆಂಗಳೂರಿಗೆ ಬಂದವರೇ ಸೀದಾ ಚಿತ್ರದುರ್ಗಕ್ಕೆ ಹೋಗಿ ನಿಜಲಿಂಗಪ್ಪನವರನ್ನು ಕಂಡು ಆರ್ಶೀವಾದ ಪಡೆದಿದ್ದರು.

ಇಂಥ ಆತ್ಮೀಯತೆಯ ಕಾರಣಕ್ಕೇ ನಿಜಲಿಂಗಪ್ಪ ಅವರಂಥವರೂ ಶರೀಫ್ ವಿರುದ್ಧ ದನಿ ಎತ್ತದಂತಾಗಿದ್ದಾರೆ. ಇದು ವಿಷಾದಕರ ಸಂಗತಿ.

ಬದುಕು : ಇದಲ್ಲದೇ ಇನ್ಯಾವ ಪ್ರಕರಣಗಳು ನ್ಯಾಯಾಲಯದ ಮುಂದಿವೆ?

ಕೋಚೆ: ಎಸ್. ಬಂಗಾರಪ್ಪ ಸಂಪುಟದ ಕ್ಲಾಸಿಕ್ ಕಂಪ್ಯೂಟರ್ ಹಗರಣ. ಇತ್ತೀಚೆಗೆ ದೇವೇಗೌಡರು ತಮ್ಮ ಮುಖ್ಯಮಂತ್ರಿತ್ವದ ಕೊನೆ ದಿನಗಳಲ್ಲಿ ತುಂಡುಗುತ್ತಿಗೆಗೆ ಅನುಮತಿ ನೀಡಿದ್ದು, ಬೈವಾಟರ್ ಸಂಸ್ಥೆಗೆ ಕಾವೇರಿ ನೀರು ಪೂರೈಕೆ ಯೋಜನೆ ಗುತ್ತಿಗೆ ಕೊಡಲು ನಿರ್ಧರಿಸುವುದನ್ನು ಪ್ರಶ್ನಿಸಿದ್ದೇವೆ.

ಬದುಕು : ನ್ಯಾಯಾಂಗದ ಮೊರೆ ಹೋಗುವುದಲ್ಲದೇ ಭ್ರಷ್ಟಾಚಾರ ನಿರ್ಮೂಲನಕ್ಕೆ ಇನ್ನೇನು ಮಾಡುತ್ತಾ ಇದ್ದೀರಿ?

ಕೋಚೆ : ಜನರಲ್ಲಿ ಭ್ರಷ್ಟಾಚಾರದ ವಿರುದ್ಧ ತಿಳುವಳಿಕೆ ಮೂಡಿಸಲು ಸಾರ್ವಜನಿಕ ಸಭೆ ನಡೆಸುತ್ತೇವೆ.

ಬದುಕು : ನ್ಯಾಯಾಂಗದ ಮೇಲೇ ನಿಮಗೆ ಹೆಚ್ಚು ವಿಶ್ವಾಸ ಇದ್ದಂತೆ ಕಾಣುತ್ತದೆ.

ಕೋಚೆ : ಅದು ಸಹಜ. ಸಣ್ಣ ಉದಾಹರಣೆ ನೋಡಿ. ಕೃಷ್ಣಾ ಮೇಲ್ದಂಡೆ ಅವ್ಯವಹಾರದ ತನಿಖೆಗೆ ವೈಜನಾಥ ಪಾಟೀಲ ನೇತೃತ್ವದ ಸಮಿತಿ ನೇಮಕವಾಗಿತ್ತು. ಸಮಿತಿಯ ವರದಿಯಲ್ಲಿ ಹಲವಾರು ಅಕ್ರಮಗಳ ಪ್ರಸ್ತಾಪ ಇತ್ತು. ಹೊಸದಾಗಿ ತೋಡಿದ್ದ ಕಾಲುವೆಗಳಲ್ಲಿ ಭಾರೀ ಮಳೆಯಿಂದಾಗಿ ಕೆಸರು ತುಂಬಿತ್ತು. ಹೂಳೆತ್ತಲು ಹಣ ವಿನಿಯೋಗಿಸಲಾಗಿದೆ ಎಂದು ಒಂದು ಪ್ರಕರಣ. ಸಮಿತಿ ಈ ಬಗ್ಗೆ ವಿಚಾರಿಸಿದಾಗ ಭಾರೀ ಮಳೆ ಇರಲಿ, ಆ ಪ್ರದೇಶದಲ್ಲಿ ಸಣ್ಣ ಮಳೆ ಕೂಡ ಬಂದಿರಲಿಲ್ಲ ಎಂದು ತಿಳಿಯಿತು. ಇಡೀ ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕು ಎಂದೂ ವರದಿ ತಿಳಿಸಿತ್ತು. ಆದರೆ ಸರ್ಕಾರ ಅದನ್ನು ಕಸದ ಬುಟ್ಟಿಗೆ ಹಾಕಿದೆ.

ಸಮಿತಿಗಳು, ನ್ಯಾಯಾಂಗ ತನಿಖೆಯ ವರದಿಗಳ ಹಣೆ ಬರಹ ಸಾಮಾನ್ಯವಾಗಿ ಇದೇ. ಹೀಗಾಗಿಯೇ ನಾವು ನ್ಯಾಯಾಂಗದ ಮೇಲೆ ಹೆಚ್ಚು

ಲಂಚ ಅಂದರೆ ದೀಪಾವಳಿ ಫೇಡೆಯಂತೆ

ಗ್ಲೋಬಲೈಸೇಷನ್ ಮತ್ತು ಖಾಸಗೀಕರಣ ಎಂದರೆ ಭ್ರಷ್ಟಾಚಾರ ಮತ್ತು ಲಂಚಕ್ಕೆ ಪರವಾನಗಿ ನೀಡಿದಂತೆ ಎಂಬುದು ನಿವೃತ್ತ ನ್ಯಾಯಾಧೀಶ ಕೋ. ಚೆನ್ನಬಸಪ್ಪ ಅಭಿಪ್ರಾಯ. ಇದಕ್ಕೆ ಅವರು ಸಣ್ಣದೊಂದು ಉದಾಹರಣೆ ನೀಡಿ ವಿವರಿಸಿದರು.

ಬೆಳಗಾವಿಯ ಕುಡಿಯುವ ನೀರು ಯೋಜನೆ ಅದು. ಲಕ್ಕೀತೇಕಡಿ ಎಂಬಲ್ಲಿ ಕುಡಿಯುವ ನೀರನ್ನು ಶುದ್ಧೀಕರಿಸಲು ಫಿಲ್ಟರ್ ಅಳವಡಿಸಬೇಕಿತ್ತು. ಆಗ ಮುಖ್ಯಮಂತ್ರಿ ಆಗಿದ್ದ ಎಸ್. ನಿಜಲಿಂಗಪ್ಪ ಇದಕ್ಕೆ ವಿಶೇಷ ಅನುಮತಿ ನೀಡಿದ್ದರು. ಕಾರಣ ಫಿಲ್ಟರನ್ನು ಜರ್ಮನಿಯಿಂದ ತರಿಸಬೇಕಿತ್ತು. ಆ ಜರ್ಮನ್ ಕಂಪನಿಯ ಭಾರತದ ಪ್ರತಿನಿಧಿ ಮುಂಬಯಿಯಲ್ಲಿದ್ದ.

ಫಿಲ್ಟರ್ ಅಳವಡಿಸುವ ಕಾರ್ಯ ಮುಗಿಯಿತು. ಆಗ ಬೆಳಗಾವಿ ಜಿಲ್ಲಾಧಿಕಾರಿ ಆಗಿದ್ದವರು ಮಾರುದ್ರಯ್ಯ ಅವರಿಗೆ ಹಾಗೂ ನಗರಪಾಲಿಕೆಯ ಕಮೀಷನರ್ ಅವರಿಗೆ ಕಂಪೆನಿಯ ಪ್ರತಿನಿಧಿ ಫಿಯಟ್ ಕಾರುಗಳನ್ನು ಕೊಡಲು ಮುಂದಾದ. 'ಇದೇಕೆ?' ಎಂದರೆ ಆತನ ವಿವರಣೆ ಸಲೀಸಾಗಿತ್ತು.

'ಇಂಥದೊಂದು ಕೆಲಸ ನಮಗೆ ವಹಿಸಿ ಉಪಕಾರ ಮಾಡಿದ್ದೀರ. ಅದಕ್ಕಾಗಿ ಕೃತಜ್ಞತೆ ಸೂಚಿಸಲು ದೀಪಾವಳಿ ಸಮಯಕ್ಕೆ ಫೇಡೆ ಹಂಚುವಂತೆ, ಇದು ನಮ್ಮ ಸಣ್ಣ ಕಾಣಿಕೆ.'

ಕಾರ್ ತೆಗೆದುಕೊಳ್ಳಲು ನಿರಾಕರಿಸಿದ ಮಾರುದ್ರಯ್ಯ ಹಾಗೂ ಆಗಿನ ಕಮೀಷನರ್ ಕೆಲಸದ ಆದೇಶ ನೀಡಿದ್ದು ಮುಖ್ಯಮಂತ್ರಿ ನಿಜಲಿಂಗಪ್ಪ. ಅವರಿಗೇ ಅದನ್ನು ಉಡುಗೊರೆ ನೀಡಿ ಎಂದು ಹೇಳಿ ಕಳಿಸಿದ್ದರು. ಇದು ಕನಿಷ್ಠ ಮತ್ತು ಮೂವತ್ತು ವರ್ಷದ ಹಿಂದಿನ ಘಟನೆ. ಆಗಲೇ ಈ ವಿದೇಶೀ ಕಂಪೆನಿಗಳ ಲಂಚ ನೀಡಿಕೆ ಹಾಗಿತ್ತು. ಇನ್ನು ಈಗ ಅಂಥ ಲಂಚ, ದಲ್ಲಾಳಿಗಳಿಗೆ ಅಧಿಕೃತ ಮಾನ್ಯತೆಯೇ ದೊರೆತಂತೆ ಆಗಿದೆ.

ವಿಶ್ವಾಸ ಇಡಬೇಕಾದ ಪರಿಸ್ಥಿತಿ.

ಬದುಕು : ಕೇವಲ ರಾಜಕಾರಣಿಗಳು ಮಾತ್ರ ಭ್ರಷ್ಟರೇ?

ಕೋಚೆ : ಇವತ್ತು ಎಲ್ಲಾ ರಂಗಗಳಲ್ಲಿ, ಸ್ತರಗಳಲ್ಲಿ ಅಧಃಪತನ ಕಾಣುತ್ತಾ ಇದ್ದೇವೆ. ವಿಧವೆ ಅಲ್ಲದವರಿಗೆ ವಿಧವಾ ವೇತನ, ಹಸು, ಕುರಿ, ಎಮ್ಮೆ ಸಾಲದಿಂದ ಹಿಡಿದು ಎಲ್ಲವೂ ದುರುಪಯೋಗ ಆಗುತ್ತಿವೆ. ವಿಧವೆ ಅಲ್ಲದ ಹೆಂಗಸು ವಿಧವಾ ವೇತನ ಪಡೆಯಲು, ಹಸು, ಕುರಿ, ಎಮ್ಮೆ; ಯಾವುದನ್ನೂ ಕೊಳ್ಳದೇ ಸಾಲದ ಹಣ ಪಡೆಯಲು ರಾಜಕಾರಣಿಗಳು ಜನಕ್ಕೆ ನೆರವಾಗುತ್ತಿದ್ದಾರೆ. ಇವರು ಹೀಗೆ ತಮಗೆ ನಾಲ್ಕು ಕಾಸು ಕೊಡಿಸುತ್ತಾರೆ ಎಂದು ಚುನಾವಣೆಗಳಲ್ಲಿ ಜನ ಅಂಥವರಿಗೇ ಮತ ಹಾಕುತ್ತಾರೆ.

ಇತ್ತೀಚಿನ ಒಂದು ಪ್ರಕರಣ. ನಮ್ಮ ಗೆಳೆಯರ ಜಮೀನು ನೋಡಿಕೊಳ್ಳುವ ಮನುಷ್ಯನಿಗೆ ಸರ್ಕಾರದಿಂದ ಎಂಟು ಸಾವಿರ ಸಿಕ್ಕಿತು. ಏಕೆ ಅಂತ ಕೇಳಿದರೆ ಆಶ್ರಯ ಮನೆಗೆ ಎಂದ. ಅಸಲು ನಿವೇಶನವೇ ಇಲ್ಲ ಮನೆ ಎಲ್ಲಿಯದು? ಅಂದರೆ ಹದಿನೈದು ಸಾವಿರ ಸರ್ಕಾರ ಕೊಡುತ್ತದೆ. ಪತ್ರಗಳಿಗೆ ಸಹಿ ಹಾಕಿದರೆ ಸಾಕು. ಏನೂ ಶ್ರಮವಿಲ್ಲದೇ ಎಂಟು ಸಾವಿರ ಸಿಕ್ಕುತ್ತದೆ ಅಂದ. ಹೀಗೇ ನಮ್ಮ ಲಕ್ಷಾಂತರ ಆಶ್ರಯ ಮನೆ, ನಿವೇಶನಗಳು ವಿತರಣೆ ಆಗುತ್ತಿವೆ ಎಂದು ಕಾಣುತ್ತದೆ.

ಹೀಗೆ ಜನ ಮತ್ತು ನಾಯಕರು ಪರಸ್ಪರ ಭ್ರಷ್ಟಾಚಾರದ ಪಾಲುದಾರರಾಗಿದ್ದಾರೆ.

ಬದುಕು : ಅಧಿಕಾರಶಾಹಿಯ ಪಾತ್ರ ಏನೂ ಇಲ್ಲವೇ?

ಕೋಚೆ : ಅವರಿಲ್ಲದೆ ಭ್ರಷ್ಟಾಚಾರ ನಡೆಯಲು ಸಾಧ್ಯವೇ? ಇವತ್ತು ನಮ್ಮ ಸಾರ್ವಜನಿಕ ಉದ್ದಿಮೆಗಳು ಹಾಳಾಗಿರುವುದು ನೋಡಿದರೆ ಅಧಿಕಾರಿಗಳ ಭ್ರಷ್ಟಾಚಾರ ಹೊಡೆದು ಕಾಣುತ್ತದೆ.

ಬೆಂಗಳೂರಿನ ಸಾರ್ವಜನಿಕ ಉದ್ದಿಮೆ ಒಂದು ಇವತ್ತು ಪಾಪರ್ ಆಗುವ ಸ್ಥಿತಿ ಬಂದಿದೆ. ಅಲ್ಲಿ ಟ್ರಾನ್ಸ್‌ಫಾರ್ಮರ್‌ಗಳ ಉತ್ಪಾದನೆ ಆಗುತ್ತದೆ. ಒಂದು ಟ್ರಾನ್ಸ್‌ಫಾರ್ಮರ್‌ಗೆ ಇಪ್ಪತ್ತು ಸಾವಿರ ರೂಪಾಯಿ. ಉತ್ಪಾದಿಸಿದ ಟ್ರಾನ್ಸ್‌ಫಾರ್ಮರ್‌ಗಳನ್ನು 'ಸ್ಕ್ಯಾಪ್' ಎಂದು ಘೋಷಿಸಿ ಎರಡು ಸಾವಿರ ರೂಪಾಯಿಗೆ ಮಾರುತ್ತಿದ್ದರು. ಹೀಗೆ ಮಾರಿದ ಟ್ರಾನ್ಸ್‌ಫಾರ್ಮರ್‌ಗಳನ್ನು ಮತ್ತೆ ಅದೇ ವ್ಯಾಪಾರಿಗಳಿಂದ ಕಾರ್ಖಾನೆ ಖರೀದಿಸುತ್ತಾ ಇತ್ತು. ಒಂದು ಟ್ರಾನ್ಸ್‌ಫಾರ್ಮರ್‌ಗೆ ಇಂಥ ಅವ್ಯವಹಾರದಿಂದ 38 ಸಾವಿರ ರೂಪಾಯಿ ನಷ್ಟ ಆಗುತ್ತಿತ್ತು. ಇನ್ನು ಆ ಕಾರ್ಖಾನೆ ಉದ್ಧಾರ ಆಗಲು ಸಾಧ್ಯವೇ?

ನಿಮಗೆ ಆಶ್ಚರ್ಯ ಆಗಬಹುದು. ಕಾರ್ಖಾನೆಯಿಂದ ಸ್ಕ್ಯಾಪ್ ಖರೀದಿಸಲು ಬರುತ್ತಿದ್ದ ವ್ಯಾಪಾರಿಗಳಲ್ಲಿ ಬಸವರಾಜ ಬೊಮ್ಮಾಯಿ, ಮಹಿಮಾ ಪಟೇಲ್ ಇರುತ್ತಿದ್ದರು. ಅವರು ಒಂದು ಸ್ಕ್ಯಾಪ್ ಯಂತ್ರ ಕೊಂಡರೂ, ಸಾಗಿಸುವಾಗ ಒಂದಕ್ಕಿಂತ ಹೆಚ್ಚು ಹೇರಿಕೊಂಡು ಹೋದರೂ ಕೇಳುವವರೇ ಇರುತ್ತಿರಲಿಲ್ಲ.

ನಾನು ಬಿಇಎಲ್ ನೌಕರರ ಹಿತರಕ್ಷಣಾ ಸಮಿತಿ ಅಧ್ಯಕ್ಷ ಆಗಿದ್ದಾಗಲು ಇಂಥ ಅವ್ಯವಹಾರಗಳನ್ನು ಕಣ್ಣಾರೆ ಕಂಡವನು.

ಬದುಕು : ಭ್ರಷ್ಟಾಚಾರ ಇಷ್ಟು ವ್ಯಾಪಕವಾಗಲು ಕಾರಣವೇನು?

ಕೋಚೆ : ಎಲ್ಲ ರಂಗಗಳಲ್ಲಿಯೂ ಕಂಡು ಬರುತ್ತಿರುವ ಅಧಃಪತನ. ಅದಕ್ಕಿಂತ ದುಃಖಕರ ಸಂಗತಿ ಎಂದರೆ ನಮ್ಮ ಯುವಕರಲ್ಲಿಯೂ ಇವತ್ತು ಸಾತ್ವಿಕ ಕ್ರೋಧ ಕಾಣೆಯಾಗಿರುವುದು.

'ರೋಮ್ ಸಾಮ್ರಾಜ್ಯದ ಪತನ' ಬರೆದ ಎಡ್ವರ್ಡ್ ಗಿಬ್ಬನ್‌ಗೆ ಯಾರೋ ರೋಮ್ ಪತನಕ್ಕೆ ಕಾರಣ ಏನು ಎಂದು ಕೇಳಿದರಂತೆ. ಪತನಕ್ಕೆ ಕಾರಣ ರಾಜಕಾರಣಿಗಳ ಸ್ವಾರ್ಥ, ವಿಷಯ ಲಂಪಟತನ ಹಾಗೂ ನೈತಿಕ ಅಧಃಪತನ ಎಂದನಂತೆ. ಇವತ್ತಿನ ನಮ್ಮ ಸ್ಥಿತಿ ಕೂಡ ಅದಕ್ಕೆ ಹೊರತಾಗಿಲ್ಲ ಎನ್ನಿಸುತ್ತದೆ.

> **ಪ್ರಭಾವ**
>
> ಸಂಬಳದ
> ವಾರ ಪೂರ್ತ
> ನನ್ನಾಕೆ ಹಸನ್ಮುಖಿ,
> ಕಡೆಗುಳಿದ
> ವಾರದಲಿ ಆಕೆ
> ಬರಿ ಶೂರ್ಪನಖಿ.
>
> -ಎನ್ಪಿ

ಬದುಕು: ಭ್ರಷ್ಟಾಚಾರದ ವಿರುದ್ಧ ಹೋರಾಡುವವರು ಯಾರಾದರೂ ಇರಬೇಕಲ್ಲವೇ? ನಮ್ಮಲ್ಲಿಯೂ ಅಂಥವರು ಯಾರಿದ್ದಾರೆ?

ಕೋಚೆ: ಇಂಥ ಆಂದೋಲನದ ನಾಯಕತ್ವವನ್ನು ಸ್ವಾಮೀಜಿಗಳು ವಹಿಸಿಕೊಳ್ಳಬಹುದಿತ್ತು. ಇವತ್ತು ಏನಾಗಿದೆ ಗೊತ್ತೇ! ರಾಜಕಾರಣಿಗಳ ಅಕ್ರಮ ಸಂಪತ್ತನ್ನು ರಕ್ಷಿಸುವ ಕೆಲಸ ಈ ಮಠಾಧೀಶರು ಮತ್ತು ಸ್ವಾಮೀಜಿಗಳು ಮಾಡುತ್ತಿದ್ದಾರೆ. ಅಂಥವರು ಭ್ರಷ್ಟಾಚಾರದ ವಿರುದ್ಧ ಹೋರಾಡಲು ಬರುತ್ತಾರೆಯೇ?

ಎಲ್ಲರೂ ಹಾಗಲ್ಲ. ಉಳಿದ ಸ್ವಾಮೀಜಿಗಳಿಗೆ ಧಾರ್ಮಿಕ, ಸಾಮಾಜಿಕ ಕಾರ್ಯಗಳಲ್ಲಿಯೇ ಹೆಚ್ಚು ಆಸಕ್ತಿ. ಅಂಥ ಉತ್ತಮ ಸಾಧಕರಿಗೆ ಭ್ರಷ್ಟಾಚಾರ ನಿರ್ಮೂಲನದಂಥ ಆಂದೋಲನದಲ್ಲಿ ಆಸಕ್ತಿ ಇಲ್ಲ.

ಬದುಕು : ಹಾಗಿದ್ದರೆ ನ್ಯಾಯಾಲಯಗಳಲ್ಲಿ ಭ್ರಷ್ಟಾಚಾರ ಪ್ರಕರಣಗಳ ವಿರುದ್ಧ ಹೋರಾಡುವುದೇ ಸೂಕ್ತ ಮಾರ್ಗ ಅನ್ನುತ್ತೀರಾ?

ಕೋಚೆ : ಇದೇ ಸರಿ ಅಂತಲ್ಲ. ಬೇರೆ ದಾರಿ ಇಲ್ಲವಾಗಿದೆ. ನಮ್ಮ ನ್ಯಾಯಾಂಗ ವ್ಯವಸ್ಥೆಯಲ್ಲಿ ಸಾಕಷ್ಟು ವಿಳಂಬ ಆಗುತ್ತದೆ. ಭ್ರಷ್ಟಾಚಾರ ಪ್ರಕರಣಗಳ ತ್ವರಿತ ವಿಚಾರಣೆಗೆ ಪ್ರತ್ಯೇಕ ನ್ಯಾಯಾಲಯ ಆದರೆ ಪರಿಸ್ಥಿತಿ ಸುಧಾರಿಸಬಹುದು. ಕೇಂದ್ರ ಕಾನೂನು ಸಚಿವ ರಾಂ ಜೇಠ್ಮಲಾನಿ ನ್ಯಾಯಾಂಗ ಆಯೋಗ ರಚಿಸುವ ವಿಚಾರ ಮಾಡಿದ್ದಾರೆ. ಅದು ಆದಲ್ಲಿ ಮೊಕದ್ದಮೆಗಳ ಶೀಘ್ರ ವಿಲೇವಾರಿ ಸಾಧ್ಯವಾಗಬಹುದು.

ಬ್ರಿಟನ್ನಿನ ಇತ್ತೀಚಿನ ಉದಾಹರಣೆ ನೋಡಿ. ಅಲ್ಲಿನ ಸಂಸತ್ ಸದಸ್ಯ ಜೋನಾಸಾನ್ ಆ್ಯಟ್‌ಕಿನ್ ಸಣ್ಣದೊಂದು ತಪ್ಪು ಮಾಡಿದ. ಆ್ಯಟಕಿನ್ ಕನ್ಸರ್ವೇಟೀವ್ ಸರ್ಕಾರದಲ್ಲಿ ಸಚಿವ ಆಗಿದ್ದಾಗ ಪ್ಯಾರಿಸ್‌ಗೆ ಹೋಗಿದ್ದ. ಅಲ್ಲಿ ಉಳಿದುಕೊಂಡ ಹೋಟೆಲಿನ ಬಿಲ್ಲನ್ನು ಅರಬ್ ಎಮಿರೇಟ್ಸ್‌ನ ರಾಜಕುಮಾರ ಒಬ್ಬ ನೀಡಿದ್ದ. ಇದನ್ನು ಗಾರ್ಡಿಯನ್ ಪತ್ರಿಕೆ ವರದಿ ಮಾಡಿತ್ತು.

ಇಡೀ ಪ್ರಕರಣದ ವಿಚಾರಣೆ ಆರೇ ತಿಂಗಳಲ್ಲಿ ನಡೆದು, ಆ ಸಂಸದನಿಗೆ ಇದೇ ಜೂನ್ 10 ರಂದು ಸೆರೆವಾಸ ಶಿಕ್ಷೆ ವಿಧಿಸಿದೆ. ಈ ರೀತಿ ನಮ್ಮಲ್ಲಿಯೂ ಸಾಧ್ಯ ಆಗುವುದಾದಲ್ಲಿ, ಹೆಚ್ಚಿನ ಭರವಸೆ ಸಾಧ್ಯವಿದೆ.

ಬದುಕು : ಭ್ರಷ್ಟಾಚಾರ ನಿರ್ಮೂಲನೆಗೆ ಮುಖ್ಯವಾದ ಅಗತ್ಯ ಏನು?

ಕೋಚೆ : ವೈಯಕ್ತಿಕ ಯತ್ನ ಮುಖ್ಯ. ಚಾರಿತ್ರ್ಯ ಇರುವ ವ್ಯಕ್ತಿಗಳು ಕೈಗೂಡಿದರೆ ಈ ಆಂದೋಲನ ಯಶಸ್ವಿಯಾಗುವುದು ಖಂಡಿತ. ಇವತ್ತು ಸ್ವಾತಂತ್ರ್ಯ ಯೋಧರು ಕೂಡ ಕೆಲವೇ ರಿಯಾಯಿತಿಗಾಗಿ, ನಿವೃತ್ತಿ ವೇತನ ಏರಿಕೆಗೆ ಭ್ರಷ್ಟ ರಾಜಕಾರಣಿಗಳ ಮುಂದೆ ಕೈಜೋಡಿಸಿ ನಿಲ್ಲುತ್ತಿದ್ದಾರೆ. ನಮ್ಮಲ್ಲಿ ಎಸ್ಸೆನ್ ಇಂಥದೊಂದು ಆಂದೋಲನದ ನೇತೃತ್ವ ವಹಿಸಿದರೆ ಒಳ್ಳೆಯದು. ಆದರೆ, ಅವರಿಗೆ ತೀರಾ ವಯಸ್ಸಾಗಿದೆ.

ಭ್ರಷ್ಟಾಚಾರ

ಜನ ಹೇಳುತ್ತಾರೆ......

ಭ್ರಷ್ಟಾಚಾರ ಕುರಿತು ಜನರ ಅಭಿಪ್ರಾಯ ಏನು? ಲಂಚ, ಸ್ವಜನಪಕ್ಷಪಾತ, ಅಧಿಕಾರ ದುರುಪಯೋಗ ಮುಂತಾದವುಗಳ ಬಗ್ಗೆ ಸಾಮಾನ್ಯ ಜನತೆ ತಮ್ಮದೇ ವಿಚಾರ, ತರ್ಕ ಹೊಂದಿದ್ದಾರೆ. ಅವುಗಳ ಸ್ಯಾಂಪಲ್ ಇಲ್ಲಿ ಕೊಡಲಾಗಿದೆ.



ಭಾರತಿ ಡಿ. ಹೊಸಮನಿ, ಗಜೇಂದ್ರಗಡ.

ಸೂರ್ಯ-ಚಂದ್ರರಿರುವವರೆಗೂ ಭ್ರಷ್ಟಾಚಾರ ಇಲ್ಲಿಂದ ಕದಲಲಾರದು.



ಮಂಜುಳಾ ಎಸ್. ಪಾಟೀಲ, ಗೃಹಿಣಿ, ಗಜೇಂದ್ರಗಡ.

ಪಾಶ್ಚಾತ್ಯ ಜೀವನ ಶೈಲಿಯೇ ಈ ದುಸ್ಥಿತಿಗೆ ಕಾರಣ. ಮನುಷ್ಯನ ಆದಾಯ ವೆಚ್ಚಗಳ ಮಧ್ಯೆ ಸಾಮರಸ್ಯವಿಲ್ಲದ ಕಾರಣ ಭ್ರಷ್ಟಾಚಾರ ಹಳ್ಳಿಯಿಂದ ದಿಲ್ಲಿಯವರೆಗೂ ಹಬ್ಬಿದೆ.



ಟಿ. ಸಿದ್ಧಲಿಂಗಸ್ವಾಮಿ, ಎಂಜಿನಿಯರ್, ಗಜೇಂದ್ರಗಡ.

ಆದಿಕಾಲದಿಂದಲೂ ಮಾನವ ಜೀವನದಲ್ಲಿ ಹಾಸುಹೊಕ್ಕಾಗಿ ಬೆಳೆದು ಬಂದಿರುವ 'ಭ್ರಷ್ಟಾಚಾರ ಭೂತ'ವನ್ನು ಈ ಆಧುನಿಕ ಯುಗದಲ್ಲಿ ಹೋಗಲಾಡಿಸಬೇಕೆಂದು ಯತ್ನಿಸುವುದು ಕೇವಲ ಭ್ರಮೆಯಷ್ಟೇ. ಅದಕ್ಕೂ ಮೀರಿ ನಿಯಂತ್ರಿಸಬೇಕೆಂದಲ್ಲಿ, ಭ್ರಷ್ಟಾಚಾರಿಗಳ ವಿರುದ್ಧ ಚಳವಳಿ ಹಾಗೂ ನಾಗರಿಕರೇ ಶಿಕ್ಷೆ ನೀಡುವಂಥ ಕಾನೂನುಗಳು ಜಾರಿಗೆ ಬರಬೇಕು.

ಅದರ ಬಗ್ಗೆ ಮಾತಾಡಿ ಪ್ರಯೋಜನ ಇಲ್ಲ. ನಾವು ಏನಾದರೂ ಮಾಡೋ ಹಾಗಿದ್ದರೆ ಮಾತಾಡಬೇಕು.

- **ಗೌರೀ ಮೋಹನ್**, ಗೃಹಿಣಿ, ಬೆಂಗಳೂರು.

■

ಭ್ರಷ್ಟಾಚಾರ! ಎಲ್ಲಿಲ್ಲ? ಇಲ್ಲಿ ಮಾತ್ರ ಇದೆಯೇ? ಅದು ಹೋಗಬೇಕು ಅಂತೀರಾ? ನಮ್ಮಲ್ಲಿ ಲೋಕಾಯುಕ್ತ ಅಂತ ಒಂದಿದೆ ಗೊತ್ತಾ? ತಪ್ಪು ಮಾಡಿದವರು, ಲಂಚ ತಗೊಂಡು ಸಿಕ್ಕಿಬಿದ್ದ ಪೊಲೀಸರನ್ನು ಶಿಕ್ಷೆ ಅಂತ ಅಲ್ಲಿಗೆ ಹಾಕ್ತಾರೆ!

ಅವರು ಲಂಚ ತಗೋಳ್ಳೋರನ್ನ ಹಿಡಿಯೋದು ಇರಲಿ, ದೂರು ಕೊಡೋಕೆ ಹೋಗೋವರನ್ನ ಹಿಂಸೆಗೆ ಗುರಿಮಾಡದೇ ಇದ್ದರೆ ಸಾಕು. ಇದು ಸ್ಥಿತಿ.

-ಸರ್ಕಾರಿ ಅಧಿಕಾರಿ, ಬೆಂಗಳೂರು

■

ಲಂಚಾನಾ? ನಾನು ಕೈ ಒಡ್ಡಿ ಬೇಡೋದಿಲ್ಲ. ವಸೂಲಿ ಮಾಡ್ತೀನಿ ಸರಿಯಾಗೇ ವಸೂಲು ಮಾಡ್ತೀನಿ. ಯಾಕೆ ಬಿಡಬೇಕು? ಮೇಲಿನೋರು ಆಫೀಸಲ್ಲಿ ಕೂತು ಲಕ್ಷಾಂತರ ಲೂಟಿ ಮಾಡ್ತಾರೆ. ನಮ್ಮಂಥವರು ಅಂದರೆ ಕ್ರಿಮಿಕೀಟಗಳ ಹಾಗೆ ಕಾಣ್ತಾರೆ. ಜನಕ್ಕೆ ನಮ್ಮನ್ನು ಕಂಡರೆ ತಾತ್ಸಾರ. ಇದೆಲ್ಲ ನೋಡಿ ಸಿಟ್ಟು ಬರುತ್ತೆ.

ಯಾರಾದರೂ ಸಿಕ್ಕಿ ಹಾಕಿಕೊಂಡು, ಒದ್ದಾಡ್ತಾ ದುಡ್ಡು ಬಿಚ್ತಾರಲ್ಲ ಅದು ನೋಡ್ತಾ ನನಗೆ ವಿಚಿತ್ರ ಸಂತೋಷ ಆಗುತ್ತೆ.

-ಪದವೀಧರ ಪೊಲೀಸ್ ಪೇದೆ, ಬೆಂಗಳೂರು.

■

ಇರೋರು ಕೊಡ್ತಾರೆ. ಇಲ್ಲದವರು ತಗೋಳ್ತಾರೆ. ಯಾರೂ ಸುಮ್ಮಸುಮ್ಮನೆ ಕೊಡೋದಿಲ್ಲವಲ್ಲ! ಅವರಿಗೂ ಏನೋ ಲಾಭ ಆಗುತ್ತೆ. ಇಬ್ಬರಿಗೂ ಒಳ್ಳೇದಾಗೋದಾದರೆ ನಾವ್ಯಾಕೆ ಬೇಡ ಅನ್ನಬೇಕು. ಆದರೆ, ಬಲವಂತವಾಗಿ ವಸೂಲು ಮಾಡೋದು ತಪ್ಪಾಗುತ್ತೆ.

-ಸಂಪತ್, ರಾಜಕೀಯ ಪಕ್ಷದ ಕಾರ್ಯಕರ್ತ

■

ಎಲ್ಲಾ ಮಾತಾಡ್ತಾರೆ. ಕೆಲಸ ಮಾಡೋದು ಯಾರು?

ಮಹಾರಾಷ್ಟ್ರದಲ್ಲಿ ಅಣ್ಣಾ ಹಜಾರೆ ಇದಾರೆ. ಅವರು ಬೆಟ್ಟು ಮಾಡಿ ತೋರಿಸಿದರೆ, ಇಡೀ ಸರ್ಕಾರ ನಡುಗುತ್ತೆ. ಅಂಥವರು ಇಲ್ಲಿ ಎಲ್ಲಿದ್ದಾರೆ?

-ಜಯಕಿರಣ್, ಮುಂಬಯಿ ನಿವಾಸಿ ಕನ್ನಡಿಗ

■



ರಾಣೆಬೆನ್ನೂರು ಎಸ್.ಜೆ.ಎಂ. ವಿದ್ಯಾಪೀಠದ ಎ.ಎ.ಜೆ.ಎಸ್.ಎಸ್. ಕಲಾ ಮತ್ತು ವಾಣಿಜ್ಯ ಮಹಿಳಾ ಮಹಾವಿದ್ಯಾಲಯದ ಪ್ರಾಚಾರ್ಯ **ಪ್ರೊ॥ ಎಸ್. ಆರ್. ಬಾಳೀಕಾಯಿಯವರು** 'ಭ್ರಷ್ಟಾಚಾರ ಸರ್ವವ್ಯಾಪಕವಾಗಿರುವದರ ಜೊತೆಗೆ ಅದು ಕೆಲವರ ಚಟವು ಹೌದು' ಎನ್ನುತ್ತಾರೆ.

ಮಿಲಿಟರಿ ಸರ್ಕಾರ ಬರ್ಬೇಕು ಸಾರ್. ಲಂಚ ತಗೋಳೋರ್ನ ಕೈ ಕತ್ತರಿಸಬೇಕು. ಭ್ರಷ್ಟ ರಾಜಕಾರಣಿಗಳನ್ನು ಬಹಿರಂಗವಾಗಿ ನೇಣು ಹಾಕಬೇಕು. ಆಗ ನೋಡಿ ಎಲ್ಲ ಸರಿ ಹೋಗುತ್ತೆ.

-ಶಿವಲಿಂಗಯ್ಯ, ಬಸ್ ಕಂಡಕ್ಟರ್

■

ಶೇಕಣ್ಣಾ, ಚಿಕ್ಕೋಡಿ, ಫೋಟೋಗ್ರಾಫರ ಮತ್ತು ಆರ್ಟಿಸ್ಟ್

ಭ್ರಷ್ಟಾಚಾರ ಹುಟ್ಟಿಸಿ ಬೆಳೆಸಿದವರೇ ನಾವು. ಒಂದು ಕಪ್ ಚಹಾ ಕುಡಿಸಿ ಕೆಲಸ ಮಾಡಿಕೊಳ್ಳುವುದರಿಂದ ಇದರ ಆರಂಭ. ಪೋಲೀಸ್ ಡಬಲ್ ರೈಡಿಂಗ್ ಸೈಕಲ್ ಹಿಡಿದರೆ, ಚಹಾ ಕುಡಿಸಿದಾಗ ಮುಂದೆ ಹೋಗಲು ಬಿಡುತ್ತಿದ್ದ. ಈಗ ಬದಲಾಗಿ ಹೆಚ್ಚಿಗೆ ಹಣ ಬೇಡುತ್ತಾರೆ. ಈ ಪದ್ಧತಿ ಹುಟ್ಟಿಸಿದವರೇ ನಾವು.

■

ಅಫ್ಸರ ಅಲಿ ಪಿಂಜಾರ - ಮಾಕ್ಸಿಕ್ಯಾಬ್ ಡ್ರೈವರ್

ನಾವು ಮಾಡೋ ಕೆಲಸಗೋಳ ಕರೆಕ್ಟ್ ಇರುವುದಿಲ್ಲ. ಆ ಕೆಲಸ ಕರೆಕ್ಟ್ ಅಂತಾ ಕಾಗದದಾಗ ತೋರಸಾಕ ಅಧಿಕಾರಿಗಳಿಗೆ ಹಣಾ ಕೊಡತೀವಿ. ಏನ ತಪ್ಪು ಇದ್ದರೂ ಮುಚ್ಚಿಹಾಕತಾರ. ಇದನ್ನ ಹೋಗಸುದು ಆಗುವುದಿಲ್ಲರೀ.

■

ವಿನಾಯಕ. ಉರವಣಕರ, ಎಲ್.ಎಲ್.ಬಿ. ವಿದ್ಯಾರ್ಥಿ - ಧಾರವಾಡ

ಯಾವಾಗಿನಿಂದಲೋ ಪ್ರಾರಂಭವಾದ ಭ್ರಷ್ಟಾಚಾರ ಮೊದಲು ಇತ್ತು. ಈಗ ಸಾಕಷ್ಟು ಬೆಳೆದು ಅದು ಅನಿವಾರ್ಯ ಎಂಬುವಂತೆ ಆಗಿಬಿಟ್ಟಿದೆ. ಇದಕ್ಕೆ ಕಾರಣ, ಆಡಳಿತದ ವೈಫಲ್ಯ. ಸರಿಯಾದ ವೇತನ ಇಲ್ಲದಿರುವುದು. ಬೆಲೆಗಳ ಏರಿಕೆ, ಜನರಲ್ಲಿ ಹಬ್ಬಿರುವ ಮೋಹ, ಆಡಳಿತ ವರ್ಗದಲ್ಲಿ ರಾಜಕೀಯ ಹಸ್ತಕ್ಷೇಪ.

ನ್ಯಾಯಾಂಗ ವ್ಯವಸ್ಥೆ ಪರಿಣಾಮಕಾರಿಯಾಗಿ ಬಳಸಿ, ಆಡಳಿತ ವರ್ಗದವರ ಮೇಲೆ ಹತೋಟಿ ಇಟ್ಟು, ಜನರಿಗೆ ಭ್ರಷ್ಟಾಚಾರ ನಿಲ್ಲಿಸಲು ಕೈಗೊಂಡ ಕ್ರಮಗಳ ಬಗ್ಗೆ ತಿಳುವಳಿಕೆ ನೀಡಿದರೆ ಕಡಿಮೆ ಮಾಡುತ್ತಾ ಹೋಗಬಹುದು.



ಮಂಜುನಾಥ ಓಲೇಕಾರ ಯುವ ವಕೀಲ, ರಾಣೆಬೆನ್ನೂರು ಅವರ ದೃಷ್ಟಿಯಲ್ಲಿ 'ಭ್ರಷ್ಟಾಚಾರ ಇಂದು ದೇಶದಲ್ಲಿ ಕಿತ್ತೆಸೆಯಲಾರದ ಮಟ್ಟಕ್ಕೆ ಬಂದಿದೆ ಆದರೂ ಇದರ ವಿರುದ್ಧ ಹೋರಾಟ ಅಗತ್ಯ.

■

ನಾಗರಾಜ ಪಾಟೀಲ, ನಿರುದ್ಯೋಗಿ ಪದವೀಧರ.

ಸ್ವಾತಂತ್ರ್ಯ ಸಿಕ್ಕಿದ್ದೇ ಭ್ರಷ್ಟಾಚಾರಕ್ಕಾಗಿ ಅನ್ನುವ ಹಂಗೆ ಆಗಿಬಿಟ್ಟಿದೆ. ತಿಳಿದಹಂಗಾ ಮಾಡುವುದಕ್ಕಾಗಿಯೇ ಸ್ವಾತಂತ್ರ್ಯ ಬಂದಿದೆ ಅನ್ನುವ ಹಾಗೆ ವಾತಾವರಣ ನಿರ್ಮಾಣವಾಗಿ ಬಿಟ್ಟಿದೆ.

■

ಪ್ರಕಾಶ ಉಳ್ಳಾಗಡ್ಡಿ - ಯುನಿರ್ವಸಿಟಿ ಲೈಬ್ರರಿ ಕ್ಯಾಂಟಿನ್ ಮಾಲಿಕ.

ಭ್ರಷ್ಟಾಚಾರ ಹೋಗುವುದು ಸಾಧ್ಯವಿಲ್ಲ. ದಿಢೀರಂತಾ ಸಾಹುಕಾರನಾಗಲು, ಬೆಳಕಿಗೆ ಬರಲು ಭ್ರಷ್ಟಾಚಾರವೇ ಮೂಲ ಬಂಡವಾಳ. ಜನರು ಸಹ ಯಾವುದೇ ಆಫೀಸಿಗೆ ಹೋದರು, ಅಧಿಕಾರಿ ಹಣ ಇಸಿದುಕೊಳ್ಳದೇ ಹೋದರೆ ನಮ್ಮ ಕೆಲಸವನ್ನು ಆತ ಮಾಡುವುದಿಲ್ಲ ಎಂದು ಸಹಜವಾಗಿ ತಿಳಿಯುತ್ತಾರೆ. ಅಧಿಕಾರಿಗಳನ್ನು ಜನರೇ ಭ್ರಷ್ಟರನ್ನಾಗಿ ಮಾಡುತ್ತಿದ್ದಾರೆ. ಅಧಿಕಾರಿಗಳನ್ನು ಭ್ರಷ್ಟರನ್ನಾಗಿ ಮಾಡಿದ್ದೇ ಸಮಾಜ.

■

ಶೈಲಜಾ ಕುಲಕರ್ಣಿ - ಸಹಾಯಕ ಲೈಬ್ರೇರಿಯನ್, ಧಾರವಾಡ.

ಮಹಿಳಾ ಅಧಿಕಾರಿಗಳು ಇರುವ ಕಡೆ ಭ್ರಷ್ಟಚಾರ ಲಂಚ, ಹಗರಣಗಳು ಕಡಿಮೆ. ಸರಕಾರ ಮಹಿಳೆಯರಿಗೆ ಪ್ರಾಶಸ್ತ್ಯ ಕೊಡುತ್ತಿರುವುದು ಒಳ್ಳೆಯದು. ಅದರಿಂದ ನೊಂದವರಿಗೆ ಪರಿಹಾರವಾದರೂ ಸಿಗುತ್ತದೆ.

■

ಪ್ರೊ. ಬಿ.ಎ. ಕೆಂಚರಡ್ಡಿ, ಗಣಿತ ಉಪನ್ಯಾಸಕರು, ಗಜೇಂದ್ರಗಡ.

ಭ್ರಷ್ಟಾಚಾರವೆಂದಾಕ್ಷಣ ನಮ್ಮ ಕಣ್ಣಿಗೆ ರಾಚುವದು ಲಂಚ ಸ್ವೀಕರಿಸುವವರ ಚಿತ್ರಣ. ಲಂಚ ಸ್ವೀಕರಿಸುವವರಿಗಿಂತ ನೀಡುವವರೇ ಭ್ರಷ್ಟಾಚಾರ ಹುಲುಸಾಗಿ ಬೆಳೆಯಲು ಕಾರಣರು, ಸಮಾಜದ ಎಲ್ಲರಿಗೂ ಸಮಾನ ಅವಕಾಶಗಳು ಲಭ್ಯವಾದಾಗ ಮಾತ್ರ ಭ್ರಷ್ಟಾಚಾರ ನಿರ್ಮೂಲನೆ ಸಾಧ್ಯ.

■

ಯು.ಆರ್. ಚನ್ನಮ್ಮನವರ, ಪಶು ವೈದ್ಯ ಪರೀಕ್ಷಕರು, ಗಜೇಂದ್ರಗಡ.

ಸಮಾಜದ ಅನಿಷ್ಠ ಪದ್ಧತಿಗಳು ತೊಲಗಿದಾಗ ಭ್ರಷ್ಟಾಚಾರ ನಿರ್ಮೂಲನೆ ಸಾಧ್ಯ. ಇದಕ್ಕಾಗಿ ನೈತಿಕ ಶಿಕ್ಷಣ ಬೇಕು.

■

ಎಸ್.ಕೆ. ರೇವಡಿ, ಪುರಸಭೆ ಸದಸ್ಯ, ಗಜೇಂದ್ರಗಡ.

ಜನಪ್ರತಿನಿಧಿಗಳು ಪ್ರಾಮಾಣಿಕರಾದರೆ ಶೇ. 50ರಷ್ಟು ಭ್ರಷ್ಟಾಚಾರ ನಿರ್ಮೂಲನೆ ಸಾಧ್ಯ.

'ಭ್ರಷ್ಟಾಚಾರ' ಕುರಿತು ವಿಶೇಷ ಲೇಖನ ರೂಪಿಸಿದ 'ಬದುಕು' ತಂಡ.


ಸಂದರ್ಶನಗಳು : ಎಂ.ಎಲ್. ದೇಶೀಕರ್.

ಅಭಿಪ್ರಾಯ ಸಂಗ್ರಹ : ಪ್ರದೀಪ ಕುಂದಣಗಾರ, ಧಾರವಾಡ

-ಎ.ಎಸ್. ಮಕಾನದಾರ್, ಗಜೇಂದ್ರಗಡ


-ಸದಾನಂದ ಸಾಲಿಮಠ, ರಾಣೆಬೆನ್ನೂರು.

ಭ್ರಷ್ಟಾಚಾರ



ರಾಣೆಬೆನ್ನೂರಿನ ಸಾಹಿತಿ, ಪತ್ರಕರ್ತ, ಅಂಕಣಕಾರ ಪಿ.ಎಸ್.ಕುಮಾರ ಹೇಳುವಂತೆ 'ಭ್ರಷ್ಟಾಚಾರ ಭಾರತದಲ್ಲಿ ಹಬ್ಬಿರುವ ಒಂದು ಪಾರ್ಥೆನಿಯಂ. ಅದನ್ನು ಈಗ ಕಿತ್ತೆಸೆಯಲೇ ಬೇಕು'.

ರೈತ ಕಾರ್ಮಿಕ ಧುರೀಣ ವಿವೇಕಾನಂದ ಯುವಕ ಸಂಘದ ಅಧ್ಯಕ್ಷ ಬಿ.ಎಂ. ಜಯದೇವ 'ಗ್ರಾಮಮಟ್ಟದಿಂದ ದಿಲ್ಲಿಯವರೆಗೆ ಹಬ್ಬಿರುವ ಭ್ರಷ್ಟಾಚಾರ ಎಲ್ಲ ಜನರನ್ನು ನಡುಗಿಸಿದೆ ಇದರ ವಿರುದ್ಧ ಹೋರಾಟ ಅಗತ್ಯ, ಎನ್ನುತ್ತಾರೆ.



ವಿಠ್ಠಲ ಡಿ. ಮಿಸ್ಕಿನ್, ನೇಕಾರ, ಗಜೇಂದ್ರಗಡ. ಲಂಚ ಕೊಟ್ಟವರ ಕೈಯನ್ನು, ತೆಗೆದುಕೊಳ್ಳುವವರ ಕೈಯನ್ನು ಕತ್ತರಿಸಿದಾಗ ಭ್ರಷ್ಟಾಚಾರ ನಿರ್ಮೂಲನೆ ಸಾಧ್ಯ.



ರಾಣೆಬೆನ್ನೂರು ರಾಜರಾಜೇಶ್ವರಿ ಮಹಿಳಾ ವಿದ್ಯಾಪೀಠದ ಶಿಕ್ಷಕಿ, ಕವಿಯತ್ರಿ **ಶ್ರೀಮತಿ ಸುಂದ್ರಾ ರಾಮಚಂದ್ರ** ಪ್ರತಿಪಾದಿಸುವಂತೆ 'ಎಲ್ಲ ರಂಗಗಳಲ್ಲೂ ಹಾಸು ಹೊಕ್ಕಾಗಿರುವ ಭ್ರಷ್ಟಾಚಾರ ಜನರ ಮೌಲ್ಯ ಮತ್ತು ಆದರ್ಶಗಳನ್ನು ಅಪಹಾಸ್ಯಗೊಳಿಸತೊಡಗಿದೆ.

ವಿಶ್ವಕಪ್ ಕ್ರಿಕೆಟ್

ಭಗ್ನಗೊಂಡ ಏಷಿಯಾ ಕನಸು



ಗೆದ್ದ ಆಸ್ಟ್ರೇಲಿಯಾ

ಜೂನ್ ಇಪ್ಪತ್ತು ರಾತ್ರಿ ಒಂಭತ್ತರ ಸರಿಸುಮಾರು ಸಮಯ. ಕ್ರಿಕೆಟ್ ಸಾಮ್ರಾಜ್ಯದ ಪಟ್ಟಾಭಿಷೇಕದೊಂದಿಗೆ ಮುಂದಿನ ಶತಮಾನಕ್ಕೆ ಕಾಲಿಡುವ ಏಷಿಯಾದ ನೂರ ಇಪ್ಪತ್ತೈದು ಕೋಟಿ ಹೃದಯಗಳ ಕನಸು ಭಗ್ನವಾಯಿತು. ಅಷ್ಟೇ ಅಲ್ಲ - ಇದುವರೆಗಿನ ಅನೇಕ ಕ್ರಿಕೆಟ್ ಸಿದ್ಧಾಂತಗಳು ಧೂಳೀಪಟವಾದವು. ವರ್ಷದ ಅತಿ ದೀರ್ಘ ದಿನದ ಮುನ್ನಾದಿನದಂದು ನಿಗದಿಯಾಗಿದ್ದ, ಈ ಶತಮಾನದ ಕೊನೆಯ ವಿಶ್ವಕಪ್ ಫೈನಲ್ಸ್‌ನಲ್ಲಿ - ಸಾಹಸಿಗ ಪಾಕಿಸ್ತಾನ, ವೃತ್ತಿಪರತೆಯ ಸಾಕಾರ ಸ್ವರೂಪ ಆಸ್ಟೇಲಿಯಾಗೆ 8 ವಿಕೆಟ್‌ನಿಂದ ಮಣಿದು, ಕಡೆಗೂ ತನ್ನ 'ಅಪಖ್ಯಾತಿಯನ್ನು' ಕಾಪಾಡಿಕೊಂಡಿತು. ಏಷಿಯಾ ಖಂಡದ ತಂಡಗಳು ಕ್ರೀಡೆಯನ್ನು ಮನೋಲ್ಲಾಸಕ್ಕೆ ಆಡುತ್ತವೆ. ಗೆಲ್ಲಬೇಕೆಂಬ ವಾಂಛೆಯ 'ಯಮನಿಯಮ' (ಕಿಲ್ಲರ್ ಇನ್‌ಸ್ಟಂಕ್ಟ್) ದಿಂದಲ್ಲ ಎಂಬ ಸಿದ್ಧಾಂತ ಮತ್ತೆ ಸಾಬೀತಾಯಿತು. ಹುಡಿಯಾಗಿ ನೆಲಕ್ಕೆ ಉರುಳಿದಾಗ ಫೀನಿಕ್ಸ್ ಹಕ್ಕಿ ಬೂದಿಯಿಂದ ಮರು ಹುಟ್ಟು ಪಡೆಯುವ ಶಕ್ತಿ ಪಾಕಿಸ್ತಾನಕ್ಕಿದೆ ಎಂಬ ಸಿದ್ಧಾಂತ ಸುಳ್ಳಾಯಿತು.

ದಿಗ್ಗಜಗಳ ಹಣಾಹಣಿಯಲ್ಲಿ ಏಷಿಯಾದ ಧೋರಣೆ, ಐರೋಪ್ಯ ಮನೋಭೂಮಿಕೆ ಏಕಕಾಲಕ್ಕೆ ರಕ್ತಪರೀಕ್ಷೆಗೆ ಒಳಗಾದವು. ಹನ್ನೊಂದು ಕಿಲೋ ತೂಕದ, ಅರವತ್ತು ಸೆಂಟಿಮೀಟರ್ ಎತ್ತರದ ಬೆಳ್ಳಿ-ಚಿನ್ನದ ಹೊಳೆಯುವ ವಿಶ್ವಕಪ್ - ಆಸ್ಟ್ರೇಲಿಯಾ ನಾಯಕ ಸ್ಟೀವ್ ವಾ ಕೈ ಸೇರುತ್ತಿದ್ದಂತೆ ಕಾಂಗರುಗಳ ನಾಡಿನಲ್ಲಿ ಸಡಗರ. ಏಕಪಕ್ಷೀಯ ಪಂದ್ಯದಲ್ಲಿ, ಲೀಗ್ ಹಂತದಲ್ಲಿ ವಿಫಲವಾಗಿದ್ದ, ಈ ದಶಕದ ಅತಿ ಶ್ರೇಷ್ಠ ಲೆಗ್‌ಸ್ಪಿನರ್ ಶೇನ್‌ವಾರ್ನ್ ತನ್ನ ಸಾಮರ್ಥ್ಯ ಪರಿಚಯ ಮಾಡಿದರು. ತೀವ್ರ ಸೆಣಸಾಟದ ನಿರೀಕ್ಷೆ - ನಿರಾಸೆಯಾಗಿ ಮಾರ್ಪಟ್ಟು ನಾಲ್ಕೂವರೆ ತಾಸುಗಳ ಅಲ್ಪ ಅವಧಿಯಲ್ಲಿ ಕೊನೆಗೊಂಡಿತು. 1975, 79 ಹಾಗೂ 96ರಲ್ಲಿ ವಿಜೇತ ತಂಡಕ್ಕೆ ಒಂದು ಶತಕದ ಭರ್ಜರಿ ಆಟ ವಿಜಯ ತಂದುಕೊಟ್ಟಿತ್ತು. 83, 87 ಮತ್ತು 92ರಲ್ಲಿ ಮುಖ್ಯವಾಗಿ ಬೌಲರ್‌ಗಳ ಮೇಲುಗೈ - ಪಂದ್ಯದ ಫಲಿತಾಂಶವನ್ನು ಒದಗಿಸಿತ್ತು.

ಈ ಸಲದ ಫೈನಲ್ಸ್, ಈ ಸಿದ್ಧಾಂತವನ್ನೂ ಗಾಳಿಗೆ ತೂರಿತು. ಲಾರ್ಡ್ಸ್ ಕ್ರೀಡಾಂಗಣ, ಅಂತರಾಷ್ಟ್ರೀಯ ಕ್ರಿಕೆಟ್ ಸಮಿತಿಯ ಕೇಂದ್ರಸ್ಥಾನ. ಇದು ಕ್ರಿಕೆಟ್ ಕಾಶಿ. ಒಂದು ತುದಿಯಿಂದ ಮತ್ತೊಂದಕ್ಕೆ ನಾಲ್ಕು ಅಡಿ ಇಳಿಜಾರು ಇರುವುದರಿಂದ ಬೌಲರ್‌ಗಳಿಗೆ ಒಂದು ತುದಿಯಿಂದ ಗಾಳಿಯ ಪ್ರತಿರೋಧ ಇಲ್ಲಿನ ಸಹಜಗುಣ. ಇದನ್ನು ಆಫ್‌ಸ್ಪಿನರ್‌ಗಳು ಬುದ್ಧಿಮತ್ತೆಯಿಂದ ಬಳಸಿಕೊಂಡು ವಿಕೆಟ್ ಉರುಳಿಸಿರುವುದು ಕಂಡುಬರುತ್ತದೆ. ಆದರೆ ವಾಸ್ತವವಾಗಿ ಲಾರ್ಡ್ಸ್ ಮೈದಾನ ಬ್ಯಾಟ್ಸ್‌ಮನ್ನರಿಗೆ ತಾರತಮ್ಯ ತೋರುತ್ತದೆಂಬ ಪ್ರತೀತಿಯೂ ಇದೆ. ಭಾರತದ ದಿಲೀಪ್ ವೆಂಗಸರ್ಕಾರ್, ಈ ಮೈದಾನದಲ್ಲಿ ತಮ್ಮ ಮೋಹಕ ಡ್ರೈವ್‌ಗಳಿಂದ ಮೂರು ಶತಕಗಳನ್ನು ಸತತ ಮೂರು ಟೆಸ್ಟ್ ಪಂದ್ಯಗಳಲ್ಲಿ ಗಳಿಸಿ ದಾಖಲೆ ಸ್ಥಾಪಿಸಿದ್ದಾರೆ. ಈ ಹೆಗ್ಗಳಿಕೆಗೆ ತಕ್ಕ ಆಟ ಫೈನಲ್ಸ್‌ನಲ್ಲಿ ಬರಲಿಲ್ಲ.

ಪಾಕಿಸ್ತಾನ ತಂಡ - ಎದುರಾಳಿಯ ಮೊತ್ತವನ್ನು ಎದುರಿಸಲು, ಅದನ್ನು ಬೆನ್ನಟ್ಟಲು ಅಳುಕುತ್ತದೆ. ತಾನು ಮೊದಲು ಬ್ಯಾಟ್

ಮಾಡಿದಾಗ ಉತ್ತಮ ಪ್ರದರ್ಶನ ನೀಡುತ್ತದೆ ಎಂಬುದು ಕ್ರಿಕೆಟ್ ಪಂಡಿತರ ವಾಡಿಕೆಯ ವಿಚಾರ. ಅದು ಸುಳ್ಳಾಗಿದೆ. ಲೀಗ್ ಹಂತದಲ್ಲಿ ಅತಿ ಹೆಚ್ಚು ಅಂಕ ಗಳಿಸಿ, ಭಾರತಕ್ಕೂ ಸೂಪರ್ ಸಿಕ್ಸ್ ಹಂತದಲ್ಲಿ ಹೀನಾಯವಾದ 47 ಓಟಗಳ ಸೋಲಿನ ನಂತರ ಜಿಂಬಾಬ್ವೆ ತಂಡದ ಮೇಲೆ ಭರ್ಜರಿ ಗೆಲುವನ್ನು ಪಾಕಿಸ್ತಾನ ಸಾಧಿಸಿತ್ತು. ಉಪಾಂತ್ಯ ಹಂತದಲ್ಲಿ ನ್ಯೂಜಿಲೆಂಡ ಮೇಲೆ ಶೋಯಬ್ ಅಕ್ತರ್ ಮತ್ತು ವಾಸಿಂ ಅಕ್ರಂ ಮಾಡಿದ ಸಿಡಿಗುಂಡಿನ ದಾಳಿಯ ಬೌಲಿಂಗ್ ಮತ್ತು ಸೈಯದ್ ಅನ್ವರ್ (ಬಿರುಸಿನ 113) ಜೊತೆಗೆ ವಜಾಹತುಲ್ಲಾ ವಸ್ತಿ (84) ಸೇರಿಸಿದ ವಿಶ್ವಶ್ರೇಷ್ಠ 194 ಓಟಗಳ ಮೊದಲ ವಿಕೆಟ್ ಜೊತೆಯಾಟದಿಂದ ಪಾಕಿಸ್ತಾನ ಸಕಾಲದಲ್ಲಿ ಆಟದ ಮೊನಚು ಕಂಡುಕೊಂಡಿದೆ ಎನಿಸಿತ್ತು.

ಉಪಾಂತ್ಯದಲ್ಲಿ ಪಂದ್ಯದ ಕೊನೆಯ ಎರಡು ಚೆಂಡುಗಳ ಪ್ರಯೋಗ ಬಾಕಿಯಿದ್ದಾಗ ಸೋಲನ್ನು ಟೈ ಆಗಿ ಪರಿವರ್ತಿಸಿಕೊಂಡ ಆಸ್ಟ್ರೇಲಿಯಾದ ಜಿಗಟು ಪ್ರವೃತ್ತಿ ಅಂತಿಮ ಪಂದ್ಯಕ್ಕೂ ಸ್ಫೂರ್ತಿ ನೀಡಿತು. ಪಾಕಿಸ್ತಾನದ ಐದನೇ ಓವರ್ ಬ್ಯಾಟಿಂಗ್‌ನಲ್ಲಿ ಆರಂಭವಾದ ಪತನ, ನಿಯತಕಾಲಿಕವಾಗಿ ನಡೆದು, ಕಾಂಗರೂ ತಂಡದ ಶೇನ್‌ವಾರ್ನ್ ಏಕೆ ವಿಶ್ವ ಶ್ರೇಷ್ಠ ಮಣಿಕಟ್ಟಿನ ಸ್ಪಿನ್ ಮಾಂತ್ರಿಕ ಎಂಬುದಕ್ಕೆ ಪುರಾವೆ ನೀಡಿತು. ಏಳು ವಿಶ್ವಕಪ್ ಫೈನಲ್‌ಗಳಲ್ಲಿ ಪಾಕಿಸ್ತಾನದ ಈ 132 ರನ್ ಗಳಿಕೆ ಅತಿ ಕನಿಷ್ಠ ಮೊತ್ತ. ವಿಶ್ವಕಪ್ ಆರಂಭದ ಪಂದ್ಯದಲ್ಲಿ 24 ವರ್ಷಗಳ ಹಿಂದೆ ಭಾರತ 60 ಓವರ್‌ನಲ್ಲಿ ಇಷ್ಟೇ ರನ್ ಗಳಿಸಿತ್ತು! ಕಾಂಗರೂಗಳು ಕೇವಲ 20.1 ಓವರ್‌ನಲ್ಲಿ ಪಾಕಿಸ್ತಾನದ ಹಮ್ಮು ಇಳಿಸಿದರು. ವೇಗದ ಅರಿಭಯಂಕರ ಶೋಯಬ್ ಅಖ್ತರ್ ತೋಳ್ಬಲ ಕೈಕೊಟ್ಟಿತು. ಕೇವಲ ಬಾಹುಬಲ ಸಾಲದು. ವೇಗ ಎಲ್ಲ ಕಾಲಕ್ಕೆ ಯುಕ್ತವಾಗದು ಎಂಬ ವಿವೇಕ ಅಖ್ತರ್‌ಗೆ ಬರುವುದು ಅನಿವಾರ್ಯ. ವಾಸಿಂ ಅಕ್ರಂ - ಒಳಜಗಳ ಭಿನ್ನಮತದಿಂದ ಜರ್ಜರಿತವಾಗಿರುವ ತಂಡಕ್ಕೆ ಒಂದು ಉದ್ದೇಶ, ಒಗ್ಗಟ್ಟು ತಂದಿದ್ದೇ ಈ ಕ್ರೀಡಾಕೂಟದ ಸಾಧನೆ. ಆದರೆ ಸೋಲಿಗೆ ಯಾರೂ ಪಾಲಕರಿರುವುದಿಲ್ಲ. ಪಾಕ್ ತಂಡ ತಾಯ್ನಾಡಿಗೆ ಮರಳಿದ ಕೂಡಲೇ ತಲೆ ಉರುಳಲು ಆರಂಭವಾಗುವುದು ಖಚಿತ.

ಬಿಳಿಯ ಡ್ಯೂಕ್ ಚೆಂಡು ವಿಶ್ವಕಪ್ ಪಂದ್ಯಾವಳಿಯ ನಿಜವಾದ ಹೀರೋ. ಸಣ್ಣ ಹೊಲಿಗೆಯ ಹೆಚ್ಚು ಹೊಳಪಿನ ಈ ಚೆಂಡು ಯದ್ವಾ ತದ್ವಾ ಗಾಳಿಯಲ್ಲಿ ಚಲಿಸಿ 'ಇತರೆ ರನ್ನುಗಳ' ಹಾವಳಿ ಕ್ರಿಕೆಟ್ ಪಂಡಿತರು ಊಹಿಸದ ದಾಖಲೆಗಳಿಗೆ ಕಾರಣವಾಯಿತು. ಪಾಕ್ ವಿರುದ್ಧ ಪಂದ್ಯದ ಉಪಾಂತ್ಯದಲ್ಲಿ ನ್ಯೂಜಿಲೆಂಡಿಗೆ ಅತಿ ಹೆಚ್ಚು ರನ್ ಬಂದಿದ್ದು ಇತರೆ ರನ್ (48) ಮೂಲಕವೇ!

ಭಾರತದ ಸಚಿನ್ ತೆಂಡೂಲ್ಕರ್ ನಿರೀಕ್ಷಿಸಿದ ಸಾಧನೆ ಮಾಡಲಿಲ್ಲ. ಪಿತೃವಿಯೋಗದ ದುಃಖ ಅವರ ಭಾವಕೋಶವನ್ನು ಬರಿದು ಮಾಡಿರಬಹುದು. ಆದರೆ ತಂಡದ ಮ್ಯಾನೇಜ್‌ಮೆಂಟ್ ಅವರನ್ನು ಒಮ್ಮೆ ಆರಂಭಿಕನಾಗಿ, ಒಮ್ಮೆ ಮಧ್ಯಮ ಕ್ರಮಾಂಕದಲ್ಲಿ ಕಳಿಸಿದ ಪರಿ ಇದಕ್ಕೆ ಹೆಚ್ಚಿನ ಕಾರಣ ಎನ್ನುವುದೇ ಸರಿಯಾದೀತು. ಪಾಕಿಸ್ತಾನ ವಿರುದ್ಧದ ಸೂಪರ್‌ಸಿಕ್ಸ್ ಪಂದ್ಯ ಹೊರತು ಪಡಿಸಿದರೆ ಭಾರತ ಬೇರಾವ ಪಂದ್ಯದಲ್ಲೂ ಸಮಷ್ಟಿ ಪ್ರಜ್ಞೆಯಿಂದ ಆಡಲೇ ಇಲ್ಲ. ನಾಯಕ ಅಝರ್ - ವೈಶಂಪಾಯನ ಸರೋವರ ಹೊಕ್ಕ ಸುಯೋಧನನ ಹಾಗೆ ತಮ್ಮ ಕಲ್ಪನಾವಿಲಾಸದಲ್ಲೇ ಮುಳುಗಿದ್ದರು. ರಾಹುಲ್ ಡ್ರಾವಿಡ್‌ರ ಎರಡು ಶತಕ ಮತ್ತು ಗರಿಷ್ಠ ರನ್‌ಗಳಿಕೆ ಈ ಕ್ರೀಡಾಕೂಟದಲ್ಲಿ ಭಾರತದ ಸಾಧನೆಯ ಬೆಳ್ಳಿಗೆರೆ. ವೆಂಕಟೇಶ್ ಪ್ರಸಾದ್ ನಿರಂತರವಾಗಿ ಉತ್ತಮ ದಿಕ್ಕು ದೆಸೆ ಅಂತರದಿಂದ ಬೌಲ್ ಮಾಡಿದರು. ಜಾವಗಲ್ ಶ್ರೀನಾಥ್ ಪರಿಪೂರ್ಣತೆಯ ಬೌಲಿಂಗ್ ಮಾಡಿದರು. ಇಬ್ಬರಿಗೂ ನಿರೀಕ್ಷಿತ ಸಂಖ್ಯೆಯ ವಿಕೆಟ್ ದೊರೆಯದಾಯಿತು. ಭಾರತದ ಫೀಲ್ಡಿಂಗ್ ಮುಂದಿನ ವಿಶ್ವಕಪ್ ವೇಳೆಗಾದರೂ ಚುರುಕಾಗಬೇಕು.

> **ವಿಶ್ವಕಪ್ ಕ್ರಿಕೆಟ್‌ನಲ್ಲಿ ಏಷಿಯಾ ಕನಸು ಧೂಳೀಪಟವಾಯಿತು. ಗೆಲುವಿನ ಹಂತದ ಒಂದು ಓಟ ಅದೆಷ್ಟು ಮುಖ್ಯ ಎಂಬುದು ಎಲ್ಲ ತಂಡಗಳಿಗೆ ಮನವರಿಕೆಯಾಗುವ ವಿಚಾರವಾಯಿತು. ಅಂತೂ ಕಾಂಗರೂಗಳು ವಿಶ್ವದ ಕ್ರಿಕೆಟ್ ವಿಜಯ ಮಾಲೆಗೆ ಅರ್ಹರಾದರು.**

ಈ ಕ್ರೀಡಾಕೂಟದ ಆರಂಭದಲ್ಲಿ ವೇಗದ ಬೌಲರ್‌ಗಳು ಮೇಲುಗೈ ಸಾಧಿಸಿದರೆ, ಮಧ್ಯಮ ಅವಧಿಯಲ್ಲಿ ಬ್ಯಾಟ್ಸಮನ್‌ಗಳು ವಿಜೃಂಭಿಸಿದರು. ಆದರೂ 30 ಪಂದ್ಯಗಳ 60 ಇನಿಂಗ್ಸ್‌ಗೆ ಕೇವಲ ಹತ್ತು ಶತಕ - ಅಚ್ಚರಿ ಹುಟ್ಟಿಸಿತು. ಇಡೀ ಕ್ರೀಡಾಕೂಟದ ಅಚ್ಚರಿ ಫಲಿತಾಂಶವೆಂದರೆ ಬಾಂಗ್ಲಾದೇಶಕ್ಕೆ ಪಾಕ್ ಶರಣಾದದ್ದು. ಫೇವರೆಟ್ ದಕ್ಷಿಣ ಆಫ್ರಿಕಾ - ನಿಯಮಗಳ ಗೊಂದಲದಲ್ಲಿ ಗಲಿಬಿಲಿಗೊಂಡು ಹತಾಶವಾದದ್ದು.

80 ದೇಶಗಳ ಇಪ್ಪತ್ತು ಕೋಟಿ ಪ್ರೇಕ್ಷಕರು, ವಿಶ್ವಕಪ್‌ಕ್ರಿಕೆಟ್ ಕಂಡಿದ್ದಾರೆ. ಅದರಿಂದ ಸಂತೋಷ-ಸಂತಾಪ ಎರಡೂ ಅನುಭವಿಸಿದ್ದಾರೆ. 'ಫೇರ್‌ಪ್ಲೇ' ಅಂದರೆ 'ಆಟದ ಸಜ್ಜನಿಕೆ' ಪ್ರದರ್ಶನದಿಂದ ಭಾರತ ಮತ್ತೊಮ್ಮೆ ಹೃದಯ ಗೆದ್ದಿದೆ. ಆದರೆ ಈ ತಂಡ 'ಚಾಂಪಿಯನ್‌ಗೆ' ಇರಬೇಕಾದ 'ಫಿನಿಷ್' (ಮೊನಚು) ಹೊಂದಿರಲಿಲ್ಲ. ಕಮಾನ್ ಇಂಡಿಯಾ ಜಾಹೀರಾತುಗಳಿಂದ ಲೀಟರ್‌ಗಟ್ಟಲೆ ಪೇಯ ಖರ್ಚಾಗಬಹುದು. ಇಂದ್ರ ಪದವಿ, ವೀರಸ್ವರ್ಗ, ಪ್ರಶಸ್ತಿ, ತಾಮ್ರ ಪತ್ರ ಮುಂತಾದವು ದೊರಕದು. ಇದು ಈಗ ಸಾಬೀತಾಗಿರುವ ಮತ್ತೊಂದು ಸಿದ್ಧಾಂತ.

ನೀವೇಕೆ ಕ್ರಿಕೆಟ್ ಇಷ್ಟಪಡುತ್ತೀರಿ ಎಂದು ಪ್ರಶ್ನಿಸಿದರೆ ಉತ್ತರ ಸುಲಭ. ನೀವೇಕೆ ಪತ್ತೆದಾರಿ ಕಾದಂಬರಿ ಓದುತ್ತೀರಿ? ಎಂದು ಮರುಪ್ರಶ್ನೆ ಹಾಕಬಹುದು. ಒಂದು ದಿನ ಕ್ರಿಕೆಟ್ - ಪತ್ತೆದಾರಿ ಕಾದಂಬರಿಯ ಹಾಗೇ. ಗಹನವಾದದ್ದು ಏನಿಲ್ಲದಿದ್ದರೂ ರೋಮಾಂಚನ ಗ್ಯಾರಂಟಿ. ಇಂದು ಆಟ ಚಪ್ಪರಿಸಿ ಸವಿದು, ನಾಳೆ ಕಚೇರಿಯ ಮೊಗಸಾಲೆಯಲ್ಲಿ, ಕಾಫಿ ಹೌಸಿನಲ್ಲಿ ಚರ್ಚಿಸಿ ಬಿಟ್ಟರೆ ಅದಿನ್ನು ತಂಗಳು. ದಕ್ಷಿಣ ಆಫ್ರಿಕಾದಲ್ಲಿ ಇನ್ನು ನಾಲ್ಕು ವರ್ಷಗಳ ನಂತರ ಮತ್ತೆ ಸೇರಬೇಕಾದ ಅತಿರಥರ ಸೋಲು ಗೆಲವುಗಳ ಬಗ್ಗೆ ಚೂಯಿಂಗ್‌ಗಮ್ ಅಗಿದಂತೆ ನೆನಪುಗಳ ಮೆಲುಕು.

■ಕೆ.ಆರ್. ಪ್ರಹಲ್ಲಾದ


ವಿಶ್ವಕಪ್ ಪೋಸ್ಟ್ ಮಾರ್ಟಂ

ವಿಶ್ವಕಪ್‌ನಲ್ಲಿ ಅತ್ಯಂತ ಗೊಂದಲ ಹುಟ್ಟಿಸಿದ ಸಂಗತಿಯೆಂದರೆ ಪಾಯಿಂಟ್ ಪದ್ಧತಿ. ಒಂದು ವೇಳೆ ಪಾಯಿಂಟುಗಳು ಸೂಪರ್ ಸಿಕ್ಸ್ ಹಂತದಲ್ಲಿ ಹೊಸದಾಗಿ ಪ್ರಾರಂಭವಾಗಿದ್ದರೆ ಏನಾಗುತ್ತಿತ್ತು ಗೊತ್ತೇ? ಜಿಂಬಾಂಬ್ವೆ-ಪಾಕಿಸ್ತಾನಗಳು ಹೊರ ಬೀಳುತ್ತಿದ್ದವು. ಒಂದು ಕಡೆ ಭಾರತ-ಆಸ್ಟ್ರೇಲಿಯಾ ಸೆಮಿಫೈನಲ್‌ನಲ್ಲಿ ಸೆಣೆಸಿದರೆ ಇನ್ನೊಂದು ಕಡೆ ನ್ಯೂಝಿಲ್ಯಾಂಡ್-ದ.ಆಫ್ರಿಕಾ ಸೆಣೆಸುತ್ತಿದ್ದವು. ಹಾಗೆ ಆದರೆ ಎಜ್‌ಬಾಸ್ಟನ್‌ನಲ್ಲಿ ಆಗುವ 'ಟೈ' ಲಾರ್ಡ್ಸ್‌ನಲ್ಲಿ ಆಗುತ್ತಿತ್ತೇ! ಆದರೆ ಕ್ರಿಕೆಟಿನಲ್ಲಿ 'ಆದರೆ' 'ಹೋದರೆ'ಗಳಿಗೆ ಅರ್ಥವಿಲ್ಲ.

■ ಪರಮೇಶ್ ಗುಂಡ್ಕಲ್

ಭಾರತ: ಅಜರ್ ತಲೆದಂಡ?

ಮೊದಲ ಪಂದ್ಯದಲ್ಲಿ ದ.ಆಫ್ರಿಕದ ವಿರುದ್ಧ 47ನೇ ಓವರ್ ಬೌಲ್ ಮಾಡಲು ಬಂದ ಅಗರ್ಕರ್ 'ಯಾರ್ಕರ್'ಗಳನ್ನು ಸಾಧ್ಯವಾದಷ್ಟು ಹೆಚ್ಚು ಹಾಕುವ ಬದಲು ಆಫ್‌ಸ್ಟಂಪಿನಿಂದ ಹೊರಗೆ ಚೆಂಡೆಸೆಯುತ್ತಾರೆ. ಕ್ಲುಸ್ನರ್ ಮತ್ತು ರೋಡ್ಸ್ ಆರರಲ್ಲಿ ನಾಲ್ಕು ಚೆಂಡನ್ನು ಬೌಂಡರಿಯ ಹೊರಗೆ ಕಳಿಸುತ್ತಾರೆ. ಪಂದ್ಯ



ಭಾರತದ ಕೈಯಿಂದ ತಪ್ಪಿಹೋಗುತ್ತದೆ.

ಜಿಂಬಾಬ್ವೆ ವಿರುದ್ಧ ರಮೇಶ್ ಜಡೇಜಾ ಸಲಹೆಯನ್ನು ನಿರ್ಲಕ್ಷಿಸಿ ಕೆಟ್ಟ ಹೊಡೆತ ಹೊಡೆದು ನಿರ್ಗಮಿಸುತ್ತಾರೆ. ಶ್ರೀನಾಥ್ ಗೆಲ್ಲಲು ಎಂಟು ಬಾಲಿನಲ್ಲಿ 4 ರನ್ ಬೇಕಿದ್ದಾಗ ಸಿಕ್ಸರ್ ಹೊಡೆಯಲು ಹೋಗಿ 'ಬೌಲ್ಡ್' ಆಗುತ್ತಾರೆ - ಪರಿಣಾಮ : ಭಾರತ ಸೋಲುತ್ತದೆ.

ಆಸ್ಟ್ರೇಲಿಯಾ ವಿರುದ್ಧ ಭಾರತದ ನಾಯಕ ಅಝರ್ ಟಾಸ್ ಗೆದ್ದು ಕಾಂಗರುಗಳನ್ನು ಬ್ಯಾಟಿಂಗೆಗೆ ಕಳಿಸುತ್ತಾರೆ. 'ಕಾಂಗರೂಗಳು 282 ರನ್ ಪೇರಿಸುತ್ತಾರೆ. ಭಾರತ ಬ್ಯಾಟಿಂಗೆಗೆ ಇಳಿಯುವ ಮೊದಲೇ ಪಂದ್ಯ ಸೋತಿರುತ್ತದೆ.

ನ್ಯೂಝಿಲೆಂಡ್ ವಿರುದ್ಧದ ಪಂದ್ಯದಲ್ಲಿ ಭಾರತದ ಕೈಯಲ್ಲಿಯೇ ಪಂದ್ಯವಿತ್ತು. ಆದರೆ ಶ್ರೀನಾಥ್ ಆಫ್ ಸೈಡಿಗೆ 6 ಜನ ಕ್ಷೇತ್ರರಕ್ಷಕರನ್ನು ನಿಲ್ಲಿಸಿಕೊಂಡು ಲೆಗ್‌ಸೈಡಿಗೆ ಸತತವಾಗಿ ಬೌಲ್ ಮಾಡುತ್ತಾರೆ. ಪರೋರೆ ಅದನ್ನು ಸತತವಾಗಿ ಬೌಂಡರಿ ಹೊರಗೆ ಕಳುಹುತ್ತಾರೆ. ಭಾರತ ಪಂದ್ಯವನ್ನು ಸೋಲುತ್ತದೆ.


ಈ ಮೇಲಿನ ಘಟನೆಗಳನ್ನು ಗಮನಿಸಿ. ಒಂದೊಂದೆ ಸಂಗತಿಗಳು ಭಾರತದ ಕೈಯಿಂದ ಒಂದೊಂದು ಪಂದ್ಯ ಕೈ ತಪ್ಪುವುದಕ್ಕೆ ಕಾರಣವಾದವು. ಪರಿಣಾಮ ಸ್ಪಷ್ಟ. ಭಾರತ ಸೂಪರ್ ಸಿಕ್ಸ್‌ನಿಂದ ಮುಂದಕ್ಕೆ ಹೋಗಲೇ ಇಲ್ಲ. ಪಾಯಿಂಟ್ ಪದ್ಧತಿ ಭಾರತದ ಗಾಯಕ್ಕೆ ಉಪ್ಪು ಸವರಿತು. ಅತ್ಯಂತ ಕೆಟ್ಟ ನಾಯಕತ್ವ ನಾಯಕನ ಬೇ ಜವಾಬ್ದಾರಿ ಹೊಡೆತಗಳು, ಬೌಲರ್‌ಗಳ ಅಶಿಸ್ತಿನ ಬೌಲಿಂಗ್ ಮತ್ತು ಎಂದಿನಂತೆ ಕೆಟ್ಟ ಫೀಲ್ಡಿಂಗ್, ಭಾರತ ಈ ವಿಶ್ವಕಪ್‌ನಲ್ಲಿ ನಿರಾಶಾದಾಯಕ ಪ್ರದರ್ಶನ ಕೊಡುವುದಕ್ಕೆ ಕಾರಣ.

ಅಝರ್ ಹೇಳುತ್ತಾರೆ, 'ನಾನು ವೈಡ್ ಮತ್ತು ನೋಬಾಲ್‌ಗೆ ಫೀಲ್ಡ್ ಸೆಟ್ಟಿಂಗ್ ಮಾಡಲಾಗುವುದಿಲ್ಲ'. ಅದು ಸರಿ. ಆದರೆ ಮುಂದುವರೆದು ಹೇಳುತ್ತಾರೆ 'ನಾನಿನ್ನೂ ಕ್ರಿಕೆಟನ್ನು ಎಂಜಾಯ್ ಮಾಡುತ್ತಿದ್ದೇನೆ' ಎಂದು. ಅದಕ್ಕೆ ಬಿಷನ್‌ಸಿಂಗ್ ಬೇಡಿ ಕೇಳುತ್ತಾರೆ. 'ಯಾರ ಖರ್ಚಿನಲ್ಲಿ?' ಅಂತ.

ದಕ್ಷಿಣ ಆಫ್ರಿಕಾ

ಈ ಸಲವಾದರೂ ದಕ್ಷಿಣ ಆಫ್ರಿಕಾ ವಿಶ್ವಕಪ್ ಗೆಲ್ಲುತ್ತದೆ ಎಂದು ಭವಿಷ್ಯ ಹೇಳಿದವರು ತುಂಬಾ ಜನ. ಆದರೆ ನಮ್ಮ ಆಫ್‌ಸ್ಪಿನ್ನರ್ ಇ.ಎ.ಎಸ್ ಪ್ರಸನ್ನ ಹೇಳಿದ್ದರು. ದ. ಆಫ್ರಿಕಾ ವಿಶ್ವಕಪ್ ಗೆಲ್ಲುವುದಿಲ್ಲ. 'ಅದು ಒತ್ತಡದ ಸಂದರ್ಭಗಳಲ್ಲಿ ಸರಿಯಾಗಿ ಆಡಿದ ಉದಾಹರಣೆಗಳೇ ಇಲ್ಲ ಎಂದು. ಅದು ಅಕ್ಷರಶಃ ನಿಜವಾಯಿತು. ಇಲ್ಲದಿದ್ದರೆ ಅದು ಎಜ್‌ಬಾಸ್ಟನ್‌ನಲ್ಲಿ ಕಾಂಗರೂಗಳಿಗೆ ಆ ರೀತಿಯಲ್ಲಿ ಶರಣಾಗುವುದು ಸಾಧ್ಯವಿರಲಿಲ್ಲ.

213 ರನ್ ದೊಡ್ಡ ಮೊತ್ತವೇನಲ್ಲ. ಆದರೆ ಕಾಂಗರೂಗಳು ಅದನ್ನೇ ಡಿಫೆಂಡ್ ಮಾಡುವುದಕ್ಕೆ ಮಾನಸಿಕವಾಗಿ ಸಿದ್ಧರಾಗಿದ್ದರು. ಬಹುಶಃ ಇದಕ್ಕಾಗಿಯೇ ಇರಬೇಕು ಬಾಪು ನಾಡಕರ್ಣಿ ಹೇಳಿದ್ದು 'ಕಾಂಗರೂಗಳು ತುಂಬಾ ಹಾರ್ಡ್



ಕ್ರಿಕೆಟರ್ಸ್' ಎಂದು. ಹಾರ್ಡ್ ಕ್ರಿಕೆಟರ್ಸ್ ಎಂದರೆ ಅವರು ಹೇಳಿದ್ದು ಕಾಂಗರೂಗಳು ಒಂದು ರನ್ನನ್ನೂ ನಿಮಗೆ ಕೊಡುವುದಿಲ್ಲ. ನೀವೇ ಗಳಿಸಬೇಕು ಎಂಬ ಅರ್ಥದಲ್ಲಿ. ಸೆಮಿಫೈನಲ್‌ನಲ್ಲಿ ದ.ಆಫ್ರಿಕಾಕ್ಕೆ ಅವರು ಆ ವಿಜಯದ ರನ್ ಕೊಡಲೇ ಇಲ್ಲ. ಆ ಪಂದ್ಯದಲ್ಲಿ ವಾರ್ನ್ ಚೆಂಡನ್ನು ಯಾವ ಫೂಟ್-ವರ್ಕ್ ಇಲ್ಲದೇ ದ.ಆಫ್ರಿಕಾದ ಬ್ಯಾಟುಗಾರರು ಆಡಿದ್ದು ಅತ್ಯಂತ ಯೋಜನಾರಹಿತ ಕ್ರಿಕೆಟಿಗೆ ನಿದರ್ಶನ. ಅದೂ ದ.ಆಫ್ರಿಕದಿಂದ ಈ ಮಟ್ಟದ ಯೋಜನಾ ರಹಿತ ಆಟ ಅಚ್ಚರಿದಾಯಕ.

ಇದೆಲ್ಲಕ್ಕಿಂತ ಮುಖ್ಯವಾಗಿ ದ.ಆಫ್ರಿಕಾ ತಂಡದ ಬ್ಯಾಟಿಂಗ್‌ನಲ್ಲಿ ಆಳ ಇರದಿರುವುದು ಆ ತಂಡದ ಸೋಲಿಗೆ ಕಾರಣ. ಜಾಕ್ಸ್ ಕಾಲೀಸ್ ಮಾತ್ರ ವಿಶ್ವದರ್ಜೆಯ ಆಟಗಾರ. ಕಲಿನನ್ ಸ್ವಲ್ಪ ಮಟ್ಟಿಗೆ ಆ ಸಾಲಿಗೆ ಬರಬಲ್ಲರು. ಆದರೆ ಸ್ಪಿನ್ ಎದುರು ಅವರು ತಡಬಡಿಸುತ್ತಾರೆ. ಇವರಿಬ್ಬರನ್ನೂ ಬಿಟ್ಟರೆ ಕ್ಲಾಸ್ ಇರುವ ಆಟಗಾರರು ದ.ಆಫ್ರಿಕಾದವರಲ್ಲಿ ಇಲ್ಲ. ಕ್ರೋನಿಯೇ, ಗಿಬ್ಸ್, ರೋಡ್ಸ್, ಬೌಚರ್, ಪೊಲಾಕ್... ಯಾರೂ ಕ್ಲಾಸ್ ಇರುವ ಆಟಗಾರರಲ್ಲ. ಕ್ರಿಸ್ಟನ್ ಸರವಾಗಿಲ್ಲ. ಕ್ಲೂಸ್ನರ ಈ ವಿಶ್ವಕಪ್‌ನ ಶೋಧ. ಬ್ಯಾಟಿಂಗ್ ಆಳ ಇರದಿರುವುದರಿಂದಲೇ ದ.ಆಫ್ರಿಕಾ 213ರನ್ ಚೇಸ್ ಮಾಡಲಾಗದೇ ಹೋದುದಕ್ಕೆ ಕಾರಣ. ಇಷ್ಟಾಗಿಯೂ ಕ್ಲೂಸ್ನರ್ ಅಸಾಧ್ಯವನ್ನು ಸಾಧ್ಯವಾಗಿಸುವುದಕ್ಕೆ ಹೊರಟಿದ್ದರು. ಆದರೆ ಇನ್ನೂ ಎರಡು ಚೆಂಡು ಬಾಕಿಯಿರುವಾಗ ಅದೂ ವಿಶ್ವಕಪ್ ಸೆಮಿಫೈನಲ್‌ನಂಥ ಮುಖ್ಯ ಪಂದ್ಯದಲ್ಲಿ ಅಷ್ಟು ಮೂರ್ಖ ಆದುದು ಮಾತ್ರ ಅನ್‌ಬಿಲೀವೆಬಲ್!

ನ್ಯೂಝಿಲೆಂಡ್

'ಕಿವಿ'ಗಳ ಬಗ್ಗೆ ಅನುಮಾನ ಇದ್ದೇ ಇತ್ತು. ಯಾಕೆಂದರೆ ವಿಶ್ವಕಪ್ ಸಂದರ್ಭದಲ್ಲಿ ಇಂಗ್ಲೆಂಡಿನಲ್ಲಿ ಥೇಟ್ ನ್ಯೂಝಿಲೆಂಡಿನಲ್ಲಿ ಇರುವಂಥದ್ದೆ ವಾತಾವರಣ. ಯಾವತ್ತೂ ನ್ಯೂಝಿಲೆಂಡ್ ತಂಡ ತನ್ನ ವಾತಾವರಣದಲ್ಲಿ ಅಸಾಮಾನ್ಯ ಕ್ರಿಕೆಟ್ ಪ್ರದರ್ಶಿಸುವ ತಂಡ. ಹಾಗಾಗಿ ಅವರನ್ನು ಯಾರೂ ಅಂಡರ್ ಎಸ್ಟಿಮೇಟ್ ಮಾಡುವುದು ಸಾಧ್ಯವಿರಲಿಲ್ಲ. ಕಿವೀಸ್ ತಂಡ ಸೆಮಿಫೈನಲ್ಸ್‌ಗೆ ಏರಿತಾದರೂ ಅದು ತನ್ನ ಅರ್ಹತೆಯಿಂದಲೇ ಆ ಹಂತ ತಲುಪಿತು ಎನ್ನುವುದನ್ನು ಒಪ್ಪಲಾಗದು. ಕಿವೀಸ್



ತಂಡ ನಿಜವಾಗಿಯೂ ಚೆನ್ನಾಗಿ ಆಡಿದ್ದು ಆಸ್ಟ್ರೇಲಿಯಾ ತಂಡದ ವಿರುದ್ಧ ಮಾತ್ರ. ಆ ಪಂದ್ಯದಲ್ಲಿ ನಂತರ ಅದು ಸೂಪರ್ ಸಿಕ್ಸ್‌ನಲ್ಲಿ ಭಾರತದ ವಿರುದ್ಧ ಗೆದ್ದಿತಾದರೂ ಅದು ಅನರ್ಹ. ಅಲ್ಲಿ ಕಿವಿ ತಂಡದ ಸಾಮರ್ಥ್ಯಕ್ಕಿಂತ ನಮ್ಮ ಬೌಲರ್‌ಗಳ ಯದ್ವಾ ತದ್ವಾ ಬೌಲಿಂಗ್ ಅವರ ಗೆಲುವಿಗೆ ಕಾರಣವಾಯಿತು. ಕಿವಿ ಬ್ಯಾಟಿಂಗ್ ಕೇವಲ ರೋಜರ್ ಟೂಸ್‌ರನ್ನು ಅವಲಂಬಿಸಿದರೆ ಬೌಲಿಂಗ್ ಅಲಾಟ್‌ರನ್ನು ಅವಲಂಬಿಸಿತು. ಹಾಗಾಗಿ ಅದು ಸರ್ವಾಂಗೀಣ ಪ್ರದರ್ಶನ ನೀಡುವಲ್ಲಿ ವಿಫಲವಾಯಿತು. ಸೆಮಿಫೈನಲ್ಸ್‌ನಲ್ಲಿ ಅದರ ಸೋಲು ಅಚ್ಚರಿಯದಲ್ಲ.

ಜಿಂಬಾಬ್ವೆ

ಜಿಂಬಾಬ್ವೆ ತಂಡ ಅದೃಷ್ಟದ ಮೇಲೆಯೇ ಸೂಪರ್‌ಸಿಕ್ಸ್‌ಗೆ ಬಂತು ಎಂಬುದು ಸರಿಯಲ್ಲ. ಅವರು ಭಾರತವನ್ನು ಸೋಲಿಸುವ ದಿನ ಮಾಡಿದ ಫೀಲ್ಡಿಂಗ್ ಅಮೋಘ. ಅವರ ಕ್ರೀಡಾಸ್ಫೂರ್ತಿ



ಪ್ರಶಂಸಾರ್ಹ. ಹಾಗೆಯೇ ದ.ಆಫ್ರಿಕದ ವಿರುದ್ಧ ಅವರು ಸಾಧಿಸಿದ ಗೆಲುವಿಗೆ ಕಾರಣ ಅವರ ಅಪರೂಪದ ಬ್ಯಾಟಿಂಗ್ ಮತ್ತು ಫೀಲ್ಡಿಂಗ್. ಅಂದು ಅವರು ಹಿಡಿದ ಮೂರು ಕ್ಯಾಚುಗಳು ನಿಜಕ್ಕೂ ಪಂದ್ಯದ ಗತಿ ಬದಲಾಯಿಸಿತು.

ಒಂದು ವೇಳೆ ಜಿಂಬಾಂಬ್ವೆ ಸೂಪರ್‌ಸಿಕ್ಸ್‌ನಿಂದ ಮುಂದೆ ಹೋಗಿದ್ದರೆ ಅದನ್ನು ಅದೃಷ್ಟ ಎನ್ನಬಹುದಿತ್ತು. ಆದರೆ ಹಾಗೆ ಹೇಳುತ್ತ ನಾವು ನೀಲ್ ಜಾನ್ಸನ್, ಗುಡ್ವಿನ್ ಇವರ ಅತ್ಯುತ್ತಮ ಆಟವನ್ನೂ ಅಲ್ಲಗಳೆಯುವುದು ಸಾಧ್ಯವಿಲ್ಲ. ನೀಲ್ ಜಾನ್ಸನ್ ಅಂತೂ ನೈಜ ಅರ್ಥದಲ್ಲಿ ಸವ್ಯಸಾಚಿ.

ಇಂಗ್ಲೆಂಡ್, ಶ್ರೀಲಂಕಾ, ವೆಸ್ಟ್ ಇಂಡೀಸ್

ಇಂಗ್ಲೆಂಡ್, ಶ್ರೀಲಂಕಾ ಮತ್ತು ವೆಸ್ಟ್ ಇಂಡೀಸ್ ತಂಡಗಳಲ್ಲಿ ಶ್ರೀಲಂಕಾ ಮತ್ತು ವೆಸ್ಟ್ ಇಂಡೀಸ್ ತಂಡಗಳು ತುಂಬಾ 'ಪೂರ್ ಕ್ರಿಕೆಟ್' ಆಡಿದರು. ಆದರೆ ಇಂಗ್ಲೆಂಡಿನವರದು ದುರದೃಷ್ಟ.



ಅವರು ಮೂರು ಪಂದ್ಯ ಗೆದ್ದಿದ್ದರು. ಚೆನ್ನಾಗಿಯೇ ಆಡುತ್ತಿದ್ದರು. ಆದರೆ ಭಾರತ ಮತ್ತು ದ.ಆಫ್ರಿಕಾದೆದುರು ಹೀನಾಯವಾಗಿ ಸೋತದ್ದು ಈ ಪಂದ್ಯಾವಳಿಯಿಂದ ಹೊರಹೋಗಬೇಕಾಗಿ ಬಂದುದು ಆತಿಥೇಯರ ದುರದೃಷ್ಟ. ಇಲ್ಲದೇ ಹೋದಲ್ಲಿ ನ್ಯೂಜಿಲ್ಯಾಂಡ್ ಅಥವಾ ಜಿಂಬಾಬ್ವೆಗಿಂತ ಇಂಗ್ಲೆಂಡ್ ಸಮರ್ಥ ತಂಡವಾಗಿತ್ತು ಎನ್ನುವುದನ್ನು ಎಲ್ಲರೂ ಒಪ್ಪಿಕೊಳ್ಳುವಂಥದ್ದು. ■

ಮೋಹಿನಿ ಕಾಟ!

■ ಕ.ಬ.ವೀರಣ್ಣ ಕಣ್ಣಾಗಾಲ

ಏಕೋ ಏನೋ ನನ್ನವಳಿಗೆ ನನ್ನನ್ನು ಕಂಡರೆ ಪ್ರೀತಿಯೇ ಇಲ್ಲ! ಎಲ್ಲದ್ದಕ್ಕೂ ನನ್ನ ಮೇಲೆ ರೇಗಾಡುತ್ತಾಳೆ... ಎಗರಾಡುತ್ತಾಳೆ. ನಾನು ಎಂದರೆ ಒಂದ್ಚೂರು ಕೇರೇ ಇಲ್ಲ ಅವಳ್ಗೆ! ಜೀವನವೇ ಬೇಸರವಾಗ್ತಿದೆ.. ಆಫೀಸಿನಿಂದ ಮನೆಗೆ ಬರೋದು ಐದು ನಿಮಿಷ ತಡವಾದ್ರು... 'ಎಕ್ಸ್‌ಪ್ಲೆನೇಷನ್' ಕೊಡಬೇಕು... ಈ ಮಹಾ ರಾಣಿಗೆ..... ನಾನು! ನಮ್ಮ ಆಫೀಸ್‌ನಲ್ಲಿ ನಾನೇ ಮ್ಯಾನೇಜರ್ ಆಗಿದ್ದು... ನಾನೇ ಎಷ್ಟೋ ಜನ ಸಿಬ್ಬಂದೀನಾ 'ಎಕ್ಸ್‌ಪ್ಲೆನೇಷನ್' ಕೇಳುವಾಗ.. ನಾನು... ಇವಳಿಗೆ ಹೆದರಬೇಕೇನು..? ಸಿಟ್ಟು ನೆತ್ತಿಗೇರಿತು! ಪದೇ.. ಪದೇ ಅವ್ಳು... ಅವಳೇ ನನ್ನವಳು ನನ್ನ ಮೇಲೆ 'ಬಾಸಿಸಮ್' ಮಾಡ್ತಿದ್ದಾಳೆ



ಎನಿಸಿತು! ಇವಳಿಗೆ ನಾನು ಬಾಸೋ.. ನನಗೆ ಇವಳು ಬಾಸೋ... ತಿಳಿಯದೆಯೆ ಕಂಗಾಲಾದೆ. ಅವಳು ಮಾಡುತ್ತಿದ್ದ ಒಂದೊಂದು ಘನ ಕಾರ್ಯವೂ ಅಲೆ ಅಲೆಯಾಗಿ ಮನಃ ಪಟಲದಲ್ಲಿ ಸುಳಿಯುತ್ತಿದ್ದವು. ಮಾರ್ಕೇಟಿನಿಂದ ನಾನು ತರಕಾರಿ ತಂದ್ರೆ... 'ಅದು ಚೆನ್ನಾಗಿಲ್ಲ... ಇದು ಚೆನ್ನಾಗಿಲ್ಲ...' ಎಂದು ತಕರಾರು ತೆಗೆಯುತ್ತಾಳೆ.. ನನ್ನ ಮೇಲೆಯೇ ಹಾರಾಡ್ತಾಳೆ. . ಇವಳ ಯೋಗ್ಯತೆಗೆ.. ಇವಳು ಒಂದು ದಿನ ಮಾರ್ಕೇಟಿಗೆ ಹೋಗಿ ಒಂದು ಕಂತೆ ಕೊತ್ತಂಬರಿ ಸೊಪ್ಪು ತರುವ ಯೋಗ್ಯತೆ ಇಲ್ಲ. ಇವ್ಳು... ನಂಗ್ಹೇಳೋಳು...!

ನನ್ನಷ್ಟಕ್ಕೆ ನಾನು ಎಷ್ಟೇ ಸಮಾಧಾನ ಸಾಂತ್ವನ ಮಾಡಿಕೊಂಡರೂ... ಒಳಮನಸ್ಸು ಅವಳ ಆಟವನ್ನು ನೆನೆದು... ನೆನೆದು... ಉಗ್ರಗೊಂಡು ಸಿಡಿಮಿಡಿಗುಡುತ್ತಿತ್ತು.

ಮೊದ್ಲೇ ನನ್ನ ಮೂಡ್ 'ಕರಾಬ್' ಆಗೋಗೈತೆ...! ಅಂತಹದರಲ್ಲಿ.. ಈ ಶೀನ ಬೇರೆ ನನ್ನ ಬಳಿ ಬಂದು ವಕ್ಕರಿಸಿದನು. ''ಯಾಕೋ ತಿಪ್ಪೇಶಿ.. ಒಂಥರಾ ಇದ್ದೀಯಲ್ಲ...?'' ಎಂದು ಪ್ರಶ್ನೆಯನ್ನು ಎಸೆದು.. ಪಿಳಿ ಪಿಳಿ ಕಣ್ಣು ಬಿಡುತ್ತ ನಿಂತನು. ಶೀನಂಗೆ ವಿಷಯ ಹೇಳೋದೋ... ಬೇಡ್ವೋ ಅಂತ ನಾನು ಒಳ್ಗೊಳ್ಗೇ ಭಾಳ ಯೋಚ್ನೆ ಮಾಡಿದೆ. ಆದರೆ ಅವತ್ತು ಕೆಟ್ಟು ಕೆರ ಹಿಡಿದಿದ್ದ ನನ್ನ ತಲೆಗೆ ಒಂದ್ಚೂರು ನೆಮ್ಮದಿ ಸಿಗಬೇಕಿದ್ದರೆ...ನಾನು . ಈ ವಿಚಾರಾನ ಯಾರ ಹತ್ರ ಆದ್ರು ಹೇಳ್ಕೊಳ್ಳೇ ಬೇಕಿತ್ತು! ಇಲ್ಲಾ.. ಅಂದ್ರೆ... ನನ್ನ ತಲೆ ಬೇಸಿಗೆ ಬಿಸಿಲಿಗೆ ಬಿರಿಯುವ 'ಮಿಣಕೆ' ಹಣ್ಣಿನ ತರಹ ಬಿರಿದು ಹೋದೀತೆಂಬ ಹೆದರಿಕೆ ಆಯ್ತು! ನನ್ನ ಮನಸ್ಸಿನಲ್ಲೂ ಒಂದು ಹೊಸ ಆಸೆ ಚಿಗುರಿತು. ಎಲ್ಲಾ ಶೀನಂಗೆ ಹೇಳ್ಬಿಟ್ಟು... ಅವನ ಸಲಹೆ ಕೇಳೋದೇ ಸರಿ ಎನಿಸಿತು.

''ಹೇಳ್ತೇನಿ... ಬಾ.. ಶೀನಾ.. ಈ ವಿಷಯಾನ ನಿನ್ನ ಹತ್ರ ಹೇಳಬೇಕು ಅಂತ ಭಾಳ ದಿನದಿಂದ್ಲೂ ಅನ್ಕೊಂಡಿದ್ದೆ... ಆದ್ರೆ.. ಕಾಲ ಕೂಡಿ ಬಂದಿರಲಿಲ್ಲ! ಈಗ ಹೇಳ್ತೀನಿ ಕೇಳು.. ಶೀನಾ ನನಗೆ ನನ್ನ ಹೆಂಡ್ತಿ ಕಾಟಾ ಈಚೀಚ್ಗೆ... ಭಾಳ ಜಾಸ್ತಿಯಾಗ್ಬಿಟ್ಟಿದೆ! ಕುಂತ್ರೆ ಕಷ್ಟ..'ನಿಂತ್ರೆ ಇನ್ನಷ್ಟು ಕಷ್ಟಾ.. ಹಿಂಗಾದ್ರೆ.. ನನ್ನ ಗತಿ ಹೆಂಗೇ ಅಂತೀನಿ.. ನೀನೇ ಹೇಳು ಶೀನ. ನನ್ನ ಕಂಡ್ರೆ.. ಅವಳ್ಗೆ ಒಂದ್ಚೂರೂ ಕೇರೇ ಇಲ್ಲಾ.. ಅಂತೀನಿ. ಏನ್ಮಾಡ್ಬೇಕೋ ನಂಗೆ.. ಒಂದೂ ತೋಚ್ತಾ ಇಲ್ಲ ನೋಡು! ಶೀನಾ.. ಹೆಂಗಾದ್ರೂ ಮಾಡಿ... ನೀನೇ ಏನಾದ್ರೂ ಒಂದು ಐಡಿಯಾ ಕೊಡ್ಬೇಕು ನೋಡು ನಂಗೆ! ಅವ್ಳು ನಾನು ಹೇಳಿದಂಗೆ ಕೇಳ್ಬೇಕು... ಹಂಗೇ ಏನಾದ್ರು ಐಡಿಯಾ ಕೊಡು ಮತ್ತೆ ನೋಡುವ.''

ನಾನು ನನ್ನ ಕಷ್ಟವನ್ನು ಶೀನನ ಮುಂದೆ ತೋಡಿಕೊಂಡದ್ದು ಕಂಡು ಶೀನನಿಗೆ ನನ್ನ ಬಗ್ಗೆ ಅತೀವವಾದ ಕನಿಕರ ಬಂದು ಅವನ ಹೊಟ್ಟೆ 'ಚುರುಕ್' ಎಂದಿರಬೇಕು! ''ಬಾರೋ ತಿಪ್ಪೇಶಿ.. ನನಗೆ... ಅದಕ್ಕೆ ಏನೋ ನಿನ್ನ ಕಂಡಾಗಲೆಲ್ಲ ಒಂಥರಾ ಅನುಮಾನ ಬರೋದು! ಪಾಪಾ.. ತಿಪ್ಪೇಶಿ ಏನೋ ಪ್ರಾಬ್ಲಮ್‌ನಲ್ಲಿ ಸಿಕ್ಕಾಕೊಂಡಿದ್ದಾನೇನೋ ಅನ್ನೋದು..!'' ಶೀನ ಉದ್ಗರಿಸಿದ. ನನ್ನ ಹತ್ತಿರ ಇಡೀ ಸಮಸ್ಯೆಯ ಬಗ್ಗೆ ಎಲ್ಲಾ ಮಾಹಿತಿ ಸಂಗ್ರಹ ಮಾಡಿದ. ನನ್ನನ್ನು... ಅವನು ಪ್ರಶ್ನೆ ಮಳೆಗರೆದಾಗ.. ನಾನು... 'ಕ್ರಿಮಿನಲ್' ಲಾಯರ್ ಬಳಿಯೋ.. ಇಲ್ಲಾ ಮನೋವೈದ್ಯರ ಬಳಿಯೋ ಬಂದಿರುವಂತೆ ಭಾಸವಾಯಿತು. ನಾನು ಎಲ್ಲಾ ಹೇಳಿದ ಮೇಲೆ ಅವನು ಕೂಡಿ.. ಕಳೆದು ಲೆಕ್ಕಾಚಾರ ಮಾಡಿ ನನಗೊಂದು ಪುಕ್ಕಟೆ ಸಲಹೆಯನ್ನಿತ್ತ..'' ನಾನೊಂದು ಸಖತ್ ಸಲಹೆ ಕೊಡ್ತೇನಿ ನೀನು ಹಾಗೆಯೇ ಮಾಡು.. ಎಲ್ಲಾ ಸರಿ ಹೋಗುತ್ತೆ! ಎಂದು ದೊಡ್ಡ ರಾಜಕಾರಣಿಯಂತೆ ಆಶ್ವಾಸನೆ ಇತ್ತ! ನಾನು ಮಧ್ಯ ಬಾಯಿ ಹಾಕಿ 'ನೀನು ಕೊಡುವ ಸಲಹೆ ಕೈ ಕೊಟ್ಟರೆ... ಅಥವಾ ನನಗೇ ರಿವರ್ಸ್ ಆಗಿ ಪರಿಣಾಮ ಬೀರಿದರೆ...' ಎಂದು ಮರು ಪ್ರಶ್ನೆ ಹಾಕಲು ನನಗೆ ಮನಸ್ಸಾದರೂ... ಹಾಗೆ ಕೇಳದೆ ಅವನು ಹೇಳಿದ ಸಲಹೆ, ಸೂಚನೆಗಳನ್ನು ಮೈಯೆಲ್ಲಾ ಕಿವಿಯಾಗಿಸಿ ಕೇಳ ತೊಡಗಿದೆ. ಅವನು... ಅವನ... ಮಾಸ್ಟರ್ ಪ್ಲಾನ್.. ಬಿಚ್ಚಿಟ್ಟು.. ''ನೋಡೋ ತಿಪ್ಪೇಶಿ ನಿನ್ನ ಹೆಂಡ್ತಿ.. ನೀನು ಬೇರೆ ಹೆಣ್ಣು ನೋಡಿದ್ರೆ... ಮಾತನಾಡಿಸಿದ್ರೆ.. ಸಿಡಿದು ಬೀಳ್ತಾಳೆ ಅಂದ್ಯೆಲ್ಲಾ.. ಅದೇ 'ವೀಕ್‌ನೆಸ್' ಹಿಡಿದು.. ನಿನ್ನ ಸಮಸ್ಯೆಯನ್ನು 'ಸೆಟಲ್' ಮಾಡ್ತೇನಿ ನೋಡ್ತೀರು...! ನಿನ್ನ ಹೆಂಡ್ತೀ ನಿನ್ನನ್ನ ಕೆಲಸ್ಕೆ ಬಾರದೋನು... ಅಂತ ತಿಳ್ಕೊಂಡಿದ್ದಾಳಲ್ಲ.. ಈಗ ನೋಡ್ತೀರು

ನಾನು ಹಾಕೋ ಮಾಸ್ಟರ್ ಪ್ಲಾನ್‌ಗೆ ಅವ್ಳು ಕಕ್ಕಾಬಿಕ್ಕಿಯಾಗಿ ಅಳುತ್ತ ನಿನ್ನ ಕಾಲು ಹಿಡೀಬೇಕು.. ಹಾಗೆ ಮಾಡ್ತೀನಿ!'' ಎಂದು ಶೀನ ಹೇಳುವಾಗ... ಅವನು ಹೇಳುತ್ತಿದ್ದ ಒಂದೊಂದು ಮಾತೂ ನನ್ನ ಬಾಯಲ್ಲಿ ನೀರು ತರಿಸುತ್ತಿತ್ತು. 'ದೇವ್ರೇ... ಶೀನ ಅಂದ್ಕಂಗೆ ಏನಾದ್ರೂ ಪವಾಡ ಆಗಿ ಬಿಟ್ರೆ ನಿಂಗೆ... ನೂರೊಂದು ಈಡ್ಗಾಯಿ ಹಾಕ್ತೀನಿ!' ಎಂದು ಮನಸ್ಸಿನಲ್ಲೇ ಗಣಪತಿಗೆ ಹರಕೆ ಹೊತ್ತುಕೊಂಡೆ. ಈ ಶೀನ... ಒಳ್ಳೇ ಇಂಗ್ಲಿಷ್ ಪಿಕ್ಚರ್ ತರಹ ಸಸ್ಪೆನ್ಸ್ ಮಾಡ್ತಿದ್ದನೇ ಹೊರತು... ಅವನ 'ಮಾಸ್ಟರ್ ಪ್ಲಾನ್' ಏನು ಅಂತ ಹೇಳದೇ ಮತ್ತಷ್ಟು ನನ್ನ ಕುತೂಹಲ ಕೆರಳಿಸುತ್ತಿದ್ದ.

''ಹೋಗ್ಲೀ... ನಿನ್ನ ಪ್ಲಾನ್ ಅದೇನು ಅಂತ ಬೇಗ ಹೇಳೋ ಶೀನಾ... ಸುಮ್ನೆ ನನ್ನನ್ನ ಟೆಂಪ್ಟ್ ಮಾಡಬೇಡ!'' ಎನ್ನುತ್ತಾ ಪೂಸಿ ಹೊಡೆದೆ ಅವನಿಗೆ. ಶೀನ ಸರಿಯಾಗಿ ಕುಳಿತು ಹೇಳಲು ಶುರುಮಾಡಿದ. ''ನೋಡೋ ತಿಪ್ಪೇಶಿ.. ನಾನು ಈಗ ಹೇಳೋದನ್ನ ಸರಿಯಾಗಿ ಕೇಳಿಸ್ಕೋ... ನಾನು ಈಗ ನಿನ್ನ ಹತ್ರ ಒಂದು ಲವ್ ಲೆಟರ್ ಬರೆದು ಕೊಡ್ತೀನಿ....!'' ಎಂದ. ನಾನು ಮಧ್ಯೆ ಬಾಯಿ ಹಾಕಿ... ''ಯಾರಿಗೋ ನೀನು ಲವ್ ಲೆಟರ್ ಕೊಡೋದು...?'' ಅಂದೆ.

''ನಿನ್ನ ಹೆಂಡ್ತೀಗೆ...!'' ಎಂದು ಅವನೆಂದಾಗ ನನ್ನ ಜೀವ ಹಾರಿ ಹೋದ ಅನುಭವವಾಯ್ತು!


''ಏನೋ... ನೀನು ಹೇಳ್ತಿರೋದು.. ಪಾಪಿ ನನ್ಮಗ್ನೇ...!''

''ಲೇಯ್ ತಿಪ್ಪೇ... ನಾನು ಹೇಳೋದನ್ನ ಸರಿಯಾಗಿ ಪೂರ್ತಿ ಕೇಳಿದ ನಂತರ.. ನಿನ್ನ ಅನುಮಾನ ಏನಿದ್ರೂ ಹೇಳು... ಈಗ ತೆಪ್ಪಗೆ... ನಾನು ಹೇಳೋದನ್ನ ಕೇಳಿಸ್ಕೋ! ನಾನು ಒಂದು 'ಲವ್ ಲೆಟರ್' ಬರೆದು ಕೊಡ್ತೀನಿ ಅಂತ ಹೇಳಿದ್ದೂ... ಅದು ನಿನಗೆ ಬೇರೆ ಹುಡುಗಿ ಮೋಹಿಸಿ ಬರೆದ 'ಪ್ರೇಮ ಪತ್ರ'ವನ್ನು ಕಲ್ಪಿಸಿ ನಾನು ಬರೆದು ಕೊಡ್ತೇನೆ. ನೀನು ಅದನ್ನು ನಿನ್ನ ಜೇಬಿನಲ್ಲಿ ಇಟ್ಕೊಂಡು ಮನೆಗೆ ಹೋಗು... ಅಲ್ಲಿ.. ಆ ಪ್ರೇಮ ಪತ್ರ ನಿನ್ನ ಹೆಂಡ್ತಿ ಕೈಗೆ ಸಿಗುತ್ತೆ... ಅದನ್ನು ಕಂಡ ನಿನ್ನ ಹೆಂಡ್ತಿ...' ನಿನ್ನನ್ನು ಬೇರೆ ಹೆಣ್ಣುಗಳು ಪ್ರೀತಿಸಲು ಸಿದ್ಧರಿದ್ದಾರೆ' ಎಂದು ತಿಳಿದರೆ... ನಿನಗೂ ಡಿಮ್ಯಾಂಡ್ ಬರುತ್ತೆ. ಇಲ್ಲಾಂದ್ರೆ... 'ಇವರಿಗೆ ನನ್ನನ್ನು ಬಿಟ್ಟರೆ ಬೇರೆ ಗತಿಯೇ ಇಲ್ಲ' ಅಂದುಕೊಂಡು... ಧಿಮಾಕು ಮಾಡುತ್ತಾಳೆ! ಯಾಕೋ ಶೀನ ಹೇಳಿದ ಪ್ಲಾನು ಕೇಳಿ ನನ್ನ ಗಂಟಲು ಒಣಗಿದ ಅನುಭವವಾಯ್ತು.

''ಶೀನಾ .. ಅಮೇಲೆ.. ಏನಾದ್ರೂ... ಎಡವಟ್ಟಾದ್ರೆ...?'' ನಾನು ಕುಂಯ್‌ಗುಟ್ಟಿದೆ. ಶೀನ ನನ್ನಲ್ಲಿ ಧೈರ್ಯ ತುಂಬಿದ. ಬಹಳ ಕಷ್ಟಪಟ್ಟು... ಒಳ್ಳೊಳ್ಳೆ ಪದ ಪುಂಜಗಳನ್ನು ಪ್ರಯೋಗಿಸಿ 'ಪ್ರೇಮ ಪತ್ರ' ಸಿದ್ಧಪಡಿಸಿದ. ಆ ಪ್ರೇಮ ಪತ್ರವನ್ನು ಓದುತ್ತಿದ್ದಂತೆಯೇ ಶೀನನ ತೀಕ್ಷ್ಣ ಬುದ್ಧಿ ಕಂಡು ಅಚ್ಚರಿಯಾಯಿತು. ಅದನ್ನು ಓದುತ್ತಿದ್ದಂತೆ ನನ್ನ ಮನಸ್ಸು ರೋಮಾಂಚನಗೊಂಡು... 'ಇದು ನಿಜವಾದ್ರು ಆಗಬಾರದಿತ್ತೆ..' ಎಂದಿತು ಮನಸ್ಸು. ಅವನು ಕೊಟ್ಟ ಪ್ರೇಮ ಪತ್ರವನ್ನು ಮೆಲ್ಲಗೆ ನನ್ನ ಜೇಬಿಗೆ ಇಳಿಸಿದೆ. ನನ್ನ ಮನಸ್ಸಿನ ಒಳಗೊಳಗೆ/ ಏನೋ ಆವೇಗ... ಆತಂಕ..! ಅರ್ಧಾಂಗಿ ಮೋಹಿನಿ ಯಾವ ಕ್ಷಣದಲ್ಲಿ 'ಮೋಹಿನಿ' ಅವತಾರ ತಾಳುತ್ತಾಳೋ ಎಂದು ಕಾಯುವುದರಲ್ಲೂ ಒಂದು ಥರ ಥ್ರಿಲ್ ಇದೆ ಎನಿಸಿತು. ಮನೆಗೆ ಹೋಗಿ... ಊಟ ಮಾಡಿ ಮಲಗಿಬಿಟ್ಟೆ. ಆ ಪ್ರೇಮ ಪತ್ರ ಅವಳಿಗೆ ಗೋಚರಿಸುವಂತೆ ಏರ್ಪಾಡು ಮಾಡಿ ಮಲಗಿದ್ದೆ.

ಮುಂಜಾನೆ ನನಗೆ ಎಚ್ಚರವಾದಾಗ ಬೆಳಗ್ಗೆ ಏಳು ಗಂಟೆ ಹೊಡೆದಿತ್ತು. ಮುಂಜಾನೆ ಆರಕ್ಕೆ ನನ್ನನ್ನು, ಕಾಗೆಯ ತರಹ ಅರಚಿ ಹಾಸಿಗೆಯಿಂದ ಮೇಲೆ ಎಬ್ಬಿಸುತ್ತಿದ್ದ ಮೋಹಿನಿಯ ನೆನಪಾಯ್ತು. ಆದರೆ ಅವಳು ಅಲ್ಲಿ... ಎಲ್ಲಿಯೂ ಕಾಣಿಸಲಿಲ್ಲ! ಆತಂಕಗೊಂಡು... ಇಲ್ಲ... ಇಲ್ಲ.. ಖುಷಿಗೊಂಡು.. ಖಚಿತಪಡಿಸಿಕೊಳ್ಳಲು ''ಮೋಹಿನಿ.. ಮೋಹಿನಿ... ಎಂದು ಕೂಗುತ್ತ ಮನೆಯೆಲ್ಲಾ ಅಡ್ಡಾಡಿದೆ.. ಆದರೆ ಮೋಹಿನಿಯ ಸುಳಿವೇ ಇಲ್ಲ. ಅರೆ... ರೈಟಿಂಗ್ ಟೇಬಲ್ ಮೇಲೆ ಏನೋ ಪತ್ರ ಇರಿಸಿದ್ದು ಗೋಚರಿಸಿತು. ಅದು ಮೋಹಿನಿಯ ಕೈಬರಹ... ಮೋಹಿನಿ ನನಗೆ ಪತ್ರ ಇರಿಸಿ ಮನೆ ಬಿಟ್ಟು ಹೊರಟು ಹೋಗಿದ್ದಳು. ಶೀನನ 'ಫ್ಯಾಂಟಸಿ ಪ್ರೇಮ ಪತ್ರ' ಸಖತ್ತಾಗಿ ಕೆಲಸ ಮಾಡಿತ್ತು. ಮೊದಲು ಮೊದಲು.. ಒಂಥರ ವಿಚಿತ್ರ ಖುಷಿ ಎನಿಸಿದರೂ... ನಂತರ ದಿಕ್ಕು ತೋಚದೆ.. ಆ ಪತ್ರ ಹಿಡಿದು ಶೀನನ ಮನೆಗೆ ಓಡಿದೆ. ಏದುಸಿರು ಬಿಡುತ್ತಾ ಹೋದ ನನ್ನನ್ನು ಕಂಡ ಶೀನ ಅಷ್ಟೇ ಶಾಂತಚಿತ್ತತೆಯಿಂದ... ''ಬಾರಯ್ಯ.. ತಿಪ್ಪೇಶಿ.. ಬಾ.. ನೀನು ಹೀಗೆ ಮುಂಜಾನೆಯೇ ನನ್ನ ಬಳಿ ಓಡೋಡಿ ಬರ್ತೀಯ ಎಂದು ನನಗೆ ಮೊದಲೇ ಗೊತ್ತಿತ್ತು...! ಅದಕ್ಕೆ.. ಎರಡು ಕಪ್ಪು ಚಹ ಮಾಡಿದ್ದೀನಿ ತಗೋ ಕುಡಿ...'' ಎನ್ನುತ್ತಾ ಚಹ ನೀಡಿದನು.

''ಎಲ್ಲೋ... ಮನೇಲಿ ಯಾರೂ ಇಲ್ಲಾ... ನೀನೊಬ್ಬನೆ!'' ಎಂದೆ.. ಮನೆಯಲ್ಲೆಲ್ಲ ಕಣ್ಣಾಯಿಸಿ ಯಾರೂ ಕಾಣದ್ದು ಖಾತರಿಯಾಗಿ ''ಅದಾ.. ಅವಳೂ... ಮುನಿಸಿಕೊಂಡು... ಅವಳ ತೌರಿಗೆ ಹೋಗಿದ್ದಾಳೆ! ನಿಮ್ಮನೇ ಕೇಸೇ... ಹೋಗ್ಲಿ.. ಬಿಡು.. ಚಿಂತಿಸಬೇಡ ಕೂರು! ಈಗ ಅವ್ರು ವಾಪಸ್ ಬರುವ ಹಾಗೆ ನಾವಿಬ್ರು ಕೂಡಿ ಏನಾದ್ರು ಒಂದು ಮಾಸ್ಟರ್ ಪ್ಲಾನ್ ಮಾಡೋಣ'' ಎಂದು ಶೀನ ಹುಸಿ ನಗೆ ಚೆಲ್ಲಿ ಚಹ ಹೀರ ತೊಡಗಿದಾಗ ನಾನು ಬೇಸ್ತು ಬಿದ್ದು ಕುಳಿತೆ! ■



ನೈರುತ್ಯ ರೈಲ್ವೆ ವಲಯ

ಬೆಂಗಳೂರು ಭಾವನೆ

ನೈರುತ್ಯ ರೈಲ್ವೆ ವಲಯದ ವಿಷಯದಲ್ಲಿ ಬೆಂಗಳೂರು, ಹುಬ್ಬಳ್ಳಿ ಅಂತ ರುಂಡವೊಂದು ಕಡೆ, ಮುಂಡವೊಂದು ಕಡೆ ಆಗುವ ಕೂಗು ಕೇಳಿಬರತೊಡಗಿದೆ.

ಇಂದು ನೈರುತ್ಯ ರೈಲ್ವೆ ವಲಯ ಹೊತ್ತಿ ಉರಿಯುತ್ತಿರುವ ಜ್ವಲಂತ ಸಮಸ್ಯೆಯಾಗಿದೆ. ಅದು ಹುಬ್ಬಳ್ಳಿಯಲ್ಲಿ ಸ್ಥಾಪಿತವಾಗಬೇಕೆಂಬುದು ಉತ್ತರ ಕರ್ನಾಟಕದವರ ಆಶಯವಾದರೆ ಬೆಂಗಳೂರಿನಲ್ಲೇ ಆಗಲೆಂದು ಬೆಂಗಳೂರಿನ ಕನ್ನಡಪರ ಹೋರಾಟ ಸಮಿತಿಗಳ ಗಣ್ಯರಾದ ಜಾಣಗೆರೆ ವೆಂಟರಾಮಯ್ಯ, ರಾಮಣ್ಣ ಕೋಡಿ ಹೊಸಳ್ಳಿ, ಸಾ.ರಾ. ಗೋವಿಂದು, ಕೆ. ಪ್ರಭಾಕರ ರೆಡ್ಡಿ, ಹ.ಹನುಮಂತಯ್ಯ, ಕೆ.ಆರ್. ಕುಮಾರ್ ರಿಟ್ ಅರ್ಜಿ ಸಲ್ಲಿಸಿ ನ್ಯಾಯಾಲಯದಿಂದ ಸ್ಥಳಾಂತರಕ್ಕೆ ತಡೆಯಾಜ್ಞೆ ತಂದದ್ದು ಸಮಸ್ಯೆಗೆ ಇನ್ನಷ್ಟು ಸೆಳವು ತಂದಿದೆ.

'ಬೆಂಗಳೂರೋ........ ಹುಬ್ಬಳ್ಳಿಯೋ... ದಾವಣೆಗೆರೆಯೋ.....ಧಾರವಾಡವೋ............ ಒಟ್ಟಾರೆ ಕರ್ನಾಟಕಕ್ಕೆ ನೈರುತ್ಯ ರೈಲ್ವೆ ವಲಯ ಬಂದಿದೆ. ಬೆಂಗಳೂರಿಗೆ ಕೊಡ ಮಾಡಿದ ರೈಲ್ವೆ ವಲಯದ ಸ್ಥಳಾಂತರ ಈಗೇಕೆ? ಇದಕ್ಕೆ ಎಲ್ರೂ ಸಂತೋಷ ಪಡೋಣ. ಅದು ಬಿಟ್ಟು ಪ್ರಾಂತ್ಯ ಪಂಗಡಗಳನ್ನು ಸೃಷ್ಟಿಸಿ ನಾಡು ಒಡೆಯುವ ದುಷ್ಟರಿಗೆ ಬುದ್ಧಿಕಲಿಸಿ ಮೊದಲು ಸಮಸ್ತ ಕನ್ನಡಿಗರು ಮುಂದಾಗಬೇಕು''. ಇದು ಜಾಣಗೆರೆ ವೆಂಕಟರಾಮಯ್ಯನವರ ಆಶಯ.

''ಉತ್ತರ ಕರ್ನಾಟಕವೆಂದರೆ ಕರ್ನಾಟಕಕ್ಕೆ ಕಿರೀಟ ಇದ್ದಹಾಗೆ. ಕಿರೀಟವಿಲ್ಲದ ಕರ್ನಾಟಕದಲ್ಲಿ ಬದುಕಿದ್ದರೇನು ಸತ್ತರೇನು. ಉತ್ತರ ಕರ್ನಾಟಕ ಅಭಿವೃದ್ಧಿಯಾಗಬೇಕೆಂದು ಕೂಗು ಹಾಕುವವರು ಇಷ್ಟು ದಿನ ಎಲ್ಲಿಗೆ ಹೋಗಿದ್ದರು? ಅದೇ ಪ್ರಾಂತ್ಯದ ಮುಖ್ಯಮಂತ್ರಿಗಳಾಗಿ ಎಷ್ಟು ಜನ ಬಂದು ಹೋಗಿಲ್ಲ? ಉತ್ತರ ಕರ್ನಾಟಕ ಅಭಿವೃದ್ಧಿಯಾಗಬೇಕೆಂದು ಕೂಗುವವರಿಗೆ ಆಗ ಏನಾಗಿತ್ತು? ನಿಮಗೆ ಇದು ತಿಳಿದಿರಲಿ. ನ್ಯಾಯಪೀಠ ಹುಬ್ಬಳ್ಳಿಯಲ್ಲೇ ಆಗಲೆಂದು ಹೋರಾಟಮಾಡಿದ್ದು ನಾವು. ಎ.ಜಿ. ಕಛೇರಿಗೆ ಅನ್ಯ ಭಾಷಿಕರು ಬಂದು ಕೂತಾಗ ಸಮಗ್ರ ಕನ್ನಡಿಗರಿಗೆ ಅವಕಾಶ ಸಿಗಬೇಕೆಂದು ಹೋರಾಟ ಮಾಡಿದ್ದು ನಾವು. ಈಗಲೂ ನಮಗೆ ಬೇಸರವಿಲ್ಲ. ಪ್ರಸ್ತುತ ಸ್ಯಾಂಕ್ಷನ್ ಆಗಿರುವ ರೈಲ್ವೆ ವಲಯ ಬೆಂಗಳೂರಿನಲ್ಲೇ ಇರಲಿ...! ಪರ್ಯಾಯವಾಗಿ ಹುಬ್ಬಳ್ಳಿಗೆ ಇನ್ನೊಂದು ರೈಲ್ವೆ ವಲಯ ಬರಲಿ. ಅದಕ್ಕಾಗಿ ಹೋರಾಡಲು ನಾವೂ ಬರುತ್ತೇವೆ.

ಇತ್ಯಾದಿ ಬಿಚ್ಚು ಮಾತಿನ ವಿವರಣೆ ಜಾಣಗೆರೆ ವೆಂಕಟರಾಮಯ್ಯನವರದು. ಅಖಿಲ ಕರ್ನಾಟಕ ಡಾ. ರಾಜ್‌ಕುಮಾರ್ ಸಂಘದ ಅಧ್ಯಕ್ಷರಾದ ಸಾ.ರಾ. ಗೋವಿಂದು ಅವರು ಆವೇಶ ಪೂರಿತವಾಗಿ ತಮ್ಮ ನೋವು ತೋಡಿಕೊಂಡದ್ದು ಹೀಗೆ: 'ಕರ್ನಾಟಕಕ್ಕೆ ನೈರುತ್ಯ ರೈಲ್ವೆ ವಲಯ ಬರಲೀಂತ 20 ವರ್ಷಗಳಿಂದ್ಲೂ ಹೋರಾಟ ಮಾಡ್ತಾ ಇದ್ದೀವಿ. ನಮ್ಮಷ್ಟು ಸುದೀರ್ಘವಾಗಿ ಈ ರೈಲ್ವೆ ವಲಯಕ್ಕೆ ಸಂಬಂಧಿಸಿದಂತೆ, ಹುಬ್ಬಳ್ಳಿಯ ಕನ್ನಡಪರ ಸಂಘಟನೆಗಳು ಹೋರಾಟ ಮಾಡಿವೆಯೇ? ಪಾಪ. ಅಲ್ಲಿನ ಜನ ಅಮಾಯಕರು. ಕೆಲವು ಜನ ದುಷ್ಟರಿಗೆ ಬಲಿಯಾಗ್ತಾ ಇದ್ದಾರೆ. ರಾಜಕಾರಣದಿಂದ ಎಂದಿಗೂ ಕನ್ನಡ ಸಂಘ ಸಂಸ್ಥೆಗಳು ಉದ್ದಾರವಾಗೋಲ್ಲ. ಇಷ್ಟೊಂದು ವರ್ಷ ನಾವು ಹೋರಾಟ ಮಾಡಿದ್ವಿ ರೈಲ್ವೆ ಬರೋಕೆ. ಇಷ್ಟುದಿನ ಈ ಚಿಮೂ., ಪಾಟೀಲ್ ಪುಟ್ಟಪ್ಪನವರು ಎಲ್ಲಿಗೆ ಹೋಗಿದ್ರು? ಈ ಅನಂತ್‌ಕುಮಾರ್ ಯಾವ ರಾಜಕೀಯದ ದೊಂಬಿಯಲ್ಲಿ ಮುಳುಗಿದ್ರು? ಇನ್ನೊಂದು ಸತ್ಯ ಗೊತ್ತಾ ನಿಮಗೆ?

ಬೆಳಗಾಂವ್‌ನಲ್ಲಿ ಮರಾಠಿಗರು ಕನ್ನಡಿಗರ ನಿತ್ಯ ತಿಥಿ ಮಾಡ್ತುತ್ತಿರುವಾಗ ಪಕ್ಕದಲ್ಲೇ ಇದ್ದ ಪಾಟೀಲ್ ಪುಟ್ಟಪ್ಪನವರು ಯಾಕೆ ಕನ್ನಡಿಗರ ಪರವಾಗಿ ಹೋರಾಟಕ್ಕೆ ಇಳಿಯಲಿಲ್ಲ? ಎಂ.ಇ.ಎಸ್.ನವರು ಅಟ್ಟಹಾಸ ಮಾಡುತ್ತಿದ್ದಾಗ ಅವರ ವಿರುದ್ಧ ಅನಿಲ್ ಪೋತೇದಾರ್‌ನನ್ನು ನಿಲ್ಲಿಸಿ ಅಖಿಲ ಕರ್ನಾಟಕ ಡಾ. ರಾಜ್ ಅಭಿಮಾನಿಗಳ ಸಂಘದ ಪರವಾಗಿ ಬೆಳಗಾವಿಗೆ ಹೋಗಿ ಪೋತೇದಾರ್ ಪರವಾಗಿ ಕ್ಯಾನವಾಸ್ ಮಾಡಿದ್ವಿ; ಬೆಳಗಾವ್‌ನಲ್ಲಿ ಕನ್ನಡಿಗರಿಗೆ ಆದ ನೋವಿಗೆ ಸ್ಪಂದಿಸಿದ್ವಿ. ಪಕ್ಕದಲ್ಲೇ ಇದ್ದ ಪಾಪು ಯಾಕೆ ಮೂಕರಾಗಿ ಕೂತಿದ್ದರು? ಈಗ ಜಾತಿ ಕೋಮುವಾದಿಗಳ ಪರ ಕೈ ಗೂಡಿಸಿ ಕೂಗು




ಹಾಕುತ್ತಿರುವುದು, ಅಮಾಯಕರನ್ನು ರೊಚ್ಚಿ ಗೆಬ್ಬಿಸುತ್ತಿರುವುದು ಯಾವ ನ್ಯಾಯ?

ಉತ್ತರ ಕರ್ನಾಟಕಕ್ಕೆ ಅನ್ಯಾಯ ಆದ್ರ ನಮಗೂ ಅನ್ಯಾಯ ಆದಂಗೆ. ಅವರ ಪರವಾಗಿ ಧ್ವನಿ ಎತ್ತಿ ಬೀದಿಗೆ ಬರಲು, ಅವರಿಗೆ ನ್ಯಾಯ ದೊರಕಿಸಿ ಕೊಡಲು ನಾವೂ ಕೈಜೋಡಿಸುತ್ತೇವೆ. ಸ್ವಾರ್ಥ ರಾಜಕಾರಣಿಗಳು ಬೇಡ. ಗೋಕಾಕ್ ಚಳುವಳಿಯಲ್ಲಿ ಇಡೀ ಕರ್ನಾಟಕದ ಶಕ್ತಿಯಾಗಿ ಡಾ. ರಾಜ್‌ಕುಮಾರ್ ಹೋರಾಟಕ್ಕಿಳಿಯದಿದ್ದರೆ, ಈ ಪಾಪು ಇರ್ತಿರಲಿಲ್ಲ. ಬೇರ್‍ಯಾರೂ ಉಳೀತಿರ್ಲಿಲ್ಲ. ಆದ್ರಿಂದ ಈಗ ಬೆಂಗಳೂರಲ್ಲಿ ತಜ್ಞರ ಸಮಿತಿಯ ಶಿಫಾರ್ಸಿನ ಮೇರೆಗೆ ರೈಲ್ವೆ ವಲಯ ಸ್ಥಾಪಿತವಾಗಲಿ; ಹುಬ್ಬಳ್ಳಿಗೂ ಇನ್ನೊಂದು ರೈಲ್ವೇ ವಲಯ ಸ್ಯಾಂಕ್ಷನ್ ಆಗಲಿ -ಆವೇಶ ಪೂರಿತವಾಗಿ ಸಾ.ರಾ. ಗೋವಿಂದು ಅವರು ಹೇಳುತ್ತಲೇ ಇದ್ದರು.

ಆನಂತರ ನಮ್ಮ ಬಳಿ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡದ್ದು ಕರ್ನಾಟಕ ಕನ್ನಡ ಸೇನೆಯ ಅಧ್ಯಕ್ಷರಾದ ಕೆ.ಆರ್. ಕುಮಾರ್ ಅವರು.

''ನಾವು ಸಮಗ್ರ ಕರ್ನಾಟಕ ಹಿತ ದೃಷ್ಟಿಯಿಂದ ಈ ಹೋರಾಟ ಮಾಡಿದ್ದೇವೆ. ನಮಗೆ ಹುಬ್ಬಳ್ಳಿ ಬಗ್ಗೆಯೂ ಪ್ರೀತಿ ಇದೆ. ಬೆಂಗಳೂರಿನ ಬಗ್ಗೆಯೂ



ಮಮಕಾರವಿದೆ. ಒಂದು ತಿಳಿಯಿರಿ. ತಾಂತ್ರಿಕ ವರದಿ ಆಧಾರದಿಂದ ಹುಬ್ಬಳ್ಳಿಗೇ ಆಗಿದ್ದರೆ ನಾವು ತಕರಾರು ಮಾಡುತ್ತಿರಲಿಲ್ಲ. ತಜ್ಞರ ಸಮಿತಿಯ ಶಿಫಾರಸು, ಹೈಕೋರ್ಟ್, ಸುಪ್ರೀಂ ಕೋರ್ಟ್‌ಗಳೂ ಬೆಂಗಳೂರಲ್ಲೇ ರೈಲ್ವೆ ವಲಯ ಸ್ಥಾಪಿತವಾಗಲಿ ಅಂತ ತೀರ್ಪಿತ್ತಿರುವಾಗ ಅದು ಬೆಂಗಳೂರಲ್ಲೇ ಸ್ಥಾಪಿತವಾದರೆ ತಪ್ಪೇನು? ಉತ್ತರ ಕರ್ನಾಟಕಕ್ಕೆ ಬೇಕಾದ ಸವಲತ್ತುಗಳನ್ನು ಯಾವುದೇ ಸರ್ಕಾರ ನೀಡಲಿ; ನಮಗೆ ಹೆಮ್ಮೆ ಮತ್ತು ಸಂತೋಷ ಕೂಡ.

ಒಂದು ಸರ್ಕಾರ ಮಾಡಿದ್ದು,ಇನ್ನೊಂದು ಸರ್ಕಾರ ಕೀಳುವುದಕ್ಕಿಂತ ನೀಚ ಕೆಲಸ ಮತ್ತೊಂದು ಇದೆಯೇ? ಅಸಲು ಹೆಚ್ಚುವರಿ ವಲಯ ಯಾಕೆ ಸಾಧ್ಯವಿಲ್ಲ ಹೇಳಿ? ಬಿ.ಜೆ.ಪಿ.ಗೆ ದಮ್ಮಿದ್ದರೆ ಹುಬ್ಬಳ್ಳಿಯಲ್ಲಿ ಇನ್ನೊಂದು ರೈಲ್ವೆ ವಲಯ ಸ್ಥಾಪಿಸಲಿ. ಆದರಿಂದ ಅದು ಸಾಧ್ಯವಿಲ್ಲ; ಯಾಕೆಂದ್ರೆ ಯಾವುದೇ ಒಂದು ವಿಷಯವನ್ನು ಅದು ಜ್ವಲಂತವಾಗಿ ಜೀವಂತವಾಗಿಟ್ಟು ಅದು ತನ್ನ ಬೇಳೆ ಬೇಯಿಸಿಕೊಳ್ಳಲು ನೋಡುತ್ತದೆ. ಬಾಬಾ ಬುಡನ್‌ಗಿರಿ ಮಂದಿರ, ಮಸೀದಿ, ಹುಬ್ಬಳ್ಳಿಯ ಈದ್ಗಾ ಮೈದಾನ..... ಹೀಗೆ ಯಾವುದಾದರೊಂದು ಸಮಸ್ಯೆಯನ್ನು ಹುಟ್ಟು ಹಾಕುತ್ತ ಉಪ್ಪು ಖಾರ ಹಚ್ಚಿ ಬದುಕುತ್ತಿರುವ ಬಿ.ಜೆ.ಪಿ.ಗೆ ಈಗ ರೈಲ್ವೆ ವಲಯದ ಸಮಸ್ಯೆ ಸಿಕ್ಕಿದೆ. ಉತ್ತರ ಕರ್ನಾಟಕದ ಅಮಾಯಕ ಜನ ಇಂಥ ನೀಚ, ದುಷ್ಟ, ಪುಢಾರಿ ರಾಜಕಾರಣಿಗಳ ಸಂಚಿಗೆ ಬಲಿಯಾಗದಿರಲಿ .

ಅಸ್ಖಲಿತವಾಗಿ ಹೇಳುತ್ತಲೇ ಹೋದ ಕೆ.ಆರ್. ಕುಮಾರ್ ಅವರ ಮಾತುಗಳನ್ನು ಬರೆದುಕೊಳ್ಳುತ್ತ ಕುಳಿತಿರುವಾಗ ಕನ್ನಡಿಗರ ರಕ್ಷಣಾ ವೇದಿಕೆಯ ಕೆಲ ಸದಸ್ಯರು, ಖಜಾಂಚಿಗಳು, ಕುಮಾರ್ ಹೇಳಿದ್ದನ್ನೇ ರಿಪೀಟ್ ಮಾಡಿದ್ದು ಬರೆಯುವ ಅಗತ್ಯವಿಲ್ಲೆನಿಸಿತು. ಆದರೆ, ರಾಜಕೀಯದ ಚಾರ್ಮಿಂಗ್‌ನಲ್ಲಿದ್ದು ಕನ್ನಡಪರ ಸಂಘ ಸಂಸ್ಥೆಗಳ ಜೊತೆ ಸಕ್ರಿಯವಾಗಿ ಭಾಗವಹಿಸುತ್ತ ತಮ್ಮನ್ನು ತಾವು ಗುರುತಿಸಿಕೊಂಡ ಸಿ.ನಾರಾಯಣಸ್ವಾಮಿಯವರನ್ನು ಮಾತನಾಡಿದಾಗಲೂ ಇನ್ನೊಂದು ವಾದ ನಮ್ಮ ಮುಂದೆ ಇದೆ ಅನ್ನಿಸಿತು.

'ರಾಜ್ಯಕ್ಕೆ ರೈಲ್ವೆ ವಲಯ ದಕ್ಕಲೆಂಬ ಉದ್ದೇಶದಿಂದ ಹೋರಾಟಕ್ಕಿಳಿದೆ. ನಾನು ಎಂ.ಪಿ. ಯಾಗಿದ್ದಾಗ ರಾಜ್ಯಕ್ಕೆ ರೈಲ್ವೆ ವಲಯ ಬರಲೆಂದು ಎಷ್ಟೊಂದು ಶ್ರಮಪಟ್ಟೆ ಅನ್ನೋದು ಹೇಳಿದ್ರೇ ನಿಮಗೆ ಅಚ್ಚರಿಯಾಗುತ್ತೆ. ಆದರೆ ಇಷ್ಟೊಂದು ವರ್ಷ ಹೋರಾಟ ಮಾಡಿದಾಗ್ಯೂ ರಾಜ್ಯಕ್ಕೆ ರೈಲ್ವೆ ವಲಯ ದಕ್ಕಲಿಲ್ಲ. ದೇವೇಗೌಡರು ಪ್ರಧಾನಿಯಾದಾಗ ಅದು ಸ್ಯಾಂಕ್ಷನ್ ಆಯಿತು. ಅದ್ಕೆ ನಾವೆಲ್ಲ ಹೆಮ್ಮೆ ಪಡಬೇಕು. ನನಗನ್ನಿಸುತ್ತೆ, ಬೆಂಗಳೂರಿನಲ್ಲಿರುವಂತೆ ಹುಬ್ಬಳ್ಳಿಯಲ್ಲೂ ದೊಡ್ಡ ಕಚೇರಿಗಳೂ, ಇನ್ನೊಂದು ವಲಯವೂ ಅಲ್ಲೇ ಸ್ಥಾಪಿತವಾಗಬೇಕು. ಯಾಕೆ ಆಗ್ಬಾರ್‍ದು ಹೇಳಿ?

ಆದ್ರೆ ಇಲ್ಲಿಗೆ ಆಗಿದ್ದನ್ನು ಕಿತ್ತುಕೊಳ್ಳುವುದು ಸರಿಯಲ್ಲ. ಇಲ್ಲಿನ ಕನ್ನಡ ಪರ ಸಂಘ ಸಂಸ್ಥೆಗಳು ಇದಕ್ಕಾಗಿ ಬೆವರಲ್ಲ, ನೆತ್ತರು ಸುರಿಸಿವೆ. ಅದ್ನ ನಾವು ಗಮನಿಸ್ಬೇಕು. ಇಲ್ಲಿಗೆ ಬಂದ ರೈಲ್ವೆ ವಲಯ ಹುಬ್ಬಳ್ಳಿಗೆ ಹೋಗ್ಬಾರ್ದೂಂತ ರಿಟ್ ಹಾಕಿದ್ದು ಈ ಕಾರಣಕ್ಕೆ. ಅದ್ನ ಹಿಂದೆಗೆದುಕೊಳ್ಳುವ ಯೋಚ್ನೆಯೇ ಇಲ್ಲ' ಎಂದರು ಸಿ.ನಾರಾಯಣಸ್ವಾಮಿ.

■ಎಂ. ಮಹ್ಮದ್ ಬಾಷ ಗೂಳ್ಯಂ

ಕಿವಿ ಮಾತು

■ ಅರಿಶಿನದ ಕೊಂಬು ಮತ್ತು ನೆಲ್ಲಿ ಚೊಟ್ಟು, ಸಮತೂಕ ತೆಗೆದುಕೊಂಡು ಕುಟ್ಟಿ ಪುಡಿ ಮಾಡಿ. ಈ ಪುಡಿಯನ್ನು ಬಟ್ಟೆ ಮೂಲಕ ಶೋಧಿಸಿ, ದಿನಕ್ಕೆರಡು ಸಲ ಒಂದು ಟೀ ಚಮಚ ಚೂರ್ಣವನ್ನು ಬಿಸಿ ನೀರಿನೊಂದಿಗೆ ಸೇವಿಸುತ್ತಿದ್ದರೆ ಅರಿಶಿನ ಕಾಮಾಲೆ ರೋಗದಲ್ಲಿ ಗುಣ ಕಂಡು ಬರುವುದು.

■ ಏಲಕ್ಕಿ, ಓಮ, ಜಾಯಿಕಾಯಿ, ಅತಿ ಮಧುರ, ಜಾಯಿಪತ್ರೆ- ಇವುಗಳನ್ನು ತಲಾ ಹದಿನೈದು ಗ್ರಾಂ. ತೆಗೆದುಕೊಳ್ಳಿ. ಕೆಂದಳೆ ನೀರನ್ನು ಅದರ ಕಣ್ಣು ಭಾಗದಲ್ಲಿ ಕೊಚ್ಚಿ, ಈ ವಸ್ತುಗಳನ್ನೆಲ್ಲಾ ಹಾಕಿ ಮುಚ್ಚಿಬಿಡಿ. ಎಳೆನೀರು ಹಿಡಿಸುವಂಥ ಮಡಿಕೆಯಲ್ಲಿ ನೀರು ಹಾಕಿ ಮುಳುಗಿಸಿ, ಒಲೆ ಹಚ್ಚಿ ಮಡಿಕೆಯ ನೀರು ಇಂಗುವವರೆಗೆ ಕಾಯಿಸಿ. ಬಳಿಕ ಎಳನೀರಿನ ಮುಚ್ಚಳ ತೆಗೆದು, ಹಾಕಿದ್ದ ಪದಾರ್ಥಗಳನ್ನು ಎಳನೀರನ್ನೇ ಹಾಕಿಕೊಂಡು ಚೆನ್ನಾಗಿ ಅರೆಯಿರಿ. ಇದನ್ನು ದಿನಕ್ಕೆ ಆರು ಸಲದಂತೆ ಮೂರು ದಿನ ಕೊಡಿ.

■ ಒಂದು ಭಾಗ ನೀರು, ನಾಲ್ಕು ಭಾಗ ನಿಂಬೆರಸ ಬೆರೆಸಿ ಆಗಾಗ ಕುಡಿಯುತ್ತ ಬಂದರೆ ರೋಗ ಗುಣವಾಗುತ್ತದೆ. (ಆದರೆ ದಿನಕ್ಕೆ ಆರರಿಂದ ಎಂಟು ನಿಂಬೆಹಣ್ಣಿನ ರಸ ಹೊಟ್ಟೆಗೆ ಹೋಗಬೇಕು.

■ಕಾಮಾಲೆ ರೋಗ ಬರದಂತೆ ತಡೆಯಲು ನಾವು ಉಪಯೋಗಿಸಲೇಬೇಕಾದ ತರಕಾರಿಗಳಿವು: ಕ್ಯಾರೆಟ್, ಈರುಳ್ಳಿ, ಮೂಲಂಗಿ, ಬಸಳೆಸೊಪ್ಪು, ಅವರೇಕಾಯಿ, ಕೋಸುಗಡ್ಡೆ, ಬಾಳೆದಿಂಡು, ದಿನ ಬಿಟ್ಟು ದಿನ ಇವುಗಳಲ್ಲಿ ಯಾವುದಾದರೊಂದನ್ನು ತಪ್ಪದೆ ಬಳಸುತ್ತಿದ್ದರೆ ಕರುಳು ಬಲಗೊಂಡು, ಕಾಮಾಲೆಯನ್ನು ತಡೆಗಟ್ಟಲು ಸಾಧ್ಯ.

ರೈಲ್ವೆ ವಲಯ ಕಚೇರಿ ವಿವಾದ

ಹುಬ್ಬಳ್ಳಿ ಭಾವನೆ

ಪ್ರಶ್ನೆಗಳು

- ಕರ್ನಾಟಕಕ್ಕೊಂದು ಪ್ರತ್ಯೇಕ ರೈಲ್ವೆ ವಲಯ ಬೇಕೆ?
- ನೈರುತ್ಯ ರೈಲ್ವೆ ವಲಯ ಕಾರ್ಯಾಲಯವನ್ನು ಬೆಂಗಳೂರಿಗೆ ಕೊಟ್ಟದ್ದು ಸರಿಯೇ?
- ನೈರುತ್ಯ ರೈಲ್ವೆ ವಲಯ ಕಾರ್ಯಾಲಯ ಹುಬ್ಬಳ್ಳಿಗೆ ಏಕೆ ಬೇಕು?
- ಹುಬ್ಬಳ್ಳಿಗೇ ಇನ್ನೊಂದು ರೈಲ್ವೆ ವಲಯ ಸೃಷ್ಟಿ ಅಗತ್ಯವೇ? ಸಾಧ್ಯವೇ?



ಮದನ್ ಬಿ. ದೇಸಾಯಿ

ಹುಬ್ಬಳ್ಳಿಯ ಖ್ಯಾತ ಉದ್ಯಮಿ ಹಾಗೂ ಕಾರ್ಯದರ್ಶಿ, ಕರ್ನಾಟಕ ವಾಣಿಜ್ಯೋದ್ಯಮ ಮಂಡಳಿ, ಹುಬ್ಬಳ್ಳಿ.

1. ರಾಷ್ಟ್ರದ ಆರ್ಥಿಕ ಪ್ರಗತಿಯ ಜೊತೆಗೆ ಕರ್ನಾಟಕದ ಪ್ರಗತಿಯನ್ನು ಸಾಧಿಸಲು, ಪರಪ್ರಾಂತೀಯರ ಹಿಡಿತದಿಂದ ರಾಜ್ಯವನ್ನು ಬಿಡುಗಡೆಗೊಳಿಸಲು, ನಮ್ಮ ಸಂಪನ್ಮೂಲಗಳ ಗರಿಷ್ಠ ಉಪಯೋಗ ಪಡೆಯಲು, ದಕ್ಷಿಣ ಮಧ್ಯ ರೈಲ್ವೆ ಯಿಂದ ಸ್ವತಂತ್ರಗೊಳ್ಳಲೇಬೇಕು.


2. ಅಲ್ಲ. ಅದು ಉತ್ತರ ಕರ್ನಾಟಕದ ಹಕ್ಕು ಎಂಬುದನ್ನು ಒಪ್ಪಿ, ಶಿಫಾರಸು ಮಾಡಿ ಹಿಂದೆಗೆದುದು ರಾಜಕೀಯ ಕಾರಣಗಳಿಂದ ಪ್ರೇರಿತ. ಬೆಂಗಳೂರು ರಾಜ್ಯದ ನೈರುತ್ಯಕ್ಕಿಲ್ಲ.

3. ಹುಬ್ಬಳ್ಳಿಯಲ್ಲಿ ಬೃಹತ್ ರೈಲ್ವೆ ಕಾರ್ಯಾಲಯವಿದೆ; 40-50ರ ಎಕರೆ ಸ್ಥಳ ಲಭ್ಯವಿದೆ. ಸ್ಥಳೀಯ ಖರೀದಿಗಳಿಗಾಗಿ ವಲಯ ಕಾರ್ಯಾಲಯ ಬೇಗನೇ ನಿರ್ಧರಿಸಬಹುದು; ಉದ್ಯೋಗಾವಕಾಶ ಹೆಚ್ಚುವುದು; ಜನರಲ್ ಮೋಟಾರ್ಸ್‌ನ ವ್ಯವಸ್ಥಾಪಕ ನಿರ್ದೇಶಕರು ಭಾರತೀಯರಾಗಿದ್ದು ಹುಬ್ಬಳ್ಳಿಯ ಆಯ್ಕೆಯನ್ನು ಅನುಮೋದಿಸಿದ್ದಾರೆ. ನಾವು ಧಾರವಾಡದ ವಿರುದ್ಧವಿಲ್ಲ. ಈಗ ಅಲ್ಲಿ ವಲಯ ಕಛೇರಿಯ ಸ್ಥಳಕ್ಕಾಗಿ ಪರಿಶೀಲನೆ ನಡೆದಿದೆ. ಆದರೂ ಉದ್ಯಮ ನಗರ ಹುಬ್ಬಳ್ಳಿ ಸೂಕ್ತ ಆಯ್ಕೆ ಎಂದು ಭಾವಿಸುತ್ತೇನೆ. ಕಬ್ಬಿಣ, ಅದಿರು, ಕಾಕಿನಾಡ ಬಂದರಿನಿಂದ ಸಾಗಾಟವಾದರೆ ಹಣ, ಶ್ರಮ ಎರಡೂ ಉಳಿತಾಯ. ಕೊಂಕಣ ರೈಲ್ವೆಗೆ ಸೇರುವ ಹುಬ್ಬಳ್ಳಿ- ಅಂಕೋಲಾ ರೈಲು ಇದಕ್ಕೆ ಪೂರಕ. ಈಗಿನ ಕೊಂಕಣ ಸುತ್ತಿ ಮೈಲಾರ ಸೇರುವ ಸ್ಥಿತಿ ಹಾಸ್ಯಾಸ್ಪದ.

4. ಅಗತ್ಯವೂ ಇಲ್ಲ, ಸದ್ಯ ಆರ್ಥಿಕವಾಗಿ ಸಾಧ್ಯವೂ ಇಲ್ಲ. ನ್ಯಾಯಾಲಯ ಸೇರಿದ ನಂತರ ಈ ವಿಷಯ ಶೀತ ಕೊಠಡಿ ಸೇರಿ ಬಿಟ್ಟಂತಾಗಿದೆ.

ಮಹೇಂದ್ರ ಎಚ್. ಸಿಂಘಿ

ಅಧ್ಯಕ್ಷ, ರೈಲು ಪ್ರವಾಸಿ ಸೇವಾ ಸುಧಾರಣಾ ಸಮಿತಿ, ಮಾಜಿ ಸದಸ್ಯ, ವಲಯ ರೈಲು ಪ್ರಯಾಣಿಕರ ಸಲಹಾ ಸಮಿತಿ.



1. ಅತಿ ಅವಶ್ಯ. ಹೈದರಾಬಾದ್-ಮದ್ರಾಸುಗಳ, ತೆಲುಗು ಹಾಗೂ ತಮಿಳರ ದಬ್ಬಾಳಿಕೆಯಿಂದ ಮುಕ್ತರಾಗಲು ಕರ್ನಾಟಕದ ಸಮಗ್ರ ರೈಲು ಅಭಿವೃದ್ಧಿಗಾಗಿ.


2. ದೊಡ್ಡ ತಪ್ಪು. ಪ್ರಾದೇಶಿಕವಾಗಿ ಪಕ್ಷ ರಾಜಕಾರಣಗಳ ಹಳದಿ ದೃಷ್ಟಿಯ ಪರಿಣಾಮವಿದು. ಬೆಂಗಳೂರಿನಲ್ಲಿ ಈಗಲೇ ಇರುವ ಮಾಲಿನ್ಯದ ಕಲ್ಪನೆ ಇವರಿಗಿದ್ದಂತಿಲ್ಲ.

3. ಮಹಾರಾಷ್ಟ್ರದಿಂದ 200, ಆಂಧ್ರದಿಂದ 200, ಗೋವಾದಿಂದ 160ಕಿ.ಮೀ. ಅಂತರ ವಿರುವ ಹುಬ್ಬಳ್ಳಿ ಸರ್ವವಿಧದಲ್ಲಿ ಸೂಕ್ತ ಆಯ್ಕೆ. ಕಬ್ಬಿಣ ಅದಿರು ಸುಲಭವಾಗಿ ಕಡಿಮೆ ಖರ್ಚಿನಲ್ಲಿ ಸಾಗಾಟ ಆಗಲು ಸಾಧ್ಯ. ಹುಬ್ಬಳ್ಳಿ ಧಾರವಾಡ ಗಳಲ್ಲಿ ಸಾಕಷ್ಟು ಮೂಲ ಸೌಲಭ್ಯಗಳಿವೆ. ಎಲ್ಲಾದರೂ ಸರಿ. ಉತ್ತರ ಕರ್ನಾಟಕದ ಅಭಿವೃದ್ಧಿ ವಂಚಿತವಾಗಿದೆ. ಈ ವಲಯ ನಮಗೆ ಸ್ವಲ್ಪ ವಾದರು ಸಮಾಧಾನ ತರಬಲ್ಲದು.

4. ಅದೊಂದು ರಾಜಕೀಯ ಮಾತು ಹಾಗೆ ಅವ್ಯವಹಾರಿಕ. ಹುಬ್ಬಳ್ಳಿಗೇ ವಲಯ ಶಿಫಾರಸು ಮಾಡಿ ಹಿಂದೆಗೆದದ್ದೂ, ಹದಿಮೂರು ತಿಂಗಳು ವ್ಯರ್ಥ ಕಳೆದುದ್ದು ಎರಡೂ ರಾಜಕೀಯ ಪ್ರೇರಿತ. ಆದರೂ ಎಲ್ಲವೂ ಸುಖಾಂತವಾಗುವುದೆಂದು ನನ್ನ ಆತ್ಮ ಹೇಳುತ್ತದೆ.

ಡಾ. ಅ.ವೆಂ. ಹುಯಿಲಗೋಳ್

ಕಾರ್ಯದರ್ಶಿ, ನಾಗರಿಕರ ವೇದಿಕೆ ಹುಬ್ಬಳ್ಳಿ, ಸಂಪಾದಕ, ಜಾಗೃತ ನಾಗರಿಕ ಮಾಸಪತ್ರಿಕೆ.



1. ಬೇಕೇ ಬೇಕು. ದಕ್ಷಿಣ ಮಧ್ಯರೈಲ್ವೆಯಲ್ಲಿಯ ತೆಲುಗರ ಕಪಿಮುಷ್ಟಿಯಿಂದ ಪಾರಾಗಲೇ ಬೇಕಿದೆ. ಗುಂತಕಲ್‌ನಿಂದ ಹೊಸಪೇಟೆಯವರೆಗೆ ಹುಬ್ಬಳ್ಳಿಗೆ ನೀಡಿ, ಹೊಸಪೇಟೆಯು ಅದಿರು ಸಾಗಾಟವನ್ನು ಸಿಕಂದರಾಬಾದ್‌ಗೆ ಸ್ಥಳಾಂತರಿಸಲಾಗಿದೆ. ಪುಣೆ-ಕೊಲ್ಹಾಪುರ ಮಾರ್ಗವನ್ನು ಕೇಂದ್ರ ರೈಲ್ವೆಗೆ ವರ್ಗಾಯಿಸುವ ಹುನ್ನಾರ ನಡೆದಿದೆ. ಹುಬ್ಬಳ್ಳಿ ಯಿಂದ ಕುಂದಗೋಳ್ ಕಡೆಗಿನ ದಾರಿಯಲ್ಲಿ

ಹುಬ್ಬಳ್ಳಿಯ Outer signal ನಂತರ ದಕ್ಷಿಣ ರೈಲ್ವೆ ಅದಿಪತ್ಯ. ಉಳಿದುದು ಹಾನಿಕಾರಕವಾದ ವಿಜಾಪುರ, ಮಿರಜ್ ಇತ್ಯಾದಿ. ಒಟ್ಟಿನಲ್ಲಿ ಕರ್ನಾಟಕಕ್ಕೆ ಹೊಸ ರೈಲು ವಲಯ ಆರ್ಥಿಕವಾಗಿ ಲಾಭದಾಯಕವಲ್ಲ ಎಂದು ಸಿದ್ಧಪಡಿಸುವ ನಾಟಕ! ಇದನ್ನು ಬಯಲುಗೊಳಿಸಬೇಕಿದೆ.

2. ದೊಡ್ಡ ಮೋಸ. 1996ರ ರಾಜ್ಯೋತ್ಸವ ದಂದು ದೇವೇಗೌಡರು ಅನಾವರಣಗೊಳಿಸಿದ್ದು ಕೇವಲ ಫಲಕ. ಆಗ ಆ ವಿಷಯ ರಾಜ್ಯಪತ್ರದಲ್ಲಿಯೂ ಬೆಳಕು ಕಂಡಿರಲಿಲ್ಲ. ನಾಗರಿಕ ವೇದಿಕೆ ಮತ್ತು ಅನೇಕ ಗಣ್ಯರು ಈ ವಿಷಯದ ರಿಟ್ ಸಲ್ಲಿಸಿದಾಗ ರಾಜ್ಯ ಶ್ರೇಷ್ಠ ನ್ಯಾಯಾಲಯ 17.2.98ರಂದು ನಿರ್ಣಯವಿತ್ತು-ಕೇಂದ್ರ ಸರಕಾರ ತನ್ನ ಉತ್ತರ ಕೂಡ ಸಲ್ಲಿಸದಿದ್ದರಿಂದ ಹಾಗೂ ವಲಯ ಸ್ಥಾಪನೆಯಲ್ಲಿ ಯಾವ ಕ್ರಮಗಳನ್ನು ಕೈಗೊಳ್ಳದಿದ್ದರಿಂದ ತಡೆ ಯಾಜ್ಞೆಗೆ ಅವಕಾಶವಿಲ್ಲ ಎಂದಿತು. ಮುಂದೆ ಈ ವಿಷಯ ಮುಂದುವರೆದರೆ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಬಹುದೆಂದು ತಿಳಿಸಿತು.

3. ಇದಕ್ಕೆ ಪುರಾವೆಗಳಿವೆ. ಹಿಂದಿನ ರೈಲ್ವೆ ಮಂತ್ರಿ ಕಲ್ಮಾಡಿಯವರು ಹುಬ್ಬಳ್ಳಿಗೆ ನೈರುತ್ಯ ವಲಯ ಕೊಡಲು ನಿರ್ಧರಿಸಿ, ಚುನಾವಣೆ ಸಂಹಿತೆ ಉಲ್ಲಂಘನೆ ತಪ್ಪಿಸಲು ಅದನ್ನು ಘೋಷಿಸು ವುದಿಲ್ಲವೆಂದು ಹೇಳಿದ್ದು Deccan Heraldಲ್ಲಿ ಬೆಳಕು ಕಂಡಿದೆ (ಮಾರ್ಚ್ 1996). ಆಗಿನ ಮುಖ್ಯಮಂತ್ರಿ ದೇವೇಗೌಡರು ಹುಬ್ಬಳ್ಳಿಯ ಹೆಸರಿಗೆ ಒಪ್ಪಿಗೆ ಸೂಚಿಸಿ ರೈಲ್ವೆ ಮಂತ್ರಿಗೆ ಬರೆದ ಪತ್ರವೂ ಪತ್ರಿಕೆಗಳಲ್ಲಿ ಬಂದಿದೆ (ಇವುಗಳನ್ನು ಮಾನ್ಯ ಶ್ರೇಷ್ಠ ನ್ಯಾಯಾಲಯದ ಗಮನಕ್ಕೆ ತರಲಾಗಿದೆ). ಆದರೆ ಜೂನ್ 1996ರಲ್ಲಿ ತಾಂತ್ರಿಕ ಕಾರಣಗಳಿಗಾಗಿ ಬೆಂಗಳೂರಿಗೆ ವರ್ಗಾವಣೆ ಗೊಂಡ ವಲಯ ಕಾರ್ಯಾಲಯ ಇಲ್ಲಿ ಗೊಂದಲ ಹುಟ್ಟಿಸಿದಾಗ ತೆರಳಿದ ನಿಯೋಗಕ್ಕೆ ಯಾವ ತಾಂತ್ರಿಕ ಕಾರಣಗಳೂ ಕಂಡು ಬರಲಿಲ್ಲ!

ಹುಬ್ಬಳ್ಳಿ-ಧಾರವಾಡ ಮಹಾನಗರ ಪ್ರಮುಖ ವಾಣಿಜ್ಯ ಕೇಂದ್ರ. ರೈಲ್ವೆಗೆ ಸೇರಿದ ಸಾಕಷ್ಟು ಖಾಲಿ ಜಾಗ ಇಲ್ಲಿ ಲಭ್ಯವಿರುವಾಗ ರೂ. 400 ರಿಂದ ರೂ. 500 ಕೊಟ್ಟು ಒಂದು ಚದರ ಗಜ ಭೂಮಿಯನ್ನು ಬೆಂಗಳೂರಿನಲ್ಲಿ ಖರೀದಿಸುವ ಜಾಣತನ ಎಂಥದು? ಹುಬ್ಬಳ್ಳಿ - ಅಂಕೋಲಾ ರೈಲು ಮಾರ್ಗ ಘೋಷಿಸಿದರಂತೂ ನಮ್ಮ ಭಾಗ್ಯದ ಬಾಗಿಲು ತೆರೆಯುತ್ತದೆ! ಆದರೆ ಒಲ್ಲದ ಗಂಡನಿಗೆ ಮೊಸರಲ್ಲು ಕಲ್ಲು ಎಂಬ ಸ್ವಭಾವಕ್ಕೆ ಏನು ಔಷಧ?

4. ಅದೊಂದು ಮೂರ್ಖತನ. ಕೇವಲ ಮೀಟರ್ ಗೇಜ್ ಇರುವ ಹಾಜೀಪುರ್ (ಬಿಹಾರ) ಕ್ಕೆ ರಾಜಕೀಯ ಕಾರಣಗಳಿಗಾಗಿ ವಲಯ ಘೋಷಿಸಿಲ್ಲವೇ? 'ಜೀಹಾ ಜೀಹಾ' ಎನ್ನುತ್ತಾ ಹೋದರೆ 'ಹಾಜಿ' ಆಗುತ್ತದೆ! ಜಬಲ್‌ಪುರ್‌ಗಿಂತಲೂ ಬಿಲಾಸಪುರ್ ಹೆಚ್ಚು ಲಾಭದಾಯಕವಾಗಿದೆ ಎಂದರೆ ನಂಬಲಾಗುವುದಿಲ್ಲ ಅಲ್ಲವೇ? ಆದುದರಿಂದ ಕಾಗದದ ಮೇಲಿನ ತರ್ಕಕ್ಕಿಂತ ಹುಬ್ಬಳ್ಳಿಗೆ ಧಾರವಾಡಕ್ಕೆ ವಲಯ ಕಾರ್ಯಾಲಯ ಸೃಷ್ಟಿಸಲಿ. ಅದು ತಂತಾನೇ ಯಶಸ್ವಿಯಾಗುತ್ತದೆ.

ಇಂದೇ (10.6.99) ಇನ್ನೊಂದು ರಿಟ್ ದಾಖಲಿಸಿದ್ದೇನೆ. ಈ ಮೊದಲೇ ಮಾನ್ಯ ಶ್ರೇಷ್ಠ ನ್ಯಾಯಾಲಯ ಹೀಗೆ ಮಾಡುವುದಕ್ಕೆ ಅನುಮತಿ ನೀಡಿದೆ. Let us wait and watch!

■ ಡಾ. ಟಿ. ಕೆ.ತಾಪಸ್

ರಷ್ಯಾದಲ್ಲಿ ಬುದ್ಧಿಜೀವಿಗಳ ಹಾಹಾಕಾರ

ಸೋವಿಯತ್ ಯೂನಿಯನ್ ಛಿದ್ರಗೊಂಡ ಮೇಲೆ ಅಸ್ತಿತ್ವಕ್ಕೆ ಬಂದ ಆಧುನಿಕ ರಷ್ಯಾದ ಇಂದಿನ ಸ್ಥಿತಿ ಹೀನಾಯವಾಗಿದೆ. ಕುಂದುತ್ತಿರುವ ಜನಪ್ರಿಯತೆ ಸರ್ಕಾವನ್ನೊಂದೆಡೆ ಧೃತಿಗೆಡಿಸುತ್ತಿದ್ದರೆ ಪಾತಾಳಕ್ಕಿಯುತ್ತಿರುವ ಆರ್ಥಿಕ ಸ್ಥಿತಿ ದೇಶವನ್ನು ಬುಡಮೇಲು ಮಾಡುತ್ತಿದೆ. ಇವೆರಡೂ ನಾವು ಸಾಮಾನ್ಯವಾಗಿ ಕೇಳುತ್ತಿರುವ ವಿಷಯಗಳು. ಇದಕ್ಕಿಂತ ಪ್ರಮುಖ ವಿಷಯವೊಂದಿದೆ. ಅದೆಂದರೆ ಇಲ್ಲಿ ಬುದ್ಧಿಜೀವಿಗಳ ಹಾಹಾಕಾರವೆದ್ದಿರುವುದು..!

ನಂಬಿದರೆ ನಂಬಿ.. ಬಿಟ್ಟರೆ ಬಿಡಿ. ವಿಶ್ವದ 'ಸೂಪರ್ ಪವರ್' ಎನಿಸಿದ್ದ ಮಾಜಿ ಸೋವಿಯತ್ ಗಣರಾಜ್ಯದ ನ್ಯೂಕ್ಲಿಯರ್ ಟೆಕ್ನಾಲಜಿಯಲ್ಲಿ ಡಾಕ್ಟರೇಟ್ ಮುಗಿಸಿರುವ ವಿಜ್ಞಾನಿಯೊಬ್ಬ ಇಂದು ತನ್ನ ಹೊಟ್ಟೆಪಾಡಿಗಾಗಿ ಟ್ಯಾಕ್ಸಿ ಓಡಿಸುತ್ತಾನೆ. ಮೆಟಲರ್ಜಿ ಪೆಟ್ರೋಲಿಯಂ ಎಂಜಿನಿಯರಿಂಗ್, ಸೂಪರ್ ಕಂಡಕ್ಟಿವಿಟಿ, ಲೇಸರ್ ಸಂಶೋಧನೆ, ಬಾಹ್ಯಾಕಾಶ ಎಂಜಿನಿಯರಿಂಗ್ ಈ ವಿಭಾಗಗಳಲ್ಲಿ ಉನ್ನತ ಸಂಶೋಧನೆ ಮಾಡಿದ ವಿಜ್ಞಾನಿಗಳ ಸ್ಥಿತಿ ಕೂಡ ಇದಕ್ಕಿಂತ ಭಿನ್ನವಾಗಿಲ್ಲ. ಟ್ಯಾಕ್ಸಿ ಓಡಿಸಿ ಅಥವಾ ಇನ್ನ್ಯಾವುದೋ ದಾರಿಯಲ್ಲಿ ಅವರು ತಮ್ಮ ಹೊಟ್ಟೆ ತುಂಬಿಸಿಕೊಳ್ಳಬೇಕಾಗಿದೆ.

ಪರಮಾಣು ಶಸ್ತ್ರಾಸ್ತ್ರಗಳ ಮಹಾನ್ ಉಗ್ರಾಣವೆನಿಸಿದ ದೇಶದಲ್ಲಿ ವಿಜ್ಞಾನ, ತಂತ್ರಜ್ಞಾನಕ್ಕೆ ವಿಪರೀತ ಪ್ರೋತ್ಸಾಹ ಸಿಗುತ್ತಿತ್ತು. ದೇಶ ಕೂಡ ಅಷ್ಟೇ ಪ್ರಗತಿಯನ್ನೂ ಸಾಧಿಸಿತು. ಅವರೆಲ್ಲ ಅಂದಿನ ದಿನಗಳಲ್ಲಿ ದೇಶದ ತಂತ್ರಜ್ಞಾನ ಮತ್ತು ಕೈಗಾರಿಕಾ ಸಾಧನೆಗಳ ರೂವಾರಿಗಳಾಗಿದ್ದವರು. ಅಂದಿನ ಸ್ಥಿತಿ ಇಂದಿಲ್ಲ. ಅಕ್ಷರಷಃ ಅಲ್ಲಿ ಪ್ರಬುದ್ಧ ಬುದ್ಧಿಜೀವಿಗಳ ಹಾಹಾಕಾರವೆದ್ದಿದೆ. ಹಾಗೆಂದು ಅಂಥ ವಿಜ್ಞಾನಿಗಳಿಗೆಲ್ಲ ಏನೂ ಸಾಧಿಸಲು ಸಾಧ್ಯವೇ ಇಲ್ಲವೆಂಬಂತಹ ವಾತಾವರಣವಿದೆಯೆಂದೇನೂ ಅಲ್ಲ. ಇದೆ! ಆದರೆ ಅವರು ಇಂಗ್ಲೆಂಡ್ ಅಥವಾ ಅಮೇರಿಕಾಕ್ಕೆ

ಒಂದು ಕಾಲಕ್ಕೆ ದೇಶದ ಪ್ರತಿಷ್ಠಿತ ವಿಜ್ಞಾನಿಗಳಾಗಿದ್ದವರು ರಷ್ಯಾದಲ್ಲಿಂದು ಬೀದಿಪಾಲು. ಹೊಟ್ಟೆಪಾಡಿಗಾಗಿ ಟ್ಯಾಕ್ಸಿ ನಡೆಸಬೇಕಾಗಿದೆ. ಒಂದೆಡೆ ಬೇರೆ ದೇಶಗಳಿಗೆ ಹೀನಾಯಮಟ್ಟದ ಸಂಬಳದ ಮೇಲೆ ತೆರಳುವವರು ಕೆಲವರು. ಇನ್ನು ಕೆಲವರು ಮನೆಯಲ್ಲೇ ಕುಳಿತು ಇಂಟರ್‌ನೆಟ್ ಮೂಲಕ ಅಮೇರಿಕಾದ ತಂತ್ರಜ್ಞಾನದ ಸಮಸ್ಯೆಗೆ ಉತ್ತರ ಸೂಚಿಸಿ ಕೆಲವೇ ನೂರು ಡಾಲರ್ ಹಣ ಪಡೆಯುತ್ತಾರೆ. ಅಮೇರಿಕಾ ಇದರಿಂದ ಕೋಟ್ಯಂತರ ಡಾಲರ್ ಲಾಭ ಮಾಡಿಕೊಳ್ಳುತ್ತಿದೆ.

■ ಗಣೇಶ್ ಯಲ್ಲಾಪುರ

ಹೋಗಬೇಕು. ಹಾಗೆಂದು ಎಲ್ಲರನ್ನೂ ಆ ದೇಶಗಳೇನೂ ಸ್ವೀಕರಿಸುವುದಿಲ್ಲ. ರಷ್ಯದ ಹೆಚ್ಚು ಬುದ್ಧಿವಂತ ವಿಜ್ಞಾನಿಗಳನ್ನು ಆಕರ್ಷಿಸಲು, ತಮ್ಮ ದೇಶಕ್ಕೆ ಕರೆದೊಯ್ಯುವ ದೃಷ್ಟಿಯಿಂದ ಪಾಶ್ಚಿಮಾತ್ಯ ದೇಶಗಳು ಕೆಲವು ಕಾರ್ಯಕ್ರಮ ಹಾಕಿಕೊಂಡಿವೆ. ಅಮೇರಿಕ ಸರಕಾರ ಪ್ರಿನ್ಸ್‌ಟನ್ ಯೂನಿವರ್ಸಿಟಿ ಮತ್ತು ಸ್ಯಾಂಡಿಯಾ ನ್ಯಾಷನಲ್ ಲ್ಯಾಬೋರೇಟರಿಗಳಿಗೆ ಈ ದೃಷ್ಟಿಯಿಂದ ಹತ್ತು ಮಿಲಿಯನ್ ಡಾಲರ್‌ಗಳ ನೆರವು ನೀಡಿದೆ. ರಷ್ಯಾದ ಪರಮಾಣು ವಿಜ್ಞಾನಿಗಳು ಇದರ ಲಾಭ ಪಡೆಯಲಿದ್ದಾರೆ.

ರಷ್ಯಾದ ಬುದ್ಧಿಜೀವಿಗಳ ಮಾರುಕಟ್ಟೆ ಅದರಲ್ಲೂ ವಿಶೇಷವಾಗಿ 'ಪರಮಾಣು ವಿಜ್ಞಾನಿಗಳ ಮಾರಾಟ ಮಳಿಗೆ' ಕೇವಲ ಅಮೇರಿಕವನ್ನೊಂದನ್ನೇ ಅಲ್ಲ. ಇರಾನ್ ಮತ್ತು ಉತ್ತರ ಕೊರಿಯಾಗಳಂತಹ ದೇಶಗಳನ್ನು ಆಕರ್ಷಿಸುತ್ತಿದೆ. ಇದರಲ್ಲಿಯೂ ಒಂದು ರಾಜಕೀಯವಿದೆ. ಅಂತಹ ತಂತ್ರಜ್ಞಾನವನ್ನು ಮಾರುಕಟ್ಟೆಯಲ್ಲಿ ತನ್ನಂತೆ ಇತರರು ಪಡೆಯುವುದನ್ನು ಅಮೇರಿಕ ಸಹಿಸದಿರವುದು ಅಚ್ಚರಿಪಡುವಂಥದ್ದೇನಲ್ಲ. ಪರಮಾಣು ವಿಜ್ಞಾನಿಗಳನ್ನು ತಾವು ಮಾತ್ರ ಆಮದು ಮಾಡಿಕೊಳ್ಳುವ ಒಪ್ಪಂದಕ್ಕೆ ಅಮೇರಿಕಾದ ವಿದೇಶಾಂಗ ಕಾರ್ಯದರ್ಶಿ ಬಿಲ್ ರಿಚರ್ಡ್ಸನ್ ಸಹಿ ಹಾಕಿಯೂ ಆಗಿದೆ.

'ಹಣದ ಸಮಸ್ಯೆಯಿಂದ ರಷ್ಯದ ವಿಜ್ಞಾನಿಗಳು ಇರಾನ್ ಮತ್ತು ಉ.ಕೊರಿಯಾಗಳಿಗೆ ಹೋಗುವುದನ್ನು ನಾವು ಹೇಗೆ ಸಹಿಸಬಲ್ಲೆವು?' ಎನ್ನುತ್ತಾರೆ. ರಿಚರ್ಡ್ಸನ್. ತನ್ನ ಪರಮಾಣು ಶಕ್ತಿ ವಿಭಾಗಕ್ಕೆ ರಷ್ಯ ಒಟ್ಟು 45,000 ಉದ್ಯೋಗಗಳನ್ನು ನಿಗಧಿಪಡಿಸಿದೆ. ಅಷ್ಟು ಉದ್ಯೋಗಿಗಳನ್ನು ಸಾಕುವುದೂ ಅದಕ್ಕೆ ಅನಾನುಕೂಲಕರವೇ! ಉಳಿದ ವಿಜ್ಞಾನಿಗಳಲ್ಲಿ ಬುದ್ಧಿವಂತರುಗಳನ್ನು ಅಮೇರಿಕ ಸ್ವೀಕರಿಸುತ್ತದಾದರೂ ಅವರ ಹಾದಿ ಕೂಡ ಅಷ್ಟೆ ದುರ್ಗಮ. ಏಕೆಂದರೆ ರಷ್ಯದ ವಿಜ್ಞಾನಿಗಳಿಗೆ ಅಮೇರಿಕ ನೀಡುವುದು ಕಡಿಮೆ ಸಂಬಳ. ಅಲ್ಲದೇ ದೇಶದ ವಿಜ್ಞಾನಿಗಳಿಗೂ ತಾವು ಮೋಸ ಹೋದ ಭಾವನೆ ಉಂಟಗುವುದು ಸಹಜ. ದೇಶದಲ್ಲಿರುವ ವಿಜ್ಞಾನಿಯ ಸಹಪಾಠಿ ಅಮೇರಿಕಕ್ಕೆ ಹೋಗಿ ಅಲ್ಲಿ ಒಂದು ಸಾವಿರ ಡಾಲರ್ ಸಂಬಳ ಪಡೆಯುತ್ತಾನೆ. ಆದರೆ ರಷ್ಯನ್ ಸರಕಾರ ವಿಜ್ಞಾನಿಗೆ ಕೇವಲ ಇನ್ನೂರು ಡಾಲರ್‌ಗಳನ್ನಷ್ಟೇ ನೀಡುತ್ತದೆ.

ಹಾಗಿದ್ದರೂ 1000 ಡಾಲರ್ ಪಡೆಯುವ ಅಮೇರಿಕಕ್ಕೆ ಹೋದ ವಿಜ್ಞಾನಿ ಸುಖಿಯೆಂದು ನಿವೆಂದುಕೊಂಡರೆ ಅದೂ ತಪ್ಪೇ. ಅವನ ಸಂಬಳ ಅಮೇರಿಕಾದ ವಿಜ್ಞಾನಿಯ ಕಾಲುಭಾಗ ಮಾತ್ರ ಹಾಗೆ ಆರರಲ್ಲಿ ಒಂದು ಭಾಗಕ್ಕೆ ತಮ್ಮನ್ನು 'ಮಾರಿ'ಕೊಂಡವರೂ ಇದ್ದಾರೆ. ಇದಿಷ್ಟು ಮಾತ್ರವಲ್ಲ. ಈ ಮಾರಿಕೊಂಡ ಬುದ್ಧಿಜೀವಿಗಳಿಂದ ರಷ್ಯಾ ಇನ್ನೂ ದೊಡ್ಡ ನಷ್ಟ ಅನುಭವಿಸುತ್ತಿದೆ. ದೇಶದ ರಕ್ಷಣೆ ಮತ್ತು ಮಿಲಿಟರಿ ರಹಸ್ಯಗಳೆಲ್ಲ ಬೀದಿಪಾಲಾಗಿವೆ. ಶತ್ರುರಾಷ್ಟ್ರಗಳಿಗೆ ತಿಳಿಯದ ವಿಷಯಗಳೇ ಇಲ್ಲವೆಂಬಂತಾಗಿದೆ.

'ನಾವು ನಮ್ಮ ರಹಸ್ಯಗಳನ್ನೆಲ್ಲ ಮಾರಿಕೊಂಡಿದ್ದೇವೆ. ಅಮೇರಿಕಕ್ಕೆ ತಿಳಿಯದೇ ಇರುವ ವಿಷಯವೇನೂ ಉಳಿದಿಲ್ಲ. ಆದರೆ, ಅಮೇರಿಕಾದ ರಹಸ್ಯ ರಕ್ಷಣಾ ಪ್ರಯೋಗಾಲಯಗಳಲ್ಲೇನು ನಡೆಯುತ್ತಿದೆ? ಎಂಬುದು ಮಾತ್ರ ರಹಸ್ಯ. ರಷ್ಯದ ರಕ್ಷಣಾ ವಿಜ್ಞಾನಿಯೊಬ್ಬರು ನಿರಾಸೆಯಿಂದ ಹೇಳುತ್ತಾರೆ. ಒಂದು ಕಾಲದ ಮಿಲಿಟರಿ ಮತ್ತು ವಿಜ್ಞಾನದ ಸೂಪರ್ ಪವರ್ ರಷ್ಯಾದ ತಂತ್ರಜ್ಞಾನದ ಬಗ್ಗೆ ಎಷ್ಟು ತಿಳಿಯಲು ಹೆಚ್ಚು ಸಾಧ್ಯ ಎಂಬ ಬಗ್ಗೆ ಅಮೇರಿಕ ಈಗ ಗಮನ ಹರಿಸುತ್ತಿದೆ.

715 ಪ್ರಬಲ ಪರಮಾಣು ಪರೀಕ್ಷೆಗಳನ್ನು ರಷ್ಯಾ ಈ ಹಿಂದೆ ನಡೆಸಿತ್ತು. ಈಗ ಅಮೇರಿಕದಲ್ಲಿ ಉದ್ಯೋಗಿಗಳಾಗಿರುವ ರಷ್ಯಾದ ಸುಮಾರು 200ರಷ್ಟು ವಿಜ್ಞಾನಿಗಳು ಕುಳಿತು ಆ ಎಲ್ಲ ಪರೀಕ್ಷಾ ಸ್ಫೋಟಗಳ ಇತಿಹಾಸ ಬರೆಯಲಿದ್ದಾರೆ. ಕೆಲವೇ ದಿನಗಳಲ್ಲೇ ರಷ್ಯಾದ 10,000 ಪರಮಾಣು ಶಸ್ತ್ರಾಸ್ತ್ರ (Nuclear Warhead) ಗಳ ವಿವರಗಳನ್ನು ಪಡೆಯಲಿದೆ. ಅಂದರೆ ಒಂದು ಕಾಲದ ಪ್ರತಿಸ್ಪರ್ಧಿಯನ್ನು ಶಾಶ್ವತವಾಗಿಯೇ ಸ್ಪರ್ಧಿಯಾಗಿ ತಲೆಯೆತ್ತದಂತೆ ವ್ಯವಸ್ಥೆ ಮಾಡಿಕೊಳ್ಳಲಿದೆ.

ರಷ್ಯಾದ ನ್ಯೂಕ್ಲಿಯರ್ ಸ್ಫೋಟಗಳನ್ನು ಜರುಗಿಸಿದ್ದ ವಿಜ್ಞಾನಿಗಳ ಮೂರರಲ್ಲಿ ಎರಡರಷ್ಟು ಜನ ಈಗ ಮಾಸ್ಕೊದಲ್ಲುಳಿದಿಲ್ಲ. ಅವರಲ್ಲಿ ಹೆಚ್ಚು ಜನ ಅಮೇರಿಕಾಕ್ಕೆ ಸೇರಿರುವುದು ಖಚಿತವಾಗಿದ್ದರೂ ವಲಸೆಗಾರರ ನಿಜಸಂಖ್ಯೆ ಎಷ್ಟೆಂಬುದು ತಿಳಿದು ಬಂದಿಲ್ಲ. ಅದೆಷ್ಟೇ ಇದ್ದರೂ ರಷ್ಯ ತನ್ನ ಭದ್ರತಾ ರಹಸ್ಯಗಳನ್ನಂತೂ ಈಗಾಗಲೇ ತೆರೆದಿರಿಸಿದಂತಾಗಿದೆ. ರಹಸ್ಯಗಳನ್ನು ಕಕ್ಕಿಸಲು ವಿಜ್ಞಾನಿಗಳಿಗೆ ಉದ್ಯೋಗ ನೀಡಬೇಕಾದ 'ದುಬಾರಿ' ವಿಧಾನವೇ ಆಗಬೇಕೆಂದೇನೂ ಇಲ್ಲ.

"ವಿಜ್ಞಾನಿಗಳನ್ನು ಆಮದಿಸದೇ ಹೇಗೆ ರಹಸ್ಯಗಳನ್ನು ಹೊರಹಾಕಬೇಕೆಂಬುದನ್ನೂ ಪಾಶ್ಚಿಮಾತ್ಯ ದೇಶಗಳು ಅರಿತಿವೆ" ಎನ್ನುತ್ತಾರೆ ರಷ್ಯದ ರಕ್ಷಣಾ ಸಚಿವಾಲಯದ ಅಧಿಕಾರಿ. ವಿಜ್ಞಾನಿಗಳು ತಮ್ಮ ತಂತ್ರಜ್ಞಾನ, ಸಂಶೋಧನೆಗಳನ್ನು ವಿದೇಶಗಳಿಗೆ ಮಾರಾಟ ಮಾಡುವಷ್ಟು ಅಲ್ಲಿ ಮುಂದುವರಿದಿದ್ದಾರೆ. 600 ರಿಂದ 700 ಮಿಲಿಯನ್ ಡಾಲರ್‌ಗಳಿಗೆ ಇಂತಹ ಸಂಶೋಧನೆಗಳು ಮಾರಾಟವಾಗುತ್ತಿವೆ. ಇದರಲ್ಲೊಂದು ವ್ಯವಹಾರವೂ ಇದೆ. ಕೆಲವು ಪಾಶ್ಚಿಮಾತ್ಯ ತಂತ್ರಜ್ಞಾನ ಪ್ರಯೋಗಾಲಯಗಳು ರಷ್ಯನ್ ವಿಜ್ಞಾನಿಗಳಿಂದ ಸಂಶೋಧನೆಗಳನ್ನು ಆ ಬೆಲೆಗೆ ಪಡೆದು 3ರಿಂದ ನಾಲ್ಕು ಬಿಲಿಯನ್ ಡಾಲರ್‌ಗಳಿಗೆ ಮಾರಾಟ ಮಾಡುತ್ತವೆ. ಹೇಗಿದೆ ಈ ಕಸರತ್ತು?

ಅಮೇರಿಕಾ ಮತ್ತು ಜರ್ಮನಿಯ ಅದೆಷ್ಟೋ ಪ್ರಯೋಗಶಾಲೆಗಳು ಈ ರೀತಿಯಲ್ಲಿ ತಂತ್ರಜ್ಞಾನವನ್ನು ದಕ್ಕಿಸಿಕೊಳ್ಳುತ್ತಿದೆ. ರಷ್ಯಾದ 'ಬುದ್ಧಿಜೀವಿಗಳ' ಮಾರಾಟ ನಿರಂತರವಾಗಿ ನಡೆದಿದೆ. ಇದು ಕೇವಲ ಪರಮಾಣು ತಂತ್ರಜ್ಞಾನಕ್ಕೆ ಮಾತ್ರ ಸೀಮಿತವಲ್ಲ. ಕಂಪ್ಯೂಟರ್ ಸಾಫ್ಟ್‌ವೇರ್, ಎಲೆಕ್ಟ್ರಾನಿಕ್ಸ್, ಬಾಹ್ಯಾಕಾಶ ತಂತ್ರಜ್ಞಾನ ಹೀಗೆ ಆಧುನಿಕ ಜನಪ್ರಿಯ ವಿಜ್ಞಾನ ರಂಗಗಳೆಲ್ಲದರಲ್ಲೂ ತಂತ್ರಜ್ಞಾನದ ಮಾರಾಟ ನಡೆದಿದೆ. ಪಾಶ್ಚಾತ್ಯ ಸಂಶೋಧನೆ ಮತ್ತು ಉತ್ಪಾದನಾ ರಂಗ ಇದರ ಲಾಭವನ್ನು ಜೀರ್ಣಿಸಿಕೊಂಡಿದೆ. ರಷ್ಯದ ವಿಜ್ಞಾನಿಗಳಿಂದ ಇನ್ನೂ ಸುಲಭವಾಗಿ ವಿಜ್ಞಾನವನ್ನು ಆಮದು ಮಾಡಿಕೊಳ್ಳುವ ವಿಧಾನವೂ ಇದೆ. ಅದುವೇ ಇಂಟರ್‌ನೆಟ್.

ರಷ್ಯನ್ ವಿಜ್ಞಾನಿಗೆ ಈಮೇಲ್ ಮೂಲಕ ಗಣಿತದ ಸಮಸ್ಯೆ ಕಳಿಸಿದರೆ ಆತ ಕೆಲವೇ ನೂರು ಡಾಲರ್ (300 ಡಾಲರ್‌ವರೆಗೂ)ಗೆ ಉತ್ತರ ಮಾರುತ್ತಾನೆ. ಡಬ್ನಾದ ವಿಜ್ಞಾನಿಯೊಬ್ಬ ಇರಾನ್‌ಗೆ ಹೀಗೆಯೇ ರಕ್ಷಣಾ ತಂತ್ರಜ್ಞಾನ ಪೂರೈಸಿರುವುದಾಗಿ ನಂಬಲಾಗಿದೆ. ರಷ್ಯಾದ ರಕ್ಷಣಾ ವಿಜ್ಞಾನಿಗಳಲ್ಲಿ ಈಗಾಗಲೇ 2/3 ಭಾಗದಷ್ಟು ಜನ ದೇಶ ತ್ಯಜಿಸಿದ್ದು, ಕೆಲವೇ ವಿಜ್ಞಾನಿಗಳು ಮಾತ್ರ ಉಳಿದಿದ್ದಾರೆ. ಪಶ್ಚಿಮ ದೇಶಗಳನ್ನು ಬಿಟ್ಟು ಹೆಚ್ಚು ಲಾಭ ಪಡೆಯುವ ದೇಶಗಳು, ಇರಾಕ್, ಇರಾನ್ ಮತ್ತು ಉ.ಕೊರಿಯಾ. ಉತ್ತರ ಕೊರಿಯಾ 1991 ರಿಂದಲೂ ರಷ್ಯನ್ ಬುದ್ಧಿಜೀವಿಗಳನ್ನು ಆಕರ್ಷಿಸುತ್ತಲೇ ಬಂದಿದೆ. ಇರಾಕ್‌ನ ಸದ್ದಾಂ ಹುಸೇನ್ ಪ್ರತಿ ಉನ್ನತ ವಿಜ್ಞಾನಿಗೆ ಮೂರು ಲಕ್ಷ ಡಾಲರ್ ತೆತ್ತಿದ್ದಾರೆನ್ನುತ್ತದೆ ಒಂದು ವರದಿ.

ಈ ಬುದ್ಧಿಜೀವಿಗಳ ವ್ಯಾಪಾರದ ಅತ್ಯಂತ 'ಆತಂಕಕಾರಿ' ಲಕ್ಷಣಗಳಿರುವುದು ಉಗ್ರಗಾಮಿಗಳೂ ತಂತ್ರಜ್ಞಾನವನ್ನು ಸಂಪಾದಿಸಬಹುದೆಂಬುದರಲ್ಲಿ. ಪರಮಾಣು, ಕ್ಷಿಪಣಿ ಮುಂತಾದ ಮಾರಕ ಶಸ್ತ್ರಾಸ್ತ್ರಗಳ ತಂತ್ರಜ್ಞಾನ; ಬೀದಿಯಲ್ಲಿ ದೊರಕುವಷ್ಟು ಸುಲಭದ್ದಾಗಿ ಬಿಟ್ಟರೆ..? ಬರಲಿರುವ ದಿನಗಳ ಕರಾಳತೆಯ ಊಹಿಸಿದರೇ ಮೈ ಜುಮ್ಮೆನ್ನುತ್ತದೆ, ಅಲ್ಲವೆ! ■

ಸಮಯದ ಸದುಪಯೋಗ

ಪ್ರತಿಯೊಂದು ಕ್ಷಣವನ್ನು ಒಂದೊಂದು ಯುಗವನ್ನಾಗಿ ಬಗೆಯುತ್ತಿರುವ ಸೋಮಾರಿಗಳಿಗೆ, ಅನೇಕ ರಂಗಗಳ ವಿಜೇತರು 'ಸಮಯವನ್ನು ಸದ್ವಿನಿಯೋಗ ಪಡಿಸಿಕೊಂಡರೆ, ತನ್ನ ಪ್ರತಿಯೊಂದು ನಿಮಿಷದ ಕಾಲಹರಣಕ್ಕೆ ಬೆಲೆ ನೀಡಿದರೆ, ಯಾವುದೇ ಕೆಲಸದಲ್ಲೂ ವಿಜೇತರಾಗಬಹುದು' ಎಂದು ತಮ್ಮ ವಿಜಯ ರಹಸ್ಯವನ್ನು ಬಯಲು ಮಾಡುತ್ತಿದ್ದಾರೆ.

ತನ್ನ ಜೀವನ ಅನುಭವಿಸುವುದಕ್ಕೆ ಬೇಕಾದಷ್ಟು ಟೈಮ್ ದೊರಕಲಿಲ್ಲವೆಂದು ಕೆಲವರು ಪರಿತಪಿಸುತ್ತಿದ್ದರೆ, ಇರುವ ಟೈಮನ್ನು ಹೇಗೆ ಕಳೆಯಬೇಕೊ ಗೊತ್ತಾಗದ ಸಂದಿಗ್ಧ ಪರಿಸ್ಥಿತಿಯಲ್ಲಿ ಉಳಿದವರು ಯೋಚನೆಗೆ ತೊಡಗಿದ್ದಾರೆ.

ಲೀಲಾಜಾಲವಾಗಿ ಕಳೆಯೊ ಸಮಯವು ಅಮೆರಿಕನ್ಸ್‌ಗೆ ಶೇಕಡ 27ಕ್ಕೆ ಇಳಿದಿದ್ದರೆ ಭಾರತೀಯರು ಬಿಜಿಯಾಗಿ ಸಮಯವನ್ನು ಹೇಗೆ ಉಪಯೋಗಿಸಿಕೊಳ್ಳಬೇಕೆಂದು ಈಗೀಗ ರೂಢಿಸಿಕೊಳ್ಳುತ್ತಿದ್ದಾರೆ.

ಒಟ್ಟನಲ್ಲಿ ಹೇಳಬೇಕಾದರೆ, ಸಮಯಕ್ಕಿರುವ ಬೆಲೆ ಬೇರ್‍ಯಾವುದಕ್ಕೂ ಇಲ್ಲ. ಅದಕ್ಕೇ ಇದನ್ನರಿತ ಜ್ಞಾನಿಗಳು 'ಟೈಮ್ ಈಸ್ ಮನಿ' ಎಂದು ವ್ಯಾಖ್ಯಾನಿಸಿದ್ದಾರೆ. ಸದಾ ಬಿಜಿಯಾಗಿರುವ ಒಬ್ಬ ಕಾರ್ಮಿಕನಾಗಲಿ, ಕೊಡೆಗೊಬ್ಬ ರಾಜಕೀಯ ಪುಢಾರಿಯಾಗಿರಲಿ ದಿನದಲ್ಲಿ ಒಂದರ್ಧ ಗಂಟೆ ಕಾಲ ಸಿಕ್ಕಿದರೆ ಅದನ್ನೇ ಬೆಟ್ಟದಷ್ಟು ಲಾಭವೆಂದು ಪರಿಗಣಿಸುತ್ತಾರೆ.

ಹೀಗೆ ಒಂದರ್ಧ ಗಂಟೆಗೋಸ್ಕರ ಅವರು ಕಾಯಬೇಕಾದರೆ, ಉಳಿದ ಸಮಯವನ್ನು ಮೌಲಿಕವಾಗಿ ಮಾರ್ಪಡಿಸುವುದಕ್ಕೆ ಕಾರಣ ಅವರ ಜೀವನದಲ್ಲಿ ಕಾಲಹರಣ ಮಾಡಿದ ಕೆಲವು ತುಣುಕುಗಳನ್ನು ಇಲ್ಲಿ ಗಮನಿಸಿದರೆ ಸಮಯದ ಸದುಪಯೋಗಿಗಳು ನೀವಾಗುವಿರಿ.

ಚುರುಕುತನ ಬೇಕು

ಸಮಯವನ್ನು ಅತಿ ಬೆಲೆಯುಕ್ತ ನಿರ್ಣಯಗಳಿಗೆ ಅಥವಾ ಪ್ರಮುಖ ಫಲಿತಾಂಶಗಳಿಗಾಗಿ ವಿನಿಯೋಗಿಸುವಾಗ ಚುರುಕುತನ ಬೇಕು. ಬೆಳಿಗ್ಗೆ 6 ಗಂಟೆಯಿಂದ 12 ಗಂಟೆವರೆಗೂ, ಸಾಯಂಕಾಲ 3 ಗಂಟೆಯಿಂದ 6 ಗಂಟೆವರೆಗು ನಮ್ಮಲ್ಲಿ 'ಹೈ ಎಫಿಷಿಯನ್ಸಿ' ಇರುತ್ತದೆ. ಈ ಸಮಯದಲ್ಲಿ ಮುಖ್ಯವಾದ ನಿರ್ಣಯಗಳನ್ನು ಕೈಗೊಳ್ಳಬೇಕು. ಉಳಿದ ಸಮಯದಲ್ಲಿ 'ಲೋ ಎಫಿಷಿಯನ್ಸಿ' ಇರುವುದರಿಂದ ನ್ಯೂಸ್ ಪೇಪರ್ ಓದುವುದೋ ಇಲ್ಲ ಬೇರ್‍ಯಾವುದೊ ಮುಖ್ಯವಲ್ಲದ ಕೆಲಸ ಮಾಡುವುದರಲ್ಲಿ ತೊಡಗಬೇಕು.

ರೂಪುರೇಷೆ ಬೇಕು

ನಮಗೆ ತಿಳಿಯದ ಸ್ಥಳಕ್ಕೆ ಸೇರಬೇಕಾದರೆ 'ರೋಡ್‌ಮ್ಯಾಪ್' ಎಷ್ಟು ಅಗತ್ಯವೋ ಅದೇ ರೀತಿ ಸಮಯವನ್ನು ಕಳೆಯಬೇಕಾದರೆ ಅದಕ್ಕೊಂದು ರೂಪುರೇಷೆ ಬೇಕು. ಕೆಲಸಗಳ ಪ್ರಾಧಾನ್ಯತೆಗನುಗುಣವಾಗಿ ಸಮಯವನ್ನು ಎ.ಬಿ.ಸಿ.ಡಿ. ಆಗಿ ವಿಭಜಿಸಲು ಹತ್ತು ನಿಮಿಷಗಳನ್ನು ವಿನಿಯೋಗಿಸಿದರೂ ಅದರಿಂದ ನಾವು ಕಳೆಯುವ ಪ್ರತಿಯೊಂದು ನಿಮಿಷವೂ ಉಪಯುಕ್ತವಾಗಿರುವುದು.

■ ಉತ್ತನೂರು ವ್ಯಾನ್ಸ್



ಅನಾವಶ್ಯಕ ಕಾಲಹರಣ ಬೇಡ

'ನಮ್ಮ ಆಫೀಸ್ ಸದಾ ತೆರೆದಿರುತ್ತದೆ' ಎಂದು ಹೇಳಿದರೆ ಅನೇಕ ಮಂದಿ ಕೆಲಸವಿಲ್ಲದಿದ್ದರೂ ನಮ್ಮ ಛೇಂಬರ್‌ಗೆ ದೂರಿ, ಅನಾವಶ್ಯಕ ಕಾಲಹರಣ ಮಾಡುವುದಲ್ಲದೆ ನಮ್ಮ ಸಮಯವನ್ನು ಹಾಳುಮಾಡುತ್ತಾರೆ. ಇಂತಹ ಸಮಯದಲ್ಲಿ ಬೇರೊಬ್ಬರಿಗೆ ಅರಿವಾಗದಂತೆ ಜಾಣ್ಮೆಯಿಂದ ಬಂದವರನ್ನು ಹೊರಹೋಗುವಂತೆ ಮಾಡಿ ಕೆಲಸದಲ್ಲಿ ತೊಡಗಬೇಕು.

ಟೆಲಿಫೋನು ಮಾತುಕತೆ

ಟೆಲಿಫೋನನ್ನು ಸರಿಯಾಗಿ ಉಪಯೋಗಿಸುವುದರಿಂದ ಎಷ್ಟೋ ಸಮಯವನ್ನು ಉಳಿಸಬಹುದು. ಅನವಶ್ಯಕ ನಮಗೆ ಬರುವ ಕರೆಗಳು, ಅಪಾಯಿಂಟ್‌ಮೆಂಟ್ ಇಲ್ಲದೆ ಆಗಾಗ ನಾವು ಮಾಡುವ ಕರೆಗಳು ನಮ್ಮ ಸಮಯವನ್ನು ತಿನ್ನುತ್ತವೆ. ಮಾಡೋ ಪ್ರತಿಯೊಂದು ಕಾಲ್ ಹಿಂದೆ ನಿರ್ಧಿಷ್ಟವಾದ ಗುರಿಯಿರಬೇಕು.

ಒಂದಕ್ಕಿಂತ ಹೆಚ್ಚು ವಿಷಯಗಳನ್ನು ಫೋನ್‌ನಲ್ಲಿ ಮಾತಾಡಬೇಕಾದರೆ ಸಾಧ್ಯವಾದಷ್ಟು ಒಂದೇ ಕಾಲ್‌ನಲ್ಲಿ ಮಾತಾಡುವಷ್ಟು ಮೊಟಕುಗೊಳಿಸಬೇಕು. ನೇರವಾಗಿ ವಿಷಯವನ್ನು ಪ್ರಸ್ತಾಪಿಸುವಂತಹ ವ್ಯವಹಾರ ಜ್ಞಾನಬೇಕು.

ನಿರೀಕ್ಷಿಸಬೇಕಾದಲ್ಲಿ

ನಮ್ಮ ಜೀವನದಲ್ಲಿ ತಿಳಿದೋ, ತಿಳಿಯದೆಯೋ ಕಾಯಬೇಕಾದ ಸಂದರ್ಭ ಬಂದರೆ ಯಾವುದಾದರೂ ಓದಿನ ಸಾಮಗ್ರಿ, ಕಾಗದಗಳನ್ನೋ ಇನ್ಯಾವುದಾದರು ಪುಸ್ತಕವನ್ನೋ ಬಳಿ ಇರಿಸಿಕೊಂಡರೆ ನಾವು ನಿರೀಕ್ಷಿಸಬೇಕಾದ ಸಮಯವನ್ನು ಸದುಪಯೋಗಗೊಳಿಸಬಹುದು.

ವಿಶ್ರಾಂತಿಯಿಂದ ಸಾಮರ್ಥ್ಯ

ಆಗಾಗ ನಾವು ತೆಗೆದುಕೊಳ್ಳುವ ವಿಶ್ರಾಂತಿ ನಮ್ಮ ದಣಿವು ನಿವಾರಿಸಿ ಸಾಮರ್ಥ್ಯ ಚಿಗುರಿಸುತ್ತದೆ. ಆದ್ದರಿಂದ ಪ್ರತಿವಾರದ ಕೊನೆ ದಿವಸ ತನ್ನ ಮನಸ್ಸಿಗೆ ಮೆಚ್ಚುಗೆಯಾಗುವ ಸ್ಥಳಗಳಿಗೆ ಹೋಗಿ ಬರುವುದರಿಂದ ನಮ್ಮ ಮನಸ್ಸು ಹಾಗು ಶರೀರಕ್ಕೆ ಆಹ್ಲಾದ ಉಂಟಾಗುತ್ತದೆ. ಇದರಿಂದ ನಮ್ಮ ಲವಲವಿಕೆ ಹೆಚ್ಚಾಗಿ, ನಿಗದಿತ ಸಮಯಕ್ಕಿಂತ ಮುಂಚಿತವಾಗಿಯೆ ಮಾಡಬೇಕಾದ ಕೆಲಸವನ್ನು ಮಾಡಿ ಮುಗಿಸುತ್ತೇವೆ.

ಹೀಗೆ ಸಮಯವನ್ನು ಕಿಂಚಿತ್ತೂ ಬಿಡದೆ ಉಪಯೋಗಿಸಿಕೊಳ್ಳಲು ನಾನಾದಾರಿಗಳಿವೆ. ಅತ್ಯುನ್ನತ ಬೆಲೆಯುಳ್ಳ ಸಮಯವನ್ನು ಸದುಪಯೋಗಪಡಿಸಿಕೊಂಡು ಅಂಡಲೆಯುವ ಸೋಮಾರಿಗಳು ಕಾರ್ಯೋನ್ಮುಖರಾದರೆ ಕುರುಡು ಕಾಂಚಾಣ ತನ್ನಷ್ಟಕ್ಕೆ ತಾನೇ ಒಲಿದು ಕೈಸೇರುತ್ತದೆ. ಅಗ ಕಾಲಹರಣಕ್ಕೆ ಬೆಲೆಯಿದ್ದರೆ ವಿಜಯಿಯಾಗುವುದು ಖಂಡಿತವೆಂಬ ಸತ್ಯಾಂಶ ಹೊರಬೀಳುತ್ತದೆ. ■

ಬ್ರೆಡ್ ಮಸಾಲಾ ಪೂರಿ

ಬೇಕಾಗುವ ಸಾಮಗ್ರಿಗಳು:

ಅರ್ಧ ಪೌಂಡ್‌ನಷ್ಟು ಬ್ರೆಡ್‌ನ ತುಂಡುಗಳು, ಕಾಬೂಲ್ ಕಡಲೆಕಾಳು 1/4 ಕೆ.ಜಿ., ಚಾಟ್ ಮಸಾಲಾ 2 ಚಮಚ, ಹುಣಸೇಹಣ್ಣು 1 ನಿಂಬೆ ಹಣ್ಣಿನ ಗಾತ್ರ, ಈರುಳ್ಳಿ 2, ಟೊಮೊಟೊ 2, ಕಡಲೇಕಾಯಿ ಎಣ್ಣೆ ಒಂದು ಬಟ್ಟಲು, ಕೊತ್ತಂಬರಿ ಸೊಪ್ಪು 1 ಕಟ್ಟು, ರುಚಿಗೆ ತಕ್ಕಷ್ಟು ಪುಡಿ ಉಪ್ಪು, ಖಾರಾ ಸೇವ್ 100 ಗ್ರಾಂ.

ಮಾಡುವ ವಿಧಾನ:

ಕಾಬೂಲಿ ಕಡಲೆಯನ್ನು ಆರು ಗಂಟೆಗಳ ಕಾಲ ನೀರಿನಲ್ಲಿ ನೆನೆಸಿಡಿ. ಈರುಳ್ಳಿ, ಕೊತ್ತಂಬರಿ ಸೊಪ್ಪು, ಟೊಮೊಟೊವನ್ನು ಬೇರೆಯಾಗಿ, ಸಣ್ಣದಾಗಿ ಹೆಚ್ಚಿಕೊಳ್ಳಿ. ಹುಣಸೆಹಣ್ಣನ್ನು ನೀರಿನಲ್ಲಿ ನೆನೆಹಾಕಿ. ನೆಂದ ಕಾಬೂಲಿ ಕಡಲೆಯನ್ನು ಕುಕ್ಕರಿನಲ್ಲಿ ಚೆನ್ನಾಗಿ ಬೇಯಿಸಿಕೊಳ್ಳಿ, ಬಾಣಲೆಯಲ್ಲಿ ಎರಡು ಚಮಚ ಎಣ್ಣೆ ಹಾಕಿ ಸಾಸಿವೆ, ಜೀರಿಗೆ ಒಗ್ಗರಣೆ ಹಾಕಿ ಬೇಯಿಸಿದ ಕಡಲೆಕಾಳನ್ನು ಬೆರೆಸಿ. ಸಣ್ಣದಾಗಿ ಕತ್ತರಿಸಿದ ಟೊಮೊಟೊವನ್ನು ಬಾಣಲೆಗೆ ಹಾಕಿ. ರುಚಿಗೆ ತಕ್ಕಷ್ಟು ಉಪ್ಪು ಹಾಕಿ. ಜೊತೆಗೆ ಹುಣಸೇ ಹಣ್ಣಿನ ರಸವನ್ನು ಸೇರಿಸಿ. ನಂತರ ಚಾಟ್ ಮಸಾಲಾ ಸೇರಿಸಿ ಹತ್ತು ನಿಮಿಷ ಕುದಿಸಿ. ಈ ಮಿಶ್ರಣ ಮಂದವಾಗಲು 2-3 ಲೋಟ ನೀರು ಹಾಕಿ. ಮಸಾಲಾ ಕುದಿಯತೊಡಗಿದಾಗ ಬಾಣಲೆಯನ್ನು ಕೆಳಗಿಳಿಸಿ. ಬ್ರೆಡ್‌ನ ಮಧ್ಯಮ ಗಾತ್ರದ ತುಂಡುಗಳನ್ನು ಎಣ್ಣೆಯಲ್ಲಿ ಕರಿದುಕೊಳ್ಳಿ, ಇವನ್ನೆಲ್ಲಾ ಬೇರೆ ಬೇರೆಯಾಗಿ ಇಟ್ಟುಕೊಂಡು, ಬಡಿಸುವಾಗ ಮೊದಲು ಕಡಲೆಕಾಳಿನ ಮಸಾಲಾ, ಅದರ ಮೇಲೆ ಬ್ರೆಡ್ ತುಂಡು, ಅದರ ಮೇಲೆ ಕತ್ತರಿಸಿದ ಈರುಳ್ಳಿ, ಕೊತ್ತಂಬರಿ ಸೊಪ್ಪು ಅಲ್ಲದೆ ಖಾರಾ ಸೇವ್ ಹಾಕಿ ಬಿಸಿಯಾಗಿರುವಾಗಲೇ ತಿನ್ನಲು ಕೊಡಬೇಕು. ಮಸಾಲಾಪ್ರಿಯರು ಬೇಕೆನಿಸಿದರೆ ಪುದೀನಾ ಚಟ್ನಿಯೊಂದಿಗೆ ತಿಂದು ಅರಗಿಸಿಕೊಳ್ಳಿ.

-ಮಂಜುಳಾ ಶೇಖರಗೌಡ ಲೊಂಡಿಹಾಳ,
ಕೊಪ್ಪಳ.

ಹಾಗಲಕಾಯಿ ತುಂಬಿನ ಪಲ್ಯ

ಬೇಕಾಗುವ ಸಾಮಗ್ರಿಗಳು :

1/2 ಕೆ.ಜಿ. ಹಾಗಲಕಾಯಿ, 1/2 ಕೆ.ಜಿ. ಕೊಬ್ಬರಿ ತುರಿ, ಐದಾರು ಟೊಮೊಟೊ, ಕೊತ್ತಂಬರಿ ಸೊಪ್ಪು, ಕರಿಬೇವು, ಖಾರ, ಉಪ್ಪು, ಎಣ್ಣೆ.

ಮಾಡುವ ವಿಧಾನ :



ಟೊಮೊಟೊವನ್ನು ಸಣ್ಣಗೆ ಹೆಚ್ಚಿಟ್ಟುಕೊಳ್ಳಿ, ಕೊಬ್ಬರಿ, ಕೊತ್ತಂಬರಿಯನ್ನು ರುಬ್ಬಿಕೊಂಡು, ಅದಕ್ಕೆ ಖಾರ ಮತ್ತು ಉಪ್ಪನ್ನು ಹಾಕಿ ಚೆನ್ನಾಗಿ ಬೆರೆಸಿ. ನಂತರ ಹಾಗಲಕಾಯನ್ನು ಚಾಕುವಿನಿಂದ ಮಧ್ಯಕ್ಕೆ ಸೀಳಿ ನೀರಿನಲ್ಲಿ ಸ್ವಚ್ಛವಾಗಿ ತೊಳೆದುಕೊಂಡು ಅದರಲ್ಲಿರುವ ಬೀಜಗಳನ್ನು ತೆಗೆದು, ಒಂದು ಪಾತ್ರೆಯಲ್ಲಿ ಎರಡು ಮೂರು ಚಮಚ ಎಣ್ಣೆಯನ್ನು ಹಾಕಿ ಹಾಗಲಕಾಯನ್ನು ಹುರಿಯಬೇಕು. ಅದಾದ ಮೇಲೆ ಬೆರೆಸಿದ ಕೊಬ್ಬರಿ ಚಟ್ನಿಯನ್ನು ಹುರಿದ ಹಾಗಲಕಾಯಿಯನ್ನು ಸೀಳಿದ ಭಾಗದಲ್ಲಿ ತುಂಬಬೇಕು. ಈರುಳ್ಳಿ, ಎಣ್ಣೆ ಮತ್ತು ಕರಿಬೇವಿನಲ್ಲಿ ಸ್ವಲ್ಪ ಕೆಂಪಗೆ ಹುರಿದು ಅದನ್ನು ಒಗ್ಗರಣೆಗೆ ಹಾಕಿ. ಅದರಲ್ಲಿ ಟೊಮೊಟೊ ಸಣ್ಣ ಸಣ್ಣ ತುಂಡುಗಳನ್ನು ಹಾಕಬೇಕು. ಎರಡು ನಿಮಿಷ ಕುದಿಸಿದ ಮೇಲೆ ಕೆಳಗಿಳಿಸಿ ರೊಟ್ಟಿಯೊಂದಿಗೆ ತಿಂದರೆ ಆಹಾ! ಎಷ್ಟೊಂದು ರುಚಿ.

- ಪುತಳಾಬಾಯಿ ಮ.ರಾಜಾಪೂರ, ಕಮತಗಿ.

ಶ್ರೀಲಂಕಾದ ಕಿರಿಬಾತ್

ಬೇಕಾಗುವ ಸಾಮಗ್ರಿಗಳು :

ಎರಡು ಲೋಟ ಹೆಚ್ಚು ಉದ್ದವಿರುವ ಬಿಳಿ ಅಕ್ಕಿ, ಎರಡು ಲೋಟ ಗಟ್ಟಿ ತೆಂಗಿನ ಹಾಲು, ಎರಡು ಲೋಟ ತೆಳು ತೆಂಗಿನ ಹಾಲು, ರುಚಿಗೆ ತಕ್ಕಷ್ಟು ಉಪ್ಪು.

ಮಾಡುವ ವಿಧಾನ :

ತೆಳು ತೆಂಗಿನ ಹಾಲಿನೊಡನೆ ಅಕ್ಕಿಯನ್ನು ಕುದಿಸಿ, ಅರ್ಧ ಬೆಂದಾಗ ಗಟ್ಟಿ ತೆಂಗಿನ ಹಾಲನ್ನು ಹಾಗೂ ಉಪ್ಪನ್ನು ಹಾಕಿ ಮುಚ್ಚಿಡಿ. ಚೆನ್ನಾಗಿ ಬೆಂದ ಮೇಲೆ ತಟ್ಟೆಯೊಂದಕ್ಕೆ ಬಡಿಸಿಕೊಂಡು ಮೇಲ್ಭಾಗ ವನ್ನು ನಯ ಮಾಡಿ, ಬೇಕಾದ ಆಕಾರಕ್ಕೆ ಕತ್ತರಿಸಿ ಕಾಯಿ ಚಟ್ನಿಯೊಡನೆ ತಿನ್ನಿರಿ.

-ಎಂ.ವೀರೇಶ್, ಹೊಸಮೋಕಾ.

ಬೆಂಡೆಕಾಯಿ ಫ್ರೈ

ಬೇಕಾಗುವ ಸಾಮಗ್ರಿಗಳು :



20 ಬೆಂಡೆಕಾಯಿಗೆ ಬೇಕಾಗಿರುವ ಸಾಮಗ್ರಿ ಪುಟಾಣಿ (ಹುರಿಗಡಲೆ) 50 ಗ್ರಾಂ, ಮೆಣಸು 5 ಗ್ರಾಂ, ಕೊಬ್ಬರಿ 50 ಗ್ರಾಂ, ಹುಳಿ ಒಂದು ಸಣ್ಣ ನಿಂಬೆ ಗಾತ್ರ, ಉಪ್ಪು ರುಚಿಗೆ ತಕ್ಕಷ್ಟು 1/2 ಬೆಳ್ಳುಳ್ಳಿ.

ಮಾಡುವ ವಿಧಾನ :

ಬಾಣಲಿಯಲ್ಲಿ 2 ಚಮಚ ಎಣ್ಣೆ ಹಾಕಿ ಮೆಣಸನ್ನು ಹುರಿಯಬೇಕು, ನಂತರ ಮೇಲಿನ ಎಲ್ಲಾ ಸಾಮಗ್ರಿಗಳನ್ನು ಒಟ್ಟು ಮಾಡಿ ನೀರು ಹಾಕಿ ರುಬ್ಬಬೇಕು. ನಂತರ ಬೆಂಡೆಕಾಯಿಯನ್ನು ಮಧ್ಯಕ್ಕೆ ಸೀಳಿ ರುಬ್ಬಿದ ಖಾರವನ್ನು ಅದರಲ್ಲಿ ತುಂಬಿ ಎಣ್ಣೆ ಹಾಕಿ ಚೆನ್ನಾಗಿ ಬೇಯಿಸಿ, ಇಳಿಸಿಟ್ಟರೆ. ಬೆಂಡೆ ಕಾಯಿ ಫ್ರೈ ರೆಡಿ. ಉಣ್ಣಲು ಯಾರಾದರೂ ಕೊಡುತ್ತಾರೆ ಹಾಜರಿ.

-ಜಿ.ಕೆ. ನಾಗಮಣಿ,
ಕರಿನೆಗೊಳ್ಳಿ.

ನೀವೂ ಬರೆಯಬಹುದು

ನೀವು ಅಡಿಗೆ ಮಾಡುವುದರಲ್ಲಿ ನುರಿತವರಿರಬೇಕೆಂದಿಲ್ಲ, ನಿಮಗೆ ತಿಳಿದಿರುವ ವಿವಿಧ ತಿಂಡಿ ತಿನಿಸುಗಳ ತಯಾರಿ, ಬಳಕೆ, ಕೆಡದಂತಿಡುವ ವಿಧಾನಗಳ ಬಗೆಗೆ ಚುಟುಕಾಗಿ ಬರೆದು ಜೊತೆಗೊಂದು ಭಾವಚಿತ್ರ ಕಳಿಸಿ, 'ಅಡುಗೆ ಮನೆ' ಅಂಕಣ ತುಂಬಿರಿ.

ವಿಳಾಸ: ಸಂಪಾದಕರು, ಬಿಸಿಲ ಬದುಕು, ಅಂಕುರ ಪ್ರಕಾಶನ, ಅಂಚೆ ಪೆಟ್ಟಿಗೆ: 7951
ಬಸವೇಶ್ವರನಗರ, ಬೆಂಗಳೂರು - 560 079.

ಕ್ವಿಜ್-24ರ ಬಹುಮಾನ ವಿಜೇತರು

ಹೆಚ್. ಎನ್. ಸತ್ಯನಾರಾಯಣ
ಹರಿಹಳ್ಳಿ ಮತ್ತು ಅಂಚೆ ಕೆ. ಹೊಸಕೋಟೆ
ತಾ : ಆಲೂರು
ಜಿಲ್ಲೆ : ಹಾಸನ - 573129

ಡಿ.ಸಿ.ವಾಲಿ
ಜಡ್ಜ್‌ಮೆಂಟ್ ರೈಟರ್
2ನೇ ಜಿಲ್ಲಾ ನ್ಯಾಯಾಲಯ
ಧಾರವಾಡ - 580 001.

ಕುಮಾರಿ ಸಲ್ಮಾ
ದ್ವಾರ : ಡಿ.ಎಂ. ಮಾಡಳ್ಳಿಕರ
ಕಿರಾಣಿ ಮರ್ಚಂಟ್ಸ್
ಸ್ಟೇಷನ್ ರೋಡ್,
ಜಿಲ್ಲೆ : ಹಾವೇರಿ - 581 110

CHETHANA K.S.
Gangotri Hostel (New wing)
CCS Hariyana Agri. University
HISAR- 125 004
Hariyana State

ಮನೋಹರ ಬಿ. ಕುಲಕರ್ಣಿ
ಮ.ನಂ. 237/2,
ಸುಭಾಷ್ ಗಲ್ಲಿ
ಅನಗೋಳ
ಜಿಲ್ಲೆ : ಬೆಳಗಾವಿ - 590 007

ಈ ಐದು ಜನ ಬಹುಮಾನ ವಿಜೇತರಿಗೆ ತಲಾ 100 ರೂ. ಮೌಲ್ಯದ ಪುಸ್ತಕಗಳನ್ನು ಬಹುಮಾನವಾಗಿ ನೀಡಲಾಗುವುದು.

ಕ್ವಿಜ್ - 24ರ ಸರಿಯುತ್ತರ

1. ಡಾ. ವಿನೋದ ಛೆಬ್ಬಿ
2. ಶರದ್ ಪವಾರ್
3. ತುಮಕೂರು
4. 20.6.1999
5. 'ದಾರಿ' ವಾರಪತ್ರಿಕೆ

ಸೂಚನೆಗಳು

- ಕೆಳಗೆ ಕೇಳಿದ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆಯಾ ಪ್ರಶ್ನೆಯ ಕೆಳಗೆ ನೀಡಲಾದ ಸ್ಥಳದಲ್ಲಿ ಬರೆಯಿರಿ.
- ಒಬ್ಬರು ಎಷ್ಟು ಪ್ರವೇಶ ಪತ್ರಗಳನ್ನಾದರೂ ಕಳಿಸಬಹುದು. ಮುದ್ರಿತ ಕೂಪನ್ನನ್ನೇ ಬಳಸಬೇಕು. ಜೆರಾಕ್ಸ್ ಪ್ರತಿ ಪರಿಗಣಿಸುವುದಿಲ್ಲ.
- ಸರಿಯುತ್ತರಗಳ ಪ್ರವೇಶ ಪತ್ರಗಳನ್ನೆಲ್ಲಾ ಸೇರಿಸಿ ಲಾಟರಿ ಮೂಲಕ ಬಹುಮಾನಗಳನ್ನು ನಿರ್ಧರಿಸಲಾಗುವುದು. ಐದು ಜನ ಬಹುಮಾನ ವಿಜೇತರಿಗೆ ತಲಾ 100 ರೂ. ಮೌಲ್ಯದ ಪುಸ್ತಕಗಳನ್ನು ಬಹುಮಾನವಾಗಿ ನೀಡಲಾಗುವುದು.
- ಪ್ರವೇಶ ಪತ್ರ ತಲುಪಲು ಅಂತಿಮ ದಿನಾಂಕ **15 -7 - 1999**

ವಿಜೇತರಿಗೆ 500 ರೂ. ಪುಸ್ತಕ ಬಹುಮಾನ

ಕ್ವಿಜ್ - 25

ಪ್ರವೇಶ ಪತ್ರ

ಹೆಸರು..

ವಿಳಾಸ..

....

....

ಪಿನ್ ಕೋಡ್.......................... ದೂರವಾಣಿ..........................

1. 'ಬಿಸಿಲ ಬದುಕು' ಜೂನ್ 1999ರ ಸಂಚಿಕೆಯಲ್ಲಿ ಪ್ರಕಟವಾದ 'ಘೋರ್ಪಡೆಯವರ ಕ್ಯಾಮರಾ ಕಣ್ಣಿನಲ್ಲಿ ವನ್ಯಮೃಗಗಳು?' ಲೇಖನ ಬರೆದವರು ಯಾರು?

   ....

2. ಭಾರತೀಯ ಜನತಾ ಪಾರ್ಟಿ ಮತ್ತು ಅದರ ಮಿತ್ರ ಪಕ್ಷಗಳ ಮೈತ್ರಿ ಕೂಟದ ಹೆಸರೇನು?

   ....

3. ಕಾರ್ಗಿಲ್ ಕದನದಲ್ಲಿ ಮಡಿದ ಕರ್ನಾಟಕದ ಚೊಳಚ ಗುಡ್ಡದ ತರುಣ ಯೋಧನ ಹೆಸರೇನು?

   ....

4. ಬಾರಿಯ ವಿಶ್ವಕಪ್ ಬ್ಯಾಟಿಂಗ್‌ನಲ್ಲಿ ಅಗ್ರಸ್ಥಾನ ಪಡೆದವರು ಯಾರು?

   ....

5. ಇಂಗ್ಲೆಂಡ್‌ನಲ್ಲಿ ನಡೆದ 1999ರ ಕ್ರಿಕೆಟ್ ವಿಶ್ವಕಪ್ ಗೆದ್ದ ತಂಡ ಯಾವುದು?

   ....

ಪ್ರವೇಶ ಪತ್ರವನ್ನು 15.7.99ರೊಳಗೆ ಕಳುಹಿಸಬೇಕಾದ ವಿಳಾಸ :
ಸಂಪಾದಕರು, **ಬಿಸಿಲ ಬದುಕು**, ಅಂಚೆ ಪೆಟ್ಟಿಗೆ 7951,
ಬಸವೇಶ್ವರನಗರ, ಬೆಂಗಳೂರು-79.

ಸಂವೇದನೆ

■ ಎಂ. ಎಸ್. ಮೂರ್ತಿ

'ವಿನ್ಯಾಸ', ನಂ. 132, 1ನೇ ಮಹಡಿ, ಗಾಂಧಿ ಬಜಾರ್ ಸರ್ಕಲ್, ಬಸವನಗುಡಿ, ಬೆಂಗಳೂರು-4.

ನೈತಿಕತೆ ಎಂಬ ಕರಗದ ಆಸ್ತಿ

ಬೆಂಗಳೂರಿನಲ್ಲಿ ಹಣ ಗಳಿಸುವುದು ಸುಲಭ ಎಂಬ ಅನಿಸಿಕೆ ಅನೇಕರಲ್ಲಿದೆ. ನಿಜ. ಒಂದು ರೀತಿಯಲ್ಲಿ ಯೋಚಿಸಿದರೆ ಎಲ್ಲಿಯೂ ಸುಲಭವಾಗಿ ಹಣ ಗಳಿಸಬಹುದು. ಈ ನನ್ನ ಮಾತು ನಿಮಗೆ ತಮಾಷೆ ಎನಿಸಬಹುದು. ಆದರೂ ನಿಜ. ಬೆಂಗಳೂರು ನಗರದಲ್ಲಿ ಅಥವಾ ಯಾವುದೇ ಜನಸಂಖ್ಯೆ ಅಧಿಕವಾಗಿರುವ ನಗರದಲ್ಲಿ ದುಡಿಮೆ, ಶ್ರಮವಿಲ್ಲದೆ ಅಥವಾ ಹೆಚ್ಚು ಶ್ರಮವಿಲ್ಲದೆ ಹಣ ಗಳಿಸಿ ಬದುಕು ಸಾಗಿಸಬಹುದು. ಮೆಜೆಸ್ಟಿಕ್ ಸರ್ಕಲ್ ಅಥವಾ ಎಂ.ಜಿ. ರಸ್ತೆಯಂತಹ ಜನಸಂದಣಿ ಇರುವ ಪ್ರದೇಶಗಳಲ್ಲಿ ಒಂದು ಮೂಲೆ ಹಿಡಿದು ಮುಂದೆ ಒಂದು ಬಟ್ಟೆ ಹರಡಿ ಮೂರು ಗಂಟೆ ನಿದ್ದೆ ಮಾಡಿದರೂ ಏಳುವಷ್ಟರಲ್ಲಿ ಆ ದಿನದ ಊಟಕ್ಕೆ ಬೇಕಾಗುವ ಹಣ ಬಿದ್ದಿರುತ್ತದೆ. ಇಂತಹ ಸ್ಥಿತಿ ಇರುವ ನಗರದಲ್ಲಿ ಜನ ಯಾಕೆ ಶ್ರಮ ಪಡಬೇಕು? ದುಡಿವ ಜನರೂ ಕೂಡ ಈ ವಾತಾವರಣದಲ್ಲಿ ತಮ್ಮ ನಿರೀಕ್ಷೆಗಳ ಪೂರೈಕೆಗಾಗಿ ಕಡಿಮೆ ಶ್ರಮದಿಂದ ಹೆಚ್ಚು ನಿರೀಕ್ಷಿಸುವ ಪ್ರವೃತ್ತಿ ಬೆಳೆದು ಅತೃಪ್ತಿಯ ಬದುಕು ಸಾಗಿಸುತ್ತಾರೆ.

ಮನುಷ್ಯನ ದೈನಂದಿನ ಬದುಕಿನ 24 ಗಂಟೆಗಳಲ್ಲಿ ಮೂರನೆ ಒಂದು ಭಾಗ ದುಡಿಮೆಯಲ್ಲಿ ಕಳೆಯುತ್ತಾರೆ. ಉಳಿದ ಸಮಯ ತನ್ನ ಆಹಾರ, ನಿದ್ರೆ, ಇತ್ಯಾದಿಗಳಿಗಾಗಿ ಕಳೆಯುವುದು ಅವಶ್ಯವಾದುದು. ಆದರೆ ಈವತ್ತು ತನ್ನ ದೈಹಿಕ, ಮಾನಸಿಕ ಅಗತ್ಯಗಳನ್ನು ಮರೆತು ತನ್ನ ಸಾಮಾಜಿಕ ಸ್ಥಾನಮಾನ, ಆಸೆಗಳ ಕಾರಣಕ್ಕಾಗಿ ಹಣ ಗಳಿಕೆ ಬದುಕಿನ ಮುಖ್ಯ ಗುರಿಯಾಗಿ ಶ್ರಮಿಸುವ ಜನ ನಮ್ಮ ಸುತ್ತಲೂ ಹೆಚ್ಚಾಗುತ್ತಾ ಇದ್ದಾರೆ. ಹಣ ಗಳಿಸುವ ಧಾವಂತಕ್ಕೆ ಸಿಕ್ಕ ಈ ಜನ ಹಣ ಗಳಿಸುವುದಕ್ಕಾಗಿಯೇ ತಮ್ಮ ಹೆಚ್ಚಿನ ಬದುಕನ್ನು ಕಳೆದು ಉಳಿದ ಅಲ್ಪ ಬದುಕಿನ ಸಮಯದಲ್ಲಿ ಗಳಿಸಿದ ಹಣದಿಂದ ಕಳೆದು ಕೊಂಡದ್ದೇನನ್ನು ಪಡೆಯಲಾಗದೆ ಆತಂಕದ ಜೀವನದಲ್ಲಿ ಕೊನೆಯಾಗುತ್ತಾರೆ.

ನನ್ನ ಮಟ್ಟಿಗೆ ಹಣ ಗಳಿಸುವುದು ತುಂಬಾ ಸುಲಭ. ಬರಿಯ ಹಣವಷ್ಟೇ ನಮ್ಮ ಜೀವನದ ಮುಖ್ಯ ಗುರಿಯಾದರೆ ಹಣ ಗಳಿಸುವುದು ಸುಲಭವಾಗುವುದಿಲ್ಲವೆ?


'ಹಣಗಳಿಸುವುದು ಸುಲಭ' ಎಂದು ನಾನು ಆಡಿದ ಒಂದು ಸಣ್ಣ ವಾಕ್ಯದಿಂದ ಕೆಲವು ವರ್ಷಗಳ ಹಿಂದೆ ಒಂದು ಸ್ವಾರಸ್ಯಕರ ಮಾತುಕತೆ ನಡೆಯಿತು. ನನ್ನ ಆಫೀಸಿನ ಹತ್ತಿರದಲ್ಲಿ ಒಂದು ಟೆಲಿಫೋನ್ ಬೂತನ್ನು ಒಬ್ಬ ವಿಕಲಾಂಗ ಯುವಕ ನಡೆಸುತ್ತಿದ್ದ. ಅಲ್ಲಿಗೆ ಅಗತ್ಯ ಬಿದ್ದಾಗ ಫೋನ್ ಮಾಡಲು ನಾನು ಹೋಗುತ್ತಿದ್ದೆ. ಒಂದು ದಿನ ನನ್ನ ಮಿತ್ರರೊಬ್ಬರೊಂದಿಗೆ ಫೋನ್‌ನಲ್ಲಿ ಮಾತನಾಡುತ್ತಿದ್ದೆ. ಅವರು ತಾವು ನನ್ನಿಂದ ಪಡೆದ ಹಣ ಹಿಂತಿರುಗಿಸಲಾಗದುದಕ್ಕೆ ಸಂಕೋಚ ಪಡುತ್ತಿದ್ದರು; ಆ ಕಾರಣಕ್ಕಾಗಿ ನನ್ನನ್ನು ಭೇಟಿಯಾಗದೇ ಇದ್ದುದಕ್ಕೆ ನಾನು ಅವರಿಗೆ ಹಣಕ್ಕಾಗಿ ತಲೆಕೆಡಿಸಿಕೊಳ್ಳಬೇಡಿ, ನೀವು ಬನ್ನಿ' ಎಂದು ಹೇಳಿದೆ. ಈ ಮಾತು ಕೇಳಿಸಿಕೊಂಡ ಆ ಬೂತಿನ ಯವಕ ಹಣ ಕುರಿತು ನಾನು ಲಘುವಾಗಿ ಮಾತನಾಡಿದೆನೆಂದುಕೊಂಡು ನನ್ನ ಸಂಭಾಷಣೆ ಮುಗಿಯುವವರೆಗೆ ಕಾದು ತಮಾಷೆಯಾಗಿ


'ಸುಲಭವಾಗಿ ಹೆಚ್ಚು ಹಣ ಮಾಡೋದು ಸಾಧ್ಯನಾ ಸಾರ್?


'ಸಾಧ್ಯ!' ಎಂದೆ ನಾನು ಗಂಭೀರವಾಗಿ.


ಆತ ಇನ್ನೂ ತಮಾಷೆಯಾಗಿ, 'ಹಾಗಾದರೆ ನಿಮಗೆ ಹಣ ಬೇಡದಿದ್ರೆ ಬಿಡಿ, ನಮಗಾದ್ರು ಹೆಚ್ಚು ಹಣ ಸುಲಭವಾಗಿ ಮಾಡೋದು ಹೇಗೆ? ಅಂತ ತಿಳ್ಸಿ' ಎಂದ.

ನಾನು ಆತನಿಗೆ 'ನೋಡಿ ನೀವು ಈಗ ಮಾಡುತ್ತಿರುವ ಕೆಲಸಕ್ಕೆ ನ್ಯಾಯವಾಗಿ ಸರಿಯಾದ ಹಣ ಸಿಗುತ್ತಿದೆ. ಅದು ನೈತಿಕವಾಗಿ ನೀವು ಶ್ರಮ ಪಟ್ಟು ಗಳಿಸಿದ ಹಣ, ಈ ಹಣದಿಂದ ನಿಮ್ಮ









ಕುಟುಂಬದವರು ಹೆಮ್ಮೆಯಿಂದ, ನೆಮ್ಮದಿಯಿಂದ ಬದುಕುತ್ತಿದ್ದಾರೆ. ನೀವು ಕೂಡ ಇಷ್ಟರಲ್ಲೇ ತೃಪ್ತಿ, ನೆಮ್ಮದಿ ಕಾಣುವುದನ್ನು ಕಲಿಯಬೇಕು' ಎಂದೆ.

ಆತನಿಗೆ ನನ್ನ ಮಾತು ರುಚಿಸಿದಂತೆ ಕಾಣಲಿಲ್ಲ 'ಅದೆಲ್ಲಾ ಇರ್ಲಿ ಸಾರ್, ಈಗ ಹೆಚ್ಚು ಹಣ ಯಾರಿಗೆ ಬೇಡ ಹೇಳಿ, ಅದು ಸುಲಭವಾಗಿ ಸಿಗೋ ದಾರಿ ಹೇಳಿ, ಈಗ ಸಿಗೋ ಹಣ ಯಾವ ಮೂತಿಗೆ ಹೇಳಿ' ಎಂದ. ನಾನು ನಗುತ್ತಲೇ ಹೇಳಿದೆ 'ನೀವು ಈಗ ಪಡುತ್ತಿರುವ ಶ್ರಮಕ್ಕೆ ಸರಿಯಾದ ಪ್ರತಿಫಲ ಸಿಗುತ್ತಿದ್ದರೂ ಅದಕ್ಕಿಂತಲೂ ಹೆಚ್ಚು ಹಣ ಸುಲಭವಾಗಿ ಬೇಕು ಎಂದರೆ ಬೇರೆ ಬೇರೆ ಮಾರ್ಗಗಳಿವೆ; ಒಂದೊಂದೂ ಮಾರ್ಗದಲ್ಲೂ ಹಣಕ್ಕಾಗಿ ಒಂದೊಂದನ್ನು ಕಳೆದುಕೊಳ್ಳುತ್ತಿರುತ್ತೀರಿ. ಅದಕ್ಕೆ ಸಿದ್ಧವಿದ್ದರೆ ಹೇಳಿ ನಿಮಗೆ ಹಣ ಸುಲಭವಾಗಿ ಸಿಗುವ ಮಾರ್ಗ ಹೇಳುತ್ತೇನೆ' ಎಂದೆ. ಜೊತೆಗೇ ಇನ್ನೊಂದು ಮಾತು ಹೇಳಿದೆ 'ಹಣವೇನೋ ಖಂಡಿತಾ ಸಿಗುತ್ತದೆ ಆದರೆ ಆ ಹಣಕ್ಕಾಗಿ ನೀವು ಕಳೆದುಕೊಂಡುದು ಮತ್ತೆ ಸಿಗುವುದಿಲ್ಲ' ಎಂದೆ ಒಗಟಿನಂತೆ.

ಆತ ಬಹಳ ಹುಮ್ಮಸ್ಸಿನಿಂದ 'ನೀವು ಏನನ್ನಾದರೂ ಹೇಳಿ, ಕೇಳಿ. ನನಗೆ ಹೆಚ್ಚು ಹಣ ಬೇಕು' ಎಂದ.

'ನೋಡಿ ನೀವು ಯಾವುದರ ಪ್ರತಿಯಾಗಿ ಹಣ ಪಡೆಯುತ್ತಿದ್ದೇವೆಂದು ಯೋಚಿಸಿ, ನಮ್ಮ ಸಮಯ, ಶ್ರಮ, ಬುದ್ಧಿವಂತಿಕೆ, ಜ್ಞಾನ ಇತ್ಯಾದಿಗಳನ್ನು ನಮ್ಮ ಬದುಕಿಗೆ ಬೇಕಾಗಿರುವ ಹಣಕ್ಕಾಗಿ ಖರ್ಚು ಮಾಡುತ್ತಿದ್ದೇವೆ. ಅದರ ಮಿತಿಯಲ್ಲಿ ನಮಗೆ ಹಣ ಸಿಗುತ್ತಿದೆ. ಈ ಮಿತಿಯನ್ನು ಮೀರಿ ನಮ್ಮ ಎಲ್ಲವನ್ನೂ ಹಣಕ್ಕಾಗಿಯೇ ಬಳಸುವುದು ತಪ್ಪು' ಎಂದು ನಾನು ಹೇಳುತ್ತಿದ್ದಂತೆ ಮಧ್ಯದಲ್ಲೇ ತಡೆದು ಹೇಳಿದ. 'ನಾನು ಏನು ಬೇಕಾದರೂ ಮಾಡುತ್ತೇನೆ ಹೇಳಿ ಸಾರ್, ಹಣ ಬೇಕು, ಅದೇ ಸಾರ್ ಮುಖ್ಯ' ಎಂದ. ನಾನು ಮುಂದುವರಿದು 'ಆಯ್ತು, ನಿಮಗೆ ಹಣ ಎಷ್ಟು ಬೇಕು ಹೇಳಿ? ನಿಮ್ಮ ಯಾವುದನ್ನು ಕಳೆದುಕೊಳ್ಳಲು ಸಿದ್ಧವಿದ್ದೀರ ಅದನ್ನು ಅವಲಂಬಿಸಿ ನಿಮಗೆ ಹಣ ಸಿಗುತ್ತದೆ, ನಿಮ್ಮ ತಂದೆ, ತಾಯಿ, ಹೆಂಡತಿ, ಮಕ್ಕಳು, ನಿಮ್ಮ ನೆಮ್ಮದಿ ಹೀಗೆ ಒಂದೊಂದಕ್ಕೆ ಒಂದೊಂದು ಮೌಲ್ಯವಿದೆ. ಇಷ್ಟೆಲ್ಲಾ ಕಳೆದುಕೊಂಡೂ ಪಡೆಯುವ ಹಣ ನಿಮಗೆ ತೃಪ್ತಿಯಾಗದಿದ್ದರೆ ಹೇಳಿ, ಇನ್ನೂ ಎರಡು ಸಂಗತಿ ಇದೆ. ಅವೆರಡನ್ನೂ ಕಳೆದುಕೊಂಡು ಬಿಟ್ಟರೆ ನೀವು ಅನಾಯಾಸವಾಗಿ ಗಳಿಸುವ ಹಣದ ಮೊತ್ತವನ್ನು ನೀವು ನಿರೀಕ್ಷಿಸಲೂ ಸಾಧ್ಯವಿಲ್ಲ' ಎಂದು ಆ ಯುವಕನ ಮುಖ ನೋಡಿದೆ. ಆತ ಗಂಭೀರವಾಗಿ ಕೇಳಿದ 'ಅದೇನು ಹೇಳಿ ಸಾರ್?' ಎಂದ.

'ಒಂದು ಮಾನ ಇನ್ನೊಂದು ಮರ್ಯಾದೆ'. ಈ ಎರಡೂ ನಮ್ಮ ಬದುಕಿಗೆ ನೈತಿಕ ಸ್ಥೈರ್ಯ ನೀಡುವಂಥಹುದು ಅದು ಬಿಟ್ಟರೆ ನಮ್ಮ ಈ ಸಮಾಜದಲ್ಲಿ ಹಣದ ಹೊಳೆಯೇ ಹರಿದು ಎಲ್ಲವನ್ನೂ ಪಡೆಯಬಹುದು. ನೈತಿಕತೆ ನಮ್ಮ ಬದುಕಿನಲ್ಲಿರುವ ದೊಡ್ಡ ಆಸ್ತಿ ಅದನ್ನು ಒಮ್ಮೆ ಕರಗಿಸಿದರೆ ಮತ್ತೆ ಸಿಗುವುದಿಲ್ಲ. ಬದುಕಿನಲ್ಲಿ ನೈತಿಕತೆ ಕರಗಿ ಆವಿಯಾದಲ್ಲಿ ಎಂದೂ ಮತ್ತೆ ಗೋಚರಿಸದು. ಅದಕ್ಕೆ ಬದಲಾಗಿ ನೀವು ಗಳಿಸಿದ ಎಷ್ಟು ಹಣವೂ ತೂಗುವುದಿಲ್ಲ. ನಿಮ್ಮನ್ನು ಪ್ರೀತಿಸುವ ತಂದೆ, ತಾಯಿಗಳು, ಹೆಂಡತಿ, ಮಕ್ಕಳು ಮತ್ತು ನಿಮ್ಮ ಮುಖದಲ್ಲಿನ ನಗು ಇವುಗಳು ನಿಮ್ಮ ದೊಡ್ಡ ಆಸ್ತಿಯಲ್ಲವೇ! ಈ ಆಸ್ತಿಗೆ ಎಷ್ಟು ಬೆಲೆ ಇರಬಹುದು ಊಹಿಸಿ?' ಎಂದು ಕೊನೆಯದಾಗಿ ಕೇಳಿದೆ.

'ಈಗ ಹೇಳಿ, ಏನನ್ನು ಕಳೆದುಕೊಂಡು ಸುಲಭದ ಎಷ್ಟು ಹಣ ಪಡೆಯುತ್ತೀರಿ, ನಿಮಗೆ ತೃಪ್ತಿ ನೀಡುವ ಮೊತ್ತ ಎಷ್ಟು? ಗಂಭೀರವಾಗಿ ನಗುತ್ತಾ ಆ ಯುವಕ ಹೇಳಿದ 'ಇನ್ನೆಂದೂ ಹಣದ ಬಗ್ಗೆ ಹೆಚ್ಚು ಯೋಚನೆ ಮಾಡದಂತೆ ಹೇಳಿಬಿಟ್ಟರಿ, ಥ್ಯಾಂಕ್ಸ್' ಎಂದವನೇ ಪೋನ್ ಮಾಡಲು ಬಂದ ಗಿರಾಕಿಯನ್ನು 'ನಂಬರ್, ಹೇಳಿ' ಎಂದು ಪೋನ್‌ನ ಡಯಲ್ ತಿರುಗಿಸುವಲ್ಲಿ ತಲ್ಲೀನನಾದ ನಾನು ಬೂತಿನಿಂದ ದೂರ ಬಂದೆ.

ನಾನು ಕಂಡ ಈ ನಗರದ ಲಕ್ಷಾಂತರ ಜನರ ಬದುಕು ಇಂದು ಹಣಕ್ಕಾಗಿ ನಾವು ಏನನ್ನೂ ಮಾಡಬಲ್ಲೆವೆಂಬ ಕೆಟ್ಟ ಆತ್ಮವಿಶ್ವಾಸದ ಮೇಲೆ ನಿಂತಿದೆ. ಆದರೆ ಅವರಾರಿಗೂ ಅದರಿಂದ ತಾವು ಕಳೆದುಕೊಳ್ಳುವುದು ಏನನ್ನು ಎಂಬ ಅರಿವಿಲ್ಲ. ಆ ಅರಿವು ಸಾಧ್ಯವಾದರೆ ನಮ್ಮ ಹಿರಿಯರು ಹಿಂದೆ ಸರಳವಾದ, ನೆಮ್ಮದಿಯ ಬದುಕನ್ನು ಹೇಗೆ ಸಾಗಿಸಿ ಅವರ ಬದುಕಿನಲ್ಲಿ 'ನಗು' ಹಸಿರಾಗಿತ್ತು ಎಂಬ ಗುಟ್ಟು ತಿಳಿಯುತ್ತದೆ.

ಆದರೆ ಅಂತಹ 'ಅರಿವು' ಸಾಧ್ಯವಾಗುವ ವ್ಯವಧಾನ, ಸಂಯಮ ಈ ವೇಗದ ಬದುಕಿನ ಕ್ರಮದಲ್ಲಿ ಸಾಧ್ಯವೇ? ನಮ್ಮನ್ನು ನಾವೇ ಕೇಳಿಕೊಳ್ಳಬೇಕಾದ ಬದುಕಿನ ಮುಖ್ಯ ಪ್ರಶ್ನೆ ಇದಾಗಿದೆ. ■

ಹೊಸ ಪುಸ್ತಕ




ಝೇಂಕಾರ
(ಕವನ ಸಂಕಲನ)

ಲೇ: ಸೋಗಿ ನಾಗರಾಜ್.
ಪ್ರ: ಅಭಿವ್ಯಕ್ತಿ ಪ್ರಕಾಶನ
ಹಗರಿಬೊಮ್ಮನಹಳ್ಳಿ
(ಬಳ್ಳಾರಿ ಜಿಲ್ಲೆ)
ಪುಟ: 64, ಬೆಲೆ: 25/-



ಗತಿ, ಸ್ಥಿತಿ
(ಕಾದಂಬರಿ)

ಲೇ: ಗಿರಿ
ಪ್ರ: ಅಂಕಿತ ಪುಸ್ತಕ
53, ಶ್ಯಾಮ್‌ಸಿಂಗ್ ಕಾಂಪ್ಲೆಕ್ಸ್,
ಗಾಂಧೀ ಬಜಾರ್ ಮುಖ್ಯರಸ್ತೆ,
ಬಸವನಗುಡಿ, ಬೆಂಗಳೂರು - 560 004
ಪುಟ: 140, ಬೆಲೆ: 50/-



ಮನಸಿನ ಮಾತುಗಳು
(ಕವನ ಸಂಕಲನ)

ಲೇ: ಎಸ್. ತಮ್ಮಾಜಿರಾವ್
ಪ್ರ: ಷಡಕ್ಷರಿ ಪ್ರಕಾಶನ
1125, 'ಶ್ರೀಯಾಜ್ಞವಲ್ಕ್ಯ'
ಕಂಚಾಗಟ್ಟರಸ್ತೆ,
ತಿಪಟೂರು - 572 201
ಪುಟ: 70, ಬೆಲೆ: 30/-



ನನ್ನ ಎರಡನೇ ಹೆಂಡ್ತಿ
(ವಿನೋದ ಲೇಖನಗಳು)

ಲೇ: ಕ.ಬ. ವೀರಣ್ಣ ಕಣ್ಣಾಗಾಲ
ಪ್ರ: ಕೃತ್ತಿಕಾ ಪ್ರಕಾಶನ
ಕಣ್ಣಾಗಾಲ - 571 115
ಜಿ. ಚಾಮರಾಜನಗರ
ಪುಟ: 125, ಬೆಲೆ: 30/-



ಅನುಪಮಚರಿತ ಅಲ್ಲಮಪ್ರಭುದೇವ

ಲೇ: ಬಸವರಾಜ ಪುರಾಣಿಕ
ಪ್ರ: ಅನಿಮಿಷ ಪ್ರಕಾಶನ
ಚರಂತಿಮಠ, ಬಾಗಲಕೋಟೆ
ಪುಟ: 262, ಬೆಲೆ: 100/-




ಪರಿಸರ ನಿಘಂಟು
(ಪರಿಸರ- ಇಕಾಲಜಿಗಳ ವಿಸ್ತೃತ ವಿವರಣಾತ್ಮಕ ಅರ್ಥಕೋಶ)

ಲೇ: ಟಿ.ಎಸ್.ವಿವೇಕಾನಂದ್
ಶೇಷಗಿರಿ ಜೋಡಿದಾರ್
ಪ್ರ: ಇಂದ್ರಪ್ರಸ್ಥ ಪ್ರಕಾಶನ
ನಂ. 360, 1ನೇ ಕ್ರಾಸ್, ಗವಿಪುರಂ,
ಸರ್ವೆಂಟ್ಸ್ ಕಾಲೋನಿ, ಬೆಂ- 19.
ಪುಟ: 482, ಬೆಲೆ: 200/-



ದೇಶೀ ದರ್ಶನಗಳು

ಸಂ: ನ.ರವಿಕುಮಾರ
ಪ್ರ: ಅಭಿನವ ಪ್ರಕಾಶನ
ಸಂಖ್ಯೆ:4148/ಎ, 3ನೇ ಮುಖ್ಯರಸ್ತೆ, ಬಿ.
ವಿಭಾಗ, ರಾಜಾಜಿನಗರ ಎರಡನೆಯ
ಹಂತ, ಬೆಂ-21
ಪುಟ: 188, ಬೆಲೆ: 60/-



ಉಸಿರ ಕಡಲ ಹೆಸರ ಹಡಗುಗಳು
(ಹಾಸ್ಯ ಪ್ರಬಂಧಗಳು)

ಲೇ: ಕುಂ.ಬಾ. ಸದಾಶಿವಪ್ಪ
ಪ್ರ: ಮಾಲತೇಶ ಪ್ರಕಾಶನ
ಹರಪನಹಳ್ಳಿ - 583 131
ಪುಟ: 142, ಬೆಲೆ: 50/-

ಶಿಲೆಯಂತಾದ ಮನುಷ್ಯ

■ ಕ.ಬಿ.ಬೊಮ್ಮನಾಳ

ರಾಮರಾವ ಈ ನಡುವೆ ಆಗಾಗ್ಗೆ ಹುಡುಗರ ಮೇಲೆ ಹರಿ ಹಾಯುವುದು, ಎದುರಿಗೆ ಸಿಕ್ಕವರನ್ನು ಬಾಯಿಗೆ ಬಂದಂತೆ ಬೈಯುವುದನ್ನು ನೋಡುತ್ತಿದ್ದರೆ ಜಾನಕಿಗೆ ಎದೆಗೆ ಮುಳ್ಳು ಚುಚ್ಚಿದಂತಾಗುತ್ತದೆ. ನಾಲ್ಕು ತಿಂಗಳ ಹಿಂದೆ ಆತ ಎಷ್ಟು ಒಳ್ಳೆಯವರಿದ್ದರು. ತನ್ನ ಮಕ್ಕಳನ್ನು ಎಷ್ಟು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು. ಅಂತಹ ಮನುಷ್ಯ ಇತ್ತೀಚಿಗೆ ಯಾವ ಕಾರಣವಿಲ್ಲದೆ ಹೀಗಾಗಿ ಬಿಟ್ಟಿರುವುದು ತನಗೆ ಅರ್ಥವೇ ಆಗುತ್ತಿಲ್ಲ.

''ಏನಿದು, ಮನೆಗೆ ಬಂದ ಗಂಡನಿಗೆ ತಂಬಿಗೆ ನೀರು ಕೊಡಬೇಕೆನ್ನುವ ಜ್ಞಾನ ಬೇಡವೆ? ದರಿದ್ರದವಳೆ.... ನೀನು ಸತ್ತು ಹೋದರೆ ಚೆನ್ನಾಗಿರುತ್ತದೆ. ಶನಿಯಂತೆ ಮನೆ ಹಿಡಿದು ಕುಳಿತಿದ್ದಾಳೆ.'' ಎಂದು ಹೆಂಡತಿಯನ್ನು ಬೈಯುತ್ತಾ ಮನೆಯೊಳಕ್ಕೆ ನುಗ್ಗಿದ ರಾಮರಾವ. ಕಣ್ಣು ತುಂಬಾ ನೀರು ತುಂಬಿಕೊಂಡು ಕೊಠಡಿಯೊಳಕ್ಕೆ ನೀರಿನ ತಂಬಿಗೆ ತೆಗೆದುಕೊಂಡು ಹೋಗಿ ಕೊಟ್ಟಳು ಜಾನಕಿ.

''ಮನೆಯಲ್ಲಿ ನೀನೊಂದು ದರಿದ್ರ... ಆಫೀಸಿನಲ್ಲಿ ನನ್ನೊಡನೆ ಕೆಲಸ ಮಾಡುವವರು ಅಷ್ಟದರಿದ್ರಗಳು. ಎಲ್ಲಾ ಹಗರಣಗಳನ್ನು ನನ್ನ ಮೇಲೆ ಹಾಕಿ ಆಫೀಸರ್‌ಗೆ ಚಾಡಿ ಹೇಳುತ್ತಿದ್ದಾರೆ. ಆ ಆಫೀಸರ್ ಕತ್ತೆ ಕೂಡಾ ನನ್ನ ಮೇಲೆ ಕೆಂಡ ಕಾರುತ್ತಿದೆ.'' ಎಂದು ತನ್ನಲ್ಲೇ ತಾನು ಗೊಣಗಿಕೊಳ್ಳುತ್ತಾ ಬಾತ್‌ರೂಮಿಗೆ ಹೊರಟನು ರಾಮರಾವ.

ಅಂದಿನಿಂದ ರಾಮರಾವ ವರ್ತನೆಯಲ್ಲಿ ಬದಲಾವಣೆ ಹೆಚ್ಚುತ್ತಾ ಹೋಯಿತು. ಕೊಠಡಿಯಲ್ಲಿ ಯಾರಿರದಿದ್ದರೂ ತನ್ನಷ್ಟಕ್ಕೆ ತಾನೇ ಮಾತಾಡಿಕೊಳ್ಳುವುದು, ಆಫೀಸಿನಲ್ಲಿ ಯಾರೋ ತನ್ನನ್ನು ವಾಚ್ ಮಾಡುತ್ತಿದ್ದಾರೆಂದೂ, ರಾತ್ರಿ ವೇಳೆ ತನ್ನ ಮನೆಯ ಸುತ್ತಲೂ ಯಾರೋ ಅಡಗಿ ಕುಳಿತು ತನ್ನನ್ನು ಗಮನಿಸುತ್ತಿದ್ದಾರೆಂದೂ ರಾತ್ರಿ ನಿದ್ರೆ ಇಲ್ಲದಂತೆ ಮನೆಯ ಸುತ್ತಲೂ ತಿರುಗಾಡಲು ಪ್ರಾರಂಭಿಸಿದ್ದು, ನಿದ್ದೆಗೆಟ್ಟದ್ದಲ್ಲದೆ, ಸರಿಯಾಗಿ ಊಟವೂ ಇಲ್ಲದೆ ದಿನವೂ ಆಫೀಸಿಗೆ ಹೋಗುವುದನ್ನು ನಿಲ್ಲಿಸಿಬಿಟ್ಟ. ಗಡ್ಡ ಮಾಡಿಕೊಳ್ಳುವುದು, ಸ್ನಾನ ಮಾಡುವುದನ್ನು ಕೂಡಾ ಕಡಿಮೆ ಮಾಡಿ ಬಿಟ್ಟ. ಹೆದರಿಕೆಯಿಂದ ಬೆಚ್ಚಿ ಬೀಳುವುದು, ಎಲ್ಲಿ ಕೂತರೆ ಅಲ್ಲೇ ತಾಸುಗಟ್ಟಲೆ ಕುಳಿತುಬಿಡುವುದು, ಕಲ್ಲಿನಂತೆ ಮಿಸುಕಾಡದೆ ಒಂದೇ ಸ್ಥಳದಲ್ಲಿ ಕುಳಿತು ಬಿಡುವುದು ರೂಢಿಯಾಗಿ ಬಿಟ್ಟಿತು.

ನಂತರದ ದಿನಗಳಲ್ಲಿ ರಾಮರಾವ ಎರಡು ಮೂರು ದಿನಗಳಿಂದ ಒಂದು ತುತ್ತು ಅನ್ನ ಕೂಡಾ ತಿನ್ನದೆ ಕುಳಿತುಬಿಟ್ಟ, ಕಣ್ಣು ರೆಪ್ಪೆ ಬಡಿಯುವುದನ್ನು ಕೂಡಾ ನಿಲ್ಲಿಸಿದ್ದಾನೇನೊ ಎನ್ನುವ ಹಾಗೆ, ಮನುಷ್ಯ ಶಿಲೆಯಂತೆ ಕುಳಿತಿರುವುದು ಜಾನಕಿಗೆ ಬಹಳ ಚಿಂತೆಗೀಡು ಮಾಡಿತು. ತಿಂಗುಳುಗಟ್ಟಲೆ ಜನ ಹೇಳಿದುದನ್ನೆಲ್ಲಾ ಮಾಡಿ ಮುಗಿಸಿದಳು. ಗುಡಿಗೆ ಪ್ರದರ್ಶನ ಹಾಕಿದಳು. ಯಾರೋ ಹೇಳಿದರೆಂದು ವೀರಾಂಜನೇಯ ಮಂತ್ರಗಳು ಪಠಿಸಿದಳು, ಪೂಜೆಗಳನ್ನು ಮಾಡಿಸಿದಳು. ಆದರೂ ನಾಲ್ಕು ದಿನಗಳಿಂದ ರಾಮರಾವನ ಪರಿಸ್ಥಿತಿಯನ್ನು ನೋಡಿದರೆ ಜಾನಕಿಗೆ ತಡೆದುಕೊಳ್ಳಲಾಗುತ್ತಿಲ್ಲ.

ರಾಮರಾವ ಎರಡು ಮೂರು ದಿನಗಳಿಂದ ಒಂದು ತುತ್ತು ಅನ್ನ ಕೂಡಾ ತಿನ್ನದೆ ಕುಳಿತುಬಿಟ್ಟ, ಕಣ್ಣು ರೆಪ್ಪೆ ಬಡಿಯುವುದನ್ನು ಕೂಡಾ ನಿಲ್ಲಿಸಿದ್ದಾನೇನೊ ಎನ್ನುವ ಹಾಗೆ. ಮನುಷ್ಯ ಶಿಲೆಯಂತೆ ಕುಳಿತಿರುವುದು ಜಾನಕಿಗೆ ಬಹಳ ಚಿಂತೆ ಗೀಡು ಮಾಡಿತು. ತಿಂಗುಳುಗಟ್ಟಲೆ ಜನ ಹೇಳಿದುದನ್ನೆಲ್ಲಾ ಮಾಡಿ ಮುಗಿಸಿದಳು.

ಆ ದಿನವೇ ತಮ್ಮ ಫ್ಯಾಮಿಲಿ ಡಾಕ್ಟರ್ ಹತ್ತಿರ ಹೋಗಿ, ಎಲ್ಲಾ ವಿಷಯವನ್ನು ವಿವರಿಸಿದಳು. ಎಲ್ಲಾ ಕೇಳಿದ ಡಾಕ್ಟರು ತನಗೆ ಗೊತ್ತಿದ್ದ ಮಾನಸಿಕತಜ್ಞ ವೈದ್ಯರನ್ನು ಸಂಪರ್ಕಿಸಲು ಸೂಚಿಸಿದರು.

ಮರುದಿನ ರಾಮರಾವನನ್ನು ಪೂರ್ತಿಯಾಗಿ ಪರೀಕ್ಷಿಸಿದ ಮಾನಸಿಕ ತಜ್ಞ ವೈದ್ಯ ರವಿ, ಜಾನಕಿಗೆ ವಿಷಯವನ್ನು ವಿವರಿಸತೊಡಗಿದ.

''ಜಾನಕಿಯವರೆ, ನಿಮ್ಮ ಯಜಮಾನರಿಗೆ ಸ್ಕಿಜೋಫ್ರೆನಿಯಾ ರೋಗ ತಗುಲಿದೆ. ಈ ರೋಗಕ್ಕೆ ವ್ಯಾವಹಾರಿಕ ಭಾಷೆಯಲ್ಲಿ ಮ್ಯಾಡ್‌ನೆಸ್ (ಅಥವಾ ಹುಚ್ಚು) ಎಂದು ಕರೆಯುತ್ತಾರೆ. ಇದೊಂದು ಮಾನಸಿಕ ಕಾಯಿಲೆ. 15 ರಿಂದ 35 ವರ್ಷಗಳ ನಡುವಿನ ವಯಸ್ಸಿನವರಲ್ಲಿ ಈ ಕಾಯಿಲೆ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ಈ ತೊಂದರೆ ಸ್ತ್ರೀ ಪುರುಷರೆಂಬ ಭೇದ ತೋರದೆ ಪೀಡಿಸುತ್ತದೆ.

ಈ ಕಾಯಿಲೆಗೆ ಕಾರಣಗಳು

ಮಿದುಳಿನಲ್ಲಿ ಥೋಪಮಿನ್ ಎನ್ನುವ ರಾಸಾಯನಿಕ ಪದಾರ್ಥ ವ್ಯಾಧಿಗ್ರಸ್ತರಲ್ಲಿ, ಸಾಮಾನ್ಯವಾಗಿ ಇರಬೇಕಾದುದಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಕಂಡುಬರುತ್ತದೆ. ತಳಿಶಾಸ್ತ್ರ ಪ್ರಕಾರ ರಕ್ತಸಂಬಂಧಿಕರಲ್ಲಿ ಈ ವ್ಯಾಧಿ ಇತರೇ ಜನರಿಗಿಂತ ಸ್ವಲ್ಪ ಪ್ರಮಾಣದಲ್ಲಿ ಹೆಚ್ಚು ಕಂಡು ಬರುತ್ತದೆ..... ಇವರು ನಿಜ ಜೀವನದಲ್ಲಿ ಬಡಬಡಿಕೆ, ಗೊಂದಲಗಳಿಂದ ಪ್ರೇರಿತರಾದವರಂತೆ ಕಾಣುತ್ತಾರೆ.

ರೋಗವನ್ನು ಪ್ರಾರಂಭದಲ್ಲೇ ಗುರುತಿಸುವುದು ಹೇಗೆ?

ಈ ವ್ಯಾಧಿಗ್ರಸ್ತರು ದಿನೇ ದಿನೇ ನಾಲ್ಕೂ ಜನರಿಂದ, ಸಮಾಜದಿಂದ ದೂರವಾಗಿ ಸದಾ ಏಕಾಂತವನ್ನೇ ಬಯಸುತ್ತಾರೆ. ದೈಹಿಕ ನೋವುಗಳು, ಆಲೋಚನಾ ವಿಧಾನದಲ್ಲಿ ಬದಲಾವಣೆ, ಹಗಲುಗನಸುಗಳು, ವ್ಯಾಕುಲತೆ ಮೊದಲಾದುವುಗಳು ಕಾಣಿಸಿಕೊಳ್ಳುತ್ತವೆ.

ಈ ರೋಗ ಎಷ್ಟು ರೀತಿಯಲ್ಲಿ ಕಾಣಬಹುದು?

ಹೆಬಿಫ್ರೆನಿಕ್ ಟೈಪ್ ಈ ರೋಗ 25 ವರ್ಷಗಳ ಒಳಗೇ ಕಂಡುಬರುತ್ತದೆ. ಈ ರೋಗಿಗಳು ತಮ್ಮ ವಯಸ್ಸಿನವರಿಗಿಂತ ಸಣ್ಣವರಂತೆ ವರ್ತಿಸುವುದು, ಗುರಿ ಇಲ್ಲದ ಪ್ರವರ್ತನೆ, ಕಾರಣವಿಲ್ಲದೆ ನಗುವುದು, ಪದೇ ಪದೇ ಕನ್ನಡಿಯಲ್ಲಿ ನೋಡಿಕೊಳ್ಳುವುದು, ಅರ್ಥವಿಲ್ಲದ ಅನುಮಾನಗಳೊಡನೆ,

ಭಯಾತಂಕಗಳನ್ನು ಬೆಳಸಿಕೊಂಡು ಒದ್ದಾಡುತ್ತಿರುತ್ತಾರೆ.

ಕೆಟಟೋನಿಕ್ ಟೈಪ್ ಇದು ನಿಮ್ಮವರು - ರಾಮರಾಯರನ್ನು ಕಾಡುತ್ತಿರುವ ಕಾಯಿಲೆ ಯಂಥಾದ್ದು, ಈ ತೆರನಾದ ಕಾಯಿಲೆಯಲ್ಲಿ. ರೋಗಗ್ರಸ್ತರು, ಚಲನವಲನವಿಲ್ಲದೆ ಶಿಲೆಗಳಂತೆ ನಿಶ್ಚಲವಾಗಿ, ಮೂಕರಂತೆ ಮಾತಾಡದೆ ಕುಳಿತು ಬಿಡುವುದು, ಸಮಾಜ, ವೃತ್ತಿ ಮತ್ತು ವ್ಯಕ್ತಿಗತ ಜೀವನಕ್ಕೆ ದೂರವಾಗುತ್ತಾರೆ.

ಪಾರಾನಾಯಿಡ್ ಟೈಪ್ ಈ ವ್ಯಾಧಿ 20ನೇ ವರ್ಷದಿಂದ 35 ವರ್ಷಗಳ ಮಧ್ಯೆ ಹೆಚ್ಚಾಗಿ ಕಾಣಿಸುತ್ತದೆ. ಈ ರೋಗದಲ್ಲಿ ಬೇರೆಯವರು ತಮಗೆ ಏನೋ ಹಾನಿ ಮಾಡುತ್ತಾರೆಂದು ಅನುಮಾನಿಸುವುದು, ಭಯಗೊಳ್ಳುವುದು, ಅತಿ ಉತ್ತೇಜಿತರಾಗಿ ಒಂದೊಂದು ಸಾರಿ ತಿರುಗಿ ಬೀಳುವುದು, ಇದಲ್ಲದೆ ಇವರಿಗೆ, ಸುತ್ತಮುತ್ತಲಿನಲ್ಲಿ ಯಾರೂ ಇರದಿದ್ದರೂ ಮಾತಾಡುತ್ತಿರುವ ಧ್ವನಿ ಕೇಳಿದಂತೆ, ಭಾಸವಾಗುವುದರಿಂದ ಭಯಗೊಳ್ಳುವುದು, ಕಂಗಾಲಾಗುವುದು ಕಂಡುಬರುತ್ತವೆ.

ಉಪಚಾರ

ವ್ಯಾಧಿ ತೀವ್ರ ದಿಸೆಯಲ್ಲಿರುವಾಗ ರೋಗಿಯನ್ನು, ಕೆಲವು ದಿನಗಳವರೆಗೆ ಆಸ್ಪತ್ರೆಯಲ್ಲಿರಿಸಿ ಔಷಧೋಪಚಾರ ಮಾಡಿಸುವುದು ಒಳ್ಳೆಯದು. ಆ್ಯಂಟಿಸೈಕೋಟಿಕ್ಸ್ ಎನ್ನುವ ಔಷಧಿಯ ಸಹಾಯದಿಂದ ಉಪಚರಿಸುವುದು ಒಳ್ಳೆಯದು.

ನಿಮ್ಮವರಿಗೆ ಈಗಿರುವ ಪರಿಸ್ಥಿತಿಯಲ್ಲಿ ಎಲೆಕ್ಟ್ರೋಕನ್ವಲ್ಸಿಸ್ ಟ್ರೀಟ್‌ಮೆಂಟ್ (ಶಾಕ್ ಟ್ರೀಟ್‌ಮೆಂಟ್) ದಿಂದ ಉತ್ತಮ ಪರಿಣಾಮ ದೊರೆಯುತ್ತದೆ. ಇವಲ್ಲದೆ ಬಿಹೇವಿಯರ್ ಥೆರಪಿ, ಫ್ಯಾಮಿಲಿ ಥೆರಪಿ, ಗ್ರೂಪ್ ಥೆರಪಿ ಮೊದಲಾದವುಗಳನ್ನು ಅವಶ್ಯಕತೆಗೆ ತಕ್ಕಂತೆ ಉಪಯೋಗಿಸಬೇಕು. ಈ ವ್ಯಾಧಿ ಪ್ರಾರಂಭವಾದಂದಿನಿಂದ ಆರು ತಿಂಗಳವರೆಗೆ ಇಲ್ಲವೆ 12 ತಿಂಗಳವರೆಗೆ ವೈದ್ಯರ ಸಲಹೆಯನ್ನು ಪಾಲಿಸುತ್ತಿರಬೇಕು.

ಈ ರೋಗ ಕಾಣಿಸಿಕೊಂಡ ಮೇಲೆ ವೈದ್ಯರ ನೆರವಿನಿಂದ ನಿಮ್ಮವರ ದೈನಂದಿನ, ವ್ಯಕ್ತಿಗತ, ಸಾಮಾಜಿಕ ಜೀವನ ಎಲ್ಲಾ ಉತ್ತಮಗೊಳ್ಳುತ್ತವೆ.' ಎಂದು ಡಾಕ್ಟರ್ ತಿಳಿಸಿದರು.

ಆಮೇಲೆ ಔಷಧೋಪಚಾರ ಪ್ರಾರಂಭಿಸಿ ಎರಡು ವಾರಕ್ಕೇ ರಾಮರಾವನಲ್ಲಿ ಒಳ್ಳೆಯ ಬದಲಾವಣೆಗಳನ್ನು ನೋಡಿ, ಜಾನಕಿ ಆನಂದಕ್ಕೆ ಮಿತಿಯೇ ಇಲ್ಲದಂತಾಯಿತು. ■

ಸಾಧಿ ನೀಡಿದ ಹಾಥಿ ಕಥೆ

ಕರ್ನಾಟಕದಾದ್ಯಂತ ಜನರ ಮೆಚ್ಚುಗೆಗೆ ಪಾತ್ರನಾಗಿದ್ದ, ಚಲನಚಿತ್ರ ಅಭಿನಯವಲ್ಲದೇ ಸಮಾರಂಭಗಳಲ್ಲಿ ಕಾಣಿಸಿಕೊಂಡು, ತನ್ನ ಹಲವಾರು ಚಮತ್ಕಾರಗಳ ಮೂಲಕ ಮಕ್ಕಳಿಂದ ದೊಡ್ಡವರವರೆಗೆ ಮೋಡಿಗಾರನಾಗಿದ್ದ ಗಜರಾಜ ಉಜಿರೆ ಕೃಷ್ಣ. ಕನ್ನಡ, ತೆಲುಗು, ತಮಿಳು, ಹಿಂದಿ ಮುಂತಾದ ಚಲನಚಿತ್ರಗಳಲ್ಲಿ ನಟಿಸಿ ಖ್ಯಾತಿಯನ್ನು ಪಡೆದ ಈ ಆನೆ ಮಾರ್ಚ್ 25 ರಂದು ನೆಲ್ಯಾಡಿಯ ಗೋಳಿ ತೊಟ್ಟು ಎಂಬಲ್ಲಿ ಹೃದಯಾಘಾತಕ್ಕೊಳಗಾಗಿ ಸಾವನ್ನಪ್ಪಿತು.

ಉಜಿರೆಯ ಜನಾರ್ಧನ ಪ್ರಭು ಇವರು ಕಾಡಿನಲ್ಲಿ ಖೆಡ್ಡ ಮೂಲಕ ಆನೆಯನ್ನು ಹಿಡಿಯುವ ಕಾರ್ಯದಲ್ಲಿದ್ದು ಮರಿ ಆನೆ ಒಂದು ಇವರ ಪಾಲಿಗೆ ಸಿಕ್ಕಿ ಅದನ್ನು ಬೆಳೆಸಿ ಬುದ್ಧಿ ಕಲಿಸಿ ಸಮಾರಂಭಗಳಲ್ಲಿ ಭಾಗವಹಿಸಲು ತರಬೇತಿ ನೀಡಿದರು. ಬಳಿಕ ಇವರ ಮಗ ವಾಸುದೇವ ಪ್ರಭುಗಳು ಸುಮಾರು 25 ವರ್ಷಗಳ ಕಾಲ ತನ್ನ ಒಡೆತನದಲ್ಲಿಟ್ಟುಕೊಂಡು ಅನಂತರ ಉಪ್ಪಿನಂಗಡಿಯ ಕರುಣಾಕರ ಪೂಜಾರಿಯವರಿಗೆ ಹಸ್ತಾಂತರ ಮಾಡಿದರು.

ಆಕರ್ಷಕ, ಗಂಭೀರ ನಡಿಗೆಯ, ಸೊಂಡಿಲಿನಿಂದ ಚಾಮರ ಬೀಸುವ, ಗಣ್ಯ ಅತಿಥಿಗಳನ್ನು ತನ್ನ ಮುಂದಾಳತ್ವದಲ್ಲಿ ಕರೆದೊಯ್ಯುವ ಹಾಗೂ ಧಾರ್ಮಿಕ, ಶೈಕ್ಷಣಿಕ, ಸಾಂಸ್ಕೃತಿಕ, ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಸಮಾರಂಭಗಳಲ್ಲಿ ಒಂದು ವಿಶೇಷತೆಯನ್ನು ನೀಡುತ್ತಿತ್ತು. ರಾಜಕೀಯ ವ್ಯಕ್ತಿಗಳಿಗೆ, ಧರ್ಮಾಧಿಕಾರಿಗಳಿಗೆ, ಸ್ವಾಮೀಜಿಗಳಿಗೆ, ಚಲನಚಿತ್ರ ನಟರಿಗೆ ಮುಂತಾದವರಿಗೆ ಕೃಷ್ಣ ಸೊಂಡಿಲ ಮೂಲಕ ಹಾರ ಹಾಕಿ ಸ್ವಾಗತ ನೀಡಿ ಗೌರವಿಸಿರುತ್ತಿದ್ದ.

ಆಟ, ಜಾತ್ರೆ, ಕಂಬಳ, ನೇಮೋತ್ಸವ, ಮಕ್ಕಳ ಮೇಳ, ಯುವಜನ ಮೇಳ ಮುಂತಾದ ಉತ್ಸವಗಳಲ್ಲಿ ಉತ್ಸಾಹದಿಂದ ಭಾಗವಹಿಸಿ, ಉತ್ಸವಗಳಿಗೆ ಮೆರುಗು ನೀಡುತ್ತಿದ್ದ ಎರಡು ಕಾಲಲ್ಲಿ ನಿಲ್ಲುವ, ಕ್ರಿಕೆಟ್ ಆಡುವ, ಕಾಲ್ಚೆಂಡು ಒದೆಯುವ ಮುಂತಾದ ಚಮತ್ಕಾರಗಳಿಂದ ಇದರ ತರಬೇತುದಾರರಾದ ಶ್ರೀನಿವಾಸ ಮಾವುತನೊಂದಿಗೆ ಸೊಂಡಿಲ ಆಟ, ದಾಡೆ ಕಸರತ್ತು ಹೀಗೆ ಹಲವಾರು ಆಟಗಳಿಂದ ಪ್ರೇಕ್ಷಕರ ಮನರಂಜಿಸಿದ್ದನು.

ಕನ್ನಡ ಚಿತ್ರಗಳಾದ ಹುಣ್ಣಿಮೆಯ ರಾತ್ರಿಯಲ್ಲಿ, ಕರಿಮಲೆಯ ಕಗ್ಗತ್ತಲು, ಕಾಡಿನರಾಜ, ದೊಂಬರಕೃಷ್ಣ, ಗಂಧದ ಗುಡಿ, ಸಿಂಹದ ಮರಿಸೈನ್ಯ, ನಾಗರಹೊಳೆ ಮುಂತಾದವುಗಳಲ್ಲಿ ಈ ಆನೆ ಕಾಣಿಸಿಕೊಂಡಿತ್ತು ಕನ್ನಡವೇ ಅಲ್ಲದೇ ಹಿಂದಿ, ತೆಲುಗು, ತಮಿಳು ಚಲನಚಿತ್ರಗಳಲ್ಲಿಯೂ ಅಭಿನಯಿಸಿರುವ 'ಬಹುಭಾಷಾ ವನರಾಜ ಪಂಡಿತ'ನಾಗಿದ್ದನು. ಮಾತು ಆಡದ ಅಭಿನಯದ ಶೂರ ದಂತದ ರುಚಿಯನ್ನು ಕೆಲವರಿಗೆ ತೋರಿಸಿರುತ್ತಾನೆ. ಇದರಿಂದ ಬೇಸತ್ತ ಪ್ರಭುಗಳು ಮರ ಎಳೆಯುವ ಕಾಯಕದ ಕರುಣಾಕರ ಪೂಜಾರಿಯವರಿಗೆ ಕೊಟ್ಟು ಬಿಟ್ಟರು.

ಲಾರಿ ಅಪಘಾತದಲ್ಲಿ ಏಕದಂತನಾದ ಈ ಸಲಗ, ಮರ ಎಳೆಯುವ ಕಾರ್ಯಕ್ಕೆ ಇಳಿದಿದ್ದು ಒಂದು ವಿಪರ್ಯಾಸವಾಯಿತು. ಈ ಕೆಲಸದೊಂದಿಗೆ ಸಮಾರಂಭಗಳಲ್ಲಿ ಭಾಗವಹಿಸಿ ತನ್ನ ಶೂರತನವನ್ನು ಪ್ರದರ್ಶಿಸುತ್ತಿತ್ತು. ಕೊನೆಗೆ ಕಾಡಿನಲ್ಲಿ ವಿಹಾರ ವೇಳೆಯಲ್ಲಿ ಹೃದಯಾಘಾತಕ್ಕೊಳಗಾಗಿ ತನ್ನ ನೆನಪನ್ನಷ್ಟೆ ಬಿಟ್ಟು ಮಣ್ಣಾಯಿತು. ಮಾತನಾಡದೆ ಕಾರ್ಯಾತ್ಮಕವಾಗಿ ಅಪಾರ ಸೇವೆ ಸಲ್ಲಿಸಿದ ಈ ಗಜರಾಜ ಜನತೆಗೆ ವಿಷಾದ ನೀಡಿದ್ದಾನೆ. ತನ್ನ ಸಾಧನೆ ನೆನಪಿಸುವ ಅಸಂಖ್ಯ ಅಭಿಮಾನಿಗಳಿಗೆ ಮೂಕ ವೇದನೆಯ ನೆನಪಾಗಿದ್ದಾನೆ. ಪ್ರಾಣಿಯಾಗಿ ಮಾನವತ್ವ ಬೆಳೆಸಿಕೊಂಡ ಉಜಿರೆ ಕೃಷ್ಣನಿಗೆ ಅಭಿಮಾನಿಗಳ ಶ್ರದ್ಧಾಂಜಲಿ ಸಲ್ಲಲಿ.


■ಉಮಾ ಬೆಳ್ತಂಗಡಿ



ವಯಸ್ಕರಿಗಾಗಿ

■ ಡಾ. ವಸುಂಧರಾ ಭೂಪತಿ

ಚಿಕ್ಕದಿರುವುದೇ ದೊಡ್ಡ ಸಮಸ್ಯೆ



ಅ.ನಾನು 19 ವರ್ಷದ ಯುವಕ ಅಸ್ತಮಾದಿಂದ ನರಳುತ್ತಿದ್ದೇನೆ. ಸಮಸ್ಯೆಯೆಂದರೆ, ನನ್ನ ಶಿಶ್ನ ಚಿಕ್ಕದಾಗಿದ್ದು, ಸೆಕ್ಸ್ ಬಗ್ಗೆ ಯೋಚಿಸಿದಾಗ ದಪ್ಪಗಾಗುತ್ತದೆ. ನನಗೆ ಅಸ್ತಮಾದಿಂದ ಹೀಗಾಗುತ್ತದಾ? ಅಥವಾ ಹೆಚ್ಚು ಕೆಲಸ ಮಾಡುವುದರಿಂದಲಾ? ನನ್ನ ಕಾಯಿಲೆಯಿಂದಾಗಿ ಹೀಗಾಗಿದೆ ಎಂದು ಕೊರಗುತ್ತಿದ್ದೇನೆ. ದಯವಿಟ್ಟು ಪರಿಹಾರ ಸೂಚಿಸಿ.

-ಅಭಿಮಾನಿ, ಬಳ್ಳಾರಿ.


ಆ.ನಾನು 19 ವರ್ಷದ ಆಗರ್ಭ ಶ್ರೀಮಂತನ ಏಕಮೇವ ಸುಪುತ್ರ, ನನ್ನ ಶಿಶ್ನವು ಅತೀ ಚಿಕ್ಕದು ಉದ್ರೇಕಗೊಂಡಾಗ 4 ಇಂಚು ದೊಡ್ಡದಾಗುತ್ತದೆ. ಇದನ್ನು ಬೆಳೆಸಲು ಸಾಧ್ಯವಾ? ಇದೇ ಯೋಚನೆಯಿಂಧ ತಲೆ ಬಿಸಿಯಾಗಿ ಓದಿಗೆ ತುಂಬಾ ತೊಂದ್ರೆಯಾಗಿದೆ. ದಯವಿಟ್ಟು ಉತ್ತರಿಸಿ.

-ಹೆಸರು ಬೇಡ, ರಾಯಚೂರು.

ಸಲಹೆ

ನೀವು ಅನವಶ್ಯಕವಾಗಿ ಚಿಂತೆಗೀಡಾಗಿದ್ದೀರಿ. ನಿಮ್ಮೊಬ್ಬರದೇ ಅಲ್ಲ, ಜಗತ್ತಿನಲ್ಲಿ ಎಲ್ಲ ಪುರುಷರ ಶಿಶ್ನವೂ ಸಹಜವಾಗಿ ಚಿಕ್ಕದಾಗಿಯೇ ಇರುತ್ತದೆ. ಉದ್ರೇಕಗೊಂಡಾಗ ಮಾತ್ರ ದೊಡ್ಡದಾಗುವುದು. ಅಸ್ತಮ ಕಾಯಿಲೆಯಿಂದಾಗಲೀ, ಹೆಚ್ಚು ಕೆಲಸ ಮಾಡುವುದರಿಂದಾಗಲೀ ಖಂಡಿತ ಚಿಕ್ಕದಾಗುವುದಿಲ್ಲ. ಅದರ ಬಗ್ಗೆ ಕೊರಗುವುದನ್ನು ಬಿಟ್ಟು ಓದಿನ ಕಡೆ ಗಮನ ಕೊಡಿ.

ಸೊಸೈಟಿ ಅಕ್ಕಿಯಿಂದ ಶಕ್ತಿ ಕುಂದೀತೆ?



ಎಂಟು ವರ್ಷದಿಂದ ಸೊಸೈಟಿ ಅಕ್ಕಿ ತಿಂದು ಜೀವಿಸುತ್ತಿದ್ದೇನೆ. ಮದುವೆಯಾಗಿ ಮಕ್ಕಳಿವೆ. ಲೈಂಗಿಕ ಸಂಪರ್ಕ ಒಂದೇ ಸಾರಿ ಮಾಡಿ ಬಿಡುತ್ತೇನೆ. ಮತ್ತೊಮ್ಮೆ ಮಾಡಲಾಗದು. ಇದರಿಂದ ನನ್ನ ಹೆಂಡತಿಗೂ ಅತೃಪ್ತಿ ಎಂದನಿಸುತ್ತದೆ. ಸೊಸೈಟಿ ಅಕ್ಕಿಯಿಂದಾಗಿ ನನ್ನ ಲೈಂಗಿಕ ಶಕ್ತಿ ಕುಗ್ಗಿದೆಯೋ ಹೇಗೆ? ಪರಿಹಾರ ಸೂಚಿಸಿ. ವಂದನೆಗಳೊಂದಿಗೆ

-ಹೆಸರು ಬೇಡ, ಊರು ಬೇಡ.

ಸಲಹೆ


ಸೊಸೈಟಿ ಅಕ್ಕಿಯನ್ನು ನೀವೊಬ್ಬರೇ ಅಲ್ಲ, ನಮ್ಮ ದೇಶದಲ್ಲಿ ಬಹಳಷ್ಟು ಜನ ಅದನ್ನೇ ತಿಂದು ಜೀವಿಸುತ್ತಿದ್ದಾರೆ. ಸೊಸೈಟಿ ಅಕ್ಕಿಗೂ ಲೈಂಗಿಕ ಶಕ್ತಿಗೂ ಯಾವುದೇ ಸಂಬಧವಿಲ್ಲ. ಒಂದೇ ಬಾರಿ ಲೈಂಗಿಕ ಕ್ರಿಯೆ ಮಾಡಿದರೂ ತೃಪ್ತಿ ಖಂಡಿತ ದೊರಕುತ್ತದೆ. ನಿಮ್ಮ ಹೆಂಡತಿ ಅತೃಪ್ತರಾಗಿದ್ದಾರೆ ಎಂದು ನೀವು ಹೇಗೆ ಭಾವಿಸುವಿರಿ? ನಿಮಗೆ ನೀವೇ ಹಾಗೆ ಯೋಚಿಸಿದರೆ ಹೇಗೆ? ಅಲ್ಲದೇ ವಯಸ್ಸಾದ ನಂತರ ಎಲ್ಲರಲ್ಲೂ ಸ್ವಲ್ಪ ಮಟ್ಟಿಗೆ ಲೈಂಗಿಕ ಆಸಕ್ತಿ ಕಡಿಮೆಯಾಗುವುದು ಸಹಜ.

ವಯಸ್ಕರ

ಸಂದೇಹ ಸಲಹೆ



ಕೂದಲಿನ ಉಪಟಳ



ನಾನು 23 ವರ್ಷದ ಯುವಕ. ನನ್ನ ಮೈಮೇಲೆ ತುಂಬಾ ರೋಮ ಬೆಳೆದಿದೆ. ನನಗೆ ಎಲ್ಲರಂತೆ ಶರ್ಟ್ ತಗೆಯಲು ನಾಚಿಕೆಯಾಗುತ್ತದೆ. ಟಿ.ವಿ. ನೋಡಿ ಒಂದು ಕ್ರೀಮ್ ಹಚ್ಚಿದೆ. ಪರಿಣಾಮ ಹೆಚ್ಚಾಗಿ ಬೆಳೆಯಿತೇ ವಿನಃ ಕಡಿಮೆಯಾಗಲಿಲ್ಲ. ಅರಿಶಿನ ಹಚ್ಚಿದೆ ಆದರೂ ಪ್ರಯೋಜನವಾಗಲಿ. ಇದಕ್ಕೆ ಪರಿಹಾರ ಇಲ್ಲವೇ?


ದ್ವಿತೀಯ ಪಿ.ಯು.ಸಿ. ಓದುತ್ತಿರುವ ನಾನು ಮುಖದ ತುಂಬೆಲ್ಲಾ ಕೂದಲು ಬೆಳೆದ ಸಮಸ್ಯೆಯಿಂದ ಕೊರಗಿದ್ದೇನೆ. ಕೆನ್ನೆಯೇ ಅಲ್ಲ ಕಣ್ಣಿನ ಹತ್ತಿರವೂ ಕೂದಲು ಬೆಳೆದು ಶೇವ್ ಮಾಡಲೂ ಅಸಹ್ಯವೆನಿಸಿದೆ. ಇತ್ತೀಚೆಗೆ ಶೇವ್ ಮಾಡುವುದು ಬಿಟ್ಟು ಕರಡಿಯಂತಿದ್ದೇನೆ. ಈ ಕೂದಲು ಶಾಶ್ವತವಾಗಿ ತೆಗೆಯಲು ಸಲಹೆ ಕೊಡಿ?

-ಹೆಸರು ಬೇಡ, ಊರು ಬೇಡ.

ಸಲಹೆ

ನಿಮ್ಮದು ಸಮಸ್ಯೆಯೇ ಅಲ್ಲ. ನೀವೇ ಸಮಸ್ಯೆಯೆಂದು ಕೊಂಡಿದ್ದೀರಷ್ಟೆ. ಎಲ್ಲ ಯುವಕರು ಮುಖದ ಮೇಲೆ, ಎದೆಯ ಮೇಲೆ ಕೂದಲಿರುವುದೇ ಗಂಡಸುತನದ ಲಕ್ಷಣವೆಂದು ಕೂದಲು ಬಾರದೇ ಇದ್ದುದಕ್ಕೆ ಬೇಸರಪಟ್ಟುಕೊಂಡು, ವೈದ್ಯರ ಬಳಿ ಕೂದಲ ಬೆಳವಣಿಗೆ ಚಿಕಿತ್ಸೆಗಾಗಿ ಅಲೆದಾಡುತ್ತಾರೆ. ಅಂತಹುದರಲ್ಲಿ ನಿಮಗೆ ಸಹಜವಾಗಿ ಬೆಳೆಯುವ ಕೂದಲನ್ನು ಬೇಡ ಎನ್ನುತ್ತಿರುವಿರಲ್ಲ. ಕೂದಲಿನ ಬೆಳವಣಿಗೆಯನ್ನು ತಡೆಯಲು ಯಾವ ಔಷಧಿಯೂ ಇಲ್ಲ. ಅಲ್ಲದೇ ಅದನ್ನು ತಡೆಯುವ ಅವಶ್ಯಕತೆಯೂ ಇಲ್ಲ. ಕೂದಲಿರುವುದೇ ಹೆಮ್ಮೆ ಎಂದು ಭಾವಿಸಿ. ಮುಖದ ಕೂದಲಿಗೆ ನಿಯಮಿತವಾಗಿ ಶೇವಿಂಗ್ ಮಾಡಿಕೊಳ್ಳಿ.

ಬಿಳಿ ಸ್ರಾವದಿಂದ ಶಕ್ತಿ ಕುಂದುತ್ತದೆಯೇ?



ನನ್ನ ವಯಸ್ಸು 17. ತಿಂಗಳಿಗೊಮ್ಮೆ ಋತುಮತಿಯಾದ 5 ರಿಂದ 7 ದಿನ ಸ್ರಾವವಾಗುತ್ತದೆ. 8ನೇ ದಿನ ಬಿಳುಪು ಹೋಗುತ್ತದೆ. ಇದು ನನಗೆ ಬೇಸರ ಮತ್ತು ಇದರಿಂದ ಶಕ್ತಿ ಕುಂದಿದಂತೆ ಆಗುತ್ತದೆ. ಈ ಸಮಸ್ಯೆ ಸುಮಾರು 5-6 ವರ್ಷದಿಂದಿದೆ. ಇದರಿಂದ ಮದುವೆ, ಮಕ್ಕಳಾಗುವಿಕೆಗೆ ತೊಂದರೆ ಅಥವಾ ಪ್ರಾಣಾಪಾಯವಿದೆಯಾ? ದಯವಿಟ್ಟು ಪರಿಹಾರ ತಿಳಿಸಿ.

-ಹೆಸರು ಬೇಡ, ಊರು ಬೇಡ.

ಸಲಹೆ

ಪ್ರತಿಯೊಬ್ಬ ಸ್ತ್ರೀಯಲ್ಲೂ ಯೋನಿಯ ಆರ್ದ್ರತೆಯಿಂದಾಗಿ ಸ್ವಲ್ಪ ಮಟ್ಟಿಗೆ ಬಿಳಿಯ ಬಣ್ಣದ ಸ್ರಾವ ಇದ್ದೇ ಇರುತ್ತದೆ. ಅದಕ್ಕಾಗಿ ಚಿಂತಿಸಬೇಡಿ. ಇದರಿಂದ ಮದುವೆಯಾಗುವುದಕ್ಕಾಗಲೀ, ಮಕ್ಕಳಾಗುವುದಕ್ಕಾಗಲೀ ಯಾವುದೇ ತೊಂದರೆಯಿಲ್ಲ. ಆದರೆ ಈ ಬಿಳಿ ಸ್ರಾವ ಅತಿಯಾಗಿ ಹೋಗಲಾರಂಭಿಸಿದರೆ, ದುರ್ವಾಸನೆಯಿಂದ ಕೂಡಿದ್ದರೆ, ಗಟ್ಟಿಯಾಗಿ ಹೋಗುತ್ತಿದ್ದರೆ ಹಾಗೂ ಹಳದಿ

ಬಣ್ಣದಿಂದ ಕೂಡಿದ್ದರೆ ಗರ್ಭಾಶಯದಲ್ಲಿ ಸೋಂಕು ಉಂಟಾಗಿರಲು ಸಾಧ್ಯ. ಆಗ ಸ್ತ್ರೀರೋಗ ತಜ್ಞ ವೈದ್ಯರನ್ನು ಕಂಡು ಚಿಕಿತ್ಸೆ ಪಡೆದುಕೊಳ್ಳಬೇಕು.

ಎದೆ ಹಾಲು ಕುಡಿವಾಸೆ

ಮೇಡಂ ನಾನು ಚಿಕ್ಕವನಿದ್ದಾಗ ಎದೆ ಹಾಲು ಸರಿಯಾಗಿ ಕುಡಿದಿಲ್ಲ ತಾಯಿ ಹೇಳುತ್ತಿರುತ್ತಾಳೆ. ಕಾರಣ ಅವರಿಗೆ ಆರೋಗ್ಯ ಸರಿಯಾಗಿರಲಿಲ್ಲವಂತೆ. ನಾನೀಗ ಒಂದು ಮಗುವಿನ ತಂದೆ ಹೆಂಡತಿಯ ಎದೆ ಹಾಲು ಕುಡಿಯುಬಹುದೇ? ಅದರಿಂದ ಅಪಾಯವಿಲ್ಲವೇ, ಎದೆ ಹಾಲಿನಲ್ಲಿ ಶಕ್ತಿ ಇರುತ್ತದೆಂದು ಹೇಳುತ್ತಾರೆ. ನಾನೂ ಕುಡಿದು ಶಕ್ತಿ ವೃದ್ಧಿಸಿಕೊಳ್ಳಲೆ?

-ಅಜ್ಜಯ್ಯ ಸಿ. ಬೆಣ್ಣೆಹಳ್ಳಿ,

ಸಲಹೆ

ಎದೆ ಹಾಲು ಕುಡಿಯುವುದರಿಂದ ಯಾವ ರೀತಿಯ ತೊಂದರೆಯೂ ಇಲ್ಲ. ಆದರೆ ನೀವು ತಿಳಿದಂತೆ ಈಗ ಎದೆಹಾಲು ಕುಡಿಯುವುದರಿಂದ ನಿಮಗೆ ಶಕ್ತಿ ಬರಲು ಸಾಧ್ಯವಿಲ್ಲ. ನಿಮ್ಮ ಶಕ್ತಿ ವೃದ್ಧಿಗೆ ಆಹಾರದಲ್ಲಿ ಹಾಲು, ಮೊಸರು, ತುಪ್ಪ, ಹಣ್ಣು, ತರಕಾರಿ, ಮೊಟ್ಟೆ ಯಥೇಚ್ಛವಾಗಿ ಸೇವಿಸಿ.

ಹಸ್ತಮೈಥುನ ಅಪಾಯವೇ?

ನಾನು 17 ವರ್ಷದ ಪಿ.ಯು.ಸಿ. ವಿದ್ಯಾರ್ಥಿ. ಆಗಾಗ ಹಸ್ತ ಮೈಥುನದ ಚಟವಿದೆ. ಇದರಿಂದ ವೀರ್ಯ ನಷ್ಟವಾ? ಮದುವೆಯಾಗಲು ತೊಂದರೆಯಾ?

ನಾನು ನನ್ನ ಗೆಳೆಯ (ಗುದ-ಶಿಶ್ನ) ಸಂಭೋಗ ನಡೆಸುತ್ತೇವೆ ಇದು ಅಪಾಯಕರವಾ?

-ಹೆಸರು ಬೇಡ, ಊರು ಬೇಡ.

ಸಲಹೆ

ಹಸ್ತಮೈಥುನದಿಂದ ಯಾವುದೇ ತೊಂದರೆಯಿಲ್ಲ. ವೀರ್ಯವೂ ಮೂತ್ರದ ಹಾಗೆ ಒಂದು ದ್ರವ. ಅದು ಖಾಲಿಯಾದಂತೆಲ್ಲ ಮತ್ತೆ ಉತ್ಪತ್ತಿಯಾಗುತ್ತಿರುತ್ತದೆ. ಮುಂದೆ ಮದುವೆಯಾದಾಗ ಯಾವುದೇ ತೊಂದರೆಯಾಗುವುದಿಲ್ಲ. ಅದರ ಬಗ್ಗೆ ಆತಂಕ ಬೇಡ.

ಇನ್ನು ಗುದ ಸಂಭೋಗದ ಬಗ್ಗೆ ಕೇಳಿರುವಿರಿ. ಅದು ಖಂಡಿತ ಒಳ್ಳೆಯದಲ್ಲ. ಅದನ್ನು ನಿಲ್ಲಿಸಿಬಿಡಿ.

ಶಕ್ತಿ ಹೀನತೆ

ನನ್ನ ವಯಸ್ಸು 23. ನನಗೆ ಸುಮಾರು 4-5 ವರ್ಷದಿಂದ ಸ್ವಪ್ನಸ್ಖಲನವಾಗುತ್ತಿದೆ. ಇದರಿಂದ ಶಕ್ತಿ ಹೀನತೆ ಬರುವುದೆಂದು ಕೇಳಿದ್ದೇನೆ, ಇದು ನಿಜವೆ? ಇದರಿಂದ ಮಾನಸಿಕ ವಿಕಲತೆ ಹೊಂದಿ ವಿವಾಹ ಜೀವನದಲ್ಲಿ ತೊಂದರೆಯಾಗುವುದೆಂದು ಭಯ ನನಗಿದೆ. ದಯವಿಟ್ಟು ನನ್ನ ಸಮಸ್ಯೆಗೆ ಪರಿಹಾರ ಕಂಡು ಕೊಡಿ.

-ಹೆಸರು ಬೇಡ, ಊರು ಬೇಡ.

ಸಲಹೆ

ನಿಮ್ಮ ವಯಸ್ಸಿನವರಲ್ಲಿ ಸ್ವಪ್ನಸ್ಖಲನವಾಗುವುದು ಸ್ವಾಭಾವಿಕ ವೀರ್ಯಚೀಲದಲ್ಲಿ ವೀರ್ಯವು ತುಂಬಿ ಹೆಚ್ಚಾದಾಗ ಅದು ಹೊರ ಹೋಗಲೇಬೇಕಲ್ಲವೆ? ವೀರ್ಯೋತ್ಪತ್ತಿಯಾಗುವುದೇ ಹೊರಹೋಗುವುದಕ್ಕೆ. ಆದರಿಂದ ಯಾವ ಹಾನಿಯೂ ಇಲ್ಲ. ವಿವಾಹದ ನಂತರ ಯಾವುದೇ ತೊಂದರೆ ಉಂಟಾಗುವುದಿಲ್ಲ. ಅನವಶ್ಯಕ ಆತಂಕ ಪಡದೇ ವಿದ್ಯಾಭ್ಯಾಸದೆಡೆಗೆ ಗಮನ ಹರಿಸಿ.

ಹಸ್ತಮೈಥುನದಿಂದ ಬುದ್ಧಿಮಾಂದ್ಯವೆ?

ನಾನೊಬ್ಬ ಪಿ.ಯು.ಸಿ. ವಿದ್ಯಾರ್ಥಿ. ನನಗೆ 19 ವರ್ಷಗಳು. 3 ವರ್ಷದಿಂದ ಹಸ್ತಮೈಥುನದ ಚಟವಿದೆ. ಆತಂಕವೆಂದರೆ ಇದರಿಂದ ಬುದ್ಧಿ ಸಾಮರ್ಥ್ಯ ಕಡಿಮೆಯಾಗುವುದೇ? ನನ್ನ ಸ್ನೇಹಿತರು ಹಾಗೆ ಹೇಳುತ್ತಾರೆ. ಇದರಿಂದ ನನ್ನ ಓದಿಗೆ ತೊಂದರೆಯಾಗಿ ತಲೆ ಕೆಟ್ಟಂತಾಗಿದೆ.

-ಹೆಸರು ಬೇಡ, ಊರು ಬೇಡ.

ಸಲಹೆ

ಹಸ್ತಮೈಥುನ ಒಂದು ಚಟವೇ ಅಲ್ಲ. ನಿಮ್ಮ ವಯಸ್ಸಿನವರಲ್ಲಿ ಅದು ಸಹಜವಾದ ಕ್ರಿಯೆ. ಆದರಿಂದ ಬುದ್ಧಿಸಾಮರ್ಥ್ಯ ಖಂಡಿತ ಕಡಿಮೆಯಾಗುವುದಿಲ್ಲ. ನೀವು ಸದಾ ಆದರ ಬಗ್ಗೆ ಯೋಚಿಸುತ್ತಿರುವುದರಿಂದ ಓದಿಗೆ ತೊಂದರೆಯಾಗಿದೆ ಅಷ್ಟೆ. ಅದರ ಬಗ್ಗೆ ಯೋಚನೆ ಬಿಟ್ಟು ಓದಿನ ಕಡೆಗೆ ಗಮನವಿಡಿ.

ನನ್ನ ಸಮಸ್ಯೆ ಏನಿರಬಹುದು?

ನನ್ನ ಗುದದ್ವಾರದಲ್ಲಿ ಏನೋ ಒಂದು ರೀತಿಯ ಕೊಳಪೆಯಾಗಿ 3 ವರ್ಷದಿಂದ ಇದೆ. ಉರಿ ಇಲ್ಲ. ಮುಂದೇನಾದರೂ ತೊಂದರೆ ಕೊಡುತ್ತದೆಯೆಂಬ ಭಯ ಇದೆ. ವೈದ್ಯರಲ್ಲಿ ತೋರಿಸಲು ಸಂಕೋಚ, ನೀವೇ ಏನಾದರೂ ಪರಿಹಾರ ಸೂಚಿಸುವಿರಾ?

-ಹೆಸರು ಬೇಡ, ಊರು ಬೇಡ.

ಸಲಹೆ

ನೀವು ಸಂಕೋಚಪಡದೇ ಒಂದು ಬಾರಿ ವೈದ್ಯರನ್ನು ಭೇಟಿಯಾಗಿ ತಪಾಸಣೆ ಮಾಡಿಸಿಕೊಂಡು ಚಿಕಿತ್ಸೆ ಪಡೆಯಿರಿ.

ಬೆಳವಣಿಗೆಯ ಉಪಾಯ ತಿಳಿಸಿ

ನಾನು 24 ವರ್ಷದ ಯುವಕ. ಓದುವುದು ಆರನೇ ತರಗತಿಯಲ್ಲೇ ಬಿಟ್ಟೆ. ನಿಮಗೆ ಹೇಗೆ ಬರೆದು ತಿಳಿಸಲೂ ಸರಿಯಾಗಿ ತಿಳಿದಿಲ್ಲ. ನನ್ನ ಸಮಸ್ಯೆಯೆಂದರೆ ನನ್ನ ಲಿಂಗ ತುಂಬ ಪುಟ್ಟದಿರುವುದು. ಬುದ್ಧಿ ತಿಳಿದಾಗಿನಿಂದ ಹಾಗೆ ಇದೆ. ಬೇರೆಯವರದಕ್ಕೆ ಹೋಲಿಸಿದರೆ ಇದು ತೀರಾ ಚಿಕ್ಕದು. ಹಾಗಾಗಿ ಅವರಿವರೊಡನೆ ಮೂತ್ರಕ್ಕೆ ಹೋಗಲೂ ಇರಿಸು ಮುರಿಸು. ಇದರಿಂದ ಲೈಂಗಿಕ ಸಂಪರ್ಕಕ್ಕೆ ತೊಂದರೆಯೇ? ಲಿಂಗ ಬೆಳೆಸುವ ಡಾಕ್ಟರಿದ್ದರೆ ಸೂಚಿಸುವಿರಾ?

-ಹೆಸರು ಬೇಡ, ಊರು ಬೇಡ.


ಸಲಹೆ

ನೀವು ವೃಥಾ ಚಿಂತಿಸುತ್ತಿರುವಿರಿ. ಸಾಮಾನ್ಯವಾಗಿ ಎಲ್ಲರ ಶಿಶ್ನವೂ ಸಹಜ ಸ್ಥಿತಿಯಲ್ಲಿ ಚಿಕ್ಕದಾಗಿಯೇ ಇರುತ್ತದೆ. ಸಾಮಾನ್ಯ ಸ್ಥಿತಿಯಲ್ಲಿ ಶಿಶ್ನ ಎಷ್ಟೇ ಚಿಕ್ಕದಿರಲಿ, ಉದ್ರೇಕಗೊಂಡಾಗ ಸಂಭೋಗಕ್ಕೆ ಅಗತ್ಯವಾದ ಆಕಾರ ಪಡೆಯುತ್ತದೆ. ಆದ್ದರಿಂದ ನೀವು ನಿಮ್ಮ ಇತರ ಸ್ನೇಹಿತರಿಗೆ ಹೋಲಿಸಿಕೊಳ್ಳಲು ಹೋಗಬೇಡಿ. ಇದರಿಂದ ಲೈಂಗಿಕ ಕ್ರಿಯೆಗೆ ಯಾವುದೇ ರೀತಿಯ ತೊಂದರೆಯಿಲ್ಲ. ಸುಮ್ಮನೆ ವೈದ್ಯರ ಬಳಿ ಅಲೆದಾಡಿ ಸಮಯ ಹಾಗೂ ಹಣವನ್ನು ಹಾಳು ಮಾಡಿಕೊಳ್ಳಬೇಡಿ. ಶಿಶ್ನವನ್ನು ಉದ್ದ ಹಾಗೂ ದಪ್ಪ ಮಾಡುವಂತಹ ಯಾವುದೇ ಔಷಧಿಯಿಲ್ಲ.

ಕೌಟುಂಬಿಕ ಸಮಸ್ಯೆಗಳಿಗೆ ಪರಿಹಾರ ಸೂಚಿಸುವ **'ಆಪ್ತ ಸಮಾಲೋಚನೆ'** ಹಾಗೂ ವೈದ್ಯಕೀಯ ಸಮಸ್ಯೆಗಳನ್ನು ಪರಿಹರಿಸುವ **''ವಯಸ್ಕರ ಸಂದೇಹ ಸಲಹೆ''** ಅಂಕಣಗಳನ್ನು ಪ್ರತಿ ತಿಂಗಳು ನಿಗದಿತ ಮಧ್ಯ ಪುಟಗಳಲ್ಲೇ ಪ್ರಕಟಿಸಲಾಗುವುದು. ಓದುಗರು ಈ ಪುಟಗಳಲ್ಲಿನ ಮಾಹಿತಿಯನ್ನು ಸಮಯಾನುಸಾರ ಬಳಸಿಕೊಳ್ಳಲು ಅನುವಾಗುವಂತೆ ಬಿಡಿಸಿಟ್ಟುಕೊಳ್ಳಬಹುದು.

ನಿಮ್ಮ ಸಮಸ್ಯೆಗಳನ್ನು ಈ ವಿಳಾಸಕ್ಕೆ ಕಳಿಸಿ :
ಸಂಪಾದಕರು, ಬಿಸಿಲ ಬದುಕು,
ಅಂಕುರ ಪ್ರಕಾಶನ ಅಂಚೆ ಪೆಟ್ಟಿಗೆ : 7951
ಬಸವೇಶ್ವರನಗರ, ಬೆಂಗಳೂರು - 560 079.

ಮರು ಮದುವೆಯಾಗಬಹುದೇ?



ನನ್ನ ವಯಸ್ಸು 29. ಸರ್ಕಾರಿ ಉದ್ಯೋಗಸ್ಥೆ ಮದುವೆಯಾಗಿ 8 ವರ್ಷದ ಹೆಣ್ಣು ಮಗು ಹೊಂದಿದ್ದೇನೆ. ಕೆಲವೊಂದು ಮನೆ ಸಮಸ್ಯೆಗಳಿಗೆ ಜಗಳವಾಡಿ ನನ್ನ ಗಂಡ ಬಿಟ್ಟು ಹೋಗಿ 7 ವರ್ಷವಾಯಿತು. ಆತನಿಗಾಗಿ ಸಾಕಷ್ಟು ಹಂಬಲಿಸಿದೆ ಆದರೆ ಆತ ದಕ್ಕಲಿಲ್ಲ. ನಾನು ಲೈಂಗಿಕವಾಗಿ ತೀವ್ರ ಆಸಕ್ತಿ ಹೊಂದಿದವಳಾಗಿದ್ದು ತೀರ ಈಚೆಗೆ ಮದುವೆಯಾದ ಒರ್ವ ತರುಣ ನನ್ನನ್ನು ಪ್ರೀತಿಸುತ್ತಿದ್ದಾನೆ. ನಾನೂ ಸಹ. ಸಮಸ್ಯೆ ಎಂದರೆ ನಾವಿಬ್ಬರೂ ಮದುವೆಯಾಗುವುದೇ? ನನಗೆ ಮನೆಯವರ ಯಾವ ಆಧಾರವೂ ಇಲ್ಲ. ಈಗ ಅವರನ್ನೇ ನಂಬಿದ್ದೇನೆ. ಎಲ್ಲದಕ್ಕೂ ಅವರ ಸಹಾಯ ಬಯಸುತ್ತೇನೆ. ನಮ್ಮಿಬ್ಬರಿಗೂ ಬಿಟ್ಟಿರಲೂ ಆಗುತ್ತಿಲ್ಲ. ಅದಕ್ಕಾಗಿ ಮುಂದೆ ನಮಗೆ ಮರುಮದುವೆ ಆಗಬಹುದೇ ಕಾನೂನಿನ ಯಾವ ತೊಡಕೂ ಇಲ್ಲವೇ ಸೂಕ್ತ ಪರಿಹಾರ ಸೂಚಿಸಿ ನನ್ನ ಮನಸ್ಸಿನ ತೊಡಕು ನಿವಾರಿಸಿ.

-ಹೆಸರು ಬೇಡ, ಊರು ಬೇಡ.

ಸಲಹೆ

ನೀವು ಮರು ಮದುವೆಯಾಗಬೇಕಿದ್ದರೆ ಡೈವೋರ್ಸ್ ಪಡೆದುಕೊಳ್ಳಲೇ ಬೇಕು. ಡೈವೋರ್ಸ್ ಪಡೆಯದೇ ಮತ್ತೊಂದು ಮದುವೆಯಾವುಗದು ಕಾನೂನಿನ ಪ್ರಕಾರ ತಪ್ಪು. ಮದುವೆಯಾಗುವುದಾದರೂ ನೀವೀಗ ತಿಳಿಸಿರುವ ವ್ಯಕ್ತಿಯೊಡನೆ ಮಾತ್ರ ಬೇಡ. ಏಕೆಂದರೆ ಆ ವ್ಯಕ್ತಿಗೆ ಈಗಾಗಲೇ ಮದುವೆಯಾಗಿರುವುದರಿಂದ ನಿಮ್ಮಿಂದಾಗಿ ಅವರ ಪತ್ನಿಯ ಬಾಳು ತೊಂದರೆಗೀಡಾಗುತ್ತದೆ. ಇನ್ನೊಂದು ಹೆಣ್ಣಿನ ಜೀವನ ಹಾಳು ಮಾಡುವುದು ಖಂಡಿತ ಒಳ್ಳೆಯದಲ್ಲ. ಆದ್ದರಿಂದ ನೀವೀಗ ಪ್ರೀತಿಸುತ್ತಿರುವ ವ್ಯಕ್ತಿಯಿಂದ ದೂರವಾಗುವುದೇ ಎಲ್ಲ ರೀತಿಯಿಂದಲೂ ಕ್ಷೇಮ. ನೀವು ಮದುವೆಯಾಗಬೇಕಾದರೆ ಯಾರಾದರೂ ವಿಧುರನನ್ನೋ ಇಲ್ಲವೇ ಡೈವೋರ್ಸಿಯನ್ನೋ ಮದುವೆಯಾಗಿ.

ಅವಳನ್ನು ಮಾತನಾಡಿಸಬೇಕು.



ನಾನು 20 ವರ್ಷದ ಯುವಕ ನನ್ನ ಕ್ಲಾಸ್‌ಮೇಟ್ ಹುಡುಗಿಯನ್ನು ತುಂಬ ಹಚ್ಚಿಕೊಂಡಿದ್ದೇನೆ. ಆಕೆ ನನ್ನ ಜೊತೆ ಫ್ರೀಯಾಗಿ ಇರುತ್ತಿದ್ದಳು. ಒಂದು ದಿನ ಪರೀಕ್ಷಾನಂತರ ಒಂದು ಚೀಟಿ ಬರೆದು ಅವಳ ಕೈಲಿತ್ತೆ. ಅದರಲ್ಲಿ ಹೀಗೆ ಬರೆದಿದ್ದೆ. 'ನೀವು ಇನ್ನು ರಿಸೆಲ್ಟ್‌ಗೇ ಬರುವುದು. ಇನ್ನು ನೀನೆಲ್ಲೋ, ನಾನೆಲ್ಲೋ ನಿನ್ನ ಸ್ನೇಹವನ್ನು ಸದಾ ಬಯಸುತ್ತೇನೆ.'


ಆದರೆ ಆಕೆ ಕೋಪಿಸಿಕೊಂಡು 'ನಾನು ಫ್ರೀಯಾಗಿ ನಡೆದುಕೊಂಡಿದ್ದಕ್ಕೆ ಇದೇನಾ ಪ್ರತಿಫಲ?' ಎಂದು ಕೋಪಿಸಿಕೊಂಡು ಹೊರಟು ಬಿಟ್ಟಳು. ನನಗವಳದೇ ಚಿಂತೆಯಾಗಿದೆ. ನಂತರ ನನ್ನದೇ ಕಾಲೇಜಿಗೆ ಸೇರಿದಳು. ಎಂದಿನಂತೆ ನೋಡಿ ನಗುತ್ತಾಳೆ ಆದರೆ ಮಾತನಾಡಿಸಲಿಲ್ಲ. ಅವಳ ಮೊದಲಿನ ಸ್ನೇಹ ನನಗೆ ಬೇಕು ನಾನೇನು ಮಾಡಲಿ ದಯವಿಟ್ಟು ತಿಳಿಸಿ.

-ಬಿ. ಮಲ್ಲಿಕಾರ್ಜುನ, ಊರು ಬೇಡ.

ಸಲಹೆ

ನಿಮ್ಮ ವಯಸ್ಸಿನಲ್ಲಿ ಗಂಡು ಹೆಣ್ಣಿನ ಮಧ್ಯೆ ಆಕರ್ಷಣೆ ಇರುವುದು ಸಹಜ ಒಬ್ಬರಿಗೊಬ್ಬರು ನಗುನಗುತ್ತ ಮಾತಾಡಿದ ಕೂಡಲೇ ಅದು ಪ್ರೀತಿಯಾಗಲು ಸಾಧ್ಯವಿಲ್ಲ. ನೀವು ನೇರವಾಗಿ ಅವಳ ಬಳಿ ಮಾತನಾಡಿ ನಿಮ್ಮ ಬಗ್ಗೆ ಅವಳಿಗೆ ಯಾವ ಅಭಿಪ್ರಾಯವಿದೆಯೆಂಬುದನ್ನು ಅರಿತುಕೊಳ್ಳಿ, ಸಧ್ಯ ನೀವು ಆ ವಿಷಯದ ಬಗೆಗೆ ತಲೆಕೆಸಿಕೊಳ್ಳದೇ ವಿದ್ಯಾಭ್ಯಾಸದೆಡೆಗೆ ಗಮನ ಕೊಡಿ.

ದೇವರು ಇರುವನೆ?




ಕೆಲವರು ತಮಗೆ ದೇವರು ಬರುತ್ತದೆಂದು ಹೇಳುತ್ತಾರೆ. ಬಂದ ಸಮಯದಲ್ಲಿ ವಿಚಿತ್ರವಾಗಿ ವರ್ತಿಸುತ್ತಾರೆ. ನಿಜವಾಗಿ ದೇವರು ಇರುವನೆ? ದೇವರಿಲ್ಲದಿದ್ದರೆ ಹೀಗೇಕೆ ಮಾಡುತ್ತಾರೆ. ಇದರ ವಿವರಣೆಗೆ ಯಾವುದಾದರೂ ಪುಸ್ತಕವಿದೆಯೆ? ಅದರ ಹೆಸರು ಮತ್ತು ಬೆಲೆ ದಯವಿಟ್ಟು ಬೇಗ ತಿಳಿಸಿ.

-ವಿದ್ಯಾರ್ಥಿ, ಊರು ಬೇಡ.

ಸಲಹೆ

ದೇವರು ಎನ್ನುವುದು ಒಂದು ನಂಬಿಕೆ ಅಷ್ಟೇ. ಇದ್ದಾನೆ ಎಂದುಕೊಂಡರೆ ಇದ್ದಾನೆ. ಇಲ್ಲ ಎಂದರೆ ಇಲ್ಲ. ಮೈ ಮೇಲೆ ದೇವರು ಬಂದಿದೆ ಎಂದು ವರ್ತಿಸುವುದು ಒಂದು ಮನೋ ಸಾಂಸ್ಕೃತಿಕ ಸಾಮಾಜಿಕ ವಿಶೇಷತೆ. ಕೆಲವರು ಉನ್ಮಾದಾವಸ್ಥೆಯಲ್ಲಿ ಆ ರೀತಿ ವರ್ತಿಸಿದರೆ, ಇನ್ನೂ ಕೆಲವರು ಬೇರೆಯವರ ಗಮನ ಸೆಳೆಯಲು ಹಾಗೆ ಮಾಡುತ್ತಾರೆ. ನಿಮಗೆ ಇದರ ಬಗ್ಗೆ ಸಂಪೂರ್ಣ ವಿವರಣೆ ಬೇಕಿದ್ದಲ್ಲಿ 'ದೇವರು ದೆವ್ವ ವಿಜ್ಞಾನ ಡಾ॥ ಕೋವೂರ್ ಲೇಖನಗಳು' ಪುಸ್ತಕ ಓದಿ. ಇದರ ಬೆಲೆ ರೂ. 18/-, ಇನ್ನೊಂದು ಕರ್ನಾಟಕ ಸಾಹಿತ್ಯ ಅಕಾಡೆಮಿಯವರು ಪ್ರಕಟಿಸಿರುವ. ವಿಚಾರ ಸಾಹಿತ್ಯ - 1992' ಪುಸ್ತಕ ಓದಿ. ಅದರಲ್ಲಿ ಡಾ॥ ಸಿ.ಆರ್. ಚಂದ್ರಶೇಖರ್ ಬರೆದಿರುವ 'ಮೈಮೇಲೆ ದೆವ್ವ ಬರುವುದು ಏನು?' ಎಂಬ ಲೇಖನ ಇದೆ. ಈ ಪುಸ್ತಕದ ಬೆಲೆ ರೂ. 20/-, ಇವು ಎಲ್ಲ ಪುಸ್ತಕದಂಗಡಿಗಳಲ್ಲಿ ಸಿಗುತ್ತವೆ.

ಇದು ಆತ್ಮವಂಚನೆಯೇ?




ನನಗೀಗ 32 ವರ್ಷ 5 ವರ್ಷದ ಹಿಂದೆ ಮದುವೆಯಾಯಿತು. ಒಂದು ಮಗು ಹುಟ್ಟಿ ತೀರಿಕೊಂಡಿತು. ಸಮಸ್ಯೆ ನನ್ನ ಹೆಂಡತಿಯದಲ್ಲ ಅವಳ ತಂಗಿಯದು. ಕಾರಣಾಂತರಗಳಿಂದ ಅವಳು ನನ್ನ ತಲೆ ಕೆಡಿಸಿ ನನ್ನ ಹೆಂಡತಿ ಕೆಲಸಕ್ಕೆ ಹೋಗಿದ್ದಾಗ 'ನೀನು ಮದುವೆಯಾಗು, ಅಕ್ಕನ ಜೊತೆ ಇರುವಂತೆ ನನ್ನೊಂದಿಗೂ ಇರು' ಎಂದು ಪೀಡಿಸುತ್ತಿದ್ದಳು. ನಾನೆಷ್ಟು ಬುದ್ಧಿ ಹೇಳಿದರೂ ಕೇಳದೇ ನನ್ನ ಮನಸ್ಸನ್ನು ಸಂಪೂರ್ಣ ಅವಳೆಡೆಗೆ ಸೆಳೆದುಕೊಂಡು, ಪುನಃ ನನ್ನನ್ನು ತೊರೆದು ಅವಳ ಪಾಡಿಗೆ ಅವಳಿದ್ದಾಳೆ. ಇಂತಹ ಹೆಣ್ಣಿಗೆ ಬುದ್ಧಿಕಲಿಸುವದು ಹೇಗೆ? ನನ್ನ ಮನಸ್ಸನ್ನು ಅವಳಿಂದ ಬದಲಿಸುವುದು ಹೇಗೆ? ನಾನು ನನ್ನ ಹೆಂಡತಿಗೆ ದ್ರೋಹ ಬಗೆದಿದ್ದೀನಾ?

-ಅನುಪಮ್, ಹಾನಗಲ್.

ಸಲಹೆ

ನೀವು ತಪ್ಪು ಮಾಡಿರುವಿರಿ. ಅವಳೂ ನಿಮ್ಮೊಡನೆ ಅಷ್ಟೊಂದು ಸಲಿಗೆಯಿಂದ ವರ್ತಿಸಬಾರದಿತ್ತು. ಅವಳು ಎಷ್ಟೇ ಒತ್ತಾಯಿಸಿದರೂ ನೀವೂ ಅವಳೊಂದಿಗೆ ಸಂಬಂಧ ಬೆಳೆಸಬಾರದಿತ್ತು. ಈಗ ಅವಳೇ ದೂರವಾಗಿರುವಾಗ ನೀವೇಕೆ ವೃಥಾ ಚಿಂತಿಸುವಿರಿ? ಅವಳನ್ನು ಮರೆತು ನಿಮ್ಮ ಪತ್ನಿಯೊಂದಿಗೆ ಸಂತೋಷದಿಂದ ಜೀವನ ನಡೆಸಿ.

ಮಾಂಸಾಹಾರ ಮತ್ತು ಮದುವೆ



ಆಂಟಿ ನಾನು ನನ್ನ 13ನೇ ವರ್ಷದಲ್ಲಿ ಮಾಂಸಾಹಾರ ತ್ಯಜಿಸಿದೆ. ಕಾರಣ ಹಿಂಸೆ ಮಾಡಬಾರದೆಂದು. ಈಗ ನನ್ನ ಮದುವೆಯಾಗುವವರು ಮಾಂಸಹಾರಿಗಳಾಗಿದ್ದಾರೆ ನನ್ನಿಂದ ನಮ್ಮ ಮದುವೆಗೆ ತೊಡಕಾಗುತ್ತದೆಯೇ. ಮದುವೆಯ ನಂತರವೂ ಇದು ನಮ್ಮಗಳ ಹೊಂದಾಣಿಕೆಗೆ ತೊಡಕಾಗುತ್ತದೆಯೇ. ನನ್ನ ತಾಯಿ ಹೇಳ್ತಾರೆ, ಮೊದಲೇ ಹೇಳಿದರೆ ನಿನ್ನ ಮದುವೆಯಾಗುವವರೇ ಇರುವುದಿಲ್ಲ. ಇದರಿಂದ ನನಗೆ ಸಮಸ್ಯೆ

ಉಂಟಾಗಿದೆ. ನಾ ಮೊದಲೇ ತಿಳಿಸಲಾ ಅಥವಾ ಬೇಡವಾ? ದಯವಿಟ್ಟು ಉತ್ತರಿಸಿ.

-ಕುಮಾರಿ ಗೀತಾ, ಬೆಂಗಳೂರು.

ಸಲಹೆ

ಆಹಾರ ಸೇವನೆ ಅವರವರ ಇಷ್ಟಕ್ಕೆ ಸೇರಿದ್ದು. ಮಾಂಸಾಹಾರ ಸೇವನೆ ನಿಮಗಿಷ್ಟವಿಲ್ಲ ಎಂದು ತಿಳಿದರೆ ಮದುವೆಯಾಗುವ ಗಂಡು ಖಂಡಿತ ತಿನ್ನುವುದಕ್ಕೆ ಬಲವಂತ ಮಾಡಲಿಕ್ಕಿಲ್ಲ. ಆದರೆ ಅವರಿಗೆ ಮಾಂಸಾಹಾರ ತಿನ್ನುವ ಅಭ್ಯಾಸವಿದ್ದರೆ ನಿಮಗೆ ಮಾಂಸದ ಅಡುಗೆ ಮಾಡುವುದು ಅನಿವಾರ್ಯವಾಗಬಹುದು. ನಿಮಗೆ ಅಡುಗೆ ಮಾಡಲು ಯಾವುದೇ ಅಭ್ಯಂತರವಿಲ್ಲದಿದ್ದರೆ ಆಯಿತು. ತಿನ್ನಲೇಬೇಕೆಂದು ಅವರೇನೂ ಬಲವಂತಪಡಿಸಲಿಕ್ಕಿಲ್ಲ.

ಅಕ್ಕ ಸತ್ತರೆ ತಂಗಿಯೇಕೆ ದ್ವೇಷಿಸಬೇಕು?




ನನಗೀಗ 19 ವರ್ಷ ಓದುತ್ತಿದ್ದೇನೆ. ನನ್ನ ಗೆಳೆಯನಿಗೆ ಒಂದು ಹುಡುಗಿಯನ್ನು ಪ್ರೀತಿಸಲು ನೆರವಾದೆ. ಅದೇ ವೇಳೆಯಲ್ಲಿ ಆ ಹುಡುಗಿಯ ತಂಗಿಯ ಪ್ರೀತಿಯ ಬಲೆಗೆ ಬಿದ್ದೆ. ಗೆಳೆಯನ ಹಾಗೇ ನಾವು ಗಾಢವಾಗಿ ಪ್ರೀತಿಸತೊಡಗಿದೆವು. ನಂತರದಲ್ಲಿ ಓದಿಗಾಗಿ ನಾನು ಗೆಳೆಯ ಬೇರೊಂದು ಊರಿಗೆ ಹೋಗಿದ್ದಾಗ ಗೆಳೆಯನ ಪ್ರೀತಿಸಿದ ಹುಡುಗಿ ನಿಗೂಢವಾಗಿ ಆತ್ಮಹತ್ಯೆ ಮಾಡಿಕೊಂಡಳು. ಇದಾದ ಮೇಲೆ ಈ ಹುಡುಗಿ ನನ್ನ ವಿರೋಧಿಸತೊಡಗಿದಳು. ಇದರಲ್ಲಿ ನನ್ನ ತಪ್ಪು ಏನೂ ಇಲ್ಲ. ಹೀಗೇಕಾಯಿತೆಂದು ನನಗೆ ತಿಳಿಯುತ್ತಿಲ್ಲ. ದಯವಿಟ್ಟು ನನ್ನ ಸಮಸ್ಯೆಗೆ ಪರಿಹಾರ ಹೇಳಿ!

-ಬಿಜಿಎಮ್, ಬೆಳಗಾವಿ.

ಸಲಹೆ

ನೀವು ಪ್ರೀತಿಸುತ್ತಿರುವ ಹುಡುಗಿಗೆ ಅಕ್ಕನ ಸಾವಿನ ಅದರಲ್ಲೂ ಅವಳ ಆತ್ಮಹತ್ಯೆಯ ಆಘಾತವನ್ನು ತಡೆದುಕೊಳ್ಳಲು ಅಸಾಧ್ಯವಾಗಿದೆ. ಅಲ್ಲದೇ ಅವಳ ಅಕ್ಕನ ಸಾವಿಗೆ 'ಪ್ರೀತಿಯೇ ಕಾರಣವಾಗಿರಬಹುದೆಂಬ ಅನುಮಾನ ವಿರಬಹುದು. ಅದಕ್ಕೆ ನಿಮ್ಮ ಮೇಲೂ ಬೇಸರ, ಜಿಗುಪ್ಸೆ ಮೂಡಿರಬಹುದು. ಹಾಗಾಗುವುದು ಸಹಜವಲ್ಲವೇ? ಅದ್ದರಿಂದ ನೀವು ಸಧ್ಯಕ್ಕೆ ಅವಳಿಂದ ದೂರವಿರುವುದೇ ಕ್ಷೇಮ. ಓದಿನ ಕಡೆಗೆ ಗಮನಹರಿಸಿ ಉತ್ತಮ ಅಂಕ ಗಳಿಸಿ. ಮೊದಲು ಆರ್ಥಿಕ ಸ್ವಾವಲಂಬಿಯಾಗಿ.

ಹರಿಜನ ಮೇಲ್ಜನ ಮದುವೆ




ನಾನೊಬ್ಬ 21ರ ಟೆಕ್ ವಿದ್ಯಾರ್ಥಿ. ನಮ್ಮಲ್ಲೆ ಓದುತ್ತಿರುವ ಓರ್ವ ಹರಿಜನ ಹುಡುಗಿಯನ್ನು ಪ್ರೀತಿಸಿರುವೆ. ಆಕೆಯೂ ಆಕೆಯ ಮನೆಯಲ್ಲಿ ಮದುವೆಗೆ ಒಪ್ಪಿಗೆ ಇದೆ. ನಮ್ಮ ಮನೆಯಲ್ಲಿ ಕಷ್ಟ. ಆದರೆ ನಾವು ಸಮಾಜವನ್ನು ಎದುರಿಸಲು ಒಬ್ಬರಿಗೊಬ್ಬರು ಅರ್ಥಮಾಡಿಕೊಂಡಿದ್ದೇವೆ. ನಮ್ಮ ಮದುವೆಯನ್ನು ಸಮಾಜ ಒಪ್ಪುತ್ತದೆಯೇ? ನಿಮ್ಮ ಉತ್ತರಕ್ಕೆ ಕಾಯುವೆ.

-ಕೆ. ಗಣೇಶ, ಊರು ಬೇಡ.

ಸಲಹೆ

ನೀವು ಧೈರ್ಯದಿಂದ ಮದುವೆಯಾಗಿ. ಅಂತರ್ಜಾತಿ ಮದುವೆಗೆ ಸಮಾಜ ಹೇಗೆ ಒಪ್ಪಿಗೆ ನೀಡುತ್ತದೆ ಹೇಳಿ? ಇದು ಬಸವಣ್ಣನವರ ಕಾಲದಿಂದಲೂ ಅನೂಚಾನವಾಗಿ ನಡೆದುಕೊಂಡು ಬಂದ ಪದ್ಧತಿ ಅಲ್ಲವೆ? ಆದರೆ ಮದುವೆಯ ನಂತರದ ನಿಮ್ಮ ಜೀವನದ ರೀತಿ ನೀತಿ ಗಮನಿಸಿ ಸಮಾಜ ನಿಮ್ಮನ್ನು ಖಂಡಿತ ಸ್ವೀಕರಿಸುತ್ತದೆ. ಸಮಾಜ ಎಂದರೆ ಯಾವುದು ಹೇಳಿ? ನಮ್ಮ ನಿಮ್ಮಂತಹವರು ಸೇರಿ ರಚಿಸಿಕೊಂಡುದೇ ಅಲ್ಲವೆ? ನೀವು ಮೊದಲು ಆರ್ಥಿಕ ಸ್ವಾವಲಂಬಿಯಾಗಿ ನಂತರವೇ ಮದುವೆಯಾಗಿ ಏಕೆಂದರೆ ಪ್ರೀತಿಯೊಂದರಿಂದ ಹೊಟ್ಟೆ ತುಂಬುವುದಿಲ್ಲ ನೋಡಿ. ನಿಮಗೆ ನನ್ನ ಶುಭ ಹಾರೈಕೆಗಳು.

ನನಗೆ ದಾರಿ ತೋರಿಸಿ!



ಮಹಾತಾಯಿ ನೀವೇ ಜೀವನದ ದಾರಿ ದೀಪ. ನಾನು ಕಥೆ, ಕವನ ಬರೆಯುತ್ತೇನೆ. ನಟನೆ ಮಾಡುತ್ತೇನೆ. ಅನೇಕ ಪತ್ರಿಕೆಗಳಿಗೆ ಕಥೆ, ಕವನ ಬರೆದೆ. ಆದರೆ ಪ್ರಕಟವಾಗಿಲ್ಲ. ಲಕೋಟೆಗಳು ಸಹಾ ವಾಪಸಾದವು. ನನ್ನ ತಂದೆ ರೈತರು. ನನಗೆ ಮುಂದೆ ದಾರಿ ಇದೆಯೇ?

ನಾನು ದಾರಿ ಕಂಡುಕೊಳ್ಳಲಿ? ನನ್ನ ಹೆಸರು ಪ್ರಕಟಿಸಿದರೆ ಸಾಕು ನಾನೇ ಹಣ ಕೊಡುತ್ತೇನೆ. ಉಚಿತವಾಗಿ (ಸಿನಿಮಾದಲ್ಲಿ ಆಕ್ಟ್)ಮಾಡುವೆ? ಹಾಗಾದರೂ ನನಗವಕಾಶಗಳಿಲ್ಲ. ದಯವಿಟ್ಟು ನನಗೊಂದು ದಾರಿ ತೋರಿಸಿ?

-ಹೆಸರು, ಊರು ಬೇಡ.

ಸಲಹೆ

ಕಥೆ, ಕವನ ಬರೆಯುವ ಹವ್ಯಾಸ ಖಂಡಿತ ತಪ್ಪಲ್ಲ. ಅದನ್ನು ಪ್ರಕಟಿಸಲು ನೀವು ಯಾವುದೇ ಪತ್ರಿಕೆಗೆ ಫೀ ಕೊಡಬೇಕಾಗಿಲ್ಲ. ನೀವು ಮೊದಲು ಕನ್ನಡ ಭಾಷೆಯನ್ನು ಚೆನ್ನಾಗಿ ಕಲಿಯಿರಿ. ವ್ಯಾಕರಣದ ತಪ್ಪಿಲ್ಲದೇ ಬರೆಯುವುದನ್ನು ಕಲಿತುಕೊಳ್ಳಿ, ಅಲ್ಲದೇ ಪುಸ್ತಕಗಳನ್ನು ಓದುವ ಹವ್ಯಾಸ ಬೆಳೆಸಿಕೊಳ್ಳಿ, ಓದುತ್ತಾ ಹೋದಂತೆಲ್ಲ ನಿಮ್ಮ ಜ್ಞಾನ ಹೆಚ್ಚುವುದು. ನಂತರ ಬರವಣಿಗೆಯ ಬಗ್ಗೆ ಯೋಚಿಸಿ. ಇನ್ನು ಚಲನಚಿತ್ರದಲ್ಲಿ ನಟಿಸಬೇಕೆಂಬ ಆಸೆ ಇದ್ದರೆ, ಚಲನಚಿತ್ರ ನಿರ್ದೇಶಕರನ್ನು ಭೇಟಿಯಾಗಿ ನಿಮ್ಮ ನಟನೆ ಅವರಿಗೆ ಮೆಚ್ಚುಗೆಯಾದರೆ ಖಂಡಿತ ಅವರು ನಿಮಗೆ ಅವಕಾಶ ನೀಡುವರು.

ಒಲ್ಲದ ಹುಡುಗನ ಹಿಂದೆ ಬೀಳದಿರಿ



ನಾನು ಪಿ.ಯು.ಸಿ. ಹಿಂದು ವಿದ್ಯಾರ್ಥಿನಿ. ನನ್ನ ಕ್ಲಾಸ್‌ಮೇಟ್ ಒಬ್ಬ ಮುಸ್ಲಿಂ ಹುಡುಗನನ್ನು ಪ್ರೀತಿಸಿದೆ. ಆತನೂ ಸಹ ಗಾಢವಾಗಿ ಪ್ರೀತಿಸಿದ. 3-4 ವರ್ಷಗಳು ಹೀಗೆ ನಡೆದ ನಂತರ ಆವನೊಂದು ಪತ್ರ ಬರೆದ 'ನಾನು ತುಂಬಾ ಯೋಚಿಸಿ ಈ ಪತ್ರ ಬರೆಯುತ್ತಿದ್ದೇನೆ, ಪ್ಲೀಸ್ ನನ್ನನ್ನು ಮರೆತು ಬಿಡು.' ನಂತರ ಅವನ ಭೆಟ್ಟಿಯಾದಾಗ. ಆತ 'ನಮ್ಮ ವಿಚಾರ ಮನೆಯಲ್ಲಿ ತಿಳಿದಿದೆ. ನಿನ್ನ ಮದುವೆಯಾದರೆ ನನ್ನ ತಂಗಿಯರ ಮದುವೆ ಸಾಧ್ಯವಿಲ್ಲ. ದಯವಿಟ್ಟು ನನ್ನನ್ನು ಮರೆತುಬಿಡು' ಎಂದ. ನಾನೇನು ಹೆಚ್ಚು ಪೀಡಿಸಲಿಲ್ಲ. ಆದರೆ ಅವನ ಬಿಟ್ಟಿರುವುದು ಸಾಧ್ಯವಿಲ್ಲವಾಗಿದೆ. ಅವನು ತುಂಬಾ ಉತ್ತಮ ಹುಡುಗ. ಈಗ ಅವನಿಗೆ ವಿದೇಶ ಪ್ರಯಾಣದ ಅವಕಾಶವೂ ಇದೆ. ನನ್ನ ಮನಸ್ಸು ಒಂದೆಡೆ ನಿಲ್ಲುತ್ತಿಲ್ಲ. ತುಂಬಾ ಬೇಸರವಾಗಿದೆ. ಆತ್ಮಹತ್ಯೆ ಪ್ರಯತ್ನದವರೆಗೂ ಹೋಗಿದೆ. ನನ್ನ ಸಮಸ್ಯೆಗೆ ನೀವೇ ಸಾಂತ್ವನ, ಪರಿಹಾರ ನೀಡಿರಿ.

- ನೊಂದ ಪ್ರೇಮಿ, ಊರು ಬೇಡ.

ಸಲಹೆ

ಪ್ರೇಮ ಪ್ರೀತಿ ಇದೆಲ್ಲಾ ಸಹಜ ಪ್ರಕ್ರಿಯೆ. ಪ್ರೀತಿಸುವ ಮನಸ್ಸಿಗೆ ನೋವು ಎದುರಿಸುವ ಶಕ್ತಿಯೂ ಬೇಕು. ಸಾಕಷ್ಟು ನಿಮ್ಮ ಲವಲವಿಕೆಯ ವಿಷಯಗಳ ಕಡೆ ಗಮನ ಹರಿಸಿ. ಆತನನ್ನು ಪ್ರೀತಿಸುತ್ತಲೇ ಮರೆಯಲು ಯತ್ನಿಸಿ. ಎಲ್ಲಾ ಸಮಸ್ಯೆಗಳಿಗೆ ಸಾವೊಂದೇ ಪರಿಹಾರ ಅಲ್ಲ. ನಿಮ್ಮ ಅವನಲ್ಲಿನ ಕಳೆದುಕೊಂಡು ಪ್ರೀತಿಯನ್ನು ಇನ್ನಿತರರಲ್ಲಿ ಹುಡುಕುವ ಪ್ರಯತ್ನ ಮಾಡಿರಿ. ಸಾಕಷ್ಟು ಚಟುವಟಿಕೆಯ, ಕೆಲಸದ ಬೇಲಿ ನಿಮ್ಮಸುತ್ತ ಹೆಣೆದುಕೊಳ್ಳಿ, ಆಗ ತಂತಾನೆ ಇವೆಲ್ಲ ವಿಚಾರ ದೂರವಾಗಿ. ನೀವು ಆತನ ಹಾಗೇ ಸಾಧಿಸಲು ಮುಂದಾಗುವಿರಿ.

ಮೂಲವ್ಯಾಧಿಯ ಮೂಲೋಚ್ಚಾಟನೆ

ಪ್ರಕೃತಿ ಚಿಕಿತ್ಸೆ ಅಥವಾ ಪ್ರಾಕೃತಿಕ ಜೀವನ (nature cure or natural life) ಆಯುರ್ವೇದ ಆಧಾರದ ವಿದೇಶಿ ಪದ್ಧತಿಯಾಗಿದ್ದು ಭಾರತದಲ್ಲಿ ಮಹಾತ್ಮಾಗಾಂಧೀಜಿಯವರಿಂದ ಪ್ರಚುರ ಪಡಿಸಲ್ಪಟ್ಟಿದೆ. ಈ ಪದ್ಧತಿಯನ್ನು ಅನುಸರಿಸಿ ಮೂಲವ್ಯಾಧಿ ಗುಣಪಡಿಸಿಕೊಂಡ ಹಾಗೂ ಇಪ್ಪತ್ತೆರಡು ವರುಷಗಳಿಂದ ಈ ವಿಧಾನದಲ್ಲಿ ಲೇಖನ, ಭಾಷಣ, ಶಿಬಿರದಲ್ಲಿ ತೊಡಗಿರುವ ಅನುಭವದ ಕಿವಿಮಾತುಗಳು ಇಲ್ಲಿವೆ.


ಸಲಹೆಗಳು

ಮೂಲವ್ಯಾಧಿ ಶಸ್ತ್ರ ಚಿಕಿತ್ಸೆ ಇಲ್ಲದೆ ಗುಣಪಡಿಸಿಕೊಳ್ಳಬಹುದು. ಆದರೆ ಆ ಬಗ್ಗೆ ಸಂಪೂರ್ಣ ನಂಬಿಕೆಯಿಂದ ಚಾಚು ತಪ್ಪದೆ ಈ ಸಲಹೆಗಳಿಗೆ ಓಗೊಡಬೇಕು.

- ಸೈಕಲ್, ವೆಹಿಕಲ್‌ಗಳನ್ನು ಕೈಬಿಟ್ಟು ನಡಿಗೆಯನ್ನು ಹಿಡಿಯಿರಿ.
- ಮದ್ಯ, ಮಾಂಸ ಮತ್ತು ಮೀನು ತ್ಯಜಿಸಿ.
- ಮೊಳಕೆಕಾಳು, ಹಸಿ ತರಕಾರಿ, ಹಣ್ಣು ಹಂಪಲು ತಿನ್ನಿ.
- ಯೋಗಾಸನ ಅಥವಾ ವ್ಯಾಯಾಮ ಮಾಡಿ.
- ಊಟದ ಮುನ್ನ ಮತ್ತು ನಂತರ ಎರಡು ಘಂಟೆ ಕಾಲದ ಅಂತರದಲ್ಲಿ ನೀರನ್ನು ಕುಡಿಯಿರಿ. ಊಟದ ಜೊತೆಗೆ ಬೇಡ.
- ಕರಿದದ್ದು, ಸುಟ್ಟದ್ದು, ಬೆಂದದ್ದು, ಮಸಾಲೆ ಇತ್ಯಾದಿ ವರ್ಜ್ಯ.
- ಊಟವಾದ ಮೇಲೆ ಮೆತ್ತಗಿರುವ ಇಡೀ ನಿಂಬೆಹಣ್ಣು (ಸಿಪ್ಪೆ ಸಮೇತ ಬೀಜದೊಡನೆ ಕತ್ತರಿಸದೆ) ಚೆನ್ನಾಗಿ ಅಗಿದು ತಿನ್ನಿರಿ.
- ಉಣ್ಣುವ ತುತ್ತು, ಅನ್ನ ಇತ್ಯಾದಿಗಳನ್ನು ಚೆನ್ನಾಗಿ ಅಗಿದು ತಿನ್ನಿ.
- ಒಂದು ತುತ್ತನ್ನು ಮೂವತ್ತಕ್ಕಿಂತಲೂ ಹೆಚ್ಚು ಬಾರಿ ಅಗಿದು ತಿನ್ನಬೇಕು.
- ಶುದ್ಧ ನೀರನ್ನು ಧಾರಾಳವಾಗಿ ಕುಡಿಯಿರಿ.
- ಬೆಳಿಗ್ಗೆ ಬೆಡ್‌ಕಾಫಿ ಬದಲಿಗೆ ಶುದ್ಧ ಜೇನುತುಪ್ಪ ಬೆರೆಸಿದ ನಿಂಬೆಹಣ್ಣು, ಮೂಲಂಗಿ ರಸ, ತುಳಸಿ ರಸ, ಇವನ್ನು ಕುಡಿಯಿರಿ. ಗರಿಕೆಹುಲ್ಲು ಅಥವಾ ಗೋಧಿ ಹುಲ್ಲಿನ ರಸ ಆಗಬಹುದು.
- ಕಾಫಿ, ಟೀ, ಹಾಲು, ಕೂಲ್ ಡ್ರಿಂಕ್ಸ್, ಬೇಕರಿ ಪದಾರ್ಥಗಳನ್ನು ಸಂಪೂರ್ಣ ಬಿಟ್ಟುಬಿಡಿ.
- ಎರಡು ಊಟದ ನಡುವೆ ಏನನ್ನೂ ತಿನ್ನದಿರಿ. ಹೊಟ್ಟೆ ಹಸಿಯದೆ ಉಣ್ಣದಿರಿ. ಕೋಪ-ತಾಪಗಳಿದ್ದಾಗ ಆಹಾರ ಸೇವಿಸದಿರಿ.
- ಆತುರಾತುರದಲ್ಲಿ ತಿನ್ನದಿರಿ.

ಈ ಸಲಹೆಗಳಲ್ಲಿ ಎಲ್ಲವನ್ನು ಅನುಸರಿಸಿ ಮೂಲವ್ಯಾಧಿ ತಂತಾನೆ ವಾಸಿಯಾಗುವುದು.

- ತಲಕಾಡು ವಿಶ್ವಸಮಾಜ ವೆಂಕಟೇಶ್



ಕೋಳಿ ಮೊದಲೋ, ಮೊಟ್ಟೆ ಮೊದಲೋ?

ಅತ್ಯಂತ ಕುತೂಹಲಕರವಾದ ಈ ಪ್ರಶ್ನೆಗೆ 'ಡಾರ್ವಿನ್‌ನ ವಿಕಾಸವಾದದ ಸಹಾಯದಿಂದ ಉತ್ತರ ಹುಡುಕಬಹುದು. ಕೋಳಿ ಸಾಕಾಣೆ ಮೊಟ್ಟ ಮೊದಲು ಪ್ರಾರಂಭವಾಗಿದ್ದು ಈಗ್ಗೆ 5,000 ವರ್ಷಗಳ ಹಿಂದೆ ಆಗ್ನೇಯ ಏಷ್ಯಾದಲ್ಲಿ. ಇದಕ್ಕೆ ಮೊದಲು ಕೋಳಿ ಜಾತಿಯ ಹಕ್ಕಿಗಳು ಗೊಂಡಾರಣ್ಯದಲ್ಲಿ ವಾಸಿಸುತ್ತಿದ್ದವು. ಹಾರಲು ಬಾರದ, ಹಾರಿದರೂ ಅತ್ಯಲ್ಪ ದೂರ ಮಾತ್ರ ಹಾರಬಲ್ಲ 'ಆರ್ಕಿಯೊಪ್ಟೆರಿಕ್ಸ್' (Archaopteryx) ಎಂಬ ಪಕ್ಷಿ. ಕೋಳಿಯ ಪೂರ್ವದ್ದಷ್ಟೇ ಅಲ್ಲ, ಇದುವೇ ಪ್ರಪಂಚದ ಮೊಟ್ಟ ಮೊದಲ ಪಕ್ಷಿ. ಹದಿನೈದು ಕೋಟಿ ವರ್ಷಗಳಷ್ಟು ಹಿಂದೆ ಮಧ್ಯೆ ಯರೋಪಿನ ಹುಲ್ಲುಗಾವಲುಗಳಲ್ಲಿ ಈ ಆರ್ಕಿಯೋಪ್ಟೆರಿಕ್ಸ್ ವಾಸವಾಗಿತ್ತೆಂದು ಸಾಕ್ಷ್ಯಾಧಾರಗಳ ಸಮೇತ ಸಾಬೀತಾಗಿದೆ.

ಆದರೆ ಆರ್ಕಿಯೊಪ್ಟೆರಿಕ್ಸ್ ''ಪಕ್ಷಿ ಮತ್ತು ಸರೀಸೃಪ'' ಇವೆರಡರ ಲಕ್ಷಣ ಹೊಂದಿದ್ದು, ಈಗ ನಾವು ಸರೀಸೃಪಗಳ ಇತಿಹಾಸದತ್ತ ಕಣ್ಣು ಹಾಯಿಸಬೇಕಾಗುತ್ತದೆ. ವಿಕಾಸವಾದದ ಪುಟಗಳನ್ನು ತಿರುವಿದಾಗ ಮೊಟ್ಟೆ ಇಡುವ ಪ್ರಪ್ರಥಮ ಜೀವಿ ಕಾಣಸಿಗುವುದು ಇಪ್ಪತ್ತೆಂಟು ಕೋಟಿ ವರ್ಷಗಳಷ್ಟು ಹಿಂದೆ. 'ಹೈಲೋನೋಮಸ್' (Hylonomes) ಎಂದು ಕರೆಯಲಾಗುವ ಈ ಜೀವಿ ಹಲ್ಲಿಯನ್ನು ಹೋಲುತ್ತದೆ.

ಮೊಟ್ಟ ಮೊದಲು ಕೋಳಿ (ಅಥವಾ ಅದರ ಪೂರ್ವ) ಕಾಣಿಸಿಕೊಂಡದ್ದು ಹದಿನೈದು ಕೋಟಿ ವರ್ಷಗಳ ಹಿಂದೆ. ಮೊಟ್ಟ ಮೊದಲು ಮೊಟ್ಟೆ ಹುಟ್ಟಿದ್ದು ಇಪ್ಪತ್ತೆಂಟು ಕೋಟಿ ವರ್ಷಗಳ ಹಿಂದೆ. ಈಗ ನೀವೇ ಹೇಳಿ- ''ಕೋಳಿ ಮೊದಲೋ, ಮೊಟ್ಟೆ ಮೊದಲೋ?''

■ ಸೋಮನಾಥ ಎಸ್.ಕಾರಟಗಿ

ನೀವೂ ಇಂಗ್ಲಿಷ್ ಕಲಿಯಿರಿ

ಭಾಗ 18

ಸಾಮಾನ್ಯರೂ ಸುಲಭವಾಗಿ ಇಂಗ್ಲಿಷ್ ಕಲಿಯಬಹುದಾದ ಸರಳ ಪಾಠ ಇಲ್ಲಿದೆ

(ಹಿಂದಿನ ಸಂಚಿಕೆಯಿಂದ)

ಜಾನ್ : ಈಗ Adverb Clause ಅಭ್ಯಾಸ ಮಾಡುತ್ತಿದ್ದೇವೆ. ಅದರಲ್ಲಿ ಎಷ್ಟು ವಿಧಗಳಿವೆ?

ಜಾನಕಿ : ಒಟ್ಟು ಎಂಟು ವಿಧವಾಗಿ ವರ್ಗೀಕರಣ ಮಾಡಲಾಗಿದೆ ಎಂದು ನೀನು ಹೇಳಿದ್ದೆ....

ಜಾನ್ : ಸರಿ, ಈಗ ಒಂದೊಂದೆ ಅಭ್ಯಾಸ ಮಾಡೋಣ. ಮುಖ್ಯ ವಾಕ್ಯ ಅಂದರೆ Main Clause ಮತ್ತು ಉಪವ್ಯಾಕ್ಯಾಂಗ (Subordinate Clause) ಇವೆರಡನ್ನು ಜೋಡಿಸುವ ಪದ Conjunction (ಸಮುಚ್ಚಕ ಅವ್ಯಯಗಳು) ವರ್ಗೀಕರಣವನ್ನು ಸೂಚಿಸುವುದು.

ಜಾನಕಿ : ಉದಾಹರಣೆ ಇಲ್ಲದೆ ಹೇಳಿದರೆ ತಿಳಿಯುವುದಿಲ್ಲ....

ಜಾನ್ : i) I will go to market **if** you come.

ii) Rama went out **when** teacher entered the class

ಇಲ್ಲಿ (i) if (ii) when ಇವು Adverb clause ಇದರ ವರ್ಗೀಕರಣ ತೋರಿಸುವುದು.

ಜಾನಕಿ : ಹೀಗೆ ಹೇಳಿದರೆ ಸುಲಭವಾಗಿ ತಿಳಿಯುತ್ತದೆ...

ಜಾನ್ : ನಿಂದು ಯಾವಾಗಲೂ ಅವಸರ.... ಮುಂದೆ ಕೇಳು.

(I) ADVERB CLAUSES OF TIME

ಸಮಯವನ್ನು ಸೂಚಿಸುವ Conjunction, ಕಾಣುತ್ತೇವೆ. ಉದಾಹರಣೆಗೆ. When, While, Before, As soon as ಮುಂತಾದವುಗಳು. ವಾಕ್ಯಗಳಲ್ಲಿ ನೋಡೋಣ.

i)You may go home **when** you finish the work.

ii) **As soon as** I entered the class, the students stood up.

ವಾಕ್ಯ i) ರಲ್ಲಿ when ಮತ್ತು ii)ರಲ್ಲಿ As soon as ಇವು ಸಮಯವನ್ನು ತೋರಿಸುತ್ತವೆ. ಇದನ್ನು ಹೇಳುವುದು ಹೀಗೆ -

i) You may go home - **Main Clause.**

ii) When you finish the work - Subordinate Adverb Clause of **Time** modifying 'may go'.

ಜಾನಕಿ : ಈ ರೀತಿ ಹೇಳಿದರೆ ಚೆನ್ನಾಗಿ ಅರ್ಥವಾಗುತ್ತದೆ...

ಜಾನ್ : ಸುಮ್ಮನಿರು. ಕೀಟಲೆ ಮಾಡಬೇಡ.

II) ADVERB CLAUSE OF PLACE

ಇಲ್ಲಿ Conjunction ಸ್ಥಳವನ್ನು ಸೂಚಿಸುವುದು. ಉದಾ. Where, When, Whereas etc. ವಿವರಣೆಯಲ್ಲಿ

i) I stay here **where** you lived.

ii) Let thief be arrested **wherever** he may be found.

ಒಂದೆರಡು ಉದಾಹರಣೆ ಹೇಳು ಜಾನಕೀ ಬಾಯಿ...

ಜಾನಕಿ : ಯಾಕಪ್ಪಾ ಈ ರೀತಿ ಕೇಳುವುದು....... ಇರಲಿ, ಹೇಳುತ್ತೇನೆ.

i) Do not talk **while** I am learning - **Time** ಸೂಚಿಸುವುದು.

ii) Wife will live, **where** husband lives - **Place** ಸರಿ ಇದೆಯಾ?

ಜಾನ್ : Very good. ಈಗ ಮೂರನೆಯದು.

III) ADVERB CLAUSE OF PURPOSE

ಉದ್ದೇಶ ಸೂಚಕ conjunction ಇಲ್ಲಿರುವುದು. ಉದಾ.

i) Soldiers die **so that** the country may live.

ii) He opened his pen **in order that** he might write.

(i) so that (ii) in order that ಇವು ವ್ಯಕ್ತಿಯು ಮಾಡುವ ಕರ್ಮದ ಉದ್ದೇಶವನ್ನು ಸೂಚಿಸುತ್ತದೆ.

IV) ADVERB CLAUSE OF REASON OR CAUSE

ಕಾರಣಗಳನ್ನು ಸೂಚಿಸುವ conjunctions ಇಲ್ಲಿ ಕಾಣುತ್ತೇವೆ. ಉದಾ. Because, as, since, that etc.

i) <u>He failed</u> <u>because he did not study.</u>
a b

ii) <u>Since you are late</u> <u>you missed the bus.</u>
b a

i) a) He failed - Main Clause

b) Because he did not study - Subordinate Adverb clause of reason modifying verb 'failed'

V) ADVERB CLAUSE OF CONDITION

ಇಲ್ಲಿಯ conjunction ನಿಯಮ - ಕರಾರು ಸೂಚಿಸುವುದು. ಉದಾ. if, unless, whether

i) <u>If it rains</u> <u>there shall not be game.</u>
b a

ii) <u>Unless he works</u> <u>he will not pass</u>
b a

VI) ADVERB CLAUSE OF RESULT OR CONSEQUENCE

ಇಲ್ಲಿರುವುದು ಪರಿಣಾಮ ಸೂಚಕ Conjunction.
ಉದಾ.So.....that, Such....... that

i) Very heavy rain fell **so that** rivers were in flood.

ii) He behaved in **such** a manner **that** his reputation suffered.

ಜಾನಕಿ : ಹೀಗೆ ಹೇಳುತ್ತಾ ಹೊರಟರೆ, ನನಗೆ ತಿಳಿಯುವುದು ಹೇಗೆ? ಪ್ರಶ್ನೆ ಕೇಳು.

ಜಾನ್ : ತಾಳು, ಇನ್ನು ಎರಡೇ ಎರಡು ಇವೆ. ಆಮೇಲೆ ಪ್ರಶ್ನೆ.

(VII) ADVERB CLAUSE OF COMPARISON

ಹೋಲಿಕೆ ಸೂಚಿಸುವ conjunction ಉದಾ than, as.

i) He is older **than** he looks

ii) He is **as** stupid **as** he is lazy.

VIII) ADVERB CLAUSE OF SUPPOSITION OR CONCESSION

Conjunctions - through, although, even if,
ಉದಾ.

i) **Though** I am poor I am honest.

ii) **Even if** it rains I shall come.

ಜಾನಕಿ : ಈಗ ಸ್ಪಷ್ಟವಾಗಿ ತಿಳಿಯಿತು, ಮತ್ತೆ ಪ್ರಶ್ನೆ....

ಜಾನ್ : Very good ಮುಂದಿನ ಸಲ Active Voice Passive Voice ಕಲಿಯೋಣ.

ಜಾನಕಿ : ಏನು ಹಾಗಂದ್ರೆ? ಕನ್ನಡದಲ್ಲಿ ಹೇಳಪ್ಪ.

ಜಾನ್ : ಕರ್ತರಿ ಪ್ರಯೋಗ - Active Voice
ಕರ್ಮಣಿ ಪ್ರಯೋಗ - Passive Voice.

ಕೊನೆಹನಿ

ಜಾನ್ : ವಾಕ್ಯ ಸರಿಯಾಗಿ ಕೇಳು

i)It will happen **as** sure **as** death

ii) **So** cold was it **that** many died.

iii)**Although soldiers** were tired, they fought bravely.

iv) I am glad **that** you like it.

ಜಾನಕಿ : ಕೇಳು, ನಾನು ಹೇಳ್ತೇನೆ,

i) Adverb Clause of **Comparison**.

ii)Adverb Clause of **Result**

iii)Adverb clause of **Supposition**

iv)Adverb clause of **Reason**

ನುಡಿಗಟ್ಟು

'ಕನ್ನಡಿಯಲ್ಲಿ ಕರಿಯನ್ನು ತೋರಿಸಿದಂತೆ.' ಕಡಿಮೆ ಶಬ್ದಗಳಲ್ಲಿ ವಿಶಾಲ, ವ್ಯಂಗ್ಯ ಇತ್ಯಾದಿ ಅರ್ಥಗಳನ್ನು ಒಳಗೊಂಡಿರುತ್ತವೆ. ಅವು ವಾಕ್ಯಗಳಿಗೆ ಅಲಂಕಾರವೂ ಹೌದು.

i) **Break with** - ಜಗಳವಾಡು
He has no reason to **break with** me in the beginning of the year.

ii) **Carry out** - ಕಾರ್ಯದಲ್ಲಿ ತರುವುದು
All the soldiers **carried out** the orders of captain.

iii) **Get off** - ಪಾರಾಗು, ತಪ್ಪಿಸಿಕೊಳ್ಳು
He would not **get off** with a fine as he had no licence.

iv) **Go into** - ಪರೀಕ್ಷಿಸು, ಪರಿಶೀಲಿಸು
The CBI officer made all efforts to **go into** the matter.

v) **Abide by** - ನೆರವೇರಿಸು, ಹೊಂದಿಕೊಂಡು ಹೋಗು.
It is the duty of every citizen to **abide by** the rules.

vi) **A bed of Roses** - ಹೂವಿನ ಹಾಸಿಗೆ
The post of Prime minister was not **a bed of roses**.

ಶಬ್ದ ಸಂಪತ್ತು

ಪ್ರತಿ ಶಬ್ದಕ್ಕೆ 4 ಅರ್ಥಕೊಟ್ಟಿದ್ದು, ಕೊಟ್ಟ ಶಬ್ದದ ಸಮಾನಾರ್ಥ ಪದ ಹುಡುಕಿರಿ, ನಂತರ ಉತ್ತರ ನೋಡಿ.

a. Feign - ಅ.ನಟಿಸು, ಸೋಗುಹಾಕು, ಬ. ಕಲ್ಪನೆ ಕ. ಮೂರ್ಛೆಹೋಗು ಡ. ತೊಂದರೆ ಕೊಡು

b.Polity - ಅ.ನಮ್ರತೆ ಬ.ಪ್ರಜಾರಾಜ್ಯಪದ್ಧತಿ ಕ.ಸ್ವಾತಂತ್ರ್ಯ ಡ.ಸಂಚು ಮಾಡು

c. Nudge - ಅ.ಮೆಲ್ಲಗೆ ತಟ್ಟು (ತಿವಿತ) ಬ.ಎಳೆಯುವುದು ಕ.ಸ್ಪರ್ಧಿಸು ಡ.ಯಾವುದೂ ಅಲ್ಲ.

d. Pugnacity - ಅ.ಅಸತ್ಯ ಬ. ಜಗ್ಗು ಕ. ಜಗಳಗಂಟ ಡ.ವೈರತ್ವ

e. Dune - ಅ.ಮೂರ್ಖ ಬ.ಸಮುದ್ರದಲ್ಲಿಯ ಉಸುಕಿನ ಗುಡ್ಡ ಕ.ಧ್ವನಿ ಡ.ನಿಧಾನವಾಗಿರಲಿ.


f. Haywire - ಅ.ನಾಶವಾದ ಬ. ಹುಲ್ಲಿನ ತಂತಿ ಕ.ಪ್ರಭಾವ ಡ.ಅವ್ಯವಸ್ಥೆ (ಸಂಘಟಿತವಲ್ಲದ)

ಉತ್ತರಗಳು :

a. ಅ b.ಬ c. ಅ d. ಕ e.ಬ f. ಡ

■ ಡಾ. ಎಸ್.ಸಿ. ಶರ್ಮಾ

ಪ್ರಾಧ್ಯಾಪಕರು,
ಆರ್.ವಿ. ಇಂಜಿನಿಯರಿಂಗ್ ಕಾಲೇಜು,
ಮೈಸೂರು ರಸ್ತೆ, ಬೆಂಗಳೂರು - 59.



ಮಾರ್ಗದರ್ಶಿ

ಇನ್ನು ಮೇಲೆ ಈ ಅಂಕಣ 'ದಾರಿ' ವಾರ ಪತ್ರಿಕೆಯಲ್ಲಿ ಮುಂದುವರಿಯುವುದು.

ಸಂತೋಷ್ ಎಸ್.ಪಿ.

ನಾನು ಎಸ್.ಎಸ್.ಎಲ್.ಸಿ. ಯಲ್ಲಿ ಶೇ.58 ಪಡೆದು 1998ರಲ್ಲಿ ಪಾಸಾಗಿದ್ದೇನೆ. ನನಗೆ ಟೆಕ್ನಿಕಲ್ ಕೋರ್ಸ್ ಮಾಡಬೇಕೆಂದು ಆಸೆ. ಆದರೆ ಗಣಿತದಲ್ಲಿ 30, ವಿಜ್ಞಾನದಲ್ಲಿ 35 ಅಂಕಗಳು ದೊರೆತಿವೆ. ಕಾರಣ ಯಾವ ಕೋರ್ಸು ಸಿಗಲಿಲ್ಲ. ನಾನು ಬಾಗಲಕೋಟೆಯಲ್ಲಿ ವಿಜ್ಞಾನ ಮಾಡುತ್ತಿದ್ದೇನೆ. ನನಗೆ ಇದು ಇಷ್ಟವಿಲ್ಲ ನಾನು ಬೇರೆ ಏನು ಮಾಡಬಹುದು ತಿಳಿಸಿರಿ.

ನೀವು ಎಸ್.ಎಸ್.ಎಲ್.ಸಿ. ಆಧಾರದ ಮೇಲೆ ಡಿಪ್ಲೊಮಾ ಮಾಡಬಹುದು. ಅತ್ಯಂತ ಬೇಡಿಕೆಯಿರುವ ಟೂಲ್ ಅಂಡ್ ಡೈ ಮೇಕಿಂಗ್ ಮಾಡುವುದು ಒಳ್ಳೆಯದು. ನಿಮ್ಮ ಅಂಕವು ಅತ್ಯಂತ ಕಡಿಮೆ ಇರುವುದರಿಂದ ಎನ್.ಟಿ.ಟಿ. ಎಫ್. ಜಿ.ಟಿ.ಟಿ.ಸಿ. ಯಂತಹ ಸಂಸ್ಥೆಗಳಲ್ಲಿ ಈ ಕೋರ್ಸು ಸಿಗುವುದು ಕಷ್ಟವಾಗುವುದರಿಂದ ಖಾಸಗಿ ಸಂಸ್ಥೆಗಳಲ್ಲಿ ಪ್ರಯತ್ನಿಸುವುದು ಒಳ್ಳೆಯದು. ಐ.ಟಿ.ಐ.ನಲ್ಲಿ ಡೀಸಲ್ ಮೆಕಾನಿಕ್ ಮಾಡುವುದೂ ಸಹ ಉದ್ಯೋಗದ ದೃಷ್ಟಿಯಿಂದ ಒಳ್ಳೆಯದು.

ಕೆ. ಮಂಜುನಾಥ, ಕೋಲಾರ.

ನಾನು ಅಂತಿಮ ಬಿ.ಎ. ಮಾಡುತ್ತಿದ್ದೇನೆ. ನಾನು ಮುಂದೆ ಆರ್.ಟಿ.ಓ. ಅಧಿಕಾರಿ ಅಥವಾ ಆರ್.ಟಿ.ಓ. ಕಮೀಷನರ್ ಆಗಬೇಕೆಂದು ಬಯಸಿದ್ದೇನೆ. ಈ ಆರ್.ಟಿ.ಓ. ಕಮೀಷನರ್ ಉದ್ಯೋಗಕ್ಕೆ ಹೋಗಲು ಯಾವ ಒಂದು ವಿದ್ಯಾಭ್ಯಾಸವನ್ನು ಮಾಡಬೇಕು. ಈ ಪರೀಕ್ಷೆಗೆ ಕೂರಲು ವಯಸ್ಸಿನ ನಿರ್ಬಂಧವಿದೆಯೇ. ಈ ಪರೀಕ್ಷೆಯನ್ನು ತೆಗೆದುಕೊಳ್ಳಲು ಯಾವ ಸಂಸ್ಥೆಯನ್ನು ಸಂಪರ್ಕಿಸಬೇಕು. ಯಾವ ಮಾಧ್ಯಮದಲ್ಲಿ ಬರೆಯಬೇಕು ಮತ್ತು ಈ ಆರ್.ಟಿ.ಓ. ಕಮೀಷನರ್ ಆಗಲು ಇರುವಂತಹ ಎಲ್ಲಾ ಮಾಹಿತಿಗಳನ್ನು ತಿಳಿಸಿ.

ಆರ್.ಟಿ.ಓ. ಆಗಬೇಕಾದರೆ ಕನಿಷ್ಠ ವಿದ್ಯಾರ್ಹತೆ ಬಿ.ಇ. (ಮೆಕ್ಯಾನಿಕಲ್) ಅಥವ ಬಿ.ಇ. (ಆಟೋಮೊಬೈಲ್)ನಲ್ಲಿ ಪದವೀಧರರಾಗಿರಬೇಕು. ವಯೋಮಿತಿ ಸರ್ಕಾರದ ನಿಯಮಾನುಸಾರ ಇರುತ್ತದೆ. ಇದರ ಆಯ್ಕೆಯನ್ನು ಕರ್ನಾಟಕ ಲೋಕಸೇವಾ ಆಯೋಗದವರು ನಡೆಸುತ್ತಾರೆ.

ಶ್ರೀನಿವಾಸ, ಬಸವಗೋಡು

ಯಾವುದೇ ವಿದ್ಯಾರ್ಹತೆ ಇಲ್ಲದೆ ಅಂಚೆ ಶಿಕ್ಷಣದ ಮೂಲಕ ಬಿ.ಎ. ಮತ್ತು ಎಂ.ಎ. ಮಾಡಬಹುದಂತೆ. (ನಾನು ಎಸ್.ಎಸ್.ಎಲ್.ಸಿ. ಫೇಲ್) ದಯವಿಟ್ಟು ನನ್ನ ಸಂದೇಹಗಳಿಗೆ ಉತ್ತರಿಸಿ:

1) ಬಿ.ಎ., ಎಂ.ಎ ಪದವಿಗಳಿಗೆ ಕನಿಷ್ಟ ಹಾಗೂ ಗರಿಷ್ಠ ವಯೋಮಿತಿ ಎಷ್ಟು? ಪ್ರವೇಶ ಪರೀಕ್ಷೆಯಿರುತ್ತದೆಯೇ? ಹಾಗೂ ಎಂ.ಎ. ಓದಲು ಅವಧಿ ಎಷ್ಟು? 2) ಎಂ.ಎ. ಮುಗಿದ ಮೇಲೆ ಕೆ.ಎ.ಎಸ್. ಐ.ಎ.ಎಸ್., ಐ.ಪಿ.ಎಸ್. ಪಿ.ಎಚ್.ಡಿ. ಈ ಕೋರ್ಸ್‌ಗಳನ್ನು ನೇರವಾಗಿ ಕಾಲೇಜಿನಿಂದ ಮಾಡಬಹುದೇ? 3) ಮುಂದೆ ಉದ್ಯೋಗಕ್ಕೆ ಎಸ್.ಎಸ್.ಎಲ್.ಸಿ. ಸರ್ಟಿಫಿಕೇಟಿನ ಅವಶ್ಯಕತೆಯಿದೆಯೇ? ಹಾಗೂ ಕರ್ನಾಟಕದ ಯಾವ ವಿ.ವಿ.ಯಿಂದ correspondence ಮಾಡುವುದು ಸೂಕ್ತ ಎಂದು ತಿಳಿಸಿ.

ಬಿ.ಎ.ಗೆ ಕನಿಷ್ಠ 21 ಹಾಗು ಎಂ.ಎ.ಗೆ ಕನಿಷ್ಠ 23 ವರ್ಷಗಳಾಗಿರಬೇಕು. ಬಿ.ಎ. ಮೂರು ವರ್ಷ ಹಾಗು ಎಂ.ಎ. 2 ವರ್ಷದ ಕೋರ್ಸ್. ಎಂ.ಎ. ನಂತರ, ಪಿ.ಎಚ್.ಡಿ.ಗಳನ್ನು ಮಾಡಬಹುದು. ಇದು ಹಲವು ವಿಶ್ವವಿದ್ಯಾಲಯಗಳಲ್ಲಿ ಲಭ್ಯವಿದೆ. ಎಸ್.ಎಸ್.ಎಲ್.ಸಿ. ಅಂಕಪಟ್ಟಿಯಲ್ಲಿ ಹೆಸರು ಹಾಗು ಜನ್ಮ ದಿನಾಂಕವು ಇರುವುದರಿಂದ ಮುಂದಿನ ವಿದ್ಯಾಭ್ಯಾಸಕ್ಕಾಗಲಿ ಅಥವ ಉದ್ಯೋಗಕ್ಕಾಗಲಿ ತುಂಬಾ ಅವಶ್ಯಕ. ಕರ್ನಾಟಕದ ಯಾವುದೇ ವಿ.ವಿ.ಯಲ್ಲಿ ಕರೆಸ್ಪಾಂಡೆನ್ಸ್ ಕೋರ್ಸ್ ಮಾಡಿದರು ಒಂದೆ.

ಗಣೇಶ್, ಬೆಂಗಳೂರು

ನಾನು ಎಸ್.ಎಸ್.ಎಲ್.ಸಿ. ಯಲ್ಲಿ (1997-98) 370 ಅಂಕಗಳನ್ನು ಗಳಿಸಿ ಉತ್ತೀರ್ಣನಾಗಿರುತ್ತೇನೆ. ಈಗ ಜೆ.ಓ.ಸಿ.ಗೆ ಸೇರಿ ಓದುತ್ತಿದ್ದೇನೆ. ಮುಂದೆ ಡಿ.ಟಿ.ಪಿ. ಆಪರೇಟರ್ ಆಗಬೇಕೆಂದು ಬಯಕೆ. ಇದು ಎಷ್ಟು ವರ್ಷದ ಕೋರ್ಸ್, ಎಲ್ಲೆಲ್ಲಿ ಓದಬಹುದು. ನಾನು ವ್ಯಾಸಂಗಕ್ಕೆ ಅರ್ಹನಾಗಿದ್ದೇನೆಯೇ? ಹಾಗೂ ಎಷ್ಟು ಹಣ ಖರ್ಚಾಗಬಹುದು? ದಯವಿಟ್ಟು ತಿಳಿಸಿ.

ಡಿ.ಟಿ.ಪಿ. ಆಪರೇಟರ್ ಆಗಬೇಕಿದ್ದಲ್ಲಿ ನೀವು ಯಾವುದೇ ಖಾಸಗಿ ಕಂಪ್ಯೂಟರ್ ಕೇಂದ್ರದಲ್ಲಿ ಡಿ.ಟಿ.ಪಿ. ಕೋರ್ಸ್ ಮಾಡಿರಬೇಕು. ಈ ಕೋರ್ಸ್ ಹಲವಾರು ಖಾಸಗಿ ಕಂಪ್ಯೂಟರ್ ಕೇಂದ್ರಗಳಲ್ಲಿ ಲಭ್ಯವಿರುತ್ತದೆ. ಇದಕ್ಕೆ ಹೆಚ್ಚಿನ ವಿದ್ಯಾರ್ಹತೆಯೇನೂ ಅವಶ್ಯಕತೆಯಿಲ್ಲ. ಎಸ್.ಎಸ್.ಎಲ್.ಸಿ. ಆಗಿದ್ದರೆ ಸಾಕಾಗುತ್ತದೆ. ಹಾಗು ಹೆಚ್ಚಿನ ಹಣವೇನೂ ಖರ್ಚಾಗುವುದಿಲ್ಲ. ಡಿ.ಟಿ.ಪಿ.ಯಲ್ಲಿ ಇರುವ ಪೇಜ್‌ಮೇಕರ್, ಕೋರಲ್ ಡ್ರಾ, ಫೋಟೋಷಾಪ್ ಮುಂತಾದವುಗಳನ್ನು ಕಲಿಯಬೇಕಾಗುತ್ತದೆ. ಹೆಚ್ಚಿನ ಮಾಹಿತಿಗೆ ನಿಮ್ಮ ಹತ್ತಿರದ ಯಾವುದಾದರೂ ಕಂಪ್ಯೂಟರ್ ಕೇಂದ್ರವನ್ನು ಸಂಪರ್ಕಿಸಿ.

ಸಗನ್ ಡಿ. ದೇಸಾಯಿ, ಜಮಖಂಡಿ

ನಾನು ಬಿ.ಎ. ಎರಡನೆ ವರ್ಷದಲ್ಲಿ ಓದುತ್ತಿದ್ದೇನೆ. ನಾನು ಬಿ.ಎ. ಮುಗಿದ ಕೂಡಲೇ ಪೊಲೀಸ್ ಇಲಾಖೆಯ ಉನ್ನತ ಹುದ್ದೆಗೆ ಹೋಗಲು ಆಸೆ ಇದೆ. ಆದ್ದರಿಂದ ಪೊಲೀಸ್ ಇಲಾಖೆಗೆ ಹೇಗೆ ಹೋಗಬೇಕು ಹಾಗೂ ಯಾವ ಕೆಲಸ ಕಾರ್ಯಗಳನ್ನು ಮಾಡಬೇಕೆಂದು ತಾವು ದಯವಿಟ್ಟು ತಿಳಿಸಬೇಕು.

ಪೋಲೀಸ್ ಇಲಾಖೆಯಲ್ಲಿ ಉನ್ನತ ಸ್ಥಾನ ಪಡೆಯಲು ಕನಿಷ್ಠ ಪದವಿಯನ್ನು ಮಾಡಬೇಕಾಗುತ್ತದೆ. ಹಾಗು ಉತ್ತಮ ದೇಹದಾರ್ಢ್ಯತೆ ಹೊಂದಿರಬೇಕಾಗುತ್ತದೆ. ಪದವಿಯ ಆಧಾರದ ಮೇಲೆ ಸ್ಪರ್ಧಾತ್ಮಕ ಪರೀಕ್ಷೆಯ ಮುಖಾಂತರ ಈ ಹುದ್ದೆಗಳಿಗೆ ಸೇರಬಹುದು. ಇಲಾಖೆಗೆ ಸೇರಿದ ನಂತರ ಕೆಲಸ ಕಾರ್ಯಗಳ ಬಗ್ಗೆ ತರಬೇತಿಯನ್ನು ಇಲಾಖೆಯೇ ನೀಡುತ್ತದೆ.

ಸುರೇಶ ಕ. ಹಂಚನಾಳ, ಅಕ್ಕಲಕೋಟೆ

ನಾನು ಹುಟ್ಟಿ ಬೆಳೆದದ್ದು ಕರ್ನಾಟಕದಲ್ಲಿ, ಆದರೆ 5 ರಿಂದ ಇಲ್ಲಿಯವರೆಗಿನ ಶಿಕ್ಷಣ ಮಹಾರಾಷ್ಟ್ರದಲ್ಲಿ ಆಗಿದೆ. ಈಗ ನಾನು D.Ed.

ಶಿವಯೋಗಿ, ಪಂಗಣ್ಣವರ, ಗುಡಿಸಾಗರ

ನನ್ನ ತಮ್ಮ 9ನೇ ತರಗತಿ ಫೇಲಾದ ನಂತರ ಶಾಲೆಗೆ ಹೋಗಲು ಇಚ್ಛಿಸಲಿಲ್ಲ. ಆತನನ್ನು ಎಸ್.ಎಸ್.ಎಲ್.ಸಿ.ಯವರೆಗೆ ಓದಿಸಬೇಕೆಂಬ ಆಸೆ. ಆದ್ದರಿಂದ ರೆಗ್ಯುಲರ್ ಬದಲು ಎಕ್ಸಟರ್‌ನಲ್ ಕಟ್ಟಬೇಕೆಂದಿರುತ್ತೇನೆ. ಈ ರೀತಿಯಾಗಿ ಪಾಸ್ ಆದ ನಂತರ ಅವನಿಗೆ ಯಾವುದಾದರೂ ನೌಕರಿಗೆ ಹೋಗಲು ತೊಂದರೆಯಾಗುತ್ತದೆಯೆ? ತಿಳಿಸಿ.

ಎಸ್.ಎಸ್.ಎಲ್.ಸಿ.ಯನ್ನು ಬಾಹ್ಯವಾಗಿ ಕುಳಿತು ಮಾಡಬಹುದು. ಹೀಗೆ ಪರೀಕ್ಷೆಗೆ ಕುಳಿತುಕೊಳ್ಳುವುದಾದರೆ ಕನಿಷ್ಠ 18 ವರ್ಷ ವಯಸ್ಸಾಗಿರಬೇಕು. ಇದರ ನಂತರ ನೌಕರಿಗೆ ಹೋಗಲು ಯಾವುದೇ ತೊಂದರೆಯಿಲ್ಲ.

(Diploma in Education)ದ ಎರಡನೆಯ ವರ್ಷದಲ್ಲಿ ಕಲಿಯುತ್ತಿದ್ದೇನೆ. ಪ್ರಥಮ ವರ್ಷದಲ್ಲಿ ಶೇ.62 ಬಿದ್ದಿವೆ. ನನಗೆ ಎಸ್.ಎಸ್.ಎಲ್.ಸಿ. ಯಲ್ಲಿ ಶೇ. 70 ಅಂಕಗಳಿವೆ. ನಾನು ಹೊರನಾಡು ಕನ್ನಡಿಗನೋ ಅಥವಾ ಗಡಿನಾಡ ಕನ್ನಡಿಗನೊ ತಿಳಿಸಿರಿ. ನನ್ನ ಎಸ್.ಎಸ್.ಎಲ್.ಸಿ. ಅಕ್ಕಲಕೋಟೆ ತಾಲೂಕಿನ ಒಂದು ಹಳ್ಳಿಯಲ್ಲಿ ಮುಗಿದಿದೆ. ನನಗೆ ಕರ್ನಾಟಕದಲ್ಲಿ ಗ್ರಾಮೀಣ ಪ್ರದೇಶದ ಮೀಸಲಾತಿ ಶೇ. 10 ಅಂಕ ನೀಡುತ್ತಾರೆಯೇ? ನಾನು ಕರ್ನಾಟಕದಲ್ಲಿ ಶಿಕ್ಷಕನಾಗಬೇಕಾದರೆ ಅರ್ಹತೆ ಏನು ಬೇಕು? ನಾನು ಕರ್ನಾಟಕದ ಯಾವುದೇ ವಿಶ್ವವಿದ್ಯಾಲಯದಲ್ಲಿ ಬಿ.ಎ ಪರೀಕ್ಷೆ ಕಟ್ಟಬೇಕೆಂದಿದ್ದೇನೆ. ಈ ಪರೀಕ್ಷೆ ಕಟ್ಟಲು ಬರುತ್ತದೆಯೇ ತಿಳಿಸಿರಿ.

ನೀವೂ ಹೊರನಾಡ ಕನ್ನಡಿಗನಾಗುತ್ತೀರಿ. ಕರ್ನಾಟಕದಲ್ಲಿ ಗ್ರಾಮೀಣ ಪ್ರದೇಶದ ಮೀಸಲಾತಿ ಶೇ. 10 ಅಂಕ ನೀಡಬೇಕಾದರೆ, ಕರ್ನಾಟಕದಲ್ಲಿ ಕನಿಷ್ಠ 10 ವರ್ಷಗಳ ವಿದ್ಯಾಭ್ಯಾಸ ಮಾಡಿರಬೇಕಾಗುವುದರಿಂದ ನಿಮಗೆ ಈ ಸೌಲಭ್ಯ ಸಿಗಲಾರದು. ನೀವು ಕರ್ನಾಟಕದ ಯಾವುದೇ ವಿಶ್ವವಿದ್ಯಾಲಯದಲ್ಲಿ ಬಿ.ಎ. ಪರೀಕ್ಷೆ ಕಟ್ಟಬಹುದು.

ಎಸ್.ಆರ್. ರಮೇಶ್, ಗುಬ್ಬಿ

ನಾನು ಬಿ.ಎ. (ಕಲಾ) ಮಾಡಿರುತ್ತೇನೆ. ನನ್ನ ಒಟ್ಟು ಅಂಕ ಶೇ. 39 ಇರುತ್ತದೆ. ನಾನು ಕಾನೂನು ಪದವೀಧರನಾಗಲು ಇಚ್ಛಿಸುತ್ತೇನೆ. ನಾನು ಎಲ್.ಎಲ್.ಬಿ. ತೆಗೆದುಕೊಳ್ಳಲು ಸಾಧ್ಯವಿದೆಯೇ? ಇದನ್ನು ಅಂಚೆ ತೆರಪಿನ ಮೂಲಕ ಓದಬಹುದೇ? ಇದು ಯಾವ ವಿ.ವಿ.ಯಲ್ಲಿದೆ ತೆಗೆದುಕೊಳ್ಳಬಹುದು. ನಾನು ನಿಮ್ಮ ಸಲಹೆಗಾಗಿ ಕಾಯುತ್ತಿರುತ್ತೇನೆ. ದಯವಿಟ್ಟು ಪರಿಹಾರ ತಿಳಿಸಿ.

ನೀವು ಬಿ.ಎ. ಮಾಡಿರುವುದರಿಂದ ಅಗತ್ಯವಾಗಿ ಎಲ್.ಎಲ್.ಬಿ. ಯನ್ನು ಮಾಡಬಹುದು. ಕರೆಸ್ಪಾಡಿಂಗ್ ಮೂಲಕ ಮಾಡಬಹುದಾದರು ಕಾಲೇಜುಗಳು ತುಂಬಾ ಕಡಿಮೆ. ಆದರಿಂದ ಸಾಯಂಕಾಲದ ಕಾಲೇಜುಗಳಲ್ಲಿ ಮಾಡುವುದು ಒಳ್ಳೆಯದು. ಇದು ಸಾಮಾನ್ಯವಾಗಿ ಎಲ್ಲಾ ವಿಶ್ವವಿದ್ಯಾಲಯದಲ್ಲಿ ಲಭ್ಯವಿದೆ.

ರಾಘವೇಂದ್ರ, ಉಡುಪಿ

ನಾನು ಈಗ ಬಿ.ಕಾಂ.ನಲ್ಲಿ ಆದರ ವಿಷಯಗಳೊಂದಿಗೆ ಕಂಪ್ಯೂಟರನ್ನು ಒಂದು ಪ್ರತ್ಯೇಕ ವಿಷಯವನ್ನಾಗಿ ಕಲಿಯುತ್ತಿದ್ದೇನೆ. ಬಿ.ಕಾಂ.ನ ನಂತರ ಕಂಪ್ಯೂಟರನ್ನೇ ಮುಖ್ಯ ವಿಷಯವನ್ನಾಗಿ ತೆಗೆದುಕೊಂಡು ಕಲಿಯಬೇಕೆಂದಿದ್ದೇನೆ. ಆದ್ದರಿಂದ ನಾನು ಯಾವ ಕೋರ್ಸನ್ನು ಮಾಡಬಹುದು ಮತ್ತು ಯಾವ ಕೋರ್ಸನ್ನು ಮಾಡಿದರೆ ಕೆಲಸ ಸಿಗುವ ಸಂಭವ ಜಾಸ್ತಿ ಎಂಬುದನ್ನು ದಯವಿಟ್ಟು ತಿಳಿಸಿಕೊಡಿ.

ನಿಮಗೆ ಕಂಪ್ಯೂಟರ್‌ನಲ್ಲಿ ಆಸಕ್ತಿಯಿದ್ದಲ್ಲಿ ಎಂ.ಸಿ.ಎ. ಮಾಡಬಹುದು. ಇದಕ್ಕೆ ಬಿ.ಕಾಂ. ನಲ್ಲಿ ಕನಿಷ್ಠ ಶೇ. 50 ಅಂಕಗಳು ಬಂದಿರಬೇಕು. ಹಾಗು ಪ್ರವೇಶ ಪರೀಕ್ಷೆ ಬರೆಯಬೇಕು. ಇಲ್ಲವಾದರೆ ಖಾಸಗಿ ಕಂಪ್ಯೂಟರ್ ಕೇಂದ್ರಗಳಲ್ಲಿ ವಿವಿಧ ರೀತಿಯ ಕೋರ್ಸುಗಳು ವಾಣಿಜ್ಯ ಪದವೀಧರರಿಗೆಂದೇ ಲಭ್ಯವಿರುತ್ತದೆ. ಇದನ್ನು ಸಹ ಮಾಡಬಹುದು, ಇದಕ್ಕೆ ಉದ್ಯೋಗಾವಕಾಶಗಳು ಚೆನ್ನಾಗಿದೆ.

ರಾಜಶೇಖರಯ್ಯ, ಗದಗ

ನಾನು ಪಿ.ಯು.ಸಿ. ಮಾಡಿದ್ದೇನೆ. ಮುಂದೆ ಡಿಪ್ಲೋಮಾ ಇನ್ ಸರ್ಜರಿ ಮಾಡಬೇಕೆಂದಿರುವೆ. ಇದು ಯಾವ ಕಾಲೇಜಿನಲ್ಲಿ ಇರುತ್ತದೆ. ನನ್ನ ಗೆಳೆಯ ಪಿ.ಯು.ಸಿ. ಕಲಾ ಪಾಸಾಗಿದ್ದಾನೆ. ಅವನು ಎಲ್.ಎಲ್.ಬಿ. ಮಾಡಬೇಕೆಂದಿದ್ದಾನೆ. ಪಿ.ಯು.ಸಿ. ಆಧಾರದ ಮೇಲೆ ಎಲ್.ಎಲ್.ಬಿ. ಮಾಡಬಹುದೆ? ಅದಕ್ಕೆ ಎಷ್ಟು ಅಂಕಗಳಿಸಿರಬೇಕು ಎಂಬುದರ ಮಾಹಿತಿ ತಿಳಿಸಿ.

ನೀವು ಡಿಪ್ಲೊಮಾ ಇನ್ ಸರ್ಜರಿ ಮಾಡಬಹುದು. ಇದು ಹಲವು ಕಾಲೇಜಿನಲ್ಲಿ ಲಭ್ಯವಿದೆ. ದಿನಪತ್ರಿಕೆಗಳಲ್ಲಿ ಇದರ ಕುರಿತು ಜಾಹೀರಾತು ಬರುತ್ತದೆ. ಪಿ.ಯು.ಸಿ. ಆಧಾರದ ಮೇಲೆ ಎಲ್.ಎಲ್.ಬಿ. ಮಾಡಬಹುದು. ಇದು 5 ವರ್ಷದ ಕೋರ್ಸಾಗಿದೆ. ಹೆಚ್ಚಿನ ಮಾಹಿತಿಗೆ ನ್ಯಾಷನಲ್ ಸ್ಕೂಲ್ ಆಫ್ ಲಾ ಸಂಪರ್ಕಿಸಿ. ರೆಗ್ಯುಲರ್ ಆಗಿ ಹೋಗಲು ಸಾಧ್ಯವಾಗದಿದ್ದರೆ ಸಂಜೆ ಕಾಲೇಜಿನಲ್ಲಿ ಎಲ್.ಎಲ್.ಬಿ.ಯನ್ನು ಮಾಡಬಹುದು. ಇಲ್ಲಿ ಪ್ರವೇಶ ಪಡೆಯಲು ಪ್ರವೇಶ ಪರೀಕ್ಷೆ ಬರೆಯಬೇಕಾಗುತ್ತದೆ.

ಹೆಸರಿಲ್ಲ, ಊರಿಲ್ಲ

ನಾನು ದ್ವಿತೀಯ ಪಿ.ಯು.ಸಿ. ಓದುತ್ತಿದ್ದೇನೆ. ಮುಂದೆ ನಾನು ಜರ್ನಲಿಸಂ ಮಾಡಬೇಕೆಂದಿರುವೆ. ಇದನ್ನು ಅಂಚೆ ತೆರಪಿನ ಮೂಲಕ ಮಾಡಬಹುದೆ? ಹಾಗೂ ಈ ಶಿಕ್ಷಣ ಎಲ್ಲಿ ಲಭ್ಯ? ಇದರಿಂದ ಉತ್ತಮ ಅವಕಾಶಗಳಿವೆಯೇ? ಇದಕ್ಕೆ ಪಿ.ಯು.ಸಿ. ಅರ್ಹತೆ ಸಾಕೇ? ಅಥವಾ ಡಿಗ್ರಿ ಮಾಡಿರಬೇಕೇ? ಇದನ್ನು ಮುಗಿಸಿದ ನಂತರ ಏನಾದರೂ ಟ್ರೈನಿಂಗ್ ಕೋರ್ಸ್ ಮಾಡಬೇಕೇ? ತಿಳಿಸಿ.

ನೀವು ಅಗತ್ಯವಾಗಿ ಪಿ.ಯು.ಸಿ. ಆದ ಮೇಲೆ ಜರ್ನಲಿಸಂ ಕಲಿಯಬಹುದು. ಪದವಿ ನಂತರ ಮಾಡುವುದು ಒಳ್ಳೆಯದು. ಇದರ ಆಧಾರದ ಮೇಲೆ ಪತ್ರಿಕೋದ್ಯಮದಲ್ಲಿ ಉದ್ಯೋಗಕ್ಕೆ ಯತ್ನಿಸಬಹುದು. ಇದು ಸಾಮಾನ್ಯವಾಗಿ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಲಭ್ಯವಿದೆ.

ಹೆಸರಿಲ್ಲ, ಊರಿಲ್ಲ,

ನಾನು ದ್ವಿತೀಯ ಬಿ.ಎ. ಓದುತ್ತಿದ್ದೇನೆ. ಕಂಪ್ಯೂಟರ್ ಕಲಿಯಲು ತುಂಬಾ ಆಸಕ್ತಿ, ಆದರೆ ನಾವು ಗ್ರಾಮೀಣ ಪ್ರದೇಶದವರಾದ್ದರಿಂದ ಇಂಗ್ಲಿಷ್‌ನಲ್ಲಿ ಕಲಿಯುವುದು ಸ್ವಲ್ಪ ಕಷ್ಟ. ಕಳೆದ ತಿಂಗಳ ಬಿಸಿಲ ಬದುಕಿನಲ್ಲಿ ಕನ್ನಡ ಸಾಫ್ಟ್‌ವೇರ್ ಬರಹದ ಬಗ್ಗೆ ಓದಿ ಬಹಳ ಸಂತಸವಾಯಿತು. ನಾವು ಇಂಗ್ಲಿಷ್‌ನಲ್ಲಿ ಕಲಿಯದೆ ನೇರ ಕನ್ನಡ ಕಂಪ್ಯೂಟರ್ (ಸಾಫ್ಟ್‌ವೇರ್) ಕಲಿಯಬಹುದೆ ಎಂದು ದಯವಿಟ್ಟು ತಿಳಿಸಿ. ಹಾಗಿದ್ದರೆ ಕಲಿಸುವ ಕೇಂದ್ರಗಳ ವಿಳಾಸವನ್ನು ತಿಳಿಸಿಕೊಡಿ.

ನೀವು ಬಿ.ಎ. ಮಾಡಿರುವುದರಿಂದ ಇಂಗ್ಲಿಷ್ ಮಾಧ್ಯಮದಲ್ಲಿ ಸಾಫ್ಟ್‌ವೇರನ್ನು ಸುಲಭವಾಗಿ ಕಲಿಯಬಹುದು ಹಾಗೂ ಮುಂದಿನ ವಿದ್ಯಾಭ್ಯಾಸಕ್ಕೆ ಇದು ಅನುಕೂಲವಾಗುತ್ತದೆ. ಒಂದು ವೇಳೆ ಕನ್ನಡದ ಸಾಫ್ಟ್‌ವೇರ್ ಬರಹದಲ್ಲಿ ಆಸಕ್ತಿಯಿದ್ದರೆ ಯಾವುದಾದರು ಹತ್ತಿರದ ಕಂಪ್ಯೂಟರ್ ಕೇಂದ್ರದಲ್ಲಿ ವಿಚಾರಿಸಿದರೆ ನಿಮಗೆ ಸಂಪೂರ್ಣ ಮಾಹಿತಿ ದೊರೆಯುತ್ತದೆ.

ಕ.ರಾ.ರ.ಸಾ.ಸಂ.ಯಲ್ಲಿ ಉದ್ಯೋಗಾವಕಾಶಗಳು

ಸಂಸ್ಥೆಯ ಈ ಕೆಳಕಂಡ ಅಧಿಕಾರಿ ಹುದ್ದೆಗಳಿಗೆ ಗೊತ್ತುಪಡಿಸಲಾದ ಕೊನೆಯ ದಿನಾಂಕದಂದು ಅರ್ಹ ವಿದ್ಯಾರ್ಹತೆ ಹೊಂದಿರುವ ಭಾರತೀಯ ಪ್ರಜೆಗಳಿಂದ ಅವರ ವಯಸ್ಸು, ಶೈಕ್ಷಣಿಕ ಅರ್ಹತೆ, ಅನುಭವ ಇತ್ಯಾದಿ ಅರ್ಹತೆಗಳ ಬಗ್ಗೆ ಅವಶ್ಯವಿರುವ ಪ್ರಮಾಣಪತ್ರಗಳ ದೃಢೀಕೃತ ಪ್ರತಿಗಳೊಂದಿಗೆ ನಿಗದಿತ ಅರ್ಜಿ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು ಸಾಮಾನ್ಯ ಸಾಮರ್ಥ್ಯ ಪರೀಕ್ಷೆ (Common Aptitude Test) ತೆಗೆದುಕೊಳ್ಳಬೇಕಾಗುವುದು. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ/ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ/ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಯಾವುದೇ ವಿಭಾಗಗಳಲ್ಲಿ ಕಾರ್ಯ ನಿರ್ವಹಿಸಲು ಇಚ್ಛೆಯುಳ್ಳ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸತಕ್ಕದ್ದು.

I. ದರ್ಜೆ-II ರ ಅಧಿಕಾರಿ ಹುದ್ದೆಗಳು.

II. ಅರ್ಹತೆಯ ಪ್ರಮಾಣಗಳು ಸರಾಸರಿ ಶೇಕಾಡ 50 ಹುದ್ದೆಗೆ ನಿಗದಿಪಡಿಸಿದ ವಿದ್ಯಾರ್ಹತೆಯಲ್ಲಿ ಭಾಷೆಗಳ ಅಂಕಗಳೂ ಒಳಗೊಂಡಂತೆ ಎಲ್ಲಾ ವರ್ಷಗಳಲ್ಲಿ ಪಡೆದ ಅಂಕಗಳು.

ಸಹಾಯಕ ಆಡಳಿತಾಧಿಕಾರಿ ಹುದ್ದೆಗೆ ಸರಾಸರಿ (ಪದವಿ ಜೊತೆಗೆ ಸಮಾಜ ಸೇವೆಯಲ್ಲಿ ಪಡೆದ ಪದವಿ ಡಿಪ್ಲೋಮಾದಲ್ಲಿ ಪಡೆದ ಎಲ್ಲಾ ವರ್ಷದ ಅಂಕಗಳು)

III. ಹುದ್ದೆಯ ಹೆಸರು, ಒಟ್ಟು ಹುದ್ದೆ ಮತ್ತು ಶೈಕ್ಷಣಿಕ ವಿದ್ಯಾರ್ಹತೆ :

1. **ಸಹಾಯಕ ಸಂಚಾರ ವ್ಯವಸ್ಥಾಪಕ - 10 ಹುದ್ದೆ**

(ಅ) ಕಾನೂನು ಮೇರೆಗೆ ಸ್ಥಾಪಿತವಾದ ವಿಶ್ವವಿದ್ಯಾಲಯದಿಂದ ಪದವಿ ಅಥವಾ ತತ್ಸಮಾನ ವಿದ್ಯಾರ್ಹತೆ ಹೊದಿರಬೇಕು.

2. **ಸಹಾಯಕ ತಾಂತ್ರಿಕ ಶಿಲ್ಪಿ - 6 ಹುದ್ದೆ**

(ಅ) ಆಟೋಮೊಬೈಲ್ ಅಥವಾ ಮೆಕ್ಯಾನಿಕಲ್ ಇಂಜಿನಿಯರಿಂಗ್ ಪದವಿ ಹೊಂದಿರಬೇಕು.

(ಆ) ಚಾಲ್ತಿಯಲ್ಲಿರುವ ಹೆಚ್‌ಟಿವಿ ಲೈಸೆನ್ಸ್ ಹೊಂದಿರಬೇಕು ಅಥವಾ ಪ್ರೊಬೆಷನರಿ ಅವಧಿ ಮುಗಿಯುವುದರೊಳಗೆ ಲೈಸೆನ್ಸ್ ಹೊಂದತಕ್ಕದ್ದು.

3. **ಸಹಕಾರಿ ಲೆಕ್ಕಾಧಿಕಾರಿ - 15 ಹುದ್ದೆ**

(ಅ) ಕಾಮರ್ಸ್/ಫೈನಾನ್ಸ್ ಅಥವಾ ಬ್ಯಾಚಲರ್ ಆಫ್ ಬಿಸಿನೆಸ್ ಮ್ಯಾನೇಜ್‌ಮೆಂಟ್‌ನಲ್ಲಿ ಪದವಿ ಅಥವಾ ತತ್ಸಮಾನ ಪದವಿ ಹೊಂದಿರಬೇಕು.

4. **ಸಹಾಯಕ ಆಡಳಿತಾಧಿಕಾರಿ - 12 ಹುದ್ದೆ**

(ಅ) ಪದವಿ ಅಥವಾ ತತ್ಸಮಾನ ವಿದ್ಯಾರ್ಹತೆಯೊಂದಿಗೆ ಪದವಿ ಅಥವಾ ರಾಜ್ಯ ಸರ್ಕಾರದಿಂದ ಅಂಗೀಕೃತವಾದ ಸಂಸ್ಥೆಯೊಂದರ ಸಮಾಜಸೇವೆ/ಕಾರ್ಮಿಕ ಕಲ್ಯಾಣ/ಪರ್ಸನಲ್ ಮ್ಯಾನೇಜ್‌ಮೆಂಟ್‌ನಲ್ಲಿ ಡಿಪ್ಲೊಮಾ ಹೊಂದಿರ ಬೇಕು.

(ಆ) ಕೈಗಾರಿಕಾ / ವಾಣಿಜ್ಯ / ಸಾರಿಗೆ ಸಂಸ್ಥೆಗಳ ಸಿಬ್ಬಂದಿ ವಿಷಯದಲ್ಲಿ ಮೇಲ್ವಿಚಾರಕ ಹುದ್ದೆಯಲ್ಲಿ ಕನಿಷ್ಠ ಪಕ್ಷ 3 ವರ್ಷಗಳ ಅನುಭವ ಮತ್ತು ರಾಜ್ಯ ಸರ್ಕಾರದ ಅಥವಾ ಸಾರಿಗೆ ಸಂಸ್ಥೆಗಳ ಸೇವಾ ನಿಯಮದ ಬಗೆಗಿನ ಜ್ಞಾನದ ಅಗತ್ಯವಿರುತ್ತದೆ.

5. **ಸಹಾಯಕ ಸಂಖ್ಯಾಧಿಕಾರಿ - 13 ಹುದ್ದೆ**

(ಅ) ಸಂಖ್ಯಾಶಾಸ್ತ್ರ/ಅರ್ಥಶಾಸ್ತ್ರದ ವಿಷಯ ವನ್ನೊಳಗೊಂಡ ಪದವಿ ಹೊಂದಿರಬೇಕು.

(ಆ) ಗಣಕ ಶಾಸ್ತ್ರ ಜ್ಞಾನದ ಅವಶ್ಯಕತೆ ಇರುತ್ತದೆ.

6. **ಸಹಾಯಕ ಕಾನೂನು ಅಧಿಕಾರಿ -18 ಹುದ್ದೆ**

(ಅ) ಕಾನೂನು ವಿಷಯದಲ್ಲಿ ಪದವಿ ಹೊಂದಿರಬೇಕು.

(ಆ) 2 ವರ್ಷಕ್ಕಿಂತ ಕಡಿಮೆಯಿಲ್ಲದಂತೆ ವಕೀಲರಾಗಿ ಅಭ್ಯಾಸ (ಪ್ರಾಕ್ಟೀಸ್) ಮಾಡಿರ ಬೇಕು.

7. **ಕಾರ್ಮಿಕ ಕಲ್ಯಾಣಾಧಿಕಾರಿ - 10 ಹುದ್ದೆ**

(ಅ) ಸೋಷಿಯಲ್ ವರ್ಕ್‌ನಲ್ಲಿ ಸ್ನಾತಕೋತ್ತರ ಪದವಿ (ಎಂಎಸ್‌ಡಬ್ಲ್ಯೂ) ಯೊಂದಿಗೆ ಇಂಡಸ್ಟ್ರಿಯಲ್ ರಿಲೇಷನ್ಸ್/ಪರ್ಸನಲ್ ಮ್ಯಾನೇಜ್‌ಮೆಂಟ್/ಕಾರ್ಮಿಕ ಕಲ್ಯಾಣದಲ್ಲಿ ವಿಶೇಷ ಜ್ಞಾನ ಹೊಂದಿರಬೇಕು.

8. **ಸಹಾಯಕ ಉಗ್ರಾಣಾಧಿಕಾರಿ - 15 ಹುದ್ದೆ**

(ಅ) ಪದವಿ ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರಬೇಕು.

9. **ಭದ್ರತಾ ಮತ್ತು ಜಾಗೃತಾಧಿಕಾರಿ - 03 ಹುದ್ದೆ**

(ಅ) ಪದವಿ ಅಥವಾ ತತ್ಸಮಾನ ವಿದ್ಯಾರ್ಹತೆ ಅಥವಾ ಕ್ಯಾಪ್ಟನ್ ದರ್ಜೆಗಿಂತ ಕಡಿಮೆ ಇಲ್ಲದಂತಹ ಮಾಜಿ ಸೈನಿಕನಾಗಿರಬೇಕು ಅಥವಾ ವಾಯುಪಡೆ ಅಥವಾ ನೌಕಾಪಡೆಯಲ್ಲಿ ತತ್ಸಮಾನ ದರ್ಜೆ ಹೊಂದಿರತಕ್ಕದ್ದು.

10. **ಸಹಾಯಕ ಅಭಿಯಂತರ (ಸಿವಿಲ್) - 07 ಹುದ್ದೆ**

(ಅ) ಸಿವಿಲ್ ಇಂಜಿನಿಯರಿಂಗ್ ಪದವಿ/ಎಎಂಐಇ (ಸಿವಿಲ್)ನಲ್ಲಿ ವಿದ್ಯಾರ್ಹತೆ ಹೊಂದಿರ ಬೇಕು.

11. **ಸಹಾಯಕ ಅಭಿಯಂತರ (ಎಲೆಕ್ಟ್ರಿಕಲ್) - 01 ಹುದ್ದೆ**

(ಅ) ಎಲೆಕ್ಟ್ರಿಕಲ್ ಇಂಜಿನಿಯರಿಂಗ್‌ನಲ್ಲಿ ಪದವಿ/ಎಎಂಐಇ (ಇಲೆಕ್ಟ್ರಿಕಲ್)ನಲ್ಲಿ ವಿದ್ಯಾರ್ಹತೆ ಹೊಂದಿರಬೇಕು.

IV. ವಯೋಮಿತಿ

1. ಭರ್ತಿ ಮಾಡಿದ ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದಂದು ಕನಿಷ್ಠ 18 ವರ್ಷಗಳು ತುಂಬಿರಬೇಕು.
2. ಪ.ಜಾ., ಪ.ಪಂ ಮತ್ತು ಮಾಜಿ ಸೈನಿಕರಿಗೆ ಎಂದಿನಂತಿರುವ ವಯೋಮಿತಿ ಸಡಿಲಿಕೆಗಳು ಅನ್ವಯವಾಗುವುದು.

V. ಇತರೆ ಅಗತ್ಯಗಳು

(ಅ) ಅರ್ಜಿ ಸ್ವೀಕರಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದಂದು ನಿಗದಿತ ಶೈಕ್ಷಣಿಕ ವಿದ್ಯಾರ್ಹತೆ, ಅನುಭವ ಮತ್ತು ವಯಸ್ಸಿನ ಮಿತಿ ಇತ್ಯಾದಿಗಳನ್ನು ಪೂರೈಸಬೇಕು.

(ಆ) ಸಹಾಯಕ ಸಂಚಾರ ವ್ಯವಸ್ಥಾಪಕ ಮತ್ತು ಭದ್ರತಾ ಮತ್ತು ಜಾಗೃತಿಧಿಕಾರಿ ಹುದ್ದೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಈ ಕೆಳಕಂಡ ಕನಿಷ್ಠ ದೇಹದಾರ್ಢ್ಯತೆಯನ್ನು ಹೊಂದಿರಬೇಕು. (1) ಎತ್ತರ- 160 ಸೆಂ.ಮೀ. (2) ತೂಕ- 50 ಕೆ.ಜಿ.

(ಇ) ಅಭ್ಯರ್ಥಿಗಳು ಕನ್ನಡವನ್ನು ಓದಲು, ಬರೆಯಲು ಮತ್ತು ಮಾತನಾಡಲು ಬಲ್ಲವರಾಗಿರ ಬೇಕು. ಎಸ್‌ಎಸ್‌ಎಲ್‌ಸಿ ಅಥವಾ ತತ್ಸಮಾನ ವಿದ್ಯಾರ್ಹತೆಯಲ್ಲಿ ಕನ್ನಡವನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯನ್ನಾಗಿ ವ್ಯಾಸಂಗ ಮಾಡಿರ ಬೇಕು.

(ಈ) ಕರಾರಸಾಸಂಸ್ಥೆ/ವಾಕರಸಾಸಂಸ್ಥೆ/ಬೆಂಮನಸಾಸಂಸ್ಥೆ/ಕೇಂದ್ರ/ರಾಜ್ಯ ಸರ್ಕಾರ/ಸಾರ್ವಜನಿಕ ಉದ್ದಿಮೆಗಳಲ್ಲಿ ನೌಕರಿಯಲ್ಲಿರುವ

ಅಭ್ಯರ್ಥಿಗಳು ಅರ್ಜಿಗಳನ್ನು ಇತ್ತೀಚೆಗೆ ಪಡೆದಿರುವ ಸೇವಾ ಪ್ರಮಾಣ ಪತ್ರದೊಂದಿಗೆ ತಮಗೆ ಸಂಬಂಧಪಟ್ಟ ನಿಯಂತ್ರಣಾಧಿಕಾರಿಗಳ ಮೂಲಕ ಕಳುಹಿಸತಕ್ಕದ್ದು. ಕರಾರಸಾಸಂಸ್ಥೆ/ವಾಕರಸಾಸಂಸ್ಥೆ/ಬೆಂಮನಸಾಸಂಸ್ಥೆಯ ಉದ್ಯೋಗಿಗಳು ತಪ್ಪದೇ ಅವರ ಭವಿಷ್ಯನಿಧಿ ಸಂಖ್ಯೆಯನ್ನು ನಮೂದಿಸತಕ್ಕದ್ದು.

VI. ಆಯ್ಕೆಯ ವಿಧಾನ :

(1) ಕರಾರಸಾಸಂಸ್ಥೆಯ ಮೇಲ್ಕಂಡ ಎಲ್ಲಾ ಹುದ್ದೆಗಳಿಗೂ ಏಕಕಾಲದಲ್ಲಿ ಆಬ್ಜೆಕ್ಟಿವ್ ಮಾದರಿ ಲಿಖಿತ ಪರೀಕ್ಷೆ (ಸಾಮಾನ್ಯ ಸಾಮರ್ಥ್ಯ ಪರೀಕ್ಷೆ)ಯನ್ನು ಈ ಕೆಳಕಂಡ ಕೇಂದ್ರಗಳಲ್ಲಿ ನಡೆಸಲಾಗುವುದು - ಬೆಂಗಳೂರು/ಬೆಳಗಾವಿ/ಬಿಜಾಪುರ/ದಾವಣಗೆರೆ/ಗುಲ್ಬರ್ಗಾ/ಹುಬ್ಬಳ್ಳಿ/ಮೈಸೂರು/ಮಂಗಳೂರು/ರಾಯಚೂರು. ಸಾಮಾನ್ಯ ಸಾಮರ್ಥ್ಯ ಪರೀಕ್ಷೆಯ ಸಂಭವನೀಯ ದಿನಾಂಕ 11.09.99 ಆಗಿರುತ್ತದೆ.

(2) ಸಾಮಾನ್ಯ ಸಾಮರ್ಥ್ಯ ಪರೀಕ್ಷೆಯ ದಿನಾಂಕವನ್ನು ಪ್ರಧಾನ ದಿನಪತ್ರಿಕೆಗಳ ಮತ್ತು ಇತರೆ ಮಾಧ್ಯಮಗಳ ಮೂಲಕ ತಿಳಿಯಪಡಿಸಲಾಗವುದು. ಆದಾಗ್ಯೂ ಪರೀಕ್ಷೆಯ ದಿನಾಂಕವನ್ನು ಪ್ರವೇಶ ಪತ್ರಗಳ ಮೂಲಕ ಎಲ್ಲಾ ಅರ್ಹ ಅಭ್ಯರ್ಥಿಗಳಿಗೂ ಸೂಕ್ತ ಸಮಯದೊಳಗೆ ದೃಢಪಡಿಸಲಾಗುವುದು. ಲಿಖಿತ ಪರೀಕ್ಷೆಯ 3 ದಿವಸಗಳ ಮುಂಚೆ ಅಭ್ಯರ್ಥಿಗಳಿಗೆ ಪ್ರವೇಶ ಪತ್ರ ದೊರೆಯದೆ ಇದ್ದ ಪಕ್ಷದಲ್ಲಿ ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು ಹಾಗೂ ಮುಖ್ಯ ಸಮನ್ವಯಕರು, ಕೆಎಸ್‌ಆರ್‌ಟಿಸಿ ಕ್ಯಾಟ್-ಸೆಲ್, ಸಾರಿಗೆ ಭವನ, ಕರಾರಸಾಸಂಸ್ಥೆ ಕೇಂದ್ರ ಕಛೇರಿ, ಕೆ.ಹೆಚ್.ರಸ್ತೆ, ಬೆಂಗಳೂರು-27 ಅಥವಾ ದೂರವಾಣಿ **2221321 ವಿಸ್ತರಣೆ - 255/321 (ಕ್ಯಾಟ್-ಸೆಲ್)** ರವರ ಕಛೇರಿಯನ್ನು ಸಂಪರ್ಕಿಸತಕ್ಕದ್ದು.

VII. ಆಯ್ಕೆಯಾದ ಅಭ್ಯರ್ಥಿಗಳನ್ನು ಎರಡು ವರ್ಷ ಅವಧಿಗೆ ತರಬೇತಿ/ಪರೀಕ್ಷಾರ್ಥರನ್ನಾಗಿ ತೆಗೆದುಕೊಳ್ಳಲಾಗುತ್ತದೆ ಮತ್ತು ಪರೀಕ್ಷಾರ್ಥ ಅವಧಿಯಲ್ಲಿ ಸಂಸ್ಥೆಯು ನಿಗದಿಪಡಿಸಿದ ಪರೀಕ್ಷೆ ಯಲ್ಲಿ ಉತ್ತೀರ್ಣರಾದಲ್ಲಿ/ಸೇವೆಯನ್ನು ತೃಪ್ತಿಕರವಾಗಿ ಪೂರೈಸಿದಲ್ಲಿ ಮಾತ್ರ ಅವರ ಸೇವೆಯನ್ನು ಕಾಯಂಗೊಳಿಸಲಾಗುವುದು.

VIII. ಅರ್ಜಿಸಲ್ಲಿಸುವ ವಿಧಾನ :

ನಿಗದಿತ ಅರ್ಜಿ ನಮೂನೆಯನ್ನು ಬಿಳಿಯ ಪೂರ್ತಿ ಹಾಳೆಯಲ್ಲಿ ಚೊಕ್ಕವಾಗಿ ಬೆರಳಚ್ಚುಗೊಳಿಸಿ ಅವನ/ಅವಳ ಸ್ವಂತ ಬರವಣಿಗೆಯಲ್ಲಿ ಭರ್ತಿ ಮಾಡಿ ಮತ್ತೆ ಎರಡು ಪಾಸ್‌ಪೋರ್ಟ್ ಅಳತೆಯ ಭಾವ ಚಿತ್ರವನ್ನು ಸಹಿಯೊಂದಿಗೆ ಹಾಗೂ ಸಂಬಂಧಪಟ್ಟ ಪ್ರಮಾಣ ಪತ್ರಗಳನ್ನು ಪ್ರತಿಗಳೊಂದಿಗೆ ಮುಚ್ಚಿದ ಲಕೋಟೆಯಲ್ಲಿ (ಲಕೋಟೆಯ ಅಳತೆ 33 X 22 ಸೆಂ.ಮೀ) **ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು ಹಾಗೂ ಮುಖ್ಯ ಸಮನ್ವಯಕರು, ಕೆಎಸ್‌ಆರ್‌ಟಿಸಿ ಕ್ಯಾಟ್-ಸೆಲ್, ಸಾರಿಗೆ ಭವನ, ಕರಾರಸಾಸಂಸ್ಥೆ, ಕೇಂದ್ರ ಕಛೇರಿ, ಕೆ.ಹೆಚ್. ರಸ್ತೆ, ಬೆಂಗಳೂರು-27** ಇವರಿಗೆ ನೋಂದಣಿ ಅಂಚೆಯ ಮೂಲಕ ಅಥವಾ ಖುದ್ದಾಗಿ ದಿನಾಂಕ 14.07.99ರಂದು ಸಂಜೆ 5.00 ಗಂಟೆಯೊಳಗಾಗಿ ತಲುಪುವಂತೆ ಕಳುಹಿಸುವುದು.

ಅರ್ಜಿಯನ್ನೊಳಗೊಂಡ ಲಕೋಟೆಯ ಮೇಲೆ **"ಕರಾರಸಾಸಂಸ್ಥೆಯಲ್ಲಿ ದರ್ಜೆ-2 ಅಧಿಕಾರಿ ಹುದ್ದೆಗಾಗಿ"** ಎಂದು ನಮೂದಿಸತಕ್ಕದ್ದು.

ಹೆಚ್ಚಿನ ವಿವರಗಳಿಗೆ 17.6.99ರ 'ಸಂಯುಕ್ತ ಕರ್ನಾಟಕ' ದಿನಪತ್ರಿಕೆ ಪುಟ 7ನ್ನು ನೋಡಿರಿ.

■



ಖ್ಯಾತನಾಮರ ಸ್ಥಾನದಲ್ಲಿ ಕುಳಿತು ವಿಶ್ವವಿದ್ಯಾಲಯದ ಯಶಸ್ಸಿಗೆ ಮತ್ತಷ್ಟು ದುಡಿಯುವ ಹೆಗ್ಡೆಯವರದು ಶ್ರೀಮಂತ ಪಾಂಡಿತ್ಯ. ಉತ್ತಮ ಯೋಜನೆಗಳಿಂದ ಅಭಿವೃದ್ಧಿಯತ್ತ ವಿಶ್ವವಿದ್ಯಾಲಯವನ್ನು ಕೊಂಡೊಯ್ಯುವ ಇವರು ಉಪಕುಲಪತಿ ಸ್ಥಾನ ಸ್ವೀಕರಿಸಿರುವುದು ಎಲ್ಲರಿಗೂ ಹೆಮ್ಮೆಯ ವಿಷಯವಾಗಿದೆ.

ಉಪಕುಲಪತಿ ಡಾ. ಎನ್. ಎಸ್. ಹೆಗ್ಡೆ

■ ಡಾ. ಎಸ್. ಸಿ. ಶರ್ಮಾ

ಭಾರತದ ಬಹುದೊಡ್ಡ ಹಾಗು ಖ್ಯಾತ ವಿಶ್ವ ವಿದ್ಯಾಲಯಗಳಲ್ಲಿ ಒಂದು ಮೈಸೂರು ವಿಶ್ವ ವಿದ್ಯಾಲಯ. ಇಲ್ಲಿ ವಿದ್ಯಾಭ್ಯಾಸ ಮಾಡಿದ ಅನೇಕರು ಜಗತ್ತಿನ ವಿವಿಧ ದೇಶಗಳಲ್ಲಿ ಉನ್ನತ ಸ್ಥಾನ ಪಡೆದು ಈ ಸಂಸ್ಥೆಯ ಹೆಸರು ಎತ್ತಿ ಹಿಡಿದಿದ್ದಾರೆ. ಖ್ಯಾತ ಕವಿ ಕುವೆಂಪು ಈ ವಿಶ್ವ ವಿದ್ಯಾಲಯದ ಉಪಕುಲಪತಿಗಳಾಗಿದ್ದುದು ಇಲ್ಲಿನ ಮತ್ತೊಂದು ವಿಶೇಷತೆ. ಇವರ ಮುಂದಾಳತ್ವದಲ್ಲಿ ಮೈಸೂರು ವಿಶ್ವವಿದ್ಯಾಲಯದ ಖ್ಯಾತಿ ವಿಸ್ತರಿಸಿತು.

ತಾವು ಶಿಕ್ಷಣ ಪಡೆದ ಸಂಸ್ಥೆಯಲ್ಲಿಯೇ ಉದ್ಯೋಗಸ್ಥರಾಗುವ ಕೆಲವು ಅದೃಷ್ಟವಂತರಿರುತ್ತಾರೆ. ಅವರಲ್ಲಿ ಡಾ.ಎನ್.ಎಸ್. ಹೆಗ್ಡೆ ಒಬ್ಬರು. ಅಷ್ಟೇ ಅಲ್ಲ, ಅದೇ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿ ಸೇವೆ ಸಲ್ಲಿಸುತ್ತಿರುವ ಹೆಗ್ಗಳಿಕೆಯೂ ಇವರದು.

ಮಿನುಗು ತಾರೆಯ ಉದಯ

1942ರ ಜುಲೈ 5ರಂದು ಕರ್ನಾಟಕದ ಉಡುಪಿ ಜಿಲ್ಲೆ ಕಾರ್ಕಳ ತಾಲ್ಲೂಕಿನ ನಿಂಜೂರು ಎಂಬಲ್ಲಿ ಹೆಗ್ಡೆ ಜನನ. ಹೆತ್ತವರ ಕಣ್ಮಣಿಯಾಗಿ, ಶಿಸ್ತಿನ ಸಿಪಾಯಿಯಾಗಿ ಬೆಳೆದ ಇವರು ಶಿಕ್ಷಣ ಕ್ಷೇತ್ರದಲ್ಲಿ ಸಾಧನೆ ಮಾಡಲು ಬಾಲ್ಯದಿಂದಲೇ ವೇದಿಕೆ ನಿರ್ಮಿಸಿಕೊಂಡರು.

ವೈಜ್ಞಾನಿಕ ವಿಷಯಗಳಲ್ಲಿ ಆಸಕ್ತಿ ಹೊಂದಿದ್ದ ಇವರು 1963ರಲ್ಲಿ ಉಡುಪಿಯ ಎಂ.ಜಿ.ಎಂ. ಕಾಲೇಜಿನಿಂದ ಬಿ.ಎಸ್ಸಿ ಪದವಿ ಗಳಿಸಿ ಮಣಿಪಾಲದ ಕೆ.ಎಂ.ಸಿ. ಕಾಲೇಜಿನಲ್ಲಿ ಡೆಮಾನ್ ಸ್ಟ್ರೇಟರ್ ಆಗಿ ವೃತ್ತಿರಂಗಕ್ಕೆ ಪಾದಾರ್ಪಣೆ ಮಾಡಿದರು. 1967ರಲ್ಲಿ ಕರ್ನಾಟಕ ವಿಶ್ವ ವಿದ್ಯಾಲಯದ ಎಂ.ಎಸ್ಸಿ., 1974ರಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ ಪಿ.ಎಚ್.ಡಿ. ಪಡೆಯುವುದರೊಂದಿಗೆ ತಾವು ಕಂಡ ಕನಸನ್ನು ನನಸಾಗಿಸಿಕೊಂಡರು.

ಬೆಳಕಿಗೆ ಬಂದ ಪ್ರತಿಭೆ

ಇಂಗ್ಲೆಂಡಿನ ಯೂನಿವರ್ಸಿಟಿ ಆಫ್ ರೀಡಿಂಗ್‌ನಿಂದ 'ಕಾಮನ್‌ವೆಲ್ತ್ ಪೋಸ್ಟ್ ಡಾಕ್ಟರಲ್ ಫೆಲೋಶಿಪ್' ಪಡೆದು ಎರಡು ವರ್ಷ ಇಂಗ್ಲೆಂಡಿನಲ್ಲೇ ನೆಲೆಸಿದರು. ಅನಂತರ ತಾಯಿ ನಾಡಿನಲ್ಲಿ ಸೇವೆ ಸಲ್ಲಿಸುವ ಉದ್ದೇಶದಿಂದ ಹಿಂದಿರುಗಿ ಬಂದರು.

ಮಜಲುಗಳು

ಹೆಗ್ಡೆ 1976ರಲ್ಲಿ ಕರ್ನಾಟಕ ವಿಶ್ವ ವಿದ್ಯಾಲಯದಲ್ಲಿ ಜೀವಶಾಸ್ತ್ರದ ಅಧ್ಯಾಪಕರಾಗಿ ವೃತ್ತಿ ಜೀವನಕ್ಕೆ ಮರಳಿದರು. ಇಲ್ಲಿ ನಾಲ್ಕು ವರ್ಷ ಸೇವೆ ಸಲ್ಲಿಸಿ 1980ರಲ್ಲಿ ಮಂಗಳೂರಿನ ಮಂಗಳ ಗಂಗೋತ್ರಿಯಲ್ಲಿ ರೀಡರಾದರು. ಏಳು ವರ್ಷಗಳ ಸೇವಾವಧಿಯ ನಂತರ ಅನ್ವಯಿಕ ಜೀವಶಾಸ್ತ್ರ ವಿಭಾಗದ ಪ್ರಾಧ್ಯಾಪಕರ ಸ್ಥಾನಕ್ಕೆ ಬಡ್ತಿ ಪಡೆದರು. ಹತ್ತು ವರ್ಷಗಳ ಈ ದೀರ್ಘ ಅನುಭವ ಸಾಕಷ್ಟು ಪಾಠ ಕಲಿಸಿ ಪರಿಪಕ್ವ ಮಾಡಿತ್ತು. ಇವರ ಪ್ರತಿಭೆ ಗುರುತಿಸಿ ಅರಿಜೋನ ವಿಶ್ವವಿದ್ಯಾಲಯ ಪೂರ್ಣಾವಧಿ ಸಂದರ್ಶಕ ಪ್ರಾಧ್ಯಾಪಕ ಸ್ಥಾನಕ್ಕೆ ಆಮಂತ್ರಿಸಿತು.

1987ರಲ್ಲಿ ಅನ್ವಯಿಕ ಜೀವಶಾಸ್ತ್ರ ಅಧ್ಯಯನ ಬೋರ್ಡ್‌ನ ಚೇರ್‌ಮನ್, 1992ರಿಂದ 1995ರ ವರೆಗೆ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯ, 1987ರಿಂದ 1996ರವರೆಗೆ ವಿಜ್ಞಾನ ಹಾಗು ತಂತ್ರಜ್ಞಾನ ವಿಭಾಗದ ಡೀನ್, ಹೀಗೆ ಶಿಕ್ಷಣ ಕ್ಷೇತ್ರದ ವಿವಿಧ ಸ್ತರಗಳಲ್ಲಿ ಎನ್.ಎಸ್. ಹೆಗ್ಡೆ ಕಾರ್ಯ ನಿರ್ವಹಣೆ ಮಾಡಿದರು. 27 ವರ್ಷ ಸ್ನಾತಕೋತ್ತರ ಪದವಿ ತರಗತಿಗಳಿಗೆ ಅಧ್ಯಾಪಕರಾಗಿ 30 ವರ್ಷ ಸಂಶೋಧಕರಾಗಿ ಸೇವೆ ಸಲ್ಲಿಸಿರುವ ಇವರ ಮಾರ್ಗದರ್ಶನದಲ್ಲಿ ಎಂಟು ಜನ ಪಿ.ಎಚ್.ಡಿ. ಪದವಿ ಪಡೆದಿರುವುದು ದೊಡ್ಡ ಸಾಧನೆ.

ಯಶಸ್ವೀ ಸಂಶೋಧಕ

ಹೆಗ್ಡೆಯವರು ಕೈಗೊಂಡ ಸಂಶೋಧನಾ ಯೋಜನೆಗಳು ಹಲವು. ಅವುಗಳಲ್ಲಿ ಅಮೇರಿಕದ 'ಮಾರ್ ಅರ್ಥರ್ ಫೌಂಡೇಶನ್' ನ್ಯೂಯಾರ್ಕಿನ ವನ್ಯ ಜೀವಿ ಸಂರಕ್ಷಣಾ ಸಂಸ್ಥೆಯಿಂದ ಗೊರಸುಳ್ಳ ಪ್ರಾಣಿಗಳ ವಾಪನಾ ಸಾಂದ್ರಿಕೆ ಹಾಗು ವಾಸಸ್ಥಳದ ಆಯ್ಕೆ ಎಂಬ ಯೋಜನೆಗಳು ಪ್ರಮುಖವಾದವು. ಇವುಗಳಲ್ಲದೆ ಪಚನ ಕ್ರಿಯಾ ಶಾಸ್ತ್ರ ಪಕ್ಷಿಗಳ ಬಗೆಗಿನ ವನ್ಯಜೀವಿ ಅಧ್ಯಯನ ಶಾಸ್ತ್ರ ಮುಂತಾದ ಜೀವಶಾಸ್ತ್ರಕ್ಕೆ ಸಂಬಂಧಿಸಿದ ಕ್ಷೇತ್ರಗಳಲ್ಲಿ ಸಕ್ರಿಯ ಪಾತ್ರ ವಹಿಸಿದ್ದಾರೆ. ಪರಿಸರದ ಬಗೆಗೆ ಕಾಳಜಿ ಹೊಂದಿರುವ ಪರಿಸರ ಪ್ರೇಮಿ.

ಪ್ರತಿಭೆಗೆ ಪುರಸ್ಕಾರ

ವಿಶ್ವವಿದ್ಯಾಲಯದ ಪರಮೋಚ್ಚ ಸ್ಥಾನವಾದ ಉಪಕುಲಪತಿ ಹುದ್ದೆ ಪಡೆಯುವುದು ಸಾಮಾನ್ಯ ವಿಷಯವಲ್ಲ. ಅದರಲ್ಲೂ ಕುವೆಂಪುರಂಥ ಖ್ಯಾತನಾಮರು ಒಮ್ಮೆ ಕಾರ್ಯ ನಿರ್ವಹಿಸಿದ್ದ ಸ್ಥಾನದಲ್ಲಿ ಕುಳಿತು ಯಶಸ್ವಿಯೆನಿಸುವುದು ಸುಲಭವಲ್ಲ. ಇಂತಹ ಗೌರವಕ್ಕೆ ಪಾತ್ರರಾಗಿ ಯಶಸ್ಸಿನ ಹಾದಿಯಲ್ಲಿ ಸಾಗುತ್ತಿರುವುದು ಹೆಗ್ಡೆಯವರ ಪರಿಶ್ರಮ, ಪ್ರಾಮಾಣಿಕ ಕಾರ್ಯ ಸಾಧನೆಗೆ ಸಾಕ್ಷಿ.

ತಮ್ಮ ಅನುಭವದಿಂದ ಉಪಕುಲಪತಿಯಾಗಿ ಆಡಳಿತವನ್ನು ದಕ್ಷತೆಯಿಂದ ನಿರ್ವಹಿಸುತ್ತಿದ್ದಾರೆ. ಕೆಲವೇ ಸಮಯದಲ್ಲಿ ಅಗತ್ಯ ಮಾರ್ಪಾಡು ಮಾಡಿ ತಾವು ಜವಾಬ್ದಾರಿಯುತ ಅಧಿಕಾರಿ ಎಂದು ಸಾಬೀತು ಮಾಡಿದ್ದಾರೆ.

ಹೆಗ್ಡೆ ಅನೇಕ ಉಪಯುಕ್ತ ಯೋಜನೆ ಹಮ್ಮಿಕೊಂಡಿದ್ದಾರೆ. ಮಹಿಳೆಯರಿಗಾಗಿ ಲಲಿತ ಕಲಾ ಕಾಲೇಜನ್ನು ಉದ್ಯೋಗಾಧಾರಿತ ವೃತ್ತಿಪರ ಕಾರ್ಯಕ್ರಮಗಳ ಕೇಂದ್ರವನ್ನಾಗಿ ರೂಪಿಸುವುದು ಹಾಗು ಮಂಡ್ಯದ ಸ್ನಾತಕೋತ್ತರ ಪದವಿ ಕೇಂದ್ರದಲ್ಲಿ ಮಹಿಳಾ ವಸತಿ ಗೃಹ ನಿರ್ಮಿಸುವುದು ಇವುಗಳಲ್ಲಿ ಪ್ರಮುಖವಾದವು.

ಲಭ್ಯ ಸೌಲಭ್ಯ ಆಧರಿಸಿ ವಿಶ್ವವಿದ್ಯಾಲಯದಲ್ಲಿ ಹೊಸದಾಗಿ 'ಮಾಹಿತಿ ವಿಜ್ಞಾನ ಮತ್ತು ತಂತ್ರಜ್ಞಾನ' ಕೇಂದ್ರ ಆರಂಭಿಸುವುದರೊಂದಿಗೆ, M.Tech, M.Sc. ಗಳನ್ನು ನೂತನವಾಗಿ ರೂಪಿಸುವುದು ಸಂಬಂಧಪಟ್ಟ ಕಾಲೇಜುಗಳಲ್ಲಿ E-Mail, Fax ಸೌಲಭ್ಯ ಬಳಸಲು ಸಲಹೆ ನೀಡುವುದು ಈ ಯೋಜನೆಯಲ್ಲಿ ಸೇರಿದೆ.

ವಿಶ್ವ ವಿದ್ಯಾಲಯದ ಪ್ರಾಂಗಣದಲ್ಲಿ ಉದ್ಯೋಗ ಮಾಹಿತಿ ಕೇಂದ್ರ ತೆರೆಯುವುದು, ಪರಿಶಿಷ್ಟ ಜಾತಿ/ವರ್ಗದ ವಿದ್ಯಾರ್ಥಿಗಳ ಅನುಕೂಲಕ್ಕೆ ಪ್ರತ್ಯೇಕ ಕೇಂದ್ರವನ್ನು ಪುನಶ್ಚೇತನಗೊಳಿಸುವುದು, ಹೊರದೇಶದ ವಿದ್ಯಾರ್ಥಿಗಳಿಗಾಗಿ ಅಬುಧಾಬಿ ಹಾಗು ದುಬೈಗಳಲ್ಲಿ ಹೊಸ ಶಾಖೆಗಳನ್ನು ಪ್ರಾರಂಭಿಸುವುದು, ಅಂತರ ರಾಷ್ಟ್ರೀಯ ಶೈಕ್ಷಣಿಕ ಕಾರ್ಯಕ್ರಮದ ಸಹಯೋಗದೊಂದಿಗೆ ಅಂತರ ರಾಷ್ಟ್ರೀಯ ಕಾರ್ಯಕ್ರಮ ಕೇಂದ್ರ ತೆರೆಯುವುದು ವಿದ್ಯಾರ್ಥಿಗಳಿಗೆಂದೇ ಕೈಗೊಂಡ ಅತ್ಯಂತ ಮಹತ್ವದ ಯೋಜನೆಗಳಾಗಿವೆ.

ಇವುಗಳಲ್ಲದೆ ಹಳೆಯ ಕಟ್ಟಡಗಳನ್ನು ರಕ್ಷಿಸಲು ಪ್ರಮುಖ ಕಟ್ಟಡಗಳನ್ನು 'ಪರಂಪರಾ ಕಟ್ಟಡ'ಗಳೆಂದು ಘೋಷಿಸಿ ಅದರ ಅಭಿವೃದ್ಧಿಗೆ ರಾಜ್ಯ ಸರ್ಕಾರದ ವತಿಯಿಂದ ವಿಶೇಷ ಅನುದಾನ ಪಡೆಯುವ ಯೋಜನೆಯೂ ಇದೆ. ರಾಜ್‌ಕುಮಾರ್ ಸಂಗೀತ ಸಂಜೆಯಂಥ ಕಾರ್ಯಕ್ರಮ ಏರ್ಪಡಿಸಿ ಅದರಲ್ಲಿ ಬರುವ ಹಣ ವಿಶ್ವವಿದ್ಯಾಲಯದ ಕಾಮಗಾರಿ ಪೂರ್ಣಗೊಳಿಸುವ ಯೋಜನೆ ಇವರ ಜಾಣ್ಮೆಗೆ ಸಾಕ್ಷಿ.

ಪರೀಕ್ಷಾ ಕೇಂದ್ರದ ಬಗ್ಗೆಯೂ ಇವರಿಗೆ ಕಾಳಜಿ. ಇದಕ್ಕೆ ಸಂಬಂಧಪಟ್ಟಂತೆ ಪರೀಕ್ಷಾ ಹಾಗು ಮೌಲ್ಯಮಾಪನ ಕೇಂದ್ರವನ್ನಾಗಿ ಸೆನೆಟ್ ಸಭಾಂಗಣ ಸಮುಚ್ಚಯದ ನೆಲಮಾಳಿಗೆಯನ್ನು ಸ್ವಾಧೀನಪಡಿಸಿಕೊಳ್ಳುವ ಪರೀಕ್ಷಾ ವ್ಯವಸ್ಥೆ ಸಂಪೂರ್ಣ ಗಣಕೀಕೃತಗೊಳಿಸುವ ಯೋಜನೆಗಳು ಸಹ ಇವೆ.

ಆಡಳಿತ ಪುನಶ್ಚೇತನಕ್ಕೆ ವಿವಿಧ ಮಟ್ಟದಲ್ಲಿ ಅಧಿಕಾರಿಗಳನ್ನು ನಿಯೋಜನೆ, ವಿಶ್ವ ವಿದ್ಯಾಲಯದ ಉದ್ಯೋಗಿಗಳಿಗೆ ಸಮೂಹ ಮೆಡಿಕ್ಲೈಮ್ ವಿಮೆ ಸೌಲಭ್ಯ ರೂಪಿಸಿದ್ದಾರೆ.

ಹೆಗ್ಡೆಯವರಿಗೆ ಸಮಾಜದ ಬಗ್ಗೆಯೂ ಶ್ರದ್ಧೆ, ಕಾಳಜಿ. ಸೌರಶಕ್ತಿ, ಗಾಳಿಯಂತ್ರ, ಆರೋಗ್ಯ ಹಾಗು ಇನ್ನಿತರ ಯೋಜನೆ ಬಳಸಿ ಸರ್ಕಾರೇತರ ಹಾಗು ಸ್ವಯಂ ಸೇವಾ ಸಂಸ್ಥೆ, ವಿಶ್ವವಿದ್ಯಾಲಯ, ಎನ್.ಎಸ್.ಎಸ್ - ಇವುಗಳ ನೆರವಿನಿಂದ ಆಯ್ದ ಒಂದೆರಡು ಗ್ರಾಮಗಳಲ್ಲಿ ಶೇ. 100 ಸರ್ವಾಂಗೀಣ ಅಭಿವೃದ್ಧಿಗೆ ಯತ್ನಿಸುವ ಯೋಜನೆಯೂ ಹಾಕಿಕೊಂಡಿದ್ದಾರೆ.

ವಿವಿಧ ಕ್ಷೇತ್ರಗಳಲ್ಲಿ ಆಸಕ್ತರಾಗಿರುವ, ಹಲವು ಯೋಜನೆಗಳನ್ನು ರೂಪಿಸಿ ಅನುಷ್ಠಾನಕ್ಕೆ ತರಲು ಯತ್ನಿಸುತ್ತಿರುವ ಪ್ರಾಮಾಣಿಕ, ದಕ್ಷ ಹೆಗ್ಡೆಯವರ ಅವಧಿಯಲ್ಲಿ ಮೈಸೂರು ವಿಶ್ವವಿದ್ಯಾಲಯ ಮತ್ತಷ್ಟು ಹೆಸರು, ಖ್ಯಾತಿ ಗಳಿಸಲೆಂದು ಆಶಿಸೋಣ.

■

ಕಿವಿ ಮಾತು

■ ನಿಮ್ಮ ಮೂತ್ರದಿಂದಲೇ ಚೆನ್ನಾಗಿ ಬಾಯಿ ಮುಕ್ಕಳಿಸಿ ತೊಳೆದುಕೊಂಡು ಬಿಡಿ, ಬಾಯಿಹುಣ್ಣು ಮಾಯ!

■ ಪ್ರತಿದಿನ ಬೆಳಿಗ್ಗೆ ಒಂದು ಬಟ್ಟಲು ನೊರೆಹಾಲನ್ನು ಸೇವಿಸಿದರೆ ಬಾಯಿಹುಣ್ಣು ವಾಸಿಯಾಗುವುದು.

■ ಜಾಜಿಗಿಡದ ಎಲೆಗಳನ್ನು ಬಾಯಿಗೆ ಹಾಕಿಕೊಂಡು ಅಗಿಯುವುದರಿಂದ ಬಾಯಿ ಹುಣ್ಣು ಗುಣವಾಗುತ್ತದೆ.

■ ಕಳಿತ ಬಾಳೆಹಣ್ಣನ್ನು ಮತ್ತು ಮೊಸರನ್ನು ಬಳಸುವುದರಿಂದ ಬಾಯಿಹುಣ್ಣು ಕಡಿಮೆಯಾಗುತ್ತದೆ.

■ ಒಂದು ಚಮಚ ಒಳ್ಳೆಣ್ಣೆಯನ್ನು ಬಾಯಿಗೆ ಹಾಕಿಕೊಂಡು ಮುಕ್ಕಳಿಸಿ, ಸ್ವಲ್ಪ ಸಮಯ ಬಿಡಬೇಕು. ನಂತರ ಅದನ್ನು ಉಗಿದು, ಸ್ವಲ್ಪ ಹಾಲಿನ ಕೆನೆ ತಿಂದರೆ ಬಾಯಿ ಹುಣ್ಣು ಗುಣವಾಗುತ್ತದೆ.

■ ಅಗಸೆ ಸೊಪ್ಪನ್ನು ಪಲ್ಯದ ರೂಪದಲ್ಲಿ ಬಳಸುತ್ತಾ ಬಂದರೆ ಬಾಯಿಹುಣ್ಣಿಗೆ ಒಳ್ಳೆಯದು. (ಇದರ ಅಡಿಗೆಯಲ್ಲಿ ಹಸಿಮೆಣಸಿನಕಾಯಿ ಬಳಸಬಾರದು)

■ ಮಲ್ಲಿಗೆ ಎಲೆಯನ್ನು ಕಿತ್ತು ಬಾಯಿಗೆ ಹಾಕಿಕೊಂಡು, ಅಗಿದು, ಉಗಿದರೆ ಬಾಯಿಹುಣ್ಣು ಗುಣವಾಗುತ್ತದೆ.

■ ಬರಿಯ ಬಾಯಲ್ಲಿ ಬಸಳೆ ಸೊಪ್ಪಿನ ಜೊತೆ ಸ್ವಲ್ಪ ಉಪ್ಪು ಸೇರಿಸಿ ತಿಂದರೆ ಬಾಯಿಹುಣ್ಣು ಹೋಗುತ್ತದೆ.

■ ತೆಂಗಿನ ಹಾಲಿಗೆ ಜೇನು ತುಪ್ಪ ಬೆರೆಸಿ ಕುಡಿದರೆ ಬಾಯಿಹುಣ್ಣು ಗುಣವಾಗುವುದು.

■ ದಾಳಿಂಬೆ ಹೂವಿನ ಕಷಾಯದಿಂದ ಬಾಯಿ ಮುಕ್ಕಳಿಸಿದರೆ ಬಾಯಿಹುಣ್ಣು ವಾಸಿಯಾಗುವುದು.

■ ಕಡಲೆ ಬೇಳೆಯೊಂದಿಗೆ ಸಮಪಾಲು ಜೀರಿಗೆ ಬೆರೆಸಿ, ಆ ಮಿಶ್ರಣವನ್ನು ಬಾಯಿಗೆ ಹಾಕಿಕೊಂಡು, ಚೆನ್ನಾಗಿ ಅಗಿದು ರಸ ನುಂಗುತ್ತಿದ್ದರೆ ಬಾಯಿಹುಣ್ಣು ಗುಣವಾಗುವುದು.

■ ಕೋಸುಗಡ್ಡೆ ಬೇಯಿಸಿದ ನೀರನ್ನು ಸೇವಿಸುತ್ತಿದ್ದರೆ ಬಾಯಿಹುಣ್ಣು ಗುಣವಾಗುತ್ತದೆ.

■ ಬಾಯೊಳಗೆ ಹುಣ್ಣಾಗಿದ್ದರೆ, ಬಾಯಿಗೆ ಸ್ವಲ್ಪ ಜೇನು ತುಪ್ಪವನ್ನು ಹಾಕಿಕೊಂಡು, ಸ್ವಲ್ಪ ಕಾಲ ಅದನ್ನು ನಾಲಗೆಯಿಂದ ಹುಣ್ಣಿನ ಮೇಲೆ ಸವರಬೇಕು.

■ ಟಿ.ವಿ.ವಿ.

ವಿದ್ಯಾರ್ಥಿ ನಿಲಯಗಳ ಪ್ರವೇಶಕ್ಕೆ ಅರ್ಜಿ

ಶಿಂಪಿ ಸಮಾಜದ ವಿದ್ಯಾರ್ಥಿಗಳಿಗೆ

ರಾಜ್ಯ ನಾಮದೇವ ಶಿಂಪಿ ಸಮಾಜದ ವಿದ್ಯಾರ್ಥಿ ನಿಲಯಕ್ಕೆ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿಕರೆದಿದ್ದಾರೆ. ಆಸಕ್ತ ವಿದ್ಯಾರ್ಥಿಗಳು ವಿಲ್ಸನ್ ಗಾರ್ಡನ್‌ನ 9ನೇ ಅಡ್ಡರಸ್ತೆಯಲ್ಲಿರುವ ವಿದ್ಯಾರ್ಥಿ ನಿಲಯದ ಕಛೇರಿಯಿಂದ ಅರ್ಜಿಗಳನ್ನು ಪಡೆಯಿರಿ. ತುಂಬಿದ ಅರ್ಜಿ ಹಿಂತಿರುಗಿಸಲು ಜುಲೈ 20 ಕಡೆಯ ದಿನವಾಗಿದೆ.

ಬಡಗನಾಡು ವಿದ್ಯಾರ್ಥಿಗಳಿಗೆ

ಬಡಗನಾಡು ಸಂಘದ ವಿದ್ಯಾರ್ಥಿ ನಿಲಯ ಸೇರಬಯಸುವ, ಕಾಲೇಜು ಹಾಗೂ ತಾಂತ್ರಿಕ ವಿದ್ಯಾಲಯಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ಅವಕಾಶ ಒದಗಿಸಲಾಗಿದೆ. 'ಬಡಗನಾಡು ಸಂಘ', ಕುಮಾರ ಪಾರ್ಕ್ ಪಶ್ಚಿಮ ಶೇಷಾದ್ರಿಪುರ, ಬೆಂಗಳೂರು - 20. ಈ ವಿಳಾಸದಲ್ಲಿ ಅರ್ಜಿಪಡೆದು ಜುಲೈ 5 ರೊಳಗೆ ತುಂಬಿದ ಅರ್ಜಿಗಳನ್ನು ನಿಲಯಕ್ಕೆ ಸಲ್ಲಿಸತಕ್ಕದ್ದು.

ಕರ್ನಾಟಕ ತಿಗಳರ ಸಂಘ

ಕರ್ನಾಟಕ ತಿಗಳರ ಸಂಘ ಸಾರ್ವಜನಿಕರ ವಿದ್ಯಾಭಿವೃದ್ಧಿಗಾಗಿ ಸ್ವಂತ ಜನಾಂಗದ ವಿದ್ಯಾರ್ಥಿಗಳಿಂದ ವಿದ್ಯಾರ್ಥಿನಿಲಯಗಳಿಗಾಗಿ ಅರ್ಜಿ ಕರೆದಿದೆ. ಆಸಕ್ತರು ಈ ಕೂಡಲೇ ಕರ್ನಾಟಕ ತಿಗಳರ ಸಾರ್ವಜನಿಕ ವಿದ್ಯಾಭಿವೃದ್ಧಿ ಸಂಘ, 10ನೇ ಮುಖ್ಯರಸ್ತೆ, 5ನೇ ವಿಭಾಗ, ರಾಜಾಜಿನಗರ, ಬೆಂಗಳೂರು-10, ಇಲ್ಲಿ ವಿಚಾರಿಸಿ ಅರ್ಜಿ ಸಲ್ಲಿಸಲು ಕೋರಲಾಗಿದೆ.

ಪುರಸ್ಕಾರಕ್ಕೆ ಪುಸ್ತಕ ಆಹ್ವಾನ

ಕರ್ನಾಟಕ ಗಾಂಧೀಸ್ಮಾರಕ ನಿಧಿಯು ಜಯಶ್ರೀ ಟ್ರಸ್ಟ್ ನಿಧಿಯ ಆಶ್ರಯದಲ್ಲಿ ಕಳೆದ ಮೂರು ವರ್ಷದ ಅವಧಿಯಲ್ಲಿ ಕನ್ನಡದಲ್ಲಿ ಪ್ರಕಟವಾಗಿರುವ ಗಾಂಧೀ-ವಿನೋಬಾರ ಜೀವನ ಮತ್ತು ಇಂದಿನ ಸಮಾಜಕ್ಕೆ ಅದರ ಆದ್ಯತೆ, ಸ್ವಾತಂತ್ರ್ಯ ಹೋರಾಟಗಾರ - ರಾಷ್ಟ್ರೀಯ ನಾಯಕರ ಜೀವನ ಚರಿತ್ರೆ ರಾಷ್ಟ್ರೀಯ ಭಾವೈಕ್ಯತೆ ವಿಕಸಿಸುವ ವಿಚಾರಕ್ಕೆ ಸಂಬಂಧಿಸಿದ ಪುಸ್ತಕಗಳಿಗೆ 1998ರ ಪುರಸ್ಕಾರ ನೀಡಲು ಉದ್ದೇಶಿಸಿದೆ.

ಹೆಚ್ಚಿನ ವಿವರಗಳಿಗೆ ಕರ್ನಾಟಕ ಗಾಂಧೀ ಸ್ಮಾರಕ ನಿಧಿ, ಗಾಂಧೀ ಭವನ, ಕುಮಾರ ಪಾರ್ಕ್ ಪೂರ್ವ, ಬೆಂಗಳೂರು-560 001 ಈ ವಿಳಾಸದಲ್ಲಿ ವಿಚಾರಿಸಲು ಕೋರಲಾಗಿದೆ.

ಇಂಜಿನಿಯರಿಂಗ್ ಡಿಪ್ಲೊಮಾ ಕೋರ್ಸ್‌ಗೆ ಅರ್ಜಿ

1999-2000ನೇ ಸಾಲಿಗೆ 15ರಿಂದ 20 ವರ್ಷಗಳ ಅರ್ಹ ಅಭ್ಯರ್ಥಿಗಳಿಂದ ಕರ್ನಾಟಕ ಕ್ಷತ್ರಿಯ ಮರಾಠ ಪರಿಷತ್ ಕೈಗಾರಿಕಾ ತರಬೇತಿ ಕೇಂದ್ರವು ಕೆಳಕಂಡ ಕೋರ್ಸ್‌ಗಳಿಗೆ ಅರ್ಜಿ ಕರೆದಿದೆ.

ಎಲೆಕ್ಟ್ರಾನಿಕ್ ಮೆಕ್ಯಾನಿಕ್, ಮೆಕ್ಯಾನಿಕ್ ರೇಡಿಯೊ, ಟಿವಿ ಹಾಗೂ ಫಿಟ್ಟರ್, (ವಿದ್ಯಾರ್ಹತೆ - ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ) ಕಂಪ್ಯೂಟರ್ ಆಪರೇಟರ್ ಮತ್ತು ಪ್ರೋಗ್ರಾಮಿಂಗ್ ಅಸಿಸ್ಟೆಂಟ್, ವಿದ್ಯಾರ್ಹತೆ - ಪಿಯುಸಿ (ವಿಜ್ಞಾನ ಅಥವಾ ಕಾಮರ್ಸ್) ಅಥವಾ ಮೂರು ವರ್ಷದ ಎಂಜಿನಿಯರಿಂಗ್ ಡಿಪ್ಲೊಮಾ.

ಹೆಚ್ಚಿನ ವಿವರಗಳಿಗೆ ಕರ್ನಾಟಕ ಕೈಗಾರಿಕಾ ಮರಾಠ ಪರಿಷತ್ ಕೈಗಾರಿಕಾ ಕೇಂದ್ರ, ನಂ. 16-ಎ, ಮಿಲ್ಲರ್ ಟ್ಯಾಂಕ್ ಬಂಡ್ ರಸ್ತೆ, ವಸಂತನಗರ, ಬೆಂಗಳೂರು - 560 052, ದೂರವಾಣಿ: 2280884.

ಮಹತ್ವದ ದಿನಗಳು

1.	ರಾಷ್ಟ್ರೀಯ ಯುವಕರ ದಿನ	-	ಜನವರಿ 12
2.	ಗಣರಾಜ್ಯೋತ್ಸವ	-	ಜನವರಿ 26
3.	ರಾಷ್ಟ್ರೀಯ ಕಸ್ಟಂಸ್ ದಿನ	-	ಜನವರಿ 26
4.	ರಾಷ್ಟ್ರೀಯ ವಿಜ್ಞಾನ ದಿನ	-	ಫೆಬ್ರವರಿ 28
5.	ಅಂತರಾಷ್ಟ್ರೀಯ ಮಹಿಳಾ ದಿನ	-	ಮಾರ್ಚ್ 8
6.	ವಿಶ್ವ ಅಂಗವಿಕಲರ ದಿನ	-	ಮಾರ್ಚ್ 15
7	ವಿಶ್ವ ವಾತಾವಾರಣ ದಿನ	-	ಮಾರ್ಚ್ 23
8.	ರಾಷ್ಟ್ರೀಯ ಮ್ಯಾರಿಟೈಂ ದಿನ	-	ಏಪ್ರಿಲ್ 5
9.	ವಿಶ್ವ ಆರೋಗ್ಯ ದಿನ	-	ಏಪ್ರಿಲ್ 7
10.	ಡಾ|| ಅಂಬೇಡ್ಕರ್ ಜನ್ಮ ದಿನ	-	ಏಪ್ರಿಲ್ 14
11.	ಪತ್ರಿಕಾ ಸ್ವಾತಂತ್ರ್ಯ ದಿನ	-	ಮೇ 3
12.	ವಿಶ್ವ ತಾಯಿಯರ ದಿನ	-	ಮೇ 13
13.	ವಿಶ್ವ ಟೆಲಿಕಾಂ ದಿನ	-	ಮೇ 17
14.	ಕಾಮನ್ ವೆಲ್ತ್ ದಿನ	-	ಮೇ 24
15.	ವಿಶ್ವ ಧೂಮಪಾನ ನಿಷೇಧ ದಿನ	-	ಮೇ 31
16.	ವಿಶ್ವ ಪರಿಸರ ದಿನ	-	ಜೂನ್ 5
17.	ವಿಶ್ವ ಮಧುಮೇಹ ದಿನ	-	ಜೂನ್ 27
18.	ವಿಶ್ವ ಜನಸಂಖ್ಯಾ ದಿನ	-	ಜುಲೈ 11
19.	ಸ್ವಾತಂತ್ರ್ಯ ದಿನ	-	ಆಗಸ್ಟ್ 15
20.	ರಾಷ್ಟ್ರೀಯ ಕ್ರೀಡಾ ದಿನ	-	ಆಗಸ್ಟ್ 29
21.	ಶಿಕ್ಷಕರ ದಿನ	-	ಸೆಪ್ಟೆಂಬರ್ 5
22.	ವಿಶ್ವ ಸಾಕ್ಷರತಾ ದಿನ	-	ಸೆಪ್ಟೆಂಬರ್ 8
23.	ಇಂಜನಿಯರರ ದಿನ	-	ಸೆಪ್ಟೆಂಬರ್ 15
24.	ವಿಶ್ವ ಓಜೋನ್ ದಿನ	-	ಸೆಪ್ಟೆಂಬರ್ 16
25.	ವಿಶ್ವ ಕಿವುಡರ ದಿನ	-	ಸೆಪ್ಟೆಂಬರ್ 26
26.	ವಿಶ್ವ ಪ್ರವಾಸಿ ದಿನ	-	ಸೆಪ್ಟೆಂಬರ್ 27
27.	ಮಹಾತ್ಮಾ ಗಾಂಧೀಜಿ ಹುಟ್ಟದ ದಿನ	-	ಅಕ್ಟೋಬರ್ 2
28.	ವಿಶ್ವ ವಾಸ ದಿನ	-	ಅಕ್ಟೋಬರ್ 3
29.	ವಿಶ್ವ ಪ್ರಾಣಿ ಕ್ಷೇಮಾಭಿವೃದ್ಧಿ ದಿನ	-	ಅಕ್ಟೋಬರ್ 4
30.	ವಿಶ್ವ ಹಿರಿಯರ ವಾಯುಪಡೆ ದಿನ	-	ಅಕ್ಟೋಬರ್ 8
31.	ವಿಶ್ವ ಅಂಚೆ ದಿನ	-	ಅಕ್ಟೋಬರ್ 9
32.	ವಿಶ್ವ ಮಾಪನ ದಿನ	-	ಅಕ್ಟೋಬರ್ 14
33.	ವಿಶ್ವ ಆಹಾರ ದಿನ	-	ಅಕ್ಟೋಬರ್ 16
34.	ವಿಶ್ವ ಸಂಸ್ಥೆ ದಿನ	-	ಅಕ್ಟೋಬರ್ 24
35.	ವಿಶ್ವ ಮಿತ ದಿನ	-	ಅಕ್ಟೋಬರ್ 30
36.	ಕರ್ನಾಟಕ ರಾಜ್ಯೋತ್ಸವ ದಿನ	-	ನವೆಂಬರ್ 1
37.	ವಿಶ್ವ ಏಡ್ಸ್ ದಿನ	-	ಡಿಸೆಂಬರ್ 1
38.	ನೇವಿ ದಿನ	-	ಡಿಸೆಂಬರ್ 4
39.	ವಿಶ್ವ ಮಾನವ ಹಕ್ಕುಗಳ ದಿನ	-	ಡಿಸೆಂಬರ್ 10
40.	ರೈತರ ದಿನ	-	ಡಿಸೆಂಬರ್ 23
41.	ಏಸುಕ್ರಿಸ್ತನ ಜನ್ಮದಿನ	-	ಡಿಸೆಂಬರ್ 25

– ದೇವದುರ್ಗ ರಂಗಯ್ಯ



ಅಪರೂಪದ ಕಲಾವಿದೆ

ವಿದ್ಯಾ

ಹಿಂದೆ ಹೆಣ್ಣು ನಾಲ್ಕು ಗೋಡೆಗಳ ಒಳಗೆಯೇ ಬಂದಿಯಾಗಿದ್ದು ಅಡುಗೆ ಮತ್ತು ಮನೆಗೆಲಸ ಮಾಡುವುದೇ ಆಕೆಯ ದಿನನಿತ್ಯದ ಗೋಳಾಗಿತ್ತು. ಆದರೆ ಈ ಆಧುನಿಕ ಯುಗದಲ್ಲಿ ಹೆಣ್ಣು ಸ್ವತಂತ್ರವಾಗಿದ್ದು ಗಂಡನಿಗೆ ಸಮಾನಳಾಗಿ ನಿಲ್ಲುವ ಸಾಹಸ ಮಾಡುವುದಲ್ಲದೆ ಗಂಡಸರನ್ನು ಮೀರಿಸಲು ಸತತ ಪ್ರಯತ್ನವನ್ನು ಸದಾ ಚಾಲನೆಯಲ್ಲಿಟ್ಟಿರುತ್ತಾಳೆ. ಅಂತಹವರಲ್ಲಿ ಒಬ್ಬರಾದ ಅಪೂರ್ವ ಕಲಾವಿದೆ ವಿದ್ಯಾ ತನ್ನ ಕುಂಚದ ಸಹಾಯದಿಂದ ಉನ್ನತ ಮಟ್ಟವನ್ನು ತಲುಪಲು ಪ್ರಯತ್ನಿಸುತ್ತಿದ್ದಾರೆ.

ವಿದ್ಯಾ ಬಾಲ್ಯದಿಂದಲೂ ಚಿತ್ರ ರಚನೆಯಲ್ಲಿ ಆಸಕ್ತಿ ಹೊಂದಿದವರು. ಹೀಗಾಗಿ ಆಕೆಯ ಅಭಿರುಚಿಯಂತೆ ತಂದೆ-ತಾಯಿಯರು ಇವಳನ್ನ ಧಾರವಾಡದ 'ಸ್ಕೂಲ್ ಆಫ್ ಆರ್ಟ್ಸ್'ಗೆ ಸೇರಿಸಿದರು. ಕಠಿಣ ಶ್ರಮ ನಿಶ್ಚಲ ಮನಸ್ಸು ಮತ್ತು ಸತತ ಪ್ರಯತ್ನವಾದಿಯಾದ ಇವರು ಹಾಲಬಾವಿ ಮತ್ತು ಗಾಯತ್ರಿಗೌಡರ್‌ರವರ ಶ್ರೇಷ್ಠ ಮಾರ್ಗದರ್ಶನದಲ್ಲಿ 'ಆರ್ಟ ಮಾಸ್ಟರ್' ಡಿಪ್ಲೊಮಾ ಪಡೆದರು.

ಸುಮ್ಮನಿರಲು ಬಯಸದ ವಿದ್ಯಾ ಸದಾ ಕ್ರೀಯಾಶೀಲರು. ಡಿಗ್ರಿ ಪಡೆದು ಒಂದು ಕ್ಷಣ ಹಾಳು ಮಾಡದೆ ತನ್ನ ಕಲೆಯನ್ನು ಸಾರ್ವಜನಿಕರಲ್ಲಿ ಹಂಚಿಕೊಳ್ಳುವ ದೃಷ್ಟಿಯಿಂದ 1984ರಲ್ಲಿ ತನ್ನ ಮೊತ್ತ ಮೊದಲ ಏಕವ್ಯಕ್ತಿ ಕಲಾಪ್ರದರ್ಶನವನ್ನು ಕಾರವಾರದ ಸೆಂಟ್ ಜೊಸೆಫ್ ಹಾಲಿನಲ್ಲಿ ಏರ್ಪಡಿಸಿದ್ದರು. ಈ ಪ್ರದರ್ಶನದಲ್ಲಿ ಸುಮಾರು ಐವತ್ತು ಪೇಂಟಿಂಗ್ಸ್‌ಗಳಿದ್ದವು. ಪ್ರತಿಯೊಂದು ಪೇಂಟಿಂಗ್ಸ್‌ನಲ್ಲೂ ವಿದ್ಯಾ ಹೊಸತನದ ಹುಡುಕಾಟ ನಡೆಸಿದ್ದು ಕಂಡು ಬಂದಿತು. ಒಂದೊಂದು ಪೇಂಟಿಂಗ್ಸ್‌ನಲ್ಲೂ ವಿವಿಧ ವಿಚಾರ, ಭಾವನೆಯನ್ನು ಸ್ಪಷ್ಟವಾಗಿ ಚಿತ್ರಿಸಿದ ವಿದ್ಯಾ ಕಾರವಾರದ ಕಲಾಭಿಮಾನಿಗಳ ಪ್ರಶಂಸೆಗೆ ಪಾತ್ರರಾದರು.

ಇತ್ತೀಚೆಗೆ ಇವರ ಚಿತ್ರ ಪ್ರದರ್ಶನಗಳು ಬೊಂಬಾಯಿ, ಹೈದರಾಬಾದ್, ಬೆಂಗಳೂರು ಮತ್ತು ಮೈಸೂರಿನಲ್ಲಿ ನಡೆಯಿತು. 1992ರಲ್ಲಿ ನಡೆದ 'ಆಲ್ ಇಂಡಿಯಾ ಪೇಂಟಿಂಗ್' ಸ್ಪರ್ಧೆಯಲ್ಲಿ ತೃತೀಯ ಸ್ಥಾನ ಗಳಿಸಿ ಕಾರವಾರಕ್ಕೆ ಕೀರ್ತಿ ತಂದರು.

ಕರ್ನಾಟಕದ ಕಾಶ್ಮೀರ ಎಂದೇ ಖ್ಯಾತಿ ಪಡೆದ ಕಾರವಾರದಲ್ಲಿ ನಿಸರ್ಗ ಸೊಬಗಿನ ತಾಣಕ್ಕೇನು ಕೊರತೆ ಇಲ್ಲ. ಇಲ್ಲಿಯ ಅನೇಕ ಆಕರ್ಷಣೀಯ ಸ್ಥಳಗಳಿಗೆ ಮಾರು ಹೋದ ವಿದ್ಯಾ ಅವುಗಳನ್ನೆಲ್ಲಾ ತನ್ನ ಕುಂಚ ಕಲೆಯ ಸಾಧನೆಯಿಂದ ಕ್ಯಾನ್ವಾಸ್ ಮೇಲೆ ಸೆರೆ ಹಿಡಿದಿದ್ದಾರೆ.


ಉತ್ತರ ಕನ್ನಡದ ಪ್ರಸಿದ್ಧ ''ಕರಾವಳಿ ಉತ್ಸವ''ದಲ್ಲೂ ಇವರ ಚಿತ್ರಗಳು ಪ್ರದರ್ಶನಗೊಂಡು, ಪ್ರೇಕ್ಷಕರ ಮೆಚ್ಚುಗೆ ಪಡೆದಿವೆ.

ವಿದ್ಯಾ ಈಗ ಸದ್ಯ ಕೈಗಾದ ಆಟೋಮಿಕ್ ಎನರ್ಜಿ ಸೆಂಟ್ರಲ್ ಸ್ಕೂಲಿನಲ್ಲಿ ಚಿತ್ರಕಲಾ ಶಿಕ್ಷಕಿಯಾಗಿ ಕಳೆದ ಹತ್ತು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ. ಹೈದರಾಬಾದಿನಲ್ಲಿ 1989ರಲ್ಲಿ ನಡೆದ ಇಂಟರ್ ಡಿಪಾರ್ಟಮೆಂಟ್ ಆಫ್ ಅಟೋಮಿಕ್ ಎನರ್ಜಿ ಪೇಂಟಿಂಗ್ ಸ್ಪರ್ಧೆಯಲ್ಲಿ ಈಕೆ ದ್ವಿತೀಯ ಸ್ಥಾನ ಪಡೆದರೆ, 1992ರಲ್ಲಿ ಇದೇ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನದ ಜೊತೆಗೆ ಹಲವರ ಪ್ರಶಂಸೆಗೂ ಪಾತ್ರರಾಗಿದ್ದಾರೆ. ತನ್ನ ಬಿಡುವಿನ ಸಮಯದಲ್ಲಿ ವಿದ್ಯಾ ತನ್ನ ಹೆಸರಿಗೆ ತಕ್ಕಂತೆ ಕಲಾ ಆಸಕ್ತರಿಗೆ ಕಲಾ ವಿದ್ಯೆಯನ್ನು ನೀಡುತ್ತಾರೆ. ಹಲವಾರು ಕಲಾ ಶಿಬಿರಗಳನ್ನು ಕೈಗಾ ಹಾಗೂ ಕಾರವಾರದಲ್ಲಿ ನಡೆಸಿದ್ದಾರೆ.

ವಾಟರ್ ಕಲರ್, ಆಯಿಲ್ ಪೇಂಟ್, ಪೇಸ್ಟಲ್ ಕಲರ್ ಮುಂತಾದ ವಿಧಗಳಿಂದ ಚಿತ್ರಿಸುವಲ್ಲಿ ಸಿದ್ಧಹಸ್ತರಾದ ಇವರ ಅನೇಕ ಉನ್ನತ ಕೃತಿಗಳು ದೇಶದ ನಾನಾ ಭಾಗಗಳಲ್ಲಿ ಮಾರಾಟವಾಗಿವೆ.

ಖ್ಯಾತ ಕಲಾವಿದ ಕೀರ್ತಿರಾಜ್ ಬಣಕಾರರನ್ನು ಕಳೆದೆರಡು ವರ್ಷಗಳ ಹಿಂದೆಯಷ್ಟೆ ಕೈ ಹಿಡಿದ ವಿದ್ಯಾ ಈಗ ಮುದ್ದಾದ ಗಂಡು ಮಗುವಿನ ತಾಯಿ. ಯಶಸ್ಸಿನ ಹಾದಿಯಲ್ಲಿ ಮುನ್ನುಗ್ಗುವ ವಿದ್ಯಾ ಬಹು ಅಪರೂಪದ ಕಲಾವಿದೆ.

■ ಬಿ. ವಿಲ್ಸನ್



ಮೇಷ್ಟ್ರು ಕೈಯಲ್ಲಿ ಕೋಳಿ ಹಿಡಿದು ಹೊರಟಿರಬೇಕಾದ್ರೆ, ಖಂಡಿತ ಇವತ್ತು ಶಾಲೆಗೆ ಇನ್ಸ್‌ಪೆಕ್ಟರ್ ಬರ್ತಾ ಇರಬೇಕಲ್ವಾ....

ಉಚಿತ ವರ್ಗೀಕೃತ ಜಾಹೀರಾತು

ಅಭಿನಂದನೆ

1998-99ನೇ ಸಾಲಿನ 10ನೇ ತರಗತಿಯಲ್ಲಿ ಪ್ರಥಮ ಶ್ರೇಣಿಯಲ್ಲಿ ಪಾಸಾದ, ಕುಮಾರಿ ಸಂಗೀತಾ ಆರ್. ಶಾಬಾದಿಯವರಿಗೆ ಹೃದಯದುಂಬಿ ಅಭಿನಂದನೆಗಳು. ಭಾರತಾಂಬೆಯ ಹೆಮ್ಮೆಯ ಪುತ್ರಿಯಾಗಲು, ವಿಜ್ಞಾನ ವಿಷಯ ಓದಿ, ಹಿಂದೂ ಸ್ಥಾನವು ಎಂದೂ ಮರೆಯದ ಭಾರತ ರತ್ನವು ನೀನಾಗಲು, ಸೃಷ್ಟಿಕರ್ತ ಲಿಂಗದೇವ ಧರ್ಮಪಿತ ಬಸವರು ಆಯುಷ್ಯ, ಆರೋಗ್ಯ, ಸಹನೆ, ಹೃದಯವಂತಿಕೆ ಇತ್ತು ಮುನ್ನಡೆಸಲಿ ಎಂದು ಅಭಿನಂದಿಸುವ,

- ಕಮಲಮ್ಮ ರವೀಂದ್ರ ಶಾಬಾದಿ, ಬಸವ ಪ್ರಭು, ಅಕ್ಕಮಹಾದೇವಿ ಹಾಗೂ ಉದಯಕುಮಾರ ಸಾಲಿ

ಕಲಬುರ್ಗಿ

ಅಭಿನಂದನೆಗಳು

ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಸಿದ್ಧರಾಮೇಶ್ವರ ಶಿಕ್ಷಣ ಸೇವಾ ಸಮಿತಿ ಪದವಿಪೂರ್ವ ಮಹಾವಿದ್ಯಾಲಯಕ್ಕೆ ಶೇ. 88.8 ಅಂಕಗಳನ್ನು ಗಳಿಸಿ ಪ್ರಪ್ರಥಮನಾಗಿ ಉತ್ತೀರ್ಣನಾದ ಭಿಮಾಶಂಕರ ಶಿವಶರಣಪ್ಪ ಕೊಲ್ಹಾರ ಈತನಿಗೆ ಅಭಿನಂದನೆಗಳು.

- ಸುಭಾಸಗೌಡ ಎಸ್ ಪಾಟೀಲ್, ಮೋರಟಗಿ.

ಹುಟ್ಟುಹಬ್ಬದ ಹಾರೈಕೆ

20.6.99ರಂದು ನನ್ನ ಪ್ರೀತಿಯ ಮಗಳಾದ ಚಿ ॥ ರಮ್ಯಾಳ ಹುಟ್ಟು ಹಬ್ಬ. ಅವಳಿಗೆ ದೇವರು ಆಯುರಾರೋಗ್ಯ ಕೊಟ್ಟು ಕಾಪಾಡಲಿ.

- ಕೆ. ರಾಮರಾವ, ಬಾಗಲಕೋಟ.

ಅಭಿನಂದನೆ

ಬಸಪ್ಪ ಮುರಾಳ ಜಿಲ್ಲಾ ಪ್ರಾ.ಶಾ.ಶಿ. ಸಂಘಕ್ಕೆ ಉಪಾಧ್ಯಕ್ಷರಾಗಿ, ಹನುಮನಗೌಡ ತಾಲ್ಲೂಕ ಪ್ರಾ.ಶಾ.ಶಿ. ಸಂಘದ ಅಧ್ಯಕ್ಷರಾಗಿ ವಸಂತ ಮಾಧವಾಚಾರ್ಯ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಆಯ್ಕೆಯಾಗಿರುವುದಕ್ಕೆ ಇವರೆಲ್ಲರಿಗೂ ಹೃತ್ಪೂರ್ವಕ ಅಭಿನಂದನೆಗಳು.

- ಬೀರಪ್ಪ ಶಂಭೋಜಿ, ಸಿಂಧನೂರು.

ಅಭಿನಂದನೆ

ಕೊಪ್ಪಳ ತಾಲೂಕು ಕವಲೂರು ಗ್ರಾಮದ ಬಾಲಕರ ಬಾಲಕಿಯರ ಶಾಲೆಯಲ್ಲಿ ಮಾರ್ಚ-99ರ 7ನೇ ತರಗತಿ ಪಬ್ಲಿಕ್ ಪರೀಕ್ಷೆಯಲ್ಲಿ ಪ್ರಥಮಸ್ಥಾನ ಗಳಿಸಿದ ಸುನಿತಾ - 77%, ಅನುಪಮಾ - 76%, ಶಿಜಯಲಕ್ಷ್ಮಿ - 76%, ಹೊನ್ನಪ್ಪಗೌಡ - 74% ಹಾಗೂ ಗಣೇಶ - 74%. ಇವರಿಗೆಲ್ಲಾ ಹೃತ್ಪೂರ್ವಕ ಅಭಿನಂದನೆಗಳು.

- ಶ್ರೀ ರಾಮಣ್ಣ ಹೆಚ್ ಚಲವಾದಿ, ಕವಲೂರು.

ಹುಟ್ಟುಹಬ್ಬ

ಬೆಂಗಳೂರಿನಲ್ಲಿರುವ ಡಾ॥ ಲಕ್ಷ್ಮಿ ಯಂಕನಗೌಡ ಮಾಲಿಪಾಟೀಲ್ ಇವರ ಚಿ॥ ಯತೀನ್‌ನ 8.7.99ರ ಮೊದಲನೆ ಹುಟ್ಟುಹಬ್ಬಕ್ಕೆ ಶುಭಾಶಯಗಳು. ದೇವರು ಆಯಸ್ಸು, ಆರೋಗ್ಯ ಕೊಟ್ಟು ಕಾಪಾಡಲಿ ಎಂದು ಹಾರೈಸುವೆ.

- ಅಕ್ಕಮಹಾದೇವಿ ತಿಪ್ಪಯ್ಯ, ಯರಗುಡ್ಡ.

ಹಾರೈಕೆ

ವಂದಲಿ ಗ್ರಾಮದ ಅಭಿವೃದ್ಧಿಯ ಉದ್ದೇಶದಿಂದ ಸ್ಥಾಪನೆಯಾದ ಶ್ರೀ ಭಗತ್‌ಸಿಂಗ್ ಯುವಕ ಮಂಡಲಿ(ರಿ)ಗೆ ದೇವದುರ್ಗ ತಾಲೂಕಿನಲ್ಲಿಯೇ ಒಳ್ಳೆಯ ಹೆಸರು ಬರುವಂತಾಗಲಿ.

- ಬಾಷಾ ಡ್ರೈವರ್, ವಂದಲಿ.

ಆಶಯ

ತಂಬಾಕು ಮಾನವನ ಸಾವಿಗೆ ಸೋಪಾನ, ವಿದ್ಯಾರ್ಥಿಗಳೆಲ್ಲರು ತಮ್ಮ ತಮ್ಮ ಊರಿನಲ್ಲಿರುವ ತಂಬಾಕು ವ್ಯಸನಿಗಳಿಗೆ ತಂಬಾಕಿನ ಹಾನಿಗಳ ಬಗ್ಗೆ ಕೂಲಂಕಷವಾಗಿ ವಿಚಾರ ಗೋಷ್ಠಿಯಲ್ಲಿ ತಿಳಿಸಿ ಜುಲೈ 2 ವಿಶ್ವ ತಂಬಾಕು ರಹಿತ ದಿನವನ್ನು ಆಚರಿಸಿರಿ,

- ಸವಿತಾ ಸುಭಾಸ ಬಂಡೆ ಮತ್ತು ಮನೆಯವರು,

ನಾಗಠಾಣ.

ಹಾರೈಕೆ

ನನ್ನ ಜೀವನ ಸಂಗಾತಿಯಾಗ ಬಯಸುವ ನನ್ನ ಸೊಸೆ ಪಿ. ಶಿವರುದ್ರಮ್ಮ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಪಾಸಾದ್ದಕ್ಕೆ ನನಗೆ ತುಂಬಾ ಸಂತೋಷವಾಯಿತು. ಅವಳಿಗೆ ಮುಂದಿನ ವಿದ್ಯಾಭ್ಯಾಸ ಹಾಗೂ ಆರೋಗ್ಯ ಕೊಡಲಿ ಎಂದು ದೇವರಲ್ಲಿ ಪ್ರಾರ್ಥಿಸುವ,

- ಕೆ. ಮಲ್ಲಿಕಾರ್ಜುನ, ತೋರಣಗಲ್ಲು.

ಹಾರೈಕೆ

ನನ್ನ ಪ್ರೀತಿಯ ಅಣ್ಣನಾದ ಕುಮಾರ ತುಳಜಾರಾಮ ಎನ್. ಪತಂಗೆ ಇವರಿಗೆ 22.7.99ಕ್ಕೆ 20ನೇ ಹುಟ್ಟುಹಬ್ಬದ ಶುಭಾಶಯಗಳು. ರಾಯಚೂರಿನಲ್ಲಿ ಕಷ್ಟಪಟ್ಟು ಎರಡು ವರ್ಷ ತರಬೇತಿ ಜೊತೆಗೆ ವ್ಯಾಸಂಗ ಮಾಡಿದ ನೀನು, ಜುಲೈ 1999ರ 'ಎಐಟಿಟಿ' ಪರೀಕ್ಷೆಯಲ್ಲಿ ಹೆಚ್ಚಿನ ಅಂಕಗಳೊಂದಿಗೆ ಉತ್ತೀರ್ಣನಾಗೆಂದು ಹಾರೈಸುವೆ.

- ತುಳಜಾಬಾಯಿ ಎನ್. ಪತಂಗೆ, ಗಾಜರಕೋಟ.

ಹಾರೈಕೆ

ನನ್ನ ಒಲುಮೆಯ ಧರ್ಮಪತ್ನಿ ಮಹಾದೇವಿಯು ಚೊಚ್ಚಲ ಹೆರಿಗೆಯಲ್ಲಿ ಜಯಶಾಲಿಯಾಗಲಿ.

- ಹನುಮಂತ ಟಿ. ಪೂಜಾರಿ, ಕವಡಿಮಟ್ಟಿ.

ಸಂಪರ್ಕಿಸಿ

ನಮ್ಮಲ್ಲಿ ಎಲ್ಲಾ ತರಹದ ಕಾರ್ಡ್‌ಗಳನ್ನು ಪುಸ್ತಕಗಳ ಮುಖಪುಟವನ್ನು ಅಂದವಾಗಿ ಕನ್ನಡ, ಹಿಂದಿ ಹಾಗೂ ಇಂಗ್ಲೀಷನಲ್ಲಿ ಪ್ರಕಟಿಸಿ ಕೊಡಲಾಗುವುದು. ಸಂಪರ್ಕಿಸಿ : ಶ್ರೀವಿದ್ಯಾ ಸ್ಕ್ರೀನ್ ಪ್ರಿಂಟರ್ಸ್, ನಿರ್ಣ-585227, ತಾ. ಹುಮನಾಬಾದ

- ಅಮೃತ ಎಸ್. ಕುಂಬಾರ, ಬೀದರ್.

ಅಭಿನಂದನೆ

ರಾಷ್ಟ್ರೀಯ ಸೇವಾ ಯೋಜನೆಯ 1996-97ರ ಸಾಲಿನ ಉತ್ತಮ ಸ್ವಯಂಸೇವಕ ರಾಷ್ಟ್ರ ಪ್ರಶಸ್ತಿಯನ್ನು ಪಡೆದಿರುವ ಆತ್ಮೀಯ ಗೆಳೆಯ ರಮೇಶ, ನಿನಗಿದೋ ಹಾರ್ದಿಕ ಅಭಿನಂದನೆಗಳು.

- ಅಶ್ವಿನ್, ಪದವಿನಂಗಡಿ.

ಪರೀಕ್ಷೆಯಲ್ಲಿ ಯಶಸ್ಸು

ಕು. ಮಹೇಶ ಶಿವಲಿಂಗಪ್ಪಾ ಗೇಡವಾಡಿ 7ನೇ ತರಗತಿ ಪಬ್ಲಿಕ್ ಪರೀಕ್ಷೆಯಲ್ಲಿ ಗೋಕಾಕ ತಾಲೂಕು ಹಳ್ಳೂರ ಕೇಂದ್ರಕ್ಕೇ ಪ್ರಥಮ ಸ್ಥಾನ ಪಡೆದು ಪಾಸಾಗಿರುವುದಕ್ಕೆ ನಮ್ಮ ಎಲ್ಲಾ ಮಂಡಲಿಯ ವತಿಯಿಂದ ಅಭಿನಂದನೆಗಳು.

- ಶ್ರೀ ಎಂ ಎಲ್ ಡಬ್ಬನವರ, ಉಪನ್ಯಾಸಕರು

ಸಾಂಬ್ರಾ ಬಾಳೇಕುಂದ್ರಿ.

ಹುಟ್ಟುಹಬ್ಬ

ನನ್ನ ತಂಗಿ ನಾಗವೇಣಿಯ ಹುಟ್ಟು ಹಬ್ಬ 23.7.99 ಇರುತ್ತದೆ. ದೇವರು ಅವಳಿಗೆ ಆಯಸ್ಸು ಆರೋಗ್ಯ ಕೊಟ್ಟು ಕಾಪಾಡಲೆಂದು ಹಾರೈಸುವ· ಅಪ್ಪಾಜಿ, ಅಮ್ಮ, ತಮ್ಮ, ಮತ್ತು ಅಣ್ಣ.

- ನಂದೀಶ ವಿ ಬ್ಯಾಡಗಿ, ಮೇಗಲ ಪೇಟೆ.

ಶುಭಾಶಯ

ಈ ಸಲದ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಗಳಿಸಿದ ಸುಲೋಚನಾ, ದ್ವಿತಿಯ ಸ್ಥಾನ ಗಳಿಸಿದ ಶ್ರೀದೇವಿ ಇವರಿಗೆ ಶುಭಾಶಯ ಕೋರುವ, ವೀರಭದ್ರಯ್ಯ, ಲಕ್ಷ್ಮೀ (ಗುಂಡಮ್ಮ), ಸುಜಾತ, ಮರಿಬಸವರಾಜ, ಅಪ್ಪ, ಅಮ್ಮ ಹಾಗೂ ಅಜ್ಜಿ.

- ಮಲ್ಲಿಕಾರ್ಜುನ ಸ್ವಾಮಿ, ಬೊಮ್ಮನಾಳ.

ಹಾರೈಕೆ

ನನ್ನ ಪ್ರೀತಿಯ ಗೆಳತಿಯಾದ ಸುಮಾ ಎಚ್. ಎ. ಹಿರೇಕೇರೂರು ಇವಳ 1.7.99ರ 18ನೇ ವರ್ಷದ ಹುಟ್ಟುಹಬ್ಬದ ಪ್ರಯುಕ್ತ ದೇವರು ಅವಳಿಗೆ ಸಕಲ ಸುಖ-ಸಂತೋಷ ಕೊಟ್ಟು ಕಾಪಾಡಲಿ.

- ಈಶ್ವರ ಹೆಚ್ ಪಾಟೀಲ್, ರಾಣೇಬೆನ್ನೂರ.

ಉಚಿತ ವರ್ಗೀಕೃತ ಜಾಹೀರಾತು

ಸುಸ್ವಾಗತ

ಬೀದರಿನಲ್ಲಿ ಜಿ.ಎಂ.ಧನಂಜಯರವರು ದಿನಾಂಕ 9.5.99ರಂದು ಜಿಲ್ಲಾಧಿಕಾರಿಯಾಗಿ ಅಧಿಕಾರ ಸ್ವೀಕರಿಸಿದ್ದಕ್ಕಾಗಿ ಹೃತ್ಪೂರ್ವಕ ಸ್ವಾಗತ ಕೋರುವುದರೊಂದಿಗೆ ಜಿಲ್ಲೆಯ ಸಮಗ್ರ ಅಭಿವೃದ್ಧಿ ಕಡೆಗೆ ಹೆಚ್ಚಿನ ಕಾಳಜಿ ವಹಿಸುವರೆಂದು ಆಶಿಸುವ

- ಪಂಡಿತ ಎ ನಿಂಬೂರ, ಪತ್ರಕರ್ತರು

ರಾಷ್ಟ್ರನಾಯಕ ವೀರೇಂದ್ರ ಬಿ ಪಾಟೀಲ, ನಿಂಬೂರ್

ಉಚಿತ ಜಾತಕ

ಜನನದ ಸಮಯ, ತಿಂಗಳು, ಇಸವಿಯೊಂದಿಗೆ ಜನ್ಮ ಸ್ಥಳವನ್ನು ಬರೆದು ಕಳಿಸಿದರೆ ಕಾಲಜ್ಞಾನವನ್ನಾಧರಿಸಿ ಅಂಚೆಯಲ್ಲಿ ನಿಮ್ಮ ಜಾತಕ ವನ್ನು ಉಚಿತವಾಗಿ ನಿಮ್ಮ ಮನೆಬಾಗಿಲಿಗೆ ತಲುಪಿಸುತ್ತೇನೆ. ವಿ.ಸೂ.: ಯಾವುದೇ ಶಾಂತಿಯ ಸಲಹೆಯಿಂದ ಹೊರತಾಗಿರುತ್ತದೆ.

- ಗುರುನಂಜಪ್ಪ ಎಂ.,

ನಂ.877, ಮೊದಲನೇ ಕ್ರಾಸ್, ಅರುಣಾಚಲಂ ರಸ್ತೆ, ಇಟ್ಟಿಗೆಗೂಡು, ಮೈಸೂರು-570010

ಸುಸ್ವಾಗತ

ಕನ್ನಡಿಗರ ಮನೆ-ಮನಗಳನ್ನು ತಣಿಸಲು ಹೊರಬರುತ್ತಿರುವ 'ಮನೆ' ವಾರಪತ್ರಿಕೆ ಹಾಗೂ ವಿದ್ಯಾವಂತ ನಿರುದ್ಯೋಗಿಗಳಿಗೊಂದು ದಾರಿ ದೀಪವಾಗಲಿರುವ 'ದಾರಿ' ವಾರಪತ್ರಿಕೆಗೆ ಶುಭ ಹಾರೈಕೆಗಳು.

- ಲಕ್ಷ್ಮಿಕಾಂತ ಕೊಂಪಲ್, ಲಿಂಗಸುಗೂರು.

ಹುಟ್ಟುಹಬ್ಬ

ಆತ್ಮೀಯ ಗೆಳೆಯರಾದ ಸಂಜಯ, ಕೇಶವಮೂರ್ತಿ, ಶಿವಕುಮಾರ್, ಮಹದೇವಕುಮಾರ್, ಜಗದೀಶ್ ಇವರಿಗೆ 23ನೇ ವರ್ಷದ, ಶ್ರೀಧರ, ಗುರುಪ್ರಸಾದ, ರಜೀಸ್ ಪಾಟೀಲ್, ಜಯಕುಮಾರ್ ಇವರಿಗೆ 22ನೇ ವರ್ಷದ ಹಾಗೂ ಸೋಮಶೇಖರ, ಶ್ರೀಧರ ಕೆ.ಜೆ, ವಸಂತಕುಮಾರ್ ಇವರಿಗೆ 24ನೇ ವರ್ಷದ ಹುಟ್ಟುಹಬ್ಬದ ಶುಭಾಶಯಗಳು.

- ಕೆ. ಎಲ್. ಧೀರೇಂದ್ರಕುಮಾರ್, ಕೆರಗೋಡು.

ಶುಭಾಶಯ

ಸ.ಹಿ.ಪ್ರಾ.ಶಾಲೆ ಹನಮಗುಡ್ಡದ ವಿದ್ಯಾರ್ಥಿಗಳಾದ ಶಿವನಗೌಡ, ಸಂಗನಬಸವ 7ನೇ ತರಗತಿ ಪರೀಕ್ಷೆಯಲ್ಲಿ ಖೈರವಾಡಗಿ ಪರೀಕ್ಷಾ ಕೇಂದ್ರಕ್ಕೆ ಶೇ. 72 ಹಾಗೂ ಶೇ. 71 ಅಂಕ ಪಡೆದು ಪ್ರಥಮ ಸ್ಥಾನ ತಂದುದಕ್ಕೆ ಹನಮಗುಡ್ಡದ ಮುಖ್ಯ ಗುರುಗಳು ಹಾಗೂ ಶಿಕ್ಷಕ ವೃಂದ ಶುಭ ಕೋರಿದ್ದಾರೆ.

-ಶ್ರೀ ರಾಜನಗೌಡ, ಸಹ ಶಿಕ್ಷಕರು, ಹನಮನಗುಡ್ಡ.

ಹುಟ್ಟುಹಬ್ಬ

ಕಾನನದಲ್ಲಿ ನೆಗೆಯುವ ಜಿಂಕೆಯಂತೆ, ನೀರಲ್ಲಿ ತೇಲುವ ಮೀನಿನಂತೆ, ಆಕಾಶದ ನಕ್ಷತ್ರಗಳಂತೆ ಹೊಳಪಾಗಿ ದಿನಾಂಕ 1.7.99ರಂದು 20ನೇ ಹುಟ್ಟುಹಬ್ಬ ಆಚರಿಸುವ ಮುದ್ದು ಗೆಳತಿ ಆಶಾಳಿಗೆ ತುಂಬು ಹೃದಯದ ಹಾರ್ದಿಕ ಶುಭಾಶಯಗಳು.

- ಸಿ. ವೆಂಕಟೇಶ್, ಶಿಕ್ಷಕರು, ಕೂಡ್ಲಿಗಿ.

ಆಶಯ

ಕಳೆದ ಏಪ್ರಿಲ್‌ನಲ್ಲಿ ನಡೆದ ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ಪ್ರಥಮ ವರ್ಗದಲ್ಲಿ ಪಾಸಾದ ರೇಖಾ ಮುಂದಿನ ಎಲ್ಲಾ ಪರೀಕ್ಷೆಯಲ್ಲೂ ಇದೇ ರೀತಿಯ ಯಶಸ್ಸು ಗಳಿಸಿ ಉಜ್ವಲವಾದ ಭವಿಷ್ಯವನ್ನು ಪಡೆಯಲೆಂದು ಹಾರೈಸುವ,

- ಚಂದ್ರಾಸ್ವಾಮಿ, ತವನಂದಿ.

ಹಾರೈಕೆ

1998-99ರ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಪಾಸಾದ ನನ್ನ ಹಳೆಯ ಮನೆ ಪಾಠದ ವಿದ್ಯಾರ್ಥಿಗಳಾದ ಕವಿತಾ, ಲಕ್ಷ್ಮಿ ನಕಾಶ, ಸರಸ್ವತಿ ದೇವತಗಲ್ ಹಾಗೂ ಎಮ್ ಚಂದ್ರಮೌಳೇಶ್ವರ ಇವರುಗಳಿಗೆ ಮುಂದಿನ ಭವಿಷ್ಯ ಉಜ್ವಲವಾಗಿರಲೆಂದು ಹಾರೈಸುವೆ.

- ಬಾಬು ಚೆಟ್ಟದೂರು, ವರದಿಗಾರ, ಕಪಗಲ್.

ಅಭಿನಂದನೆ

ವ್ಯವಸಾಯ ಸೇವಾ ಸಹಕಾರ ಬ್ಯಾಂಕಿನ ಅಧ್ಯಕ್ಷರಾಗಿ ನಾಗಪ್ಪ ಕೆ.ರವರು ಆಯ್ಕೆಯಾದುದರಿಂದ ಅವರಿಗೆ ಅಭಿನಂದನೆಗಳು.

- ಸೂಗಪ್ಪ ಅಂಗಡಿ, ಮಲ್ಲೇಶ ಕೆ, ಅರಳಹಳ್ಳಿ

ಅಭಿನಂದನೆ

ಮಾರ್ಚ್ 1999ರ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಯಶಸ್ಸನ್ನು ಗಳಿಸಿದ ಆತ್ಮೀಯ ಸಹೋದರಿಯರಾದ ಭಾರತಿ ಮತ್ತು ವಿಶಾಲಾಕ್ಷಿಗೆ ತುಂಬು ಹೃದಯದ ಅಭಿನಂದನೆಗಳು

- ಶಾರದಾ ಮತ್ತು ಟಿ. ಪ್ರಭಾಕರ

ಅಲಂಪೂರ ಪೇಠ.

ಹಾರೈಕೆ

20.6.99ರಂದು ವಿವಾಹವಾಗಿ ವೈವಾಹಿಕ ಜೀವನ ನಡೆಸುತ್ತಿರುವ ನಮ್ಮ ಶಾಲೆಯ ಶಿಕ್ಷಕರಾದ ಶ್ರೀಮತಿ ರತ್ನಾ-ಶಶಿಧರರ ಭವಿಷ್ಯದ ಬಾಳು ಸುಗಮವಾಗಲಿ ಎಂದು ಹಾರೈಸುವ ಪ್ರ. ಗುರುಮಾತೆ ಹಾಗೂ ಸಹಶಿಕ್ಷಕರು

- ರವಿ ಸೋ. ದೇವರೆಡ್ಡಿ, ಶೀರನಹಳ್ಳಿ

ಅಭಿನಂದನೆ

ನನ್ನ ಪ್ರೀತಿಯ ಹೃದಯದ ಗೆಳೆಯ ಟಿ. ಸೋಮಶೇಖರನು 1998-99ನೇ ಸಾಲಿನ (ಬಿ.ಎಚ್.ಇ.ಎಲ್. ಬೆಂಗಳೂರು) ಐ.ಟಿ.ಐ. ಅಪ್ರೆಂಟಿಸ್ ತರಬೇತಿಯಲ್ಲಿ ಶೇ. 79 ಅಂಕಗಳನ್ನು ಪಡೆದು ಪಾಸಾಗಿರುವುದಕ್ಕೆ ಹೃದಯಪೂರ್ವಕ ಅಭಿನಂದನೆಗಳು.

- ಈ. ಶ್ರೀನಿವಾಸ, ಹೊಸ ದರೋಜಿ.

ಹಾರೈಕೆ

ಡಾ॥ ಬೋಜರಾಜ ಬ. ಪಾಟೀಲ ಗ್ರೇಡ್-I ಪ್ರಾಚಾರ್ಯರು, ಮಹಾಂತಸ್ವಾಮಿ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯ ಹಂಸಭಾವಿ ಇವರು 30.6.99ರಂದು ನಿವೃತ್ತರಾದರು. ಇವರ ನಿವೃತ್ತ ಜೀವನ ಸುಖ ಹಾಗೂ ಶಾಂತಿಮಯವಾಗಿರಲೆಂದು ಹಾರೈಸುತ್ತೇನೆ.

- ವಸಂತ ಕೋ. ಕುಲಕರ್ಣಿ, ಬ್ಯಾಡಗಿ.

ಶತಾಯುಷಿಗೆ

ಬದುಕಿನಲ್ಲಿ 100 ವಸಂತಗಳನ್ನು ಕಂಡ ಎ.ಎನ್. ಮೂರ್ತಿರಾಯರು ಆರೋಗ್ಯವಾಗಿರಲಿ ಸಾಹಿತ್ಯ ವಲಯದ ಅವರ ಪ್ರಗತಿಪರ ಚಿಂತನೆಗಳು ಅವರ ಶತಾಯುಷಿ ಹಬ್ಬದೊಂದಿಗೆ ಎಲ್ಲೆಡೆ ಹರಡಲಿ.

- ಎಸ್. ನೈನಿ, ಮಲ್ಲೇಶ್ವರಂ.

ಅಭಿನಂದನೆ

ಇತ್ತೀಚೆಗೆ ಪ್ರಕಟಗೊಂಡ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಸರ್ಕಾರಿ ಪ್ರೌಢಶಾಲೆ ಬೆಂಡೆಬೆಂಬಳಿ ತಾ. ಶಹಾಪೂರ, ಜಿ. ಗುಲ್ಬರ್ಗಾ ಶಾಲೆಯು ಶೇಕಡಾ 95.45ರಷ್ಟು ಸಾಧನೆ ಗೈದದ್ದಕ್ಕಾಗಿ ಮುಖ್ಯೋಪಾಧ್ಯಾಯರಾದ ವಾಸುದೇವ ಅಡವಿಭಾವಿ ಹಾಗೂ ಸಿಬ್ಬಂದಿ ವರ್ಗಕ್ಕೆ ನನ್ನ ಹಾಗೂ ವಿದ್ಯಾರ್ಥಿಗಳ ಪರವಾಗಿ ಅಭಿನಂದನೆಗಳು.

- ವೆಂಕಟರಡ್ಡಿ, ಮಲ್ಲಿಕಾರ್ಜುನ, ಬೆಳ್ಳಿಕಟ್ಟಿ.

ವಿವಾಹ ವಾರ್ಷಿಕೋತ್ಸವ

ಪ್ರಥಮ ವಿವಾಹ ವಾರ್ಷಿಕೋತ್ಸವ ಆಚರಿಸುವ ನನ್ನ ಅಕ್ಕನಾದ ಟಿ.ಜಿ. ವನಜಾಕ್ಷಿ-ವೆಂಕಟೇಶ್ ಇವರಿಗೆ ನನ್ನ ತುಂಬು ಹೃದಯದ ಹಾರ್ದಿಕ ಶುಭಾಶಯಗಳು, ಅಮ್ಮ, ಅಪ್ಪ, ತಮ್ಮಂದಿರು, ಅಣ್ಣ, ಮಾಮ, ಅಕ್ಕಂದಿರು, ಚಿಕ್ಕಪ್ಪ, ಚಿಕ್ಕಮ್ಮ ಮತ್ತು ಮನೆಯವರು

- ಟಿ. ದಾನೇಶ್, ಗುಂಡಗತ್ತಿ.

ಉಚಿತ ಜಾಹೀರಾತು ಕೂಪನ್!

ಜಾಹೀರಾತು ನೀಡಲು ಹಣ ಕೊಡಬೇಕು ಎಂಬುದು ನಿಮಗೆಲ್ಲಾ ಗೊತ್ತಿರುವ ಸತ್ಯ. ಆದರೆ ಈಗ ನಿಮ್ಮ ಈ ನಂಬಿಕೆಯನ್ನೇ ಸುಳ್ಳು ಮಾಡುತ್ತಿದ್ದೇವೆ! ನೀವು ಒಂದು ಪೈಸೆಯನ್ನೂ ಖರ್ಚು ಮಾಡದೆ 'ಬದುಕು' ಮಾಸ ಪತ್ರಿಕೆಗೆ ವರ್ಗೀಕೃತ ಜಾಹೀರಾತು ನೀಡಬಹುದು.

ಜಾಹೀರಾತಿನ ವಿಷಯ

ಮದುವೆ, ಹುಟ್ಟುಹಬ್ಬ, ವಿದೇಶ ಪ್ರಯಾಣ, ಹಬ್ಬ, ಹೊಸವರ್ಷ, ವಿವಾಹ ವಾರ್ಷಿಕೋತ್ಸವ, ಪರೀಕ್ಷೆಯ ಯಶಸ್ಸು, ವ್ಯಾಪಾರದಲ್ಲಿ ಯಶಸ್ಸು, ಪ್ರಶಸ್ತಿ-ಪುರಸ್ಕಾರ.... ಹೀಗೆ ಯಾವುದೇ ಸಂದರ್ಭದಲ್ಲಿ ನೀವು ನಿಮ್ಮ ಆಪ್ತರಿಗೆ, ಗೆಳೆಯರಿಗೆ, ಸಂಬಂಧಿಕರಿಗೆ, ಪರಿಚಿತರಿಗೆ ಶುಭಾಶಯ ಕೋರಲು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಉಚಿತ ಜಾಹೀರಾತು ಕೂಪನ್‌ನ್ನು ವೈಯಕ್ತಿಕ ಜಾಹೀರಾತುಗಳಿಗೆ ಮಾತ್ರ ಉಪಯೋಗಿಸಿ. ವ್ಯಾಪಾರ, ವೈವಾಹಿಕ ವಿಷಯಗಳಿಗೆ ಈ ಉಚಿತ ಸೌಲಭ್ಯ ಲಭ್ಯವಿಲ್ಲ.

ಹೇಗೆ ಕಳಿಸುವುದು?

ಈ ಕೆಳಗಿನ ಕೂಪನ್‌ನಲ್ಲಿ ಜಾಹೀರಾತು ವಿಷಯವನ್ನು 20 ಶಬ್ದಗಳಿಗೆ ಮೀರದಂತೆ ಬರೆದು 'ಬದುಕು' ವಿಳಾಸಕ್ಕೆ ಕಳಿಸಿದರೆ ನಿಮ್ಮ ಕೆಲಸ ಮುಗಿಯಿತು.

ಮುಂದಿನ ತಿಂಗಳ ಸಂಚಿಕೆಯಲ್ಲಿ ನೀವು ನಿಮ್ಮ ಜಾಹೀರಾತನ್ನು ನೋಡಿ ಆನಂದಿಸಬಹುದು. ಜಾಹೀರಾತಿನ ವಿಷಯ ಕನ್ನಡ ಅಥವಾ ಇಂಗ್ಲಿಷ್‌ನಲ್ಲಿರಬಹುದು. ಹಾಂ! ನೆನಪಿಡಿ! ನಮ್ಮ ಕಚೇರಿಯನ್ನು ತಲುಪುವ ಮೊದಲ 50 ಜಾಹೀರಾತುಗಳಿಗೆ ಮಾತ್ರ ಈ ಅವಕಾಶ ಸಿಗುತ್ತದೆ. ಆದ್ದರಿಂದ ತಡ ಮಾಡದೆ ತಕ್ಷಣ ಕೂಪನ್ ಭರ್ತಿ ಮಾಡಿ ಇಂದೇ ಕಳಿಸಿಕೊಡಿ.

ಕೂಪನ್ ಕಳಿಸಬೇಕಾದ ವಿಳಾಸ

'ಬಿಸಿಲ ಬದುಕು' ಮಾಸಪತ್ರಿಕೆ, ಅಂಚೆಪೆಟ್ಟಿಗೆ: 7951, ಬಸವೇಶ್ವರನಗರ, ಬೆಂಗಳೂರು - 560 079.

ಉಚಿತ ಜಾಹೀರಾತು ಕೂಪನ್

ದಯವಿಟ್ಟು ಈ ಕೆಳಗಿನ ವರ್ಗೀಕೃತ ಜಾಹೀರಾತನ್ನು ಆಗಸ್ಟ್ 99ರ 'ಬಿಸಿಲ ಬದುಕು' ಮಾಸಪತ್ರಿಕೆಯಲ್ಲಿ ಪ್ರಕಟಿಸಲು ಕೋರಿಕೆ.

1	2	3	4
5	6	7	8
9	10	11	12
13	14	15	16
17	18	19	20

ಜಾಹೀರಾತು ನೀಡುವವರ ಪೂರ್ಣ ವಿಳಾಸ..

....


....

ಪಿನ್‌ಕೊಡ್.................................... ದೂರವಾಣಿ ಸಂಖ್ಯೆ..

ಜಾಹೀರಾತುದಾರರ ಸಹಿ

ಅಂಧ ಬಾಲಕರ ಬಾಳಿನ ಬೆಳಕು

ಶ್ರೀರಾಮುಲು



ಅಂಗವಿಕಲತೆ ಆಕಸ್ಮಿಕವೇ ಹೊರತು ಶಾಪವಲ್ಲ. ಆತ್ಮವಿಶ್ವಾಸದೊಂದಿಗೆ, ಆತ್ಮಗೌರವ ಕಾಪಾಡಿಕೊಂಡು, ಈ ಸಮಾಜದಲ್ಲಿ ಬೆರೆತು ಬದುಕುವ ಹಕ್ಕು ಅವರಿಗಿದೆ. ಅಂಗವಿಕಲರು ಅವಕಾಶ ವಂಚಿತರಾಗದೆ ಸ್ವಸಾಮರ್ಥ್ಯದಿಂದ ಮಿಂಚಲು ಸಾಧ್ಯವಿದೆ. ಅಂಗವಿಕಲರ ಹಕ್ಕುಗಳಿಗಾಗಿ ಹೋರಾಡುವವರಲ್ಲಿ ಹುಬ್ಬಳ್ಳಿಯ ಎಸ್. ಶ್ರೀರಾಮುಲು ಪ್ರಮುಖರು.

ಅಂಧ ಮಕ್ಕಳ ಸರ್ಕಾರಿ ಶಾಲೆಯ ಅಧೀಕ್ಷಕರಾಗಿರುವ ಶ್ರೀರಾಮುಲು ಸರ್ಕಾರಿ ನೌಕರನಂತೆ ಕಾಟಾಚಾರದ ಕೆಲಸ, ಕಾರ್ಯಕ್ರಮಗಳನ್ನು ನಡೆಸದಿರುವುದೇ ಒಂದು ಹೆಚ್ಚುಗಾರಿಕೆ. ಹುಬ್ಬಳ್ಳಿಯ ಅಂಧ ಬಾಲಕರ ಶಾಲೆಯ ಶಿಸ್ತು, ಸುವ್ಯವಸ್ಥೆ, ನಲವತ್ತು ಮಕ್ಕಳ ನಗು-ನಲಿವು ಇವರ ದಕ್ಷತೆ, ಪ್ರಾಮಾಣಿಕತೆಯ ಕತೆ ಹೇಳುತ್ತವೆ.

ಆಂಗ್ಲ ಹಾಗೂ ಕನ್ನಡ ಬ್ರೈಲ್ ಲಿಪಿಯಲ್ಲಿ ಕಲಿಯುತ್ತಿರುವ ಕಣ್ಣಿಲ್ಲದ ಕಂದಮ್ಮಗಳ ಕರುಣಾಜನಕ ಕತೆ. 'ಇವರಿಗೆ ಬೇಕಾಗಿರುವುದು ಅನುಕಂಪವಲ್ಲ ಅವಕಾಶ' ಎನ್ನುವ ಶ್ರೀರಾಮುಲು, ಈ ಶಾಲೆಯನ್ನು ದೇವಾಲಯವಾಗಿಸಿದ್ದಾರೆ. ಮೂವತ್ತೈದು ಗುಂಟೆ ಜಾಗೆಯಲ್ಲಿ 1955ರ ಸುಮಾರಿಗೆ ತೆರೆಯಲ್ಪಟ್ಟ ಈ ಶಾಲೆಯನ್ನು 1960ರಲ್ಲಿ ಸರಕಾರ ವಹಿಸಿಕೊಂಡಿತು. ಶ್ರೀ ಸಿದ್ಧಾರೂಢ ಮಠದ ಸನಿಹದಲ್ಲಿ ಕಣ್ಣಿಲ್ಲದ ಮರಿಕೋಗಿಲೆಗಳು ಹಾಡತೊಡಗಿದವು.

■ ಆರೂರು ಲಕ್ಷ್ಮಣ ಶೇಟ್

ಹಿಂದೊಮ್ಮೆ (1985-90) ಇಲ್ಲಿ ಅಧೀಕ್ಷಕರಾಗಿದ್ದಾಗ ಸಂಸ್ಥೆಯ ಬೆಳವಣಿಗೆಗಾಗಿ ಶ್ರದ್ಧೆಯಿಂದ ದುಡಿದ ಶ್ರೀರಾಮುಲು ನಂತರ ಗುಲ್ಬರ್ಗಾ ಹಾಗೂ ಮೈಸೂರಿನ ಅಂಧರ ಶಾಲೆಗಳಲ್ಲಿ ಕಾರ್ಯನಿರ್ವಹಿಸಬೇಕಾಗಿ ಬಂತು. ಇದೀಗ ಡಿಸೆಂಬರ್, 1995ರಿಂದ ಹುಬ್ಬಳ್ಳಿಯ ಅಂಧರ ಶಾಲೆಯಲ್ಲಿ ಸೇವೆ ಸಲ್ಲಿಸುತ್ತಿರುವ ಶ್ರೀಯುತರ ಕನಸುಗಳು ಒಂದೊಂದಾಗಿ ನನಸಾಗುತ್ತಿವೆ. ಆದರ್ಶಗಳು ಆಕಾರ ಪಡೆಯುತ್ತಿವೆ.



ಕರ್ನಾಟಕ ಸರಕಾರದ ಅಂಗವಿಕಲರ ಕಲ್ಯಾಣ ಇಲಾಖೆಯ ಸುಪರ್ದಿನಲ್ಲಿರುವ ಅಂಧ ಮಕ್ಕಳ ಶಾಲೆಯಲ್ಲಿ ಶ್ರೀರಾಮುಲು ಬರಿಯ ಅಧಿಕಾರಿಯಾಗಿರದೆ, ಅಂಧ ಬಾಲಕರ ಪಾಲಿಗೆ ಆತ್ಮೀಯ ಸ್ನೇಹಿತರಾಗಿದ್ದಾರೆ. ಕ್ಲಾಸ್ ರೂಂ, ಹಾಸ್ಟೆಲ್, ಮಲಗುವ ವ್ಯವಸ್ಥೆ, ಅಡುಗೆ ಮನೆ..... ಎಲ್ಲವೂ ಒಪ್ಪ ಓರಣ. ಬ್ರೈಲ್ ಪಠ್ಯ ಪುಸ್ತಕಗಳು, ಬ್ರೈಲ್ ಪಾಠೋಪಕರಣಗಳು, ಸಂಗೀತ ಮತ್ತು ವ್ಯಾಯಾಮ ಸಲಕರಣೆಗಳು ಇಲ್ಲಿ ಲಭ್ಯವಿದೆ. ಅಂಧ ಸಂಗೀತ ಗುರುಗಳು ಹಾಡುಗಾರಿಕೆ ಕಲಿಸುತ್ತಾರೆ. ವಾದ್ಯ ಸಂಗೀತವೆಂದರೆ ಮಕ್ಕಳಿಗೆ ಬಲು ಖುಷಿ ಪ್ಲಾಸ್ಟಿಕ್ ವಯರ್ ಹೆಣಿಗೆ, ಬುಟ್ಟಿ ಹೆಣೆಯುವುದು, ಚಾಪೆ ತಯಾರಿಕೆ.... ಹೀಗೆ ವಿವಿಧ ಕಲೆ, ಕಸರತ್ತುಗಳಿಗೆ ಇಲ್ಲಿ ಅವಕಾಶವಿದೆ.

ಮೂಲತಃ ಚಿಂತಾಮಣಿ (ಕೋಲಾರ ಜಿಲ್ಲೆ) ಯವರಾದ ಶ್ರೀರಾಮುಲು ಪಾದರಸದ ಚಟುವಟಿಕೆಯ ಪ್ರತಿಭಾನ್ವಿತ. ಗ್ರಾಂಟ್, ಸ್ಯಾಂಕ್ಷನ್, ಫೈಲ್, ರಿಪೋರ್ಟ್‌ಗಳ ಗುಂಗಿನಿಂದ ಹೊರಬಂದು, ವಿಧಾಯಕವಾಗಿ ಚಿಂತಿಸಿ, ಸಾರ್ವಜನಿಕರ ನೆರವಿನಿಂದ ಅಂಗವಿಕಲರ ಸರ್ವತೋಮುಖ ಏಳ್ಗೆಗಾಗಿ ಶ್ರಮಿಸಿದರು. 1987ರಲ್ಲಿ ಪ್ರಪ್ರಥಮವಾಗಿ ಅಂಗವಿಕಲರು ಹಾಗೂ ಇತರ ದೈಹಿಕ, ಮಾನಸಿಕ ದೋಷವುಳ್ಳ ಮಕ್ಕಳಿಗಾಗಿ ರಾಜ್ಯಮಟ್ಟದ ನಾಟಕೋತ್ಸವ ನಡೆಸಿದರು. ವಿಶ್ವ ಅಂಗವಿಕಲರ ದಿನಾಚರಣೆಯನ್ನು ಅರ್ಥಪೂರ್ಣವಾಗಿ, ವೈಶಿಷ್ಟ್ಯಪೂರ್ಣವಾಗಿ ಆಚರಿಸಿದರು.

ಲ್ಲೆಡೆಗಳಲ್ಲೂ ಇವರದ್ದೇ ಮುಂಚೂಣಿ, ರ್ಗದರ್ಶನ ಜೊತೆಗೆ ಖಾಸಗಿ ಸಂಸ್ಥೆಗಳ ಹಯೋಗ.

ಹಾರ್ಮೋನಿಯಂ ನುಡಿಸುತ್ತಾ ಇಲ್ಲಿನ ಾಲಕರು ವಿವಿಧ ಗೀತೆಗಳನ್ನು ಹಾಡುವಾಗ ್ರೋತೃಗಳ ಎದೆಯಲ್ಲಿ ಮಿಂಚಿನ ಸಂಚಾರ. ್ರಾರ್ಥನೆ, ದೇಶಭಕ್ತಿ ಗೀತೆ, ಶಾಸ್ತ್ರೀಯ ಂಗೀತ.... ಎಲ್ಲವೂ ಸುಶ್ರಾವ್ಯ ಹೃದ್ಯ. ಕೆಲವು ಾಡುಗಳನ್ನು ಶ್ರೀರಾಮುಲು ಸ್ವತಹ ರೆದಿರುತ್ತಾರೆ. ಶ್ರೀ ವಿವೇಕಾನಂದ ಯೋಗ ಂಸ್ಥೆಯ ನೆರವಿನಿಂದ ಇಲ್ಲಿನ ಸುಮಾರು 35 ುಂದಿ ಮಕ್ಕಳು ಯೋಗಾಸನ ಕಲಿಯಲು ಾಧ್ಯವಾದುದು ಒಂದು ಬೆರಗಿನ ಸಂಗತಿ. ಎಂ.ಜಿ. ುಬ್ಬೀಕರ್ ಈ ದಿಸೆಯಲ್ಲಿ ಮಾರ್ಗದರ್ಶನ ೀಡಿದರು. ಈರಣ್ಣ ಕಾಡಪ್ಪನವರ್, ಅಂಜನಾ ೂೀಕರ್ಣ ಹಾಗೂ ಅಪ್ಪಣ್ಣ ಶೆಟ್ಟರ್ ಯೋಗ ಲಿಸಿದರು. ಸ್ಪರ್ಶಿಸುವುದರ ಮೂಲಕ ಅರಿತು, ನುಭವಿಸಿ ಅನುಕರಿಸುವ ವಿಧಾನ ನಿಜಕ್ಕೂ ರೋಮಾಂಚನಕಾರಿಯಾದುದು.

ಮಕ್ಕಳ ಯೋಗಕ್ಷೇಮ ವಿಚಾರಿಸುತ್ತಾ, ಉತ್ತಮ ಶಿಕ್ಷಣ ಒದಗಿಸುತ್ತಾ, ವ್ಯಕ್ತಿತ್ವವಿಕಸನಕ್ಕೆ ಪರಿಶ್ರಮಿಸುತ್ತಾರೆ ಶ್ರೀರಾಮುಲು. ವಿವಿಧ ಸಾರ್ವಜನಿಕ ಸಭೆ, ಸಮಾರಂಭಗಳಲ್ಲಿ ಹಾಡಲು, ಯೋಗಾಸನಗಳ ಪ್ರಾತ್ಯಕ್ಷಿಕೆ ನೀಡಲು ಕರೆ ಬಂದಾಗಲೆಲ್ಲಾ ಇವರು ಮಕ್ಕಳನ್ನು ಹುರಿದುಂಬಿಸಿ ಕಳಿಸುತ್ತಾರೆ. ಈ ಮಕ್ಕಳು ಪತ್ರಿಕಾ ವಾರ್ತೆಗಳನ್ನು ಕೇಳುತ್ತಾರೆ. ಆಕಾಶವಾಣಿ ಹಾಗೂ ದೂರದರ್ಶನ ಕಾರ್ಯಕ್ರಮಗಳನ್ನು ಆಸಕ್ತಿಯಿಂದ ಕೇಳಿ ಆನಂದಿಸುತ್ತಾರೆ. ಇಲ್ಲಿ ಓದಿದ ಮಕ್ಕಳು ರ್‍ಯಾಂಕ್ ಗಳಿಸಿದ್ದೂ ಉಂಟು. ಬದುಕಿನ ಪರೀಕ್ಷೆಗಳಲ್ಲೂ ಗೆಲ್ಲುವ ಛಲ ಉಂಟು.

'ಶೋಷಣೆ ಮತ್ತು ತಾರತಮ್ಯಗಳ ವಿರುದ್ಧ ಈ ಮುದ್ದು ಮಕ್ಕಳಿಗೆ ರಕ್ಷಣೆ ಬೇಕು. ಇವರು ವಿಕಲಾಂಗರಲ್ಲ, ಸಕಲಾಂಗ ಸುಂದರರು. ಕೀಳರಿಮೆ ತೊಡೆದು ಹಾಕುವುದು ಅತ್ಯಂತ ಅಗತ್ಯ. ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗುವುದರಿಂದ ಇವರ ಆತ್ಮವಿಶ್ವಾಸ ವೃದ್ಧಿಸುತ್ತದೆ. ಅದಕ್ಕಾಗಿಯೇ ಧಾರವಾಡ ಹುಬ್ಬಳ್ಳಿಯ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ನಾನು ಪ್ರೋತ್ಸಾಹಿಸುತ್ತಿದ್ದೇನೆ' ಎನ್ನುತ್ತಾರೆ ಶ್ರೀ ರಾಮುಲು.

ಇದೀಗ ಈ ಅಂಧ ಮಕ್ಕಳು ಸ್ಕೇಟಿಂಗ್ ಕಲಿಯ ತೊಡಗಿದ್ದಾರೆ. ಖ್ಯಾತ ಸ್ಕೇಟಿಂಗ್ ಪಟು ಈರಣ್ಣ ಕಾಡಪ್ಪನವರ್ ಕೆಲವು ಮಕ್ಕಳನ್ನು ಆಯ್ದುಕೊಂಡು ಸ್ಕೇಟಿಂಗ್ ಕ್ರೀಡೆಯನ್ನು ಕಲಿಸುತ್ತಿದ್ದಾರೆ. ಇದೊಂದು ವಿನೂತನ ಪ್ರಯೋಗ. ಹುಬ್ಬಳ್ಳಿಯ ಅಂಧ ಮಕ್ಕಳ ಈ ಮಾದರಿ ಶಾಲೆಯಲ್ಲಿ ಮುದ್ದು ಮಕ್ಕಳ ಬಾಳು ಬೆಳಗುತ್ತಿರುವುದು ಹೆಮ್ಮೆಯ ಸಂಗತಿ. ವಾರ್ಡನ್ ಎಸ್.ಎಸ್. ಹೊಸಮನಿ, ಶಿಕ್ಷಕರು, ಸಿಬ್ಬಂದಿ ವರ್ಗದವರು ಕಣ್ಣಿಲ್ಲದ ಬಣ್ಣದ ಕನಸುಗಳನ್ನು ಅರಳಿಸುವುದರಲ್ಲಿ ಶ್ರೀರಾಮುಲು ಅವರಿಗೆ ಸಕಲ ನೆರವು ಒದಗಿಸುತ್ತಿದ್ದಾರೆ. ಶ್ರೀರಾಮುಲು ಮೇಲ್ಪಂಕ್ತಿಯಲ್ಲಿ ಇತರ ಶಿಕ್ಷಕರೂ ದುಡಿದರೆ ಅಂಗವೈಕಲ್ಯದ ಸಮಸ್ಯೆ ಇಲ್ಲವಾಗುವ ದಿನಗಳು ದೂರವಿಲ್ಲ. ■

ಗೆಳೆತನ

ಮನುಷ್ಯ ಸ್ವಭಾವತಃ ಸಂಘಜೀವಿ. ಅನ್ಯರ ್ನೇಹವಿಲ್ಲದೆ ಬದುಕಲಾರ. ಬಾಳಿನಲ್ಲಿ ಉತ್ತಮ ಳೆತನ ಒಂದು ಅಮೂಲ್ಯ ವಸ್ತು. ಗೆಳೆಯನಿಲ್ಲದ ುಕಾಕಿ ಜೀವನ ಸೂರ್ಯನಿಲ್ಲದ ಮುಗಿಲಿದ್ದಂತೆ. ಸಖದಿಂದುನ್ನತ ವಸ್ತುವೇ?' ಎನ್ನುತ್ತಾನೆ ೂೀಮನಾಥ.

ಈ ಗೆಳೆತನವೆನ್ನುವುದು ಕೇವಲ ಇಬ್ಬರ ಒಡನಾಟವಲ್ಲ, ಅದು ಎರಡು ಜೀವಿಗಳ ಹೃದಯಗಳ ುಲನ. 'ಗೆಳೆತನವೆಂದರೆ ಪ್ರೇಮಯೋಗವೇ ೂರತು, ಬರಿಯ ಗುರುತು ಪರಿಚಯವಲ್ಲ'- ಂದಿದ್ದಾರೆ ವಿ.ಕೃ. ಗೋಕಾಕ್.

ಇಬ್ಬರ ಮಧ್ಯೆ ಗೆಳೆತನಕ್ಕೆ ಮುಖ್ಯವಾಗಿ ೀಕಾಗಿರುವ ಅಂಶಗಳೆಂದರೆ ಅ) ಆತ್ಮೀಯತೆ,) ನಿಸ್ವಾರ್ಥತೆ, ಇ) ಅಭಿಪ್ರಾಯ ಸಾಮರಸ್ಯ,)ಹೃದಯ ವೈಶಾಲ್ಯತೆ, ಉ)ಪರಸ್ಪರ ತಿಳುವಳಿಕೆ, ೂ)ವಿಶ್ವಾಸ, ಋ) ಅಸೂಯೆ ಇಲ್ಲದಿುವಿಕೆ, ೠ) ಅನ್ಯೋನ್ಯತ ಹಾಗು ಎ) ಸಮಾನ ಸಕ್ತಿ.

ಉಪಕಾರದ ಉರುಳು, ಮೇಲರಿಮೆ, ೀಳರಿಮೆ - ಇವು ಒಳ್ಳೆಯ ಗೆಳೆತನದ ಮಧ್ಯೆ ಲ್ಲುವ ಗೋಡೆಗಳು.

ಇಂದಿನ ಯುಗದಲ್ಲಿ ಬಗೆಬಗೆಯ ಗೆಳೆಯರು ೂರೆಯುತ್ತಾರೆ. ವಿವೇಕಿಯಾದವನು ಅವರಲ್ಲಿ ್ನ ಮನೋಧರ್ಮಕ್ಕೆ ಹೊಂದಿಕೊಳ್ಳುವವರನ್ನು ಆರಿಸಿಕೊಳ್ಳಬೇಕು. ಏಕೆಂದರೆ ಸ್ನೇಹಿತರು ಕಲ್ಲಂಗಡಿ ಹಣ್ಣಿನಂತೆ. ಒಂದು ಒಳ್ಳೆಯದನ್ನಾರಿಸಲು ನೂರಾರನ್ನು ಪರಿಶೀಲಿಸಬೇಕು. ಒಳ್ಳೆಯ ಗೆಳೆಯರನ್ನು ಅರಸುವ ಮೊದಲು ನಾವು ಒಳ್ಳೆಯ ಗೆಳೆಯರಾಗುವುದು ಅತಿ ಅವಶ್ಯಕ.

ನಮ್ಮ ಸಹೋದ್ಯೋಗಿಗಳು, ಪರಿಚಯಸ್ಥರು, ನೆಂಟರಿಷ್ಟರು ಇವರಲ್ಲಿ ಎಲ್ಲರೂ ಗೆಳೆಯರಾಗಲು ಸಾಧ್ಯವಿಲ್ಲ. ಒಳ್ಳೆಯ ಗೆಳೆಯನೆಂದರೆ ಆಪತ್ತಿನಲ್ಲಿ ಸಹಾಯ ಮಾಡುವ, ಗೆಳೆಯನ ಗುಟ್ಟನ್ನು ರಟ್ಟು ಮಾಡದಿರುವ, ಹಿತವಾದುದರಲ್ಲಿ ಗೀಳನ್ನು ಹತ್ತಿಸುವ, ಸವಿಮಾತಿನಲ್ಲೇ ಗೆಳೆಯನ ತಪ್ಪುಗಳನ್ನು ತೋರಿಸಿ ಅವನನ್ನು ಸರಿಯಾದ ಹಾದಿಗೆ ತರುವ, ಖಿನ್ನತೆಯನ್ನು ಹೋಗಲಾಡಿಸುವ, ಪ್ರೀತಿ ವಿಶ್ವಾಸಗಳಿಗೆ ಪಾತ್ರವಾಗುವ ವ್ಯಕ್ತಿ. ಇಂತಹ ವ್ಯಕ್ತಿಯ ಗೆಳೆತನ ಜೀವಿಗೆ ವರದಾಯಕ.

ಎಂತಹವರೊಡನೆ ಗೆಳೆತನ ಬೆಳೆಸಬೇಕೆಂಬುದನ್ನು ನಾಣ್ಣುಡಿ ಸೂಚಿಸುವುದು ಹೀಗೆ: 'ಇದ್ದಲಿನವನ ಸ್ನೇಹಕ್ಕಿಂತ ಗಂಧದವನೊಡನೆ ಗುದ್ದಾಟ ಲೇಸು'

ಅದನ್ನೇ ನಮ್ಮ ಜಾನಪದ ಕವಿ ಸರ್ವಜ್ಞ

'ಸಜ್ಜನರ ಸಂಗವದು ಹೆಜ್ಜೇನು ಸವಿದಂತೆ

ದುರ್ಜನರ ಸಂಗದೊಡನಾಟ

ಬಚ್ಚಲಿನ ರೊಚ್ಚಿನಂತಿಹುದು ಸರ್ವಜ್ಞ'

ಎನ್ನುತ್ತಾನೆ.


ಗೆಳೆತನ ಮಾಡಿದರೆ ನಮಗಿಂತ ಶ್ರೇಷ್ಟರೊಡನೆ ಮಾಡಬೇಕು. ಇಲ್ಲವೇ ಸಮಾನರೊಡನಾದರೂ ಮಾಡಬೇಕು. ಇವೆರಡೂ ಸಾಧ್ಯವಿಲ್ಲದಿದ್ದಲ್ಲಿ ಒಂಟಿಯಾಗಿರುವುದೇ ಲೇಸೆನ್ನುತ್ತಾನೆ ಬುದ್ಧ.

ಇಬ್ಬರು ಗೆಳೆಯರು ತಮ್ಮೊಳಗಿನ ಜಗಳ ತೀರಿಸಲು ನಿಮ್ಮನ್ನು ಕೇಳಿಕೊಂಡರೆ ಒಪ್ಪಬೇಡಿರಿ. ಒಪ್ಪಿದರೆ ಅದರಿಂದ ನೀವು ಒಬ್ಬ ಮಿತ್ರನನ್ನು ಕಳೆದುಕೊಳ್ಳುವಿರಿ; ಇಬ್ಬರು ಅಪರಿಚಿತರು ತಮ್ಮೊಳಗಿನ ಜಗಳ ತೀರಿಸಲು ಕೇಳಿಕೊಂಡರೆ ಒಪ್ಪಿಕೊಳ್ಳಿರಿ. ಅದರಿಂದ ನೀವು ಒಬ್ಬ ಗೆಳೆಯನನ್ನು ಸಂಪಾದಿಸುವಿರಿ.

ಶತ್ರುವಿನ ಬಳಿ ಇರಬೇಕಾಗಿ ಬಂದರೂ ಇರು, ವಿಷ ಸರ್ಪದ ಬಳಿ ಹೋಗಬೇಕಾಗಿ ಬಂದರೂ ಹೋಗು, ಆದರೆ ಮಿತ್ರನಂತೆ ನಟಿಸಿ ಒಳಗೆ ಕಪಟ ಸಾಧಿಸುವ ವ್ಯಕ್ತಿಯ ಗೆಳೆತನ ಮಾತ್ರ ಸರ್ವಥಾ ಬಯಸಬೇಡ.

ಒಳ್ಳೆಯ ಮಿತ್ರನಿಲ್ಲದ ಹೋದರೆ ಅವನಿಗಾಗಿ ಹುಡುಕಾಡಿರಿ. ಆತ ದೂರತ ಮೇಲೆ ಅವನನ್ನು ಕಳೆದುಕೊಳ್ಳಬೇಡಿರಿ. ಗೆಳೆಯನನ್ನು ಆಗಾಗ್ಗೆ ಭೇಟಿಯಾಗುತ್ತೀರಿ. ಏಕೆಂದರೆ ಗೆಳೆತನವು ನಿಧಾನವಾಗಿ ಬೆಳೆಯುವ ಮರದಂತೆ. ಆಗಾಗ್ಗೆ ಅದಕ್ಕೆ ಪ್ರೀತಿಯ ವಿಶ್ವಾಸದ ನೀರೆರೆದು ಪೋಷಿಸುತ್ತಿರಬೇಕು.

■ ಟಿ.ವಿ. ವೆಂಕಟರಮಣಯ್ಯ



ಪೋಲೀಸ್ ವೃತ್ತಿಯಲ್ಲಿದ್ದರೂ ಸಾಹಿತಿಯಾಗಿಯೇ ಹೆಚ್ಚು ಜನಪ್ರಿಯತೆಯನ್ನು ಗಳಿಸಿರುವ ವಿಜಯ ಸಾಸನೂರರು ಜನ್ಮ ತಾಳಿದ್ದು ಬೆಳಗಾವಿಯಲ್ಲಿ (1948). ಹತ್ತನೆಯ ತರಗತಿವರೆಗೆ ಕನ್ನಡ ಮಾಧ್ಯಮದಲ್ಲಿ ಓದಿದ (ಬೀದರ್ ಮತ್ತು ಬಿಜಾಪುರ) ಇವರು, ತಮ್ಮ *M.Sc. (Bio)* ಯನ್ನು ಮುಂಬೈನಲ್ಲಿ ಮಾಡಿದ್ದಾರೆ. ತಮ್ಮ *IPS* ಪರೀಕ್ಷೆಯನ್ನು ಕನ್ನಡದಲ್ಲೇ ಬರೆದ ಕೀರ್ತಿ ಇವರಿಗೆ ಸಲ್ಲುತ್ತದೆ. ಇಷ್ಟೇ ಅಲ್ಲದೆ ಇತ್ತೀಚೆಗೆ ಇವರು ಎಂ.ಎ. (ಪತ್ರಿಕೋದ್ಯಮ) ಪದವಿಯನ್ನು ತಮ್ಮದಾಗಿಸಿಕೊಂಡಿದ್ದಾರೆ.

ಕನ್ನಡ ಮಾಧ್ಯಮದಲ್ಲಿ ಹತ್ತನೆಯ ತರಗತಿಯವರೆಗೆ ಓದಿ, ನಂತರ ಪಿ.ಯು.ಸಿ.ಗೆ ಸೇರಿದ ತಕ್ಷಣ ವಿದ್ಯಾರ್ಥಿಗಳಿಗೆ ಒಂದು ಭಯಂಕರ 'ಭೂತ' ಕಾಟ ಕೊಡಲು ಶುರು ಮಾಡಿಬಿಡುತ್ತದೆ. ಅದೇ ಇಂಗ್ಲೀಷ್ ಭಾಷೆ. ಇಂತಹ ಪರಿಸ್ಥಿತಿಯನ್ನು ಎದುರಿಸುತ್ತಿರುವ ವಿದ್ಯಾರ್ಥಿಗಳಿಗೆ ಆತ್ಮವಿಶ್ವಾಸವನ್ನು ಕೊಡುವ ಸಲುವಾಗಿ ಹಲವಾರು ಗಣ್ಯರೊಡನೆ ಮಾತಾಡಿ, ಹಿಂದೊಮ್ಮೆ ಅವರು ಇದೇ ತರಹದ ಸಮಸ್ಯೆಗಳನ್ನು ಎದುರಿಸಿದ ರೀತಿ ಮತ್ತು ಅವರು ನಿಮ್ಮ ಈ ಸಮಸ್ಯೆಗೆ ನೀಡಿರುವ ಸಲಹೆಗಳನ್ನು ನಿಮಗಾಗಿ ನೀಡುತ್ತಿದ್ದೇವೆ.

■ ವಸುಧೇಂದ್ರ

ವಿಜಯ ಸಾಸನೂರು

ಪ್ರಶಸ್ತಿ

1994ರಲ್ಲಿ ರಾಷ್ಟ್ರಪತಿಯವರ ಪೋಲೀಸ್ ಪದಕವನ್ನು ಪಡೆದಿರುವ ಇವರು, ಕನ್ನಡ ಸಾಹಿತ್ಯ ಹಾಗೂ ಸಿನಿಮಾರಂಗದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ಸುಮಾರು 9 ಕಥಾಸಂಕಲನ, 26 ಕಾದಂಬರಿ ಮತ್ತು ಪ್ರಬಂಧ ಸಂಕಲನವನ್ನು ಪ್ರಕಟಿಸಿರುವ ಇವರು ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1997), ರಾಜ್ಯೋತ್ಸವ ಪ್ರಶಸ್ತಿ (1991), ರಾಜ್ಯ ಚಲನ ಚಿತ್ರ ಪ್ರಶಸ್ತಿ (1981 ಉತ್ತಮ ಕಥೆ - 'ಧ್ರುವತಾರೆ') ಗಳನ್ನು ಪಡೆದಿದ್ದಾರೆ. ಅಷ್ಟೇ ಅಲ್ಲದೆ ರಾಜ್ಯ ಮತ್ತು ರಾಷ್ಟ್ರ ಚಲನಚಿತ್ರ ಪ್ರಶಸ್ತಿಯ ಸಲಹಾಮಂಡಳಿಯ ಸದಸ್ಯರಾಗಿಯೂ ಕಾರ್ಯನಿರ್ವಹಿಸಿದ್ದಾರೆ.

1 **ಇಂಗ್ಲಿಷ್ ಮಾಧ್ಯಮಕ್ಕೆ ಸೇರಿದ ಹೊಸತರಲ್ಲಿ ನಿಮ್ಮ ಅನುಭವಗಳೇನು?**

ಮೊದಲಿಗೆ ಸಮಸ್ಯೆ ಅನ್ನಿಸ್ತು. ಹತ್ತನೇ ತರಗತಿಯಲ್ಲಿ ರ‍್ಯಾಂಕ್ ಪಡೆದಿದ್ದ ನನಗೆ ಇಂಗ್ಲಿಷ್ ಭಾಷೆ ಸ್ವಲ್ಪ ಚೆನ್ನಾಗಿಯೇ ಬರುತ್ತಿತ್ತು ಆದರೆ ಪಿ.ಯು.ಸಿ.ಗೆ ಬಂದ ಮೇಲೆ ಸಮಸ್ಯೆಯಾಗಿ ಕಾಡಿದ್ದು ವೈಜ್ಞಾನಿಕ ಪದಗಳ ಸಮಾನಾರ್ಥಕ ಪದಗಳು. ಉದಾಹರಣೆಗೆ ನಾವು ಕನ್ನಡದಲ್ಲಿ ಗಂಧಕ, ಇಂಗಾಲ ಅಂತ ಪರಿಚಯ ಮಾಡಿಕೊಂಡ ವಸ್ತುಗಳು ಒಮ್ಮಿಂದೊಮ್ಮೆಲೆ ಸಲ್ಫರ್, ಕಾರ್ಬನ್ ಎಂದೆಲ್ಲಾ ಬದಲಾವಣೆ ಹೊಂದಿದ್ದು ಗಲಿಬಿಲಿಯುಂಟು ಮಾಡುತ್ತಿತ್ತು. ಸುಮಾರು ಒಂದೆರಡು ತಿಂಗಳು ಈ ಸಮಸ್ಯೆ ನಾನು ಎದುರಿಸಬೇಕಾಯ್ತು. ನಾನು ಪಿ.ಯು.ಸಿ. ಓದಿದ್ದು ಬೀದರ್‌ನಲ್ಲಿ. ಅಲ್ಲಿ ನನ್ನಂತೆ ಬೇರೆ ಭಾಷೆಯಿಂದ ಬಂದ ಹುಡುಗರು ಮುಖ್ಯವಾಗಿ ಮರಾಠಿ ಮತ್ತು ಉರ್ದು, ಜೊತೆಯಲ್ಲಿರುತ್ತಿದ್ದರು. ಆಗ ಬೀದರ್‌ನಲ್ಲಿ ಹತ್ತನೆಯ ತರಗತಿವರೆಗೆ ಆಂಗ್ಲ ಮಾಧ್ಯಮ ಶಾಲೆಗಳೇ ಇರಲಿಲ್ಲ.

2 **ಅಂದು ಎದುರಾದ ಸಮಸ್ಯೆಗಳನ್ನು ಹೇಗೆ ನಿವಾರಿಸಿಕೊಂಡಿರಿ?**

ನಮ್ಮ ಪ್ರಾಧ್ಯಾಪಕರಿಂದ ಸಾಕಷ್ಟು ಉತ್ತೇಜನವಿರುತ್ತಿತ್ತು. ಸಾಕಷ್ಟು ವಿಷಯವನ್ನು ಕನ್ನಡದಲ್ಲಿಯೂ ಹೇಳುತ್ತಿದ್ದರು. ನಮ್ಮ ಮುಖಗಳನ್ನು ನೋಡಿಯೇ ನಮಗೆ ಪಾಠ ಅರ್ಥವಾಗಿದೆಯೋ, ಇಲ್ಲವೋ ಎಂದು ಪತ್ತೆ ಹಚ್ಚಿ ಬಿಡುತ್ತಿದ್ದರು.

ನಾನು ಕಾಲೇಜಿಗೆ ಹೋಗುವುದಕ್ಕೆ ಮುಂಚೆ ನನಗೆ ಅರ್ಥವಾದಷ್ಟು ಮುಂಚೆಯೇ ಪಾಠಗಳನ್ನು

ಓದಿಕೊಂಡಿರುತ್ತಿದ್ದೆ. ಹಾಗಾಗಿ ತರಗತಿಯಲ್ಲಿ ರಿವಿಜನ್ ಆದಂತಿರುತ್ತಿತ್ತು. ಆಗ ಈಗಿನಂತೆ ಗೈಡ್‌ಗಳಿದ್ದಿಲ್ಲ. ಪಠ್ಯ ಪುಸ್ತಕಗಳನ್ನೇ ನಿಷ್ಠೆಯಿಂದ ಓದುತ್ತಿದ್ದೆ. ಜೊತೆಗೆ ಒಳ್ಳೆಯ ಗ್ರಂಥಾಲಯವೂ ಇತ್ತು. ಡಿಕ್ಷನರಿಯನ್ನೂ ಹೆಚ್ಚಾಗಿ ಬಳಸುತ್ತಿದ್ದೆ. ಎಲ್ಲಕ್ಕಿಂತ ಮುಖ್ಯವಾಗಿ ನಾವು ಈ ಸಮಸ್ಯೆಯನ್ನು ಪರಿಹಾರ ಮಾಡಿಕೊಳ್ಳದೆ ಬೇರೆ ದಾರಿಯೇ ಇರಲಿಲ್ಲ, ಅಲ್ಲವಾ?

3 ಈಗ, ನಿಮ್ಮ ಆ ದಿನಗಳ ಸಮಸ್ಯೆಗಳನ್ನು ನೆನಪಿಸಿಕೊಂಡರೆ ಏನನ್ನಿಸುತ್ತದೆ?

ತುಂಬಾ ತಾತ್ಕಾಲಿಕವಾದಂತಹ ಸಮಸ್ಯೆಯಿದು. ಇಂತಹದೇ ಸಮಸ್ಯೆಯೊಂದನ್ನು ನಾನು ನನ್ನ ವೃತ್ತಿ ತರಬೇತಿಗಾಗಿ ಉತ್ತರ ಭಾರತಕ್ಕೆ ಹೋದಾಗ ಎದುರಿಸಬೇಕಾಯ್ತು. ಅಲ್ಲಿ ನೋಟ್ಸ್‌ನ್ನು ಹಿಂದಿಯಲ್ಲಿಯೇ ಬರೆದುಕೊಳ್ಳಬೇಕಾಗಿತ್ತು. ನಾನು ಚೆನ್ನಾಗಿಯೇ ಬರೆದುಕೊಳ್ಳುತ್ತಿದ್ದೆ. ಅದೇ ಸಮಯದಲ್ಲಿ ನಾನು ಯಾವುದೋ ಪರಿಕ್ಷೆಗೆ ಹಿಂದಿಯಲ್ಲಿಯೇ ಉತ್ತರ ಬರೆದಿದ್ದನ್ನು ಸಾಕಷ್ಟು ಕಾಲ 'ಮಾದರಿ' ಉತ್ತರ ಪತ್ರಿಕೆಯಾಗಿ ಬಳಸಿ ಕೊಳ್ಳುತ್ತಿದ್ದರು.

4 ಇಂದು ಇದೇ ಸಮಸ್ಯೆಗಳನ್ನು ಎದುರಿಸುತ್ತಿರುವ ವಿದ್ಯಾರ್ಥಿಗಳಿಗೆ ನಿಮ್ಮ ಸಲಹೆ ಏನು?

ಕನ್ನಡ ಮಾಧ್ಯಮದಲ್ಲಿಯೇ ಉನ್ನತ ಅಭ್ಯಾಸವನ್ನು ಮಾಡುವ ಅವಕಾಶವಿದ್ದು, ಒಳ್ಳೆಯ ಪುಸ್ತಕಗಳು ಲಭ್ಯವಿದ್ದರೆ ಕನ್ನಡ ಮಾಧ್ಯಮದಲ್ಲಿಯೇ ಉನ್ನತ ವ್ಯಾಸಂಗ ಮಾಡುವುದೊಳ್ಳೆಯದೆಂಬುದು ನನ್ನ ಸಲಹೆ. ಆದರೆ ಇಂಗ್ಲಿಷ್ ಭಾಷೆಯನ್ನು ಕಡೆಗಾಣಿಸದೆ, ಅದನ್ನೂ ಚೆನ್ನಾಗಿ ಕಲಿಯಲೇ ಬೇಕು. ನಾಳೆ ನಾವು ರಾಜ್ಯ ಗಡಿಯನ್ನು ದಾಟಬೇಕಾದರೆ, ಇದು ಸಹಾಯವಾಗುತ್ತದೆ.

ಆದರೆ ವಿಜ್ಞಾನ, ವಾಣಿಜ್ಯದಂತಹ ವಿಷಯಗಳನ್ನು ಅಭ್ಯಾಸ ಮಾಡುವಾಗ, ಇಂಗ್ಲಿಷ್ ಮಾಧ್ಯಮ ಅನಿವಾರ್ಯವಾಗುತ್ತದೆ. ಆಗ ಕಷ್ಟ ಪಡಲೇ ಬೇಕು. ಉಪಾಧ್ಯಾಯರೊಡನೆ ಹೆಚ್ಚಿನ ಒಡನಾಟವಿಟ್ಟುಕೊಳ್ಳುವುದು, ಓದುವುದು ಮಾಡಬೇಕಾಗುತ್ತೆ. ನಾನು ಮುಖ್ಯವಾಗಿ ವಿದ್ಯಾರ್ಥಿಗಳಿಗೆ ಹೇಳುವುದೇನೆಂದರೆ, ದಯವಿಟ್ಟು ಗೈಡ್‌ಗಳನ್ನು ಓದಲು ಹೋಗಬೇಡಿ. ಅದರ ಬದಲು ಒಳ್ಳೆಯ ಪಠ್ಯಪುಸ್ತಕಗಳನ್ನು ಓದಿ.

ನಮಗೆಲ್ಲಾ ಪಿ.ಯು.ಸಿ. ಒಂದೇ ವರ್ಷ ವಿರುತ್ತಿತ್ತು. ಆ ಒಂದೇ ವರ್ಷದಲ್ಲಿ ನಾವು ಚೇತರಿಸಿಕೊಳ್ಳಬೇಕಾಗುತ್ತಿತ್ತು. ಆದರೆ ಇಂದು ಪಿ.ಯು.ಸಿ ಎರಡು ವರ್ಷವಿರುವುದರಿಂದ ಈ ಸಮಸ್ಯೆ ಅಷ್ಟೊಂದು ಕಠಿಣವಾಗುವುದಿಲ್ಲ.

5 ಪ್ರಾಥಮಿಕ ಶಿಕ್ಷಣ ಯಾವ ಭಾಷೆಯಲ್ಲಿದ್ದರೆ ಒಳ್ಳೆಯದೆಂದು ನೀವು ಭಾವಿಸುತ್ತೀರಿ?

ನನ್ನ ದೃಷ್ಟಿಕೋನದಲ್ಲಿ ಹತ್ತನೆಯ ತರಗತಿಯವರೆಗೆ ಮಾತೃಭಾಷೆಯಲ್ಲಿಯೇ ವಿದ್ಯಾಭ್ಯಾಸ ಮಾಡಬೇಕು. ಜೊತೆಗೆ ಇಂಗ್ಲಿಷ್ ಮತ್ತು ಹಿಂದಿಯನ್ನು ಕಲಿಯಬೇಕು.

ನಾವು ಮನೆಯಲ್ಲಿ ಮಾತನಾಡುವ ಭಾಷೆಯೇ ಶಾಲೆಯಲ್ಲೂ ಮಾಧ್ಯಮವಾದಾಗ, ಮಕ್ಕಳ ಶ್ರಮ ಹೊಸ ವಿಷಯಗಳನ್ನು ಕಲಿಯುವಲ್ಲಿ ಉಪಯೋಗವಾಗುತ್ತದೆ. ಆದರೆ ಕಲಿಕೆಯ ಮಾಧ್ಯಮವೇ ಬೇರೆಯಾಗಿ ಹೋದರೆ, ಅದರ ಶ್ರಮವೆಲ್ಲಾ ಹೊಸ ಭಾಷೆಯೊಂದನ್ನು ಕಲಿಯುವಲ್ಲಿಯೇ ವ್ಯಯವಾಗಿ ಹೋಗುತ್ತದೆ.

ಡಾ॥ ಎನ್. ಪ್ರಭುದೇವ

ಕಳೆದ ತಿಂಗಳು ಡಾ. ಎನ್. ಪ್ರಭುದೇವ ಅವರ ಸಂದರ್ಶನವನ್ನು ಇದೇ ಅಂಕಣದಲ್ಲಿ ಪ್ರಕಟಿಸಿದ್ದೆವು. ಕಣ್‌ತಪ್ಪಿನಿಂದಾಗಿ ಅವರ ಕೆಲವು ಮಾತುಗಳು ಬಿಟ್ಟು ಹೋಗಿದ್ದು ಅವನ್ನು ಓದುಗರ ಕ್ಷಮೆಕೋರಿ ಇಲ್ಲಿ ಪ್ರಕಟಿಸುತ್ತಿದ್ದೇವೆ

ಅಂದು ಎದುರಾದ ಸಮಸ್ಯೆಗಳನ್ನು ಹೇಗೆ ನಿವಾರಿಸಿಕೊಂಡಿರಿ?

ನನ್ನ ತರಹದ ಸಮಸ್ಯೆಗಳನ್ನೇ ಎದುರಿಸುತ್ತಿರುವ ನನ್ನ ಗೆಳೆಯರೂ ನನ್ನ ಜೊತೆಯಲ್ಲಿದ್ದರು. ನಾವೆಲ್ಲಾ ಸೇರಿ 'ಕಷ್ಟವಾದರೂ ಚಿಂತೆಯಿಲ್ಲ. ಇಂಗ್ಲಿಷ್‌ನಲ್ಲಿಯೇ ಮಾತಾಡೋಣ' ಅಂತ ನಿರ್ಧರಿಸಿ ನಮಗೆ ಬರುತ್ತಿದ್ದ ಹರುಕು ಮುರುಕು ಇಂಗ್ಲಿಷ್‌ನಲ್ಲಿಯೇ ಮಾತನಾಡಲಾರಂಭಿಸಿದೆವು. ಕೆಲವು ಪದಗಳು ಗೊತ್ತಿಲ್ಲದೆ ವಾಕ್ಯ ರಚನೆ ಮಾಡಲು ಹೋಗಿ ಅದು ತಪ್ಪು ತಪ್ಪಾಗಿ, ಅದಕ್ಕೆ ಬದಲು ನಮಗೆ ಗೊತ್ತಿದ್ದ ಕನ್ನಡ ಪದವನ್ನೇ ಸೇರಿಸಿ ಮಾತನಾಡಿದಾಗ ನಾವೆಲ್ಲಾ ನಕ್ಕು ಬಿಡುತ್ತಿದ್ದೆವು. ನಮ್ಮೆಲ್ಲರಿಗೂ ಇಂಗ್ಲಿಷ್ ಸರಿಯಾಗಿ ಗೊತ್ತಿಲ್ಲದ ಕಾರಣ, ಹೇಗಾದರೂ ಮಾತನಾಡಬಹುದಿತ್ತು, ಯಾರೂ ಅವಹೇಳನ ಮಾಡುತ್ತಿದ್ದಿಲ್ಲ. ಜೊತೆಗೆ ಯಾರಾದರು ಹೊಸ ಪದಗಳನ್ನು ಕಲಿತುಕೊಂಡಾಗ, ಅದನ್ನು ನಮಗೆಲ್ಲಾ ತಿಳಿಸುತ್ತಿದ್ದರು. ಹೀಗಾಗಿ ಇಂಗ್ಲೀಷ್‌ನಲ್ಲಿ ಧೈರ್ಯವಾಗಿ ಮಾತಾಡಲು, ಅರ್ಥ ಮಾಡಿಕೊಳ್ಳಲು ಹೆಚ್ಚು ದಿನ ಬೇಕಾಗಲಿಲ್ಲ. ಪರೀಕ್ಷೆಯಲ್ಲಿ ನಾನು ಕಾಲೇಜಿಗೇ ಎರಡನೇ ಸ್ಥಾನದಲ್ಲಿ ಪಾಸಾಗಿದ್ದೆ. ನಿಜ ಹೇಳಬೇಕೆಂದರೆ, ಕನ್ನಡ ಮಾಧ್ಯಮದಿಂದ ಬಂದ ವಿದ್ಯಾರ್ಥಿಗಳೆ ಇಂಗ್ಲಿಷ್ ಮಾಧ್ಯಮದಿಂದ ಬಂದ ವಿದ್ಯಾರ್ಥಿಗಳಿಗಿಂತ ಹೆಚ್ಚಿನ ಅಂಕ ಗಳಿಸಿ, ಒಳ್ಳೊಳ್ಳೆಯ ವೈದ್ಯಕೀಯ ಕಾಲೇಜುಗಳಿಗೆ ಸೇರಿದ್ದೆವು.

ಈಗ, ನಿಮ್ಮ ಆ ದಿನಗಳ ಸಮಸ್ಯೆಗಳನ್ನು ನೆನಪಿಸಿಕೊಂಡರೆ ಏನನ್ನಿಸುತ್ತದೆ?

'ಸಿಲ್ಲಿ' ಅನಿಸುತ್ತೆ.

ಆದರೆ ಅದು ಸ್ವಾಭಾವಿಕ. ನಮಗೆ ಅಪರಿಚಿತವಾದ ಯಾವುದೇ ಹೊಸ ಪರಿಸರವನ್ನು ಹೊಕ್ಕಾಗಲೂ ಈ ತರಹದ ಸಮಸ್ಯೆಯನ್ನು ಎದುರಿಸಲೇಬೇಕಾಗುತ್ತದೆ. ನಾನು ಮುಂದೆ ವೈದ್ಯಕೀಯ ವೃತ್ತಿಯಿಂದ ಇಂಗ್ಲೆಂಡಿಗೆ ಹೋದಾಗ ಮತ್ತೆ ಇದೇ ತರಹದ ಸಮಸ್ಯೆಯನ್ನು ಮೂರು ತಿಂಗಳು ಅನುಭವಿಸಿದ್ದೇನೆ. ■

ವಿಜ್ಞಾನದ ವಿರುದ್ಧ ಬೀದಿ ಜಗಳ

■ ಡಿ.ಆರ್. ನಾಗರಾಜ್
ಅನು - ಮಾಧವ ಐತಾಳ

ವಿಜ್ಞಾನದ ವಿಮರ್ಶಕರಲ್ಲಿ ಎರಡು ವಿಧ. ಒಬ್ಬರು ಜನರ ದೃಷ್ಟಿಯಿಂದ ವಿಜ್ಞಾನವನ್ನು ನೋಡುವವರು. ಇನ್ನೊಬ್ಬರು ಪ್ರಯೋಗಾಲಯದಿಂದ ವಿಜ್ಞಾನವನ್ನು ನೋಡುವವರು. 2ನೇ ಗುಂಪಿನ ಜನ ಬೌದ್ಧಿಕವಾಗಿ ಹಾಗೂ ಅಕಾಡೆಮಿಕ್ ದೃಷ್ಟಿಯಿಂದ ವಿಜ್ಞಾನವನ್ನು ವಿಮರ್ಶಿಸುತ್ತಾರೆ. ಈ ಗುಂಪಿಗೆ ಸೇರಿಸಬಹುದ್ದಾದ ಹೆಸರುಗಳು - ಥಾಮಸ್ ಕುನ್ಹ್, ಪಾಲ್ ಫೇಯರ್ ಬೆಂಡ್, ಬ್ರೂನೋಲಿಯಾರ್. ಮೊದಲ ಗುಂಪಿನ ಜನ ತಮ್ಮ ಶಕ್ತಿ ಹಾಗೂ ನೈತಿಕ ಬಲವನ್ನು ಜನರ ಅನುಭವಗಳಿಂದ ಪಡಕೊಳ್ಳುತ್ತಾರೆ. ಆದ್ದರಿಂದ ಅವರ ಯೋಜನೆಗಳು ಸಾಮಾಜಿಕ ಸಂದರ್ಭದಲ್ಲಿ ಭದ್ರವಾಗಿ ನೆಲೆಯೂರಿರುತ್ತವೆ. ಇವಾನ್ ಇಲ್ಯಿಚ್‌ನ ಬರಹಗಳನ್ನು ಈ ಗುಂಪಿನ ಅತ್ಯುತ್ತಮ ಉಪಯೋಗಿ ಹಾಗೂ ಪರಿಣಾಮಕಾರಿ ಉದಾಹರಣೆಗಳೆನ್ನಬಹುದು.

ಶಿವ್ ವಿಶ್ವನಾಥನ್ ಮೊದಲ ಗುಂಪಿನ ಅತ್ಯುತ್ತಮ ಪ್ರತಿನಿಧಿಗಳಲ್ಲೊಬ್ಬರು. ವಿಜ್ಞಾನದ ವಿರುದ್ಧ ರಸ್ತೆ ಜಗಳ (ಬೀದಿ ರಂಪ) ಮಾಡುವ ಮಂದಿ ಎಂದು ಯಾರಾದರೂ ಈ ಜನರನ್ನು ಕರೆದಲ್ಲಿ, ಅದು ಅವರ ಬೌದ್ಧಿಕ ಸಾಮರ್ಥ್ಯದ ಇಲ್ಲವೇ ಅವರು ಆಯ್ದುಕೊಂಡ ಪದ್ಧತಿಯನ್ನು ಕೀಳು ಎಂದು ನಿರಾಕರಿಸಿದಂತಾಗುವುದಿಲ್ಲ. ಈ ನಾಮಕರಣವು ಜನಾಂದೋಳನಕ್ಕೆ ಅವರ ಅಗತ್ಯದ ಮತ್ತು ವಿಜ್ಞಾನ ತಂತ್ರಜ್ಞಾನದ ಸರ್ವಾಧಿಕಾರಿ ಮನೋವೃತ್ತಿಗೆ ಅವರ ಪ್ರತಿರೋಧ ಸೂಚಕ. ಮೇಲ್ಗೈಗಳಿಸಿರುವ ವಿಜ್ಞಾನದ ವಿರುದ್ಧ ಬೌದ್ಧಿಕ ರಸ್ತೆ ಜಗಳ ಅಗತ್ಯ ಮಾತ್ರವಲ್ಲ, ತಪ್ಪಿಸಲು ಅಸಾಧ್ಯವಾದದ್ದು. ಜೀವಪೋಷಕ, ದೇಶೀ ಹಾಗೂ ಸಂಸ್ಕೃತಿ ಸ್ನೇಹಿ ಅಭಿವೃದ್ಧಿ ಆಂದೋಳನವನ್ನು ನೀವು ನಂಬಿದ್ದಲ್ಲಿ, ವಿಜ್ಞಾನ-ತಂತ್ರಜ್ಞಾನದ ಪಾಳೇಗಾರಿಕೆಗೆ ಪರ್ಯಾಯವೊಂದು ಬೇಕು ಎಂದು ನೀವು ಭಾವಿಸಿದ್ದಾದಲ್ಲಿ, ಅಂತಹ ಜಗಳ ಅಗತ್ಯವಾದದ್ದು. ರೂಪಾಂತರಿಸಿ ಹೇಳಬೇಕೆಂದರೆ ವಿಜ್ಞಾನವನ್ನು ರಸ್ತೆ ಜಗಳವು ನಿಯಂತ್ರಿಸುವಂತಾಗಬೇಕು. ಇಲ್ಲದೇ ಹೋದಲ್ಲಿ ಬರಡಾಗುತ್ತದೆ, ಬರಿದಾಗುತ್ತದೆ. ಇದು ವಿಶ್ವನಾಥನ್ ಅವರ ವಾರದ ಹುರುಳು. ತಥಾಸ್ತು!

ಭಾರತದಲ್ಲಿ ಈ ರೀತಿಯ ಬೌದ್ಧಿಕ ಪ್ರತಿರೋಧ ಇತ್ತೀಚಿನ ವರ್ಷಗಳಲ್ಲಿ ಆಶೀಷ್ ನಂದಿ ಅವರಿಂದ ಪ್ರಾರಂಭವಾಯಿತು. ಬೇರು ಮಟ್ಟದ ರಾಜಕೀಯದೊಟ್ಟಿಗೆ ತಳುಕು ಹಾಕಿಕೊಳ್ಳಲು ಪ್ರಯತ್ನಿಸುತ್ತಿರುವ ಈ ಸಿದ್ಧಾಂತಗಳ ಪೈಕಿ ವಿಶ್ವನಾಥನ್ ಒಬ್ಬ ಊಹಾ ಚಿಂತಕ. ನಂದಿಗೆ ಹೋಲಿಸಿದಲ್ಲಿ ಅವರ ಚಿಂತನಾಧಾಟಿ ಬೇರೆ ರೀತಿಯದ್ದು. ಆಧುನಿಕ ಚರಿತ್ರೆಯನ್ನು ರೂಪಿಸುವಲ್ಲಿ ವಿಜ್ಞಾನವು ಮುಖ್ಯ ಪಾತ್ರ ವಹಿಸಿದೆ. ಸಮಾಜದ ಬಹುಮುಖಿ ಸಂದರ್ಭದಲ್ಲಿ ವಿಜ್ಞಾನದ ಹೊಂದಿಕೊಳ್ಳುವಿಕೆಯು ಈ ಸಿದ್ಧಾಂತದ ತಿರುಳಾಗಿದೆ. ವಿಜ್ಞಾನ ತಂತ್ರಜ್ಞಾನದ ಆಂತರಿಕ ಕ್ರಮಗಳ ವಿವರಗಳ ಪರೀಶೀಲನೆ ಮಾತ್ರವಲ್ಲ, ಪ್ರಸ್ತುತ ಚಾಲ್ತಿಯಲ್ಲಿರುವ ಅಭಿವೃದ್ಧಿ ಸಾಮ್ರಾಜ್ಯದ ಕಟ್ಟುವಿಕೆಯಲ್ಲಿ ವಿಜ್ಞಾನ ತಂತ್ರಜ್ಞಾನದ ಪಾತ್ರದ ಅಧ್ಯಯನವು ವಿಮರ್ಶಕನ ಮುಖ್ಯ ಕೆಲಸವಾಗಿದೆ. ಇದು ವಿಜ್ಞಾನದ ಮಾಮೂಲಿ ಸಮಾಜಶಾಸ್ತ್ರೀಯ ಅಧ್ಯಯನವಲ್ಲ. ಇಲ್ಲಿ ಬರಹವು ಬೇರೆಯದೇ ಆದ ಮಧ್ಯಸ್ತಿಕೆ ಬಲವುಳ್ಳ ಗುಣವನ್ನು ಗ್ರಹಿಸಿಕೊಳ್ಳುತ್ತದೆ.

ಆಧುನಿಕ ವಿಜ್ಞಾನದ ಸಂಸ್ಕೃತಿ ಸಂಬಂಧಿತ ವಾಲುವಿಕೆಗಳನ್ನು ವಿಶ್ವನಾಥನ್ ಅವರ ಪುಸ್ತಕವು ಯಾವುದೇ ಭಾವಾತಿರೇಕವಿಲ್ಲದೆ ಹೊರ ಹಾಕುತ್ತದೆ. ಅವರ ಬರಹದ ಶೈಲಿಯಲ್ಲಿ ಫೇಯರ್‌ಬೆಂಡ್, ಲಾಟೂರ್ ಹಾಗೂ ನಂದಿಯವರ ಬರಹದ ಸಾಮಾನ್ಯ ಅಂಶಗಳಿದ್ದರೂ, ಸಾಹಿತ್ಯಿಕ ರೂಪಕಾಲಂಕಾರದ ಬಳಕೆಯಲ್ಲಿ ಅವರೆಲ್ಲರ ಬರಹಕ್ಕಿಂತ ಶಿವ್ ಅವರ ಬರಹ ವಿಭಿನ್ನ. ವಿಶ್ವನಾಥನ್ ಅವರ ಉತ್ತಮ ಬರಹವು ವಿಚಾರ ಪ್ರಚೋದಕ ಹಾಗೂ ಸಂತೋಷದಾಯಕ. ದೇಶಗಳ ಕೋಟ್ಯಾಂತರ ಜನರ ಬದುಕನ್ನು ನಿರ್ಧರಿಸುವಲ್ಲಿ ವಿಜ್ಞಾನ-ತಂತ್ರಜ್ಞಾನಗಳು ತಮ್ಮ ಅನ್ಯಾಯಕರ ಪಾತ್ರವನ್ನು ನ್ಯಾಯಬದ್ಧಗೊಳಿಸಲು ಬಳಸಿದ ಎಲ್ಲ ಕಾರ್ಯತಂತ್ರಗಳನ್ನು ಅದು ಬೆತ್ತಲೆ ಮಾಡಿ ಬಿಡುತ್ತದೆ. ಅವರ ಬರಹದ ದುರ್ಬಲ ಕ್ಷಣಗಳಲ್ಲಿ, ಸೂತ್ರಬದ್ಧ ಹೇಳಿಕೆಗಳನ್ನು ತೇಲಿಬಿಡುವ ದೌರ್ಬಲ್ಯವನ್ನು ಪ್ರದರ್ಶಿಸಿ, ತಾಂತ್ರಿಕವಾದ, ವಿಚಾರ ಬದ್ಧ ಕಾರಣಗಳ ಬಗ್ಗೆ ಆಳದಲ್ಲಿ ಹುದುಗಿರುವ ಅವರ ಅಸಹಿಷ್ಣತೆಯನ್ನು ಪ್ರದರ್ಶಿಸಿ ಬಿಡುತ್ತಾರೆ. 'Reinventing Gandhi' ಎನ್ನುವ ಅವರ ಲೇಖನದಲ್ಲಿ ರೂಪಕಗಳು ವ್ಯಾಖ್ಯಾನವನ್ನು ಒಸುಕಿ ಬಿಟ್ಟಿವೆ.

ಪುಸ್ತಕದಲ್ಲಿರುವ 7 ಲೇಖನಗಳನ್ನು ಮೂರು ವಿಜ್ಞಾನದ ವಿಶ್ವಾತ್ಮಕತೆಯ ಟೀಕೆಗಳಾಗಿವೆ. ಇನ್ನೊಂದು ರೀತಿಯಲ್ಲಿ ಹೇಳಬೇಕೆಂದರೆ 'ಆಧುನಿಕ ವಿಜ್ಞಾನ ತಂತ್ರಜ್ಞಾನಗಳು ವಿಶ್ವಾತ್ಮಕ' ಎಂಬ ಸೋಗು ಇಲ್ಲಿ ತೀವ್ರ ವಿಮರ್ಶೆಗೊಳಗಾಗಿದೆ. ದಕ್ಷಿಣ ವಿಶ್ವಾದ ಜನಾಂದೋಳನಗಳ ಬೌದ್ಧಿಕ / ಅಸ್ತಿತ್ವವಾದಿ ದೃಷ್ಟಿ ಕೋನದಿಂದ ವಿಜ್ಞಾನ ಮತ್ತು ಅದರ ಸಾಮಾಜಿಕ ಯೋಜನೆಗಳನ್ನು ಇತರೆ ಲೇಖನಗಳು ಪರಿಶೀಲಿಸಿವೆ. ವಿಶ್ವನಾಥನ್ ಒಂದರಿಂದ ಇನ್ನೊಂದಕ್ಕೆ ಯಾವುದೇ ಗೊಂದಲವಿಲ್ಲದೆ ಚಲಿಸುತ್ತಾರೆ. ಉದಾಹರಣೆಗೆ ಅವರ 'On the annals of the Laboratory State' ಎಂಬ ಗಾಢವಾದ, ಚೆಂದದವಾದವುಳ್ಳ ವಿಶ್ವಾತ್ಮಕತೆಯನ್ನು ಟೀಕಿಸುವ ಪ್ರಬಂಧದಲ್ಲಿ ಚಿಪ್ಕೊ ಮತ್ತು ರೈತ ಚಳುವಳಿಗಳನ್ನು ವಿನಾಶಕಾರಿ ಅಭಿವೃದ್ಧಿ ಮಾದರಿಗಳ ಮುಖಾಮುಖಿ ನಿಲ್ಲಿಸಿ ಬರೆಯುತ್ತಾರೆ. ಈ ಚಳುವಳಿಗಳು ವಿಜ್ಞಾನ ಸಾಮ್ರಾಜ್ಯದ ವಿರುದ್ಧ ಎತ್ತಿದ ಧ್ವನಿಗಳು. ವಿಚಾರವಾದಿ ವಿಜ್ಞಾನವು ಹತ್ತಿಕ್ಕುವಂತದ್ದು. ಮೂಲವಾಸಿಗಳ ಸಂಸ್ಕೃತಿಗಳು ಮತ್ತು ರೈತರು ಆಧುನಿಕ ವಿಜ್ಞಾನಿಗಳಿಗಿಂತ ಹೆಚ್ಚು ಪಾರಿಸರಿಕ ಜ್ಞಾನ ಉಳ್ಳವರು. ಸಮಭಾಜಕ ವೃತ್ತದ ಕಾಡುಗಳನ್ನು ಬೆಳೆಯಲು ಕೃಷಿ ಪದ್ಧತಿಯನ್ನು ಈಗ ವಿಜ್ಞಾನಿಗಳು ಒಪ್ಪುತ್ತಿದ್ದಾರೆ. ನಮ್ಮ ಮೇಲೆ ಹೇರಲ್ಪಟ್ಟ ಹಸಿರು ಕ್ರಾಂತಿಯ ಸಂಕುಚನವು ಸಾಂಪ್ರದಾಯಿಕ, ಪರಿಸರಸ್ನೇಹಿ ಪದ್ಧತಿಗಳಿಗೆ ಸಮನಾಗದು. ಪಾವಿತ್ರ್ಯವೆನ್ನುವುದು ಹಿಂದಿರುಗಲಿ ಎಂದು ಒತ್ತಾಯಿಸುವ, ಸ್ಥಳೀಯ ಜ್ಞಾನಪದ್ಧತಿಗಳ ಮೇಲಿನ ಈ ಪಿತೂರಿಯಲ್ಲಿ, ಪ್ರಯೋಗಶಾಲೆಗಳ ರಾಜ್ಯದ ವಿರುದ್ಧ ಎದ್ದ ಸವಾಲಿನ ಬೀಜವಿದೆ.

ವಿಶ್ವನಾಥನ್ ಆಧುನಿಕ ವಿಜ್ಞಾನವನ್ನು ಏಕಶಿಲಾಘಟಕವೆಂದು ಹಾಗೂ ಸರ್ವತ್ರ ಏಕತೆಯ ಮೂಲಭೂತ ಸಮಸ್ಯೆ ಎಂದೂ ಗಣಿಸುತ್ತಾರೆ. ಆದರೆ ಅವರಿಗೆ ಪರ್ಯಾಯದಾರಿಗಳ ಶೋಧನೆಯಲ್ಲಿ ಆಸಕ್ತಿ ಇದೆ. ತ್ರಿವಿಜ್ಞಾನ ಸಿದ್ಧಾಂತದ ಮರುಳುವಿಕೆಗೆ ಕಾರಣವಾದ ವಿಜ್ಞಾನದ ವರ್ಗೀಕರಣ ಕುರಿತ 1950ರ ಸೋವಿಯತ್ ಚರ್ಚೆಗೆ ಹೋಲಿಸಿದರೆ ಅವರ ವಾದ ವಿಭಿನ್ನವಾದದ್ದು. ನಂತರ ವಿಜ್ಞಾನ ಕುರಿತು ಆಲ್ತೂಸೆರಿಯನ್ನನ ವಿಮರ್ಶೆಯ, ಉದಾಹರಣೆಗೆ, ಡೊಮಿನಿಕ್ ಲಿಯೋಕೋರ್ಟ್‌ನವಾದ ಕೂಡಾ ಅದನ್ನು ಅಂಗೀಕರಿಸಿದೆ. ಸ್ವಾಭಾವಿಕ ವಿಜ್ಞಾನವೆನ್ನುವುದು ಬಂಡವಾಳಶಾಹಿಗಳು ಮತ್ತು ಕಮ್ಯುನಿಷ್ಟರು ಇಬ್ಬರಿಗೂ ಒಂದೇ ಎನ್ನುವುದು ಒಪ್ಪಿತ ಹೇಳಿಕೆ. ಶಿವ್ ಅವರ ಸಾಮರ್ಥ್ಯವಿರುವುದು ಬಂಡವಾಳ ಶಾಹಿ ಹಾಗೂ ಕಮ್ಯುನಿಸ್ಟ್ ವಿಜ್ಞಾನಗಳನ್ನು ಕೂಡಿಸಬಲ್ಲ ಸಾಮಾನ್ಯ ಅಂಶವಿದೆ ಎನ್ನುವ ಅವರ ನಿರ್ಧಾರದಲ್ಲಿ. ಅವರ 'Footnotes to Varilov' - an essay on gene diversity ಎಂಬ ಮನೋಹರ ಲೇಖನವು ಸೋವಿಯತ್ ಆಳ್ವಿಕೆಯಲ್ಲಿ ಹತ್ತಿಕ್ಕಲ್ಪಟ್ಟ ಪರ್ಯಾಯ ಪದ್ಧತಿಗಳನ್ನು ಗುರುತಿಸಿ, ಅವುಗಳಿಗೆ ಸಲ್ಲಬೇಕಿದ್ದ ಗೌರವವನ್ನು ಕೊಡುತ್ತದೆ.

ಕಾಣಿಸುವಂತಿಲ್ಲದಿದ್ದರೂ, ವಿಶ್ವನಾಥನ್ ಒಮ್ಮೊಮ್ಮೆ ಆಧುನಿಕ ವಿಜ್ಞಾನ ತಂತ್ರಜ್ಞಾನಗಳ ಸಾಧನೆಯನ್ನು ಅಲ್ಪ ವಿಷಯವೆಂದು ತಳ್ಳಿ ಹಾಕುವ ಲುಡ್ಡೈಟರ (Luddites) ಚಾಳಿಗೆ ಬೀಳುತ್ತಾರೆ. ಅದೃಷ್ಟವಶಾತ್, ಅವರು ತಮ್ಮ ದೃಷ್ಟಿಯನ್ನು ರಾಜ್ಯಗಳ ತತ್ವಗಳನ್ನು ಕಾನೂನುಬದ್ಧಗೊಳಿಸುವಲ್ಲಿ ವಿಜ್ಞಾನ ತಂತ್ರಜ್ಞಾನಗಳ ಪಾತ್ರದ ಕಡೆ ಹರಿಸುತ್ತಾರೆಯೇ ಹೊರತು, ತಾತ್ವಿಕವಾಗಿ ದುರ್ಬಲವಾದ, ಸವಾಲನ್ನು ಎದುರಿಸಲಾಗದ ಲುಡ್ಡೈಟರ್ ವಾದದ ಕಡೆಗೆ ಗಮನ ಹರಿಸುವುದಿಲ್ಲ. ವೈಪರೀತ್ಯವೆಂದರೆ, ಶಿವ್ ಲುಡ್ಡೈಟರಂತೆ ಕಂಡು ಬಂದರೂ, ಪರ್ಯಾಯ ವಿಜ್ಞಾನದ ಮನುಷ್ಯನಂತೆ ವಾದಿಸುತ್ತಾರೆ. ಇವೆರಡರ ವ್ಯತ್ಯಾಸ ತುಂಬಾ ಸ್ಪಷ್ಟವಾದದ್ದಾಗಿದೆ.


ದಕ್ಷಿಣ ಏಷಿಯಾದ ಎಲ್ಲ ಸಮುದಾಯಗಳೂ ಇಂದು ಲುಡ್ಡೈಟರ ಯೋಜನೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲಾರವು. ಅಂತಹ ತೊಡಗಿಸಿಕೊಳ್ಳುವಿಕೆಯು ಅದ್ಭುತವಾಗಿರುತ್ತಾದರೂ ಸಹ. ವಿಜ್ಞಾನ ತಂತ್ರಜ್ಞಾನ ಕ್ಷೇತ್ರದಲ್ಲಿ ಪರ್ಯಾಯಗಳನ್ನು ಜನರ ತೊಡಗಿಸುಕೊಳ್ಳುವಿಕೆಯೊಡನೆ ಹೊಮ್ಮಿಸಬೇಕಾದ್ದು ಜವಾಬ್ದಾರಿಯುತ ರಾಜಕೀಯದ ಕರ್ತವ್ಯ. ಇಂತಹ ಕಟ್ಟುವ ಯೋಜನೆಗಳ ಬಗ್ಗೆ ವಿಶ್ವನಾಥನ್ ಅವರ ಪುಸ್ತಕದಲ್ಲಿ ಅನೇಕ ಒಳನೋಟಗಳಿವೆ. ವಿಜ್ಞಾನ-ತಂತ್ರಜ್ಞಾನ ಅಭಿವೃದ್ಧಿ ಈ ತ್ರಿಕೂಟದ ನಿಜ ಮುಖವನ್ನು ತೋರಿಸುವುದು ಹಾಗು ದಕ್ಷಿಣ ಏಷಿಯಾದ ಜನರ ಮೇಲೆ ಅವುಗಳ ಪರಿಣಾಮವನ್ನು ಬೆಳಕಿಗೆ ತರುವುದು ಇಡೀ ಪುಸ್ತಕದ ಕೇಂದ್ರ ಆಶಯವಾಗಿದೆ. ವಿಶ್ವನಾಥನ್ ಪ್ರಕಾರ ಅಭಿವೃದ್ಧಿ ಎಂಬುದು ಆಧುನಿಕ ವಿಜ್ಞಾನ-ತಂತ್ರಜ್ಞಾನಗಳ ಹೊರ ವಿಸ್ತರಣೆ, ವಿಜ್ಞಾನವನ್ನು ಕ್ರಮಬದ್ಧವಾಗಿ ವಿಮರ್ಶಿಸುತ್ತಲೇ, ಅದರೊಟ್ಟಿಗೆ ವಸಾಹತುಶಾಹಿ ನಂತರದ ಸಮಾಜದಲ್ಲಿ ಸೃಷ್ಟಿಯಾದ ಅವರು ಪರೀಕ್ಷಿಸುತ್ತಾರೆ. ಅಂತಹ ಸಂದರ್ಭಗಳಲ್ಲಿ ಅವರ ಬರಹ ಸರಿಸುಮಾರು ಲುಡ್ಡೈಟರ ದಾರಿಯಲ್ಲೇ ಸಾಗುತ್ತದೆ. ಚರಿತ್ರೆ ಸೃಷ್ಟಿಸಿದ ಆಧುನಿಕ ಯುಗಾರಂಭದ ಹೊಸ ಜೀವರೀತಿ - ಪ್ರಗತಿ, ವಿಡ್‌ಗೆನ್‌ಸ್ಟೈನ್ ಹೇಳಿದಂತೆ ಪ್ರಗತಿ ಎನ್ನುವುದು ಬರಿಯ ಗುರಿಯಾಗಿ ಉಳಿದಿಲ್ಲ. ಬದಲಿಗೆ ಗುರಿ ಮತ್ತು ದಾರಿಯ ಸಂಯೋಜನೆ ಆಗಿಬಿಟ್ಟಿದೆ.

ಅಧಿಕಾರ, ಸಂಪ್ರದಾಯ ಮತ್ತು ಸಮಾಜದ ಜೊತೆ ವಿಜ್ಞಾನವನ್ನು ಸೇರಿಸಿ, ವಿಶ್ವನಾಥನ್ ತಮ್ಮದೇ ಸ್ವಪಕ್ಷವನ್ನು ಕಟ್ಟಿಕೊಳ್ಳುತ್ತಾರೆ. ಮೂಲವಾಸಿಗಳು, ರೈತರು, ಕಾರ್ಮಿಕ ಸಮುದಾಯವೇ ಮೊದಲಾದ ಬದಿಗೊತ್ತಲ್ಪಟ್ಟವರ ಅನುಭವದಿಂದ ಸೃಷ್ಟಿಯಾದ ಪಕ್ಷ ಅದು. ಇದು ಒಂದು ಮುಖ್ಯ ಅಂಶವನ್ನು ಅವಗಣಿಸುತ್ತದೆ. ಈ ಸಂತ್ರಸ್ತರಲ್ಲಿ ಪ್ರಭಾವಶಾಲಿಗಳು ಹಾಗು ಕ್ರಿಯಾಶಾಲಿಗಳಾದವರು ಅಭಿವೃದ್ಧಿ ಕ್ರಿಯಾ ಸರಣಿಯು ಸೃಷ್ಟಿಸಿದ ಚಲಿಸುವ ಅವಕಾಶಗಳಲ್ಲಿ ಬಂದು ಸೇರಿಕೊಳ್ಳುವ ಹಂಬಲ ವ್ಯಕ್ತ ಪಡಿಸಬಹುದು ಎಂಬುದನ್ನು. ಇದನ್ನು ನಾನು ಆಧುನಿಕತೆಯ ಸ್ವಾತಂತ್ರವು ನೀಡುವ ದೃಷ್ಟಿಕೋನದ ಒಳಗೊಳ್ಳುವಿಕೆಯ ಸಮಸ್ಯೆ ಎನ್ನುತ್ತೇನೆ. ಮೂಲವಾಸಿಗಳಲ್ಲಿ ಕೂಡಾ ನವಜನಾಂಗಗಳು ಮುಖ್ಯವಾಹಿನಿಯಲ್ಲಿ ಬೆರೆಯಲು ಇಚ್ಚಿಸುತ್ತವೆ. ದಲಿತರು, ಒಂದು ಆಂದೋಲನವಾಗಿ, ವಿಜ್ಞಾನ-ತಂತ್ರಜ್ಞಾನದ ಕುರಿತು ಒಪ್ಪಿತ ದೃಷ್ಟಿ ಹೊಂದಿದ್ದಾರೆ.

ವಿಶ್ವನಾಥನ್ ತಮ್ಮ ಪಕ್ಷವನ್ನು ಮೂಲಭೂತವಾಗಿ ಒಂದು ನಾಗರೀಕತೆ ಎನ್ನುವಂತೆ ಕಟ್ಟುವುದರಿಂದ, ಆಧುನಿಕ ಅಭಿವೃದ್ಧಿ ಕ್ರಿಯಾಸರಣಿಗೆ ದಲಿತರ ಪ್ರತಿಕ್ರಿಯೆಯನ್ನು ಅರ್ಥೈಸುವಲ್ಲಿ ಅದು ಅಸಮರ್ಥವಾಗುತ್ತದೆ. ದಾಮೋದರ್ ಕಣಿವೆ ಯೋಜನೆಗೆ ಅಂಬೇಡ್ಕರ್ ನೀಡಿದ ಬೆಂಬಲ ಇದಕ್ಕೊಂದು ಉದಾಹರಣೆ. ಇದನ್ನು ಒಂದು ತಪ್ಪಾದ ಎಚ್ಚರವೆಂದೋ ಇಲ್ಲವೇ ಆಧುನಿಕತೆಯು ನೀಡುವ ನಿಯಮಿತವಾದ ಬಂಧನ ವಿಮುಕ್ತಿಯ ಒಪ್ಪಿಗೆಯೆಂದೋ ತಳ್ಳಿಹಾಕುವುದರಲ್ಲಿ ಅರ್ಥವಿಲ್ಲ. ವಿಶ್ವನಾಥನ್ ಇದನ್ನು ಮಾಡಿದ್ದಾರೆ ಎಂದು ನಾನು ಸೂಚಿಸುತ್ತಿಲ್ಲ. ಆದರೆ ಅವರ ಬರಹದಲ್ಲಿ ನಾಪತ್ತೆಯಾಗಿರುವ ಸಮಸ್ಯೆಯೊಂದರ ಬಗ್ಗೆ ಹೇಳುತ್ತಿದ್ದೇನೆ. ಆಧುನಿಕತೆಯ ಪಾತ್ರ ಕುರಿತು ದಲಿತ ಚಳುವಳಿಯ ರಾಜಕೀಯ ನಡವಳಿಕೆಯಲ್ಲಿ ಒಂದು ಆಶಾವಾದವನ್ನು ಕಾಣಬಹುದು, ಅದು ಹೆಚ್ಚು ಹೆಚ್ಚು ಸವಾಲನ್ನು ತನ್ನ ಆಂತರ್ಯದಲ್ಲೇ ಎದುರಿಸುತ್ತಿದ್ದರೂ ಸಹ.

ಚರಿತ್ರೆಯ ವಿವಿಧ ಘಟ್ಟಗಳಲ್ಲಿ ಹಿಂಸೆಯು ತಾಳಿದ ರೂಪಗಳು ಇಲ್ಲಿ ಮುಖ್ಯ ಪಾತ್ರ ವಹಿಸುತ್ತವೆ. ಇತ್ತೀಚೆಗೆ ಪಶ್ಚಿಮ ಘಟ್ಟ ಪ್ರದೇಶದಲ್ಲಿ ಭಾರೀ ಯೋಜನೆಗಳನ್ನು ಬೆಂಬಲಿಸುವುದರ ಕುರಿತು ಪರಿಸರ ಹಾಗೂ ದಲಿತ ಕಾರ್ಯಕರ್ತರ ನಡುವೆ ತಿಕ್ಕಾಟವನ್ನು ಕಂಡೆ. ಹಳೆಯ ಪುರೋಹಿತಶಾಹಿ ವ್ಯವಸ್ಥೆಯಲ್ಲಿ ಭೂಮಾಲೀಕ ಹಾಗೂ ಮೇಲ್ಜಾತಿಗಳ ಹಿಂಸಾಚಾರ ಕುರಿತು ದಲಿತರು ಚಿಂತಿತರಾಗಿದ್ದಾರೆ. ಪರಿಸರವಾದಿಗಳು ಇಡೀ ಪ್ರದೇಶದ ಮೇಲೆ ಅಭಿವೃದ್ಧಿ ಬೀರಬಹುದಾದ ಪರಿಣಾಮದ ಬಗ್ಗೆ ಚಿಂತಿತರಾಗಿದ್ದರು. ಇಂತಹ ತತ್ವಾಧಾರಿತ ಸಮಸ್ಯೆಗಳನ್ನು ವಿಶ್ವನಾಥನ್ ಚರ್ಚಿಸಿಲ್ಲ. ಅದು ಭಾರತದಲ್ಲಿ ಅತೀ ಮುಖ್ಯವಾಗಿದ್ದರೂ ಸಹ.

ಸಾಹಿತ್ಯದಲ್ಲಿ ವಿಶೇಷ ಆಸಕ್ತಿಯುಳ್ಳ ವಿದ್ಯಾರ್ಥಿಗಳಿಗೆ ವಾದಾತ್ಮಕ ಪ್ರಬಂಧ ಹಾಗೂ ಕತೆಗಳ ನಡುವಣ ಜೋಡು ಜೋಡಾದ ವಿರೋಧವನ್ನು ಕರಗಿಸುವ ವಿಶ್ವನಾಥನ್ ಅವರ ಪುಸ್ತಕವು ವಿಶೇಷವಾದದ್ದಾಗಿದೆ. 'A House of Bamboo' ಎನ್ನುವ ಸುಂದರ ಬರಹವು ಅನೇಕ ಕ್ಲಿಷ್ಟ ವೈಜ್ಞಾನಿಕ ಸತ್ಯಗಳನ್ನು ಒಳಗೊಂಡ ಕಥೆ. ವಿಶ್ವನಾಥನ್ ತಮ್ಮ ಸಾಮರ್ಥ್ಯದಿಂದ ಕಾವ್ಯದ ಗುಣವೇ ಇಲ್ಲದ ವಸ್ತುವನ್ನು ದೃಷ್ಟಾಂತವಾಗಿಸಬಲ್ಲರು. ಇದು ಬರಹಗಾರನಿಗೆ ಸಣ್ಣ ಸಾಧನೆಯೇನಲ್ಲ. ಈ ಪುಸ್ತಕದ ತಾತ್ವಿಕ ನಿಲುವು ರಚಿಸಿದ ವಿಜ್ಞಾನ - ತಂತ್ರಜ್ಞಾನ ಮಂದಿರದ ಉನ್ನತ ಪೂಜಾರಿಗಳಿಗೂ ನಾನು ಈ ಪುಸ್ತಕವನ್ನು ಶಿಫಾರಸ್ಸು ಮಾಡುತ್ತೇನೆ. ಪುಸ್ತಕದ ಕಥನಕಲೆಯ ಉಜ್ವಲತೆಯಲ್ಲಿ ಅವರು ತಮಗೆ ಪ್ರಿಯವಾದ ತಪ್ಪು ನಂಬಿಕೆಗಳನ್ನು ಮರುಪರಿಶೀಲಿಸುವ ಸಾಧ್ಯತೆ ಇದೆ. ವಿಜ್ಞಾನದ ಗುರಿ ಸತ್ಯಶೋಧನೆಯಾದಲ್ಲಿ, ಅದರ ಅತ್ಯಂತ ದೊಡ್ಡ ವೈರಿ ತಪ್ಪು ಕಲ್ಪನೆಗಳೇ ಆಗಿವೆ. ■



ಓದುಗನ ಮನೋಧರ್ಮ ಮತ್ತು ಸಾಹಿತ್ಯ ಕೃತಿ

'ಗತಿ, ಸ್ಥಿತಿ' ಕಾದಂಬರಿ ಬರೆದ ಗಿರಿ ಅವರೊಂದಿಗೆ ಬೆಂಗಳೂರಿನಲ್ಲಿ 'ಸಂವಾದ' ಕಾರ್ಯಕ್ರಮ ನಡೆಯಿತು. ಅಲ್ಲಿ ವ್ಯಕ್ತವಾದ ಅಭಿಪ್ರಾಯಗಳ ಪರಿಚಯ ಓದುಗರಿಗಾಗಿ ಇಲ್ಲಿ ಮಾಡಿಕೊಡಲಾಗಿದೆ.

■ ಲಿಂಗರಾಜು

ಸಾಹಿತ್ಯ ಅಕಾಡೆಮಿ ಇತ್ತೀಚೆಗೆ ಏರ್ಪಡಿಸಿದ್ದ 'ಗತಿ, ಸ್ಥಿತಿ' ಕಾದಂಬರಿಯ ಲೇಖಕ ಗಿರಿ ಅವರೊಂದಿಗೆ ನಡೆದ ಸಂವಾದ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದವರಲ್ಲಿ ನಾನೂ ಒಬ್ಬ. ಕಡಿಮೆ ಬರವಣಿಗೆಯಲ್ಲಿಯೇ ಪ್ರಸಿದ್ಧಿಯೊಂದಿಗೆ ಗಮನಾರ್ಹ ಸ್ಥಾನ ಪಡೆದಿರುವ ಕನ್ನಡ ಲೇಖಕರಲ್ಲಿ ಗಿರಿ ಒಬ್ಬರು ಎಂಬುದು ಅವರನ್ನು ನೋಡುವ ಕುತೂಹಲವನ್ನು ನನ್ನಲ್ಲಿರಿಸಿತ್ತು. 'ಗತಿ ಸ್ಥಿತಿ' ಪ್ರಕಟವಾಗಿದ್ದ ಎರಡು ದಶಕಗಳ ಹಿಂದೆ ಹೊಸ ಸಂವೇದನೆಯೊಂದನ್ನು ಯುವ ಪೀಳಿಗೆಯಲ್ಲಿ ಮೂಡಿಸಿದ್ದು, ಅದರ ಬಗ್ಗೆ ಮಾತಾಡುತ್ತಿದ್ದುದು ಈ ಕಾರ್ಯಕ್ರಮಕ್ಕೆ ಹೋಗುವಾಗ ನೆನಪುಗಳಿಂದು ಹರಿದಾಡುತ್ತಿದ್ದವು. ಸಂಜೆ 6.15ರ ಕಾರ್ಯಕ್ರಮಕ್ಕೆ ತುಸು ಮುಂಚಿತವಾಗಿಯೇ ಹೋದರೆ ಸೆನೆಟ್ ಹಾಲ್‌ಗೆ ಮೊದಲು ಬಂದಿದ್ದವರೇ ಗಿರಿಯಾಗಿದ್ದರು!

ಗಿರಿ ಅವರನ್ನು ಎಂದೂ ನೋಡಿರದಿದ್ದರೂ ಅವರೇ ಗಿರಿ ಇರಬೇಕು ಅನ್ನಿಸಿತ್ತು. ಇವರನ್ನು ನೋಡಿರದಿದ್ದ ಸಾಹಿತ್ಯ ಅಕಾಡೆಮಿಯ ಅಗ್ರಹಾರ ಕೃಷ್ಣಮೂರ್ತಿ ಅವರು ಅಂದಿನ ಕಾರ್ಯಕ್ರಮದ ಅತಿಥಿ ಇನ್ನೂ ಬಂದಿಲ್ಲ ಎಂದೇ ಕುಳಿತಿದ್ದರು. ಆದರೆ ಗಿರಿಯೇ ಮುಂದೆ ಕುಳಿತಿರುವವರು ಎಂಬುದು ತಿಳಿದೊಡನೆ ಆಶ್ಚರ್ಯಗೊಂಡು ಅವರನ್ನು ಮಾತಾಡಿಸುತ್ತ ಸಮೀಪದಲ್ಲಿದ್ದ ನನ್ನಂಥ ಒಬ್ಬಿಬ್ಬರನ್ನು ಗಿರಿ ಅವರಿಗೆ ಔಪಚಾರಿಕವಾಗಿ ಪರಿಚಯಿಸಿದರು. ಇಂಥ ಸಂವಾದ ಕಾರ್ಯಕ್ರಮಗಳು ಈಚಿನ ವರ್ಷಗಳಲ್ಲಿ ಬೆರಳೆಣಿಕೆಯ ಕೆಲವೇ ಜನರ ನಡುವೆ ನಡೆಯುವುದು ಸಾಮಾನ್ಯವಾಗಿದೆ ಎಂಬಂತೆಯೇ ಅಂದಿನ ಕಾರ್ಯಕ್ರಮವೂ ಮೊದಲಿಗೆ ಕಾಣಿಸಿಕೊಂಡದ್ದು, ಕೊನೆಗೆ ಕುರ್ಚಿಗಳು ತುಂಬುವಷ್ಟು ಸಾಹಿತ್ಯಾಸಕ್ತ ಜನರನ್ನು ಕಾಣಿಸಿತ್ತು!

ಈ ಸಂವಾದ ಕಾರ್ಯಕ್ರಮಗಳು ಪ್ರಶ್ನೋತ್ತರ ರೂಪದಲ್ಲಿ ನಡೆಯುವುದು ತೀರಾ ಅಪರೂಪ. ಮುಲ್ಕ್‌ರಾಜ್ ಆನಂದ್‌ರ ಕಾರ್ಯಕ್ರಮ ಸಭಾಂಗಣವೇ ಕಿಕ್ಕಿರಿದು ತುಂಬುವಷ್ಟು ಜನರಿಂದ ನಡೆದಿದ್ದಂತೆಯೇ ಎಂಟತ್ತು ಮಂದಿಯ ಪರಿಮಿತರ ನಡುವೆ ನಡೆದ ಇತರೆ ಕಾರ್ಯಕ್ರಮಗಳನ್ನೂ ಈ ಹಿಂದೆ ಕಂಡಿದ್ದೇನೆ. ಗಿರಿ ಅವರ ಈ ಕಾರ್ಯಕ್ರಮ ಈ ಹಿಂದಿನ ಇಂಥ ಎಲ್ಲ ಕಾರ್ಯಕ್ರಮಗಳಿಗಿಂತ ಭಿನ್ನವಾಗಿತ್ತು. ಸ್ವತಃ ಮನೋವಿಜ್ಞಾನಿಯಾದ ಗಿರಿ ಆರಂಭದಲ್ಲಿ ತಮ್ಮ ಕೆಲವು ವಿಚಾರಗಳನ್ನು ಮಂಡಿಸಿ ನಂತರ ನೆರೆದಿದ್ದವರೆಲ್ಲ ಮಾತುಕತೆಯಲ್ಲಿ ತೊಡಗಿಕೊಳ್ಳುವಂತೆ ಮಾಡಿದ್ದೂ ಹೊಸತನದ್ದಾಗಿತ್ತು. ಈ ಜಾಣ್ಮೆಯ ಹಿಂದೆ ಅವರು ಸದ್ಯದ ಕನ್ನಡ ಸಾಹಿತ್ತಿಕ ವಾತಾವರಣ ಹಾಗೂ ವಿಚಾರಗಳನ್ನು ಅರಿಯುವ ಕೌಶಲವೂ ಇತ್ತು.

ಅವರು ಅಂದು ಮುಖ್ಯವಾಗಿ ಹೇಳಿದ್ದು 'ಒಂದು ಸಾಹಿತ್ಯ ಕೃತಿ ಒಬ್ಬೊಬ್ಬ ಓದುಗನಲ್ಲೂ ವಿಭಿನ್ನ ರೀತಿಯ ಅರ್ಥಗಳನ್ನು ಅಂದರೆ ಸತ್ಯವನ್ನು ಆಯಾ ಓದುಗನ ಮನೋಧರ್ಮ ಹಾಗೂ ಅರಿವಿನ ನೆಲೆಯಲ್ಲಿ ಮೂಡಿಸುತ್ತದೆ. ಆದರೆ ಒಂದು ವೈಜ್ಞಾನಿಕ ಲೇಖನ ಅಥವ ಬರಹ ಪ್ರತಿಯೊಬ್ಬ ಓದುಗನಲ್ಲಿ ಒಂದೇ ಸತ್ಯವನ್ನು ಮನಗಾಣಿಸುವ ಗುರಿ ಇರಿಸಿಕೊಂಡಿರುತ್ತದೆ. ಹಾಗಿಲ್ಲದೆ ಹೋದಾಗ ಅದು ವಿಜ್ಞಾನ ಬರಹವಾಗುವುದಿಲ್ಲ. ಒಬ್ಬ ವಿಜ್ಞಾನಿ ಮಾತ್ರ ಇಂಥ ಬರಹ ಇಲ್ಲವೇ ಲೇಖನಗಳನ್ನು ಬರೆಯಬಲ್ಲ. ಬರಿಯ ಓದಿನ ಅನುಭವದಲ್ಲಿ ವಿಜ್ಞಾನ ಲೇಖನಗಳನ್ನು ಬರೆಯುವುದು ಒಬ್ಬ ಪತ್ರಕರ್ತನ ಕಾರ್ಯದಂತೆ. ಅವಕ್ಕೆ ತಾತ್ವಿಕವಾದ ಗಟ್ಟಿತನ ಮೂಡಿಸುವ ನೆಲೆಗಳಿರುವುದಿಲ್ಲ. ಈ ಎರಡು ಬಗೆಯ ಬರವಣಿಗೆಗೂ ಬೇರೆ ಬೇರೆಯದೇ ಆದ ಆಯಾಮಗಳಿವೆ. ವಿಜ್ಞಾನಿ ತನ್ನ

ಪ್ರಯೋಗ ಹಾಗೂ ತನ್ನ ಕ್ಷೇತ್ರದ ಹಿಂದಿನವರ ಸಾಧನೆಯ ಮುಂದುವರಿಕೆಯಾಗಿ ತನ್ನ ಬರಹಗಳನ್ನು ಬರೆದರೆ ಲೇಖಕನೊಬ್ಬ ತನ್ನ ವೈಯಕ್ತಿಕ ನಿಲುವು, ಅನುಭವ ಮುಂತಾದ ಹಲವು ಅಂಶಗಳ ನೆಲೆಯಲ್ಲಿ ತನ್ನ ಸುಪ್ತ ಪ್ರತಿಭೆಯ ಮೂಲಕ ಅಭಿವ್ಯಕ್ತಿ ನೀಡುತ್ತಿರುತ್ತಾನೆ.'


ಹೀಗೆ ಬರವಣಿಗೆಯ ಪ್ರಕ್ರಿಯೆಯನ್ನ ಶೋಧಿಸುವ ವಿಚಾರಗಳನ್ನು ತಮ್ಮ ಮಾತುಗಳಲ್ಲಿ ಹೇಳಿಕೊಂಡ ಗಿರಿ ಅವರು ತಾವು ದೀರ್ಘ ಭಾಷಣಕ್ಕಿಳಿಯದೆ ಪ್ರಶ್ನೋತ್ತರಕ್ಕೆ ನಿಂತರು.

ಅವರು ಈ ಮಾತುಗಳನ್ನು ಹೇಳುವಾಗ ನನ್ನಲ್ಲಿ ಐನ್‌ಸ್ಟಿನ್‌ನ ಲೇಖನಗಳಿಗೂ, ಶಿವರಾಮ ಕಾರಂತರ ವಿಜ್ಞಾನ ಬರಹಗಳಿಗೂ ಇರುವ ವ್ಯತ್ಯಾಸಗಳೊಂದಿಗೆ ಹಲವು ಸಂಗತಿಗಳು ಮನದಲ್ಲಿ ಹಾದು ಹೋಗುತ್ತಿದ್ದವು. ಕಾರಂತರು ತಮ್ಮ ಕಾಲಕ್ಕೆ ಅಗತ್ಯವಾದ ವಿಜ್ಞಾನದ ವಿಚಾರಗಳನ್ನು ತಮ್ಮ ಓದಿನ ಹಿನ್ನೆಲೆಯಲ್ಲೇ ಕನ್ನಡ ಓದುಗರಿಗೆ ಪರಿಚಯಿಸಲು ಯತ್ನಿಸಿದ್ದಾರೆ. ಹೀಗಾಗಿ ಅವು ಆ ಕಾಲದ ತುರ್ತಿಗೆ ಮೂಡಿದ್ದು ಇವತ್ತಿಗೆ ಪ್ರಸ್ತುತವಾಗುತ್ತಿಲ್ಲ. ಅವರ ಕಾದಂಬರಿಗಳಿಗಿರುವ ಪ್ರಸ್ತುತತೆಯಲ್ಲಿ ಇಂಥ ಲೇಖಕರ ಸಾಹಿತ್ತಿಕ ಸಾಧನೆ ಎಂಥದೆಂಬುದು ಸ್ಪಷ್ಟವಾಗಿಯೇ ಕಾಣುತ್ತದೆ.

ಹೀಗೆ ನನ್ನಲ್ಲಿ ಇಂಥ ಸೂಕ್ಷ್ಮ ಸಂಗತಿಗಳು ಸ್ಪಷ್ಟಗೊಳ್ಳುತ್ತಿರುವ ಸಂದರ್ಭದಲ್ಲೇ ಒಬ್ಬ ಲೇಖನಿಗೆ ಯಾವ ವಿಷಯ ತುಂಬ ಮುಖ್ಯವಾಗಿರುತ್ತದೆ? ವಿಚಾರ ಪ್ರಣಾಲಿಗಳೇ? ಸಮಾಜ ನಿಷ್ಠೆಯೇ? ತನ್ನ ಅನುಭವವೇ?... ತನ್ನ ಸೃಜನ ಕೃತಿಗಳಿಗೆ ಅವನು ಯಾವುದನ್ನು ಹೆಚ್ಚಾಗಿ ಅವಲಂಬಿಸಬೇಕು ಎಂಬ ಪ್ರಶ್ನೆಯನ್ನು ಗಿರಿ ಎತ್ತಿದರು. ಆಗ ಸಾಮಾಜಿಕ ಬದ್ಧತೆ ಮುಖ್ಯ ಎಂಬುದು ಚರ್ಚೆಗೆ ಬಂತು. ಈ ಸಂದರ್ಭದಲ್ಲಿ ನಾನು ನನ್ನ ಅಭಿಪ್ರಾಯ ಹೇಳಿದೆ "ಎಲ್ಲವುಕ್ಕಿಂತಲೂ ಮುಖ್ಯವಾದದ್ದು ಸಂಸ್ಕೃತಿ ನಿಷ್ಠೆ. ಸಂಸ್ಕೃತಿ ಎಂದಾಗ ಅದರಲ್ಲಿ ಎಲ್ಲವೂ ಒಳಗೊಳ್ಳುತ್ತವೆ. ಮಾಸ್ತಿಯಂಥ ಕತೆಗಾರರಲ್ಲಿ ಸಂಸ್ಕೃತಿನಿಷ್ಠತೆ ಸ್ಪಷ್ಟವಾಗಿಯೇ ಕಾಣುತ್ತದೆ. ಇದನ್ನು ಯಿದ್ದಿಷ್ ಲೇಖಕ ಐಸಾಕ್ ಬಾಷೆವಿಸ್ ಸಿಂಗರ್ ಮೊದಲುಗೊಂಡು ಟಾಲ್‌ಸ್ಟಾಯ್‌ನಂಥ ಹಲವು ಲೇಖಕರಲ್ಲಿ ಕಾಣಬಹುದು" ಎಂದು ಹೇಳಿದೆ. ಸಂಸ್ಕೃತಿನಿಷ್ಠತೆ ಇಲ್ಲದ ಸಾಹಿತ್ಯಕ್ಕೆ ಉದಾಹರಣೆಯಾಗಿ ತೇಜಸ್ವಿ ಅವರ 'ಜುಗಾರಿ ಕ್ರಾಸ್' ಕಾದಂಬರಿ ನೋಡಬಹುದು ಎಂದೆ. ಈ ಮಾತನ್ನು ಹೇಳುವಲ್ಲಿ ಸಂಸ್ಕೃತಿ ಎಂದರೆ ನಮ್ಮ ಸುತ್ತಲ ಬದುಕಿನ ಎಲ್ಲ ವಿಚಾರ-ವಿಷಯಗಳ ನೆಲೆಯೂ ಒಂದು ಸಾಹಿತ್ಯ ಕೃತಿಯಲ್ಲಿ ಬಿಂಬಿತ ವಾಗಬೇಕಿರುತ್ತದೆ; ಕುವೆಂಪು, ಚಿನುವ ಅಚಿಬೆ ಕಾದಂಬರಿಗಳಂಥವು ಈ ಮಾತನ್ನು ಹೇಳುವಾಗ ನನ್ನ ಕಣ್ಣೆದುರಿಗಿದ್ದವು. ಇಂಥ ಸಾಂಸ್ಕೃತಿಕ ನೆಲೆಯುಳ್ಳ ಕಾದಂಬರಿಗಳ ಮುಂದೆ 'ಜುಗಾರಿ ಕ್ರಾಸ್' ಇರಿಸಿಕೊಂಡಿರುವ ಪರಿಮಿತಿಯ ಬಗೆಗಿನ ನನ್ನ ಮಾತು ಪೂರ್ಣವಾಗುವುದಕ್ಕೂ ಮೊದಲೇ 'ನಿಮ್ಮ ರೀಡಿಂಗ್ ಸರಿಯಿಲ್ಲ' ಎಂಬ ಮಾತನ್ನು ಕಿ.ರಂ. ನಾಗರಾಜ ಅವರು ಹೇಳಿದರು. ಈ ಮಾತನ್ನು ಕೇಳಿದೊಡನೆ ನನಗೆ ಆಶ್ಚರ್ಯ ದೊಂದಿಗೆ ಬೇಸರವೂ ಆಯಿತು. ಒಂದು ಕೃತಿಗೆ 'ರೀಡಿಂಗ್ ಸರಿಯಿಲ್ಲ' ಎನ್ನುವ ಮಾತು ಇತ್ತೀಚಿನ ಒಂದೆರಡು ವರ್ಷಗಳಿಂದ ಕೇಳಿ ಬರುತ್ತಿರುವ ಮಾತು. ಈ ಮಾತು ಗಿರಿ ಅವರು ತುಸು ಹೊತ್ತಿಗೆ ಮೊದಲಷ್ಟೇ ಹೇಳಿದ್ದ ಸಾಹಿತ್ಯ ಕೃತಿಯೊಂದನ್ನು ಹಲವು ನೆಲೆಗಳಿಂದ ನೋಡಬಹುದು ಎಂಬುದಕ್ಕೂ ವ್ಯತಿರಿಕ್ತವಾಗಿತ್ತು. ಒಂದು ಪ್ರಾದೇಶಿಕ ವಿವರವೂ ಕಾಲ್ಪನಿಕ ನೆಲೆಯಲ್ಲಿ ನಿಲ್ಲುವ 'ಜುಗಾರಿ ಕ್ರಾಸ್'ನ ಪಾತ್ರಗಳ ಹೆಸರನ್ನು ಬದಲಿಸಿದರೆ ಅದು ಜಗತ್ತಿನ ಯಾವುದೇ ಭಾಗಕ್ಕೆ ಇರಿಸಿ ನೋಡುವಂಥ ಚೌಕಟ್ಟಿನಲ್ಲಿರುವುದು ಹಾಗೂ ಒಂದು ಪ್ರಾದೇಶಿಕ ಬದುಕಿನ ಒಳವಿವರಗಳನ್ನೆಲ್ಲ ತನ್ನ ಮೈನಲ್ಲಿ ಬಿಟ್ಟಿರುವ ಹಲವು ಅಂಶಗಳು ನಾನು ಹೇಳಬೇಕಿದ್ದ ಸಂಸ್ಕೃತಿನಿಷ್ಠೆ ಕುರಿತ ಮಾತಿನ ಹಿನ್ನೆಲೆಗಿದ್ದವು. ಇಂಥ ಸೂಕ್ಷ್ಮ ಸಂಗತಿಗಳು ಚರ್ಚೆಯ ಮೂಲಕವಾಗಿ ಪರಸ್ಪರ ಅರಿಯುವಂಥವು. ಕುವೆಂಪು, ಕಾರಂತ, ದಾಸ್ತೊಯೆವ್‌ಸ್ಕಿ ಟಾಲ್‌ಸ್ಟಾಯ್, ಥಾಮಸ್ ಹಾರ್ಡಿ ಅಚಿಬೆ ಮೊದಲುಗೊಂಡು ಜಗತ್ತಿನ ಉತ್ತಮ ಕಾದಂಬರಿ ಆಯಾ ಪ್ರಾದೇಶಿಕ ನೆಲೆಯಲ್ಲಿ ಘಟಿಸುವಂಥವು. ಈ ಪ್ರಾದೇಶಿಕ ಒಳವಿವರಗಳೊಂದಿಗೆ ಅಲ್ಲಿನ ಸಾಂಸ್ಕೃತಿಕ ಸಂಗತಿಗಳೂ ಈ ಕೃತಿಗಳನ್ನು ಸತ್ವಯುತವಾಗಿಸಿವೆ. ಈ ನಿಟ್ಟಿನಲ್ಲಿ ನೋಡಿದಾಗ 'ಜುಗಾರಿಕ್ರಾಸ್'ನಂಥ ಕೃತಿಗಳು ಇರಿಸಿಕೊಂಡಿರುವ ಲೇಖಕರ ವೈಯಕ್ತಿಕ ನಿಲುವಿನಲ್ಲಿ ಸಾಹಿತ್ಯದ ಸೂಕ್ಷ್ಮ ವಿಷಯಗಳನ್ನು ಚರ್ಚೆಗೆ ಎತ್ತುವಂತೆ ಮಾಡುತ್ತವೆ. ಆದರೆ ನಮ್ಮ ಸದ್ಯದ ವಿಮರ್ಶಾ ವಲಯದಲ್ಲಿ ಕೆಲವು ಲೇಖಕರ ಬಗೆಗೆ ಅವರ ಕೃತಿಗಳ ಬಗೆಗೆ, ವಿಮರ್ಶೆಯನ್ನೇ ಒಡ್ಡದಂಥ ವಿಮರ್ಶಕ ಮನಸ್ಸುಗಳಿರುವಂತೆ, ಹೊಸದಾಗಿ ಸಾಹಿತ್ಯಕ್ಕೆ ಅಡಿಯಿಡುವರನ್ನು ಗೊಂದಲದಲ್ಲಿ ಮುಳುಗಿಸುವಂಥ ಹಾಗೂ ಪರಸ್ಪರರನ್ನು ಹೊಗಳಿಕೊಳ್ಳುವ ಇಲ್ಲವೆ ನಿಂದಿಸುವ ಗುಂಪುಗಳೂ ಇವೆ. ಇಂಥವುಗಳಿಂದ ದೂರವಿದ್ದು ತನಗೆ ಅನಿಸಿದ್ದನ್ನು ನೇರವಾಗಿ ಹೇಳುವಂಥವರು ಪೇಚಿನಲ್ಲಿ ಸಿಲುಕುವಂಥ ಪರಿಸ್ಥಿತಿಯಿದೆ ಕನ್ನಡದಲ್ಲಿ 'ಕರ್ವಾಲೊ' 'ಚಿದಂಬರ ರಹಸ್ಯ'ದಂಥ ಕೃತಿಗಳಲ್ಲಿ ತುಸುವಾದರೂ ಸಾಂಸ್ಕೃತಿಕತೆಯತ್ತ ಹರಿದಿದ್ದ ನೋಟ 'ಜುಗಾರಿ ಕ್ರಾಸ್'ನಲ್ಲಿ ಯಾಕ ಮರೆಯಾಗುತ್ತದೆ. ಲೇಖಕ ಇಂಥಲ್ಲಿ ಇರಿಸಿಕೊಂಡಿರುವ ನಿಲುವೇನು? ಎಂಬುದೂ ಸೂಕ್ಷವಾದ ವಿಷಯವೇ ಆಗಿದೆ. ಆದರೆ ಇಂಥ ಸಂಗತಿಗಳತ್ತ ನಿರುಕಿಸದೆ ಸಾರಾಸಗಟಾಗಿ ಒಂದು ಕೃತಿಯನ್ನು ಅಥವ ಒಬ್ಬ ಲೇಖಕನ ಸಾಹಿತ್ಯವನ್ನು ನೋಡುವ ದೃಷ್ಟಿಕೋನಕ್ಕೆ ಏನೆನ್ನಬೇಕು? ಗಿರಿ ಅವರೊಂದಿಗಿನ ಸಂವಾದದಲ್ಲಿ ಚರ್ಚೆಗೆ ಅರ್ಹವೆನಿಸಿದ ಕೆಲ ಅಂಶಗಳನ್ನಷ್ಟೆ ಇಲ್ಲಿ ಪ್ರಸ್ತಾಪಿಸಿದೆ. ■



'ಪರಮಸುಖ' ಅಂದ್ರೇನು, ಅಂತ ಕೇಳ್ತೀರಲ್ಲಾ.... ಹಾಯಾಗಿ ನಿದ್ರಿಸಿ, ಲಂಚಾ ಪಡ್ಕೊಂಡು ಜೀವಿಸೋ 'ಸರ್ಕಾರಿ ನೌಕರಿ' ಯನ್ನು ಪಡೆಯೋದು! ಅಂತ ಗೊತ್ತಿಲ್ವೇನ್ರೀ?



■ಕೋ. ಚೆನ್ನಬಸಪ್ಪ
ನಿವೃತ್ತ ನ್ಯಾಯಾಧೀಶರು
127, ಪಶ್ಚಿಮ ಕಾರ್ಡ್ ರಸ್ತೆ,
ಮಹಾಲಕ್ಷ್ಮೀಪುರ, ಬೆಂಗಳೂರು - 86

ತಿಂದವರು ತಿಂದೇ ತಿಂದರು - ಗಂಟಲು ಮಟ್ಟ!

ಪ್ರತಿಯೊಂದು ಕ್ಷೇತ್ರದಲ್ಲೂ ಪ್ರತಿಯೊಂದು ಹಂತದಲ್ಲೂ ಭ್ರಷ್ಟಾಚಾರ ತಾನೇ ತಾನಾಗಿ ಯಾವ ಮುಚ್ಚುಮರೆ, ಲಜ್ಜೆ ಹೆದರಿಕೆಯಿಲ್ಲದೆ ನಡೆಯುತ್ತಿರುತ್ತದೆ. ಭೀಕರ ಸಂಗತಿಯನ್ನು ಕುರಿತು ಮಾತಾಡುತ್ತಿರುವಾಗ ಭ್ರಷ್ಟಾಚಾರ ನಿರ್ಮೂಲನ ಸಮಿತಿಯ ಕಾರ್ಯದರ್ಶಿಗಳಾದ ಹೆಚ್.ಟಿ. ಸೋಮಶೇಖರ ರೆಡ್ಡಿಯವರು ಕಟ್ಟು ಕತೆಯಂತಿರುವ ಸತ್ಯ ಸಂಗತಿಯನ್ನು ಹೇಳಿದರು.

ತೋಟದಲ್ಲಿ ದಿನಗೂಲಿ ಮಾಡಿಕೊಂಡಿರುವ ಒಬ್ಬಾತ ಏಳು ಸಾವಿರ ರೂಪಾಯಿಗಳ ದೊಡ್ಡ ಮೊತ್ತವನ್ನು ತಂದುಕೊಟ್ಟು ಜೋಪಾನವಾಗಿಟ್ಟುಕೊಂಡಿರಲು ಹೇಳಿದ. ಆಶ್ಚರ್ಯವಾಗಿ 'ಎಲ್ಲಿಂದ ಬಂತು ಇಷ್ಟೊಂದು ದುಡ್ಡು?' ಎಂದು ಕೇಳಿದಾಗ, ಆ ದಿನಗೂಲಿ ಧಣಿಗೆ ಹೇಳಿದನಂತೆ 'ಮನೆ ಕಟ್ಟಿಸಿಕೊಂಡದ್ದಕ್ಕೆ ಸರ್ಕಾರ ಕೊಟ್ಟಿದ್ದು' ಎಂದ. 'ಜಾಗವೂ ಇಲ್ಲ; ಮನೆಯನ್ನೂ ಕಟ್ಟಿಲ್ಲ. ಹ್ಯಾಗೆ ಕೊಟ್ಟರು?' ಎಂದು ಪ್ರಶ್ನಿಸಿದಾಗ, 'ಮನೆ ಕಟ್ಟಿದಂತೆ ಕಾಗದ ಮಾಡಿ ಕೊಟ್ರು' ಎಂದು ಉತ್ತರಿಸಿದ. ನಿವೇಶನವೂ ಇಲ್ಲ; ಮನೆ ಕಟ್ಟಿಯೂ ಇಲ್ಲ! ಕಾಗದದಲ್ಲಿ ಕಟ್ಟಿದ ಮನೆಗೆ 15 ಸಾವಿರ ರೂಪಾಯಿಗಳು ಖಜಾನೆಯಿಂದ ಖರ್ಚಾಯಿತು!! ಎಂಟು ಸಾವಿರ ನೌಕರರ ಜೇಬಿಗೆ.

'ಇಂಥ ಒಂದೇ ಮನೆಯಲ್ಲ, ರಾಜ್ಯದಲ್ಲೆಲ್ಲ ಇಂಥ ಮನೆಗಳು ಊರಿಗೆ ಹತ್ತಿಪ್ಪತ್ತು ಮೂವತ್ತು ಇವೆ....! ನಮ್ಮ ರಾಜ್ಯದ ವಸತಿ ಖಾತೆ ಸಚಿವರು, ಐವತ್ತು ವರ್ಷಗಳಲ್ಲಿ ಕಟ್ಟಲಾಗದಿದ್ದ ಮನೆಗಳನ್ನು ಐದೇ ವರ್ಷಗಳಲ್ಲಿ ಕಟ್ಟಿಸಿದ್ದೇನೆ' ಎಂಬ ಮನೆಗಳು ಇಂಥವೆ!!.

* * *

ಅವರೆ ಇನ್ನೊಂದು ತಾಜಾ ಸತ್ಯ ಸಂಗತಿ ತಿಳಿಸಿದರು.

ಅವರ ತೋಟಕ್ಕೆ ಹತ್ತಿರದ ಒಂದು ಹಳ್ಳಿಯಲ್ಲಿ ಕಟ್ಟಿಸಲಾಗಿದೆ ಎಂದು ಹೇಳುವ ಶೌಚಾಲಯಗಳಿಗೆ ಸಂಬಂಧಿಸಿದ ಸಂಗತಿ.

ಈಗ ಪಂಚಾಯ್ತಿ ರಾಜ್ ಕಾಯಿದೆಗೆ, ಒಂದು ತಿದ್ದುಪಡಿ ಮಾಡಲಾಗಿದೆ. ಗ್ರಾಮ ಪಂಚಾಯ್ತಿ ಚುನಾವಣೆಗೆ ಸ್ಪರ್ಧಿಸುವ ಉಮೇದುವಾರನ ಮನೆಗೆ ಶೌಚಾಲಯ ಇಲ್ಲದಿದ್ದರೆ ಆತನ ನಾಮಪತ್ರ ತಿರಸ್ಕೃತವಾಗುತ್ತದೆ!! ಆದ್ದರಿಂದ ಮುಂದಿನ ಚುನಾವಣೆಗಳಲ್ಲಿ ಸ್ಪರ್ಧಿಸುವ ಅರ್ಹತೆ ಪಡೆದುಕೊಳ್ಳಲು ನೆರವಾಗುವಂತೆ ಗ್ರಾಮ ಪಂಚಾಯ್ತಿಯೇ ಶೌಚಾಲಯ ಕಟ್ಟಿಸಿಕೊಳ್ಳಲು ತಲಾ 2500 (ಎರಡು ಸಾವಿರದ ಐನೂರು) ರೂಪಾಯಿಗಳನ್ನು ಮುಫತ್ ಕೊಡಲು ಏರ್ಪಾಡುಮಾಡಲಾಗಿದೆ. ಆ ಹಣವನ್ನು ಗ್ರಾಮ ಪಂಚಾಯ್ತಿ ಅಧ್ಯಕ್ಷರೇ ನೇರವಾಗಿ ಪ್ರಜೆಗೆ ಕೊಡುತ್ತಾರೆ.

'ಈ ಯೋಜನೆ ಪ್ರಕಾರ ಆ ಹಳ್ಳಿಯ 125 ಜನರಿಗೆ ತಲಾ 2500 ರೂ.ಗಳ ಚೆಕ್ ಕೊಟ್ಟಿದ್ದಾರೆ.

'ಊರು ಸ್ವಚ್ಛವಾಗಿರಲು ಅನುಕೂಲವಾಯಿತು' ಎಂದೆ.

'ಊರು ಸ್ವಚ್ಛವಾಗಲಿಲ್ಲ, ಸರ್ಕಾರಿ ಖಜಾನೆ ಸ್ವಚ್ಛವಾಯಿತು ಅಷ್ಟೆ! ಒಂದೇ ಒಂದು ಶೌಚಾಲಯ ಕಟ್ಟಿಲ್ಲ!! ಆದರೂ 125 ಶೌಚಾಲಯಗಳಿಗೆ ಒಂದೇ ಊರಿಗೆ ರೂ. 3, 12, 500 ಕಕ್ಕಸಿನಲ್ಲಿ ಹರಿದು ಹೋಯಿತು. ಒಂದು ಜಿಲ್ಲೆಯಲ್ಲಿ ನೂರು ಗ್ರಾಮಗಳಿದ್ದರೆ ಒಟ್ಟು ಮೂರು ಕೋಟಿ ಹರಿದು ಹರಿದು ಹೋಯಿತು.

ಇದು ಪಂಚಾಯ್ತಿರಾಜ್ ಕಾಯಿದೆಯ ತಿದ್ದುಪಡಿಯ ಫಲ!

'ಇದು ತಿದ್ದುಪಡಿಯಲ್ಲ, ತಿಂದುಪಡಿ' ಎಂದೆ!!

ಮೊನ್ನೆ ಚಿತ್ರದುರ್ಗ ಜಿಲ್ಲೆಯ ಒಂದು ತಾಲೂಕು ಮುಖ್ಯ ಪಟ್ಟಣಕ್ಕೆ ಹೋಗಿದ್ದೆ. ಆ ನಗರಕ್ಕೆ ನನ್ನ ಏಳನೆ ವಯಸ್ಸಿನಿಂದಲೂ ಹೋಗುತ್ತಿದ್ದೇನೆ. ಎರಡೆತ್ತಿನ ಗಾಡಿಯಲ್ಲಿ, ಗ್ಯಾಸ್ ಬಸ್ಸಿನಲ್ಲಿ, ಕಾರಿನಲ್ಲಿ.... ಎಷ್ಟೋ ಸಾವಿರ ಸಾರಿ ಓಡಾಡಿದ್ದೇನೆ. ಮೊನ್ನೆ ಹೋದಾಗ ಆ ರಸ್ತೆಯ ದುರವಸ್ಥೆಯನ್ನು ಕುರಿತು ಅಲ್ಲಿದ್ದವರೊಡನೆ ಮಾತನಾಡುತ್ತಾ,

'ಮಹಾರಾಜರ ಕಾಲದಲ್ಲಿ ಈ ರಸ್ತೆ ಈಗಿರುವುದಕ್ಕಿಂತ ನೂರುಪಟ್ಟು ಚೆನ್ನಾಗಿತ್ತು. ಈಗ

ಸಿಕ್ಕಿದ್ದು ದೋಚುವ ಖದೀಮರು ಯಾವ ರಂಗದಲ್ಲಿಲ್ಲ ಹೇಳಿ! ಕಟ್ಟಡದಿಂದ ಕಕ್ಕಸಿನವರಿಗೂ ಯಾವ ಕಾಮಗಾರಿ ನಡೆದರೂ ಅದು ಬರಿಯ ಕಡತಗಳಲ್ಲಿ ಮಾತ್ರ!! ಖಜಾನೆಯಲ್ಲಿ ತೆಗೆದು ತಿಂದದ್ದಕ್ಕೆ ಹೇಳುತ್ತಿಲ್ಲ ಯಾರೂ ಸಾಕ್ಷ್ಯ!!

ಕೋಚೆ ಚಿಂತನ

ರಸ್ತೆ ಯಾಕೆ ರಿಪೇರಿ ಮಾಡಿಲ್ಲ! ಈಗ ಇದೇ ಜಿಲ್ಲೆಯ ಮಂತ್ರಿಗಳಿದ್ದಾರೆ! ಪ್ರತಿ ತಾಲೂಕಿಗೂ ಶಾಸಕರಿದ್ದಾರೆ'

ಅದಕ್ಕೆ ಅಲ್ಲಿಯ ಪ್ರಮುಖ ನಾಗರಿಕರು 'ಪ್ರತಿ ವರ್ಷವೂ ರಿಪೇರಿಯಾಗಿದೆ. ಬೇಕಾದರೆ ಲೋಕೋಪಯೋಗಿ ಇಲಾಖೆ ಲೆಕ್ಕಪತ್ರ ತೆಗೆದು ನೋಡಿ! ಆದರೆ ಆ ಮೊತ್ತ ರಸ್ತೆಗಾಗಿ ಖರ್ಚಾಗಿಲ್ಲ! ಖಜಾನೆಯಿಂದ ನೇರವಾಗಿ ಕಂಟ್ರಾಕ್ಟರ್‌ಗೆ ಆಯಾ ಕಾಲದ ಶಾಸಕರಿಗೆ, ಮಂತ್ರಿಗಳಿಗೆ ನೌಕರರಿಗೆ ಹೋಗಿದೆ. ಅವರ ಮೇಲಧಿಕಾರಿಗಳಿಗೆ.... ಇನ್ನೂ ಮೇಲಿನವರಿಗೆ ಹೋಗಿದೆ!'

ಅವರ ಮಾತು ಕೇಳುತ್ತಿದ್ದ ಇನ್ನೊಬ್ಬರು,

'ನಮ್ಮೂರಿನ ಕೆರೆ ಏರಿ ರಿಪೇರಿಗಾಗಿ ಎಂಬತ್ತು ಸಾವಿರ ರೂಪಾಯಿ ಖಜಾನೆಯಿಂದ ಖರ್ಚಾದಂತೆ ತಾಜಾ ದಾಖಲೆಗಳಿವೆ. ಆದರೆ....'

'ಅಂದರೆ ಕೆರೆ ಏರಿ ರಿಪೇರಿಯಾಗಲಿಲ್ಲವೆ?'

'ಇಲ್ಲಿ ಕೇಳಿ, ಎರಡು ವರ್ಷದ ಕೆಳಗೆ ಕೆರೆ ಏರಿ ಮಳೆಗಾಲದಲ್ಲಿ ಸ್ವಲ್ಪ ಬಿರುಕು ಬಿಟ್ಟಿತ್ತು. ಅದನ್ನು ಹಳ್ಳಿಯ ಜನರೇ ಆ ದಿನನೇ ಸೊಪ್ಪು ಸೆದೆ ದಿಮ್ಮಿ ಹಾಕಿ, ಮಣ್ಣು ತುಂಬಿ ರಿಪೇರಿ ಮಾಡಿದರು. ಮೊನ್ನೆ ನಮ್ಮ ಜಿಲ್ಲಾ ಪಂಚಾಯ್ತಿಯವರು ಬಂದು 'ಇಲ್ಲಿ ಏನಾದರೂ ಕೆಲಸ ಆಗಬೇಕಾಗಿದೆಯೇ? ರಿಪೇರಿ ಗಿಪೇರಿ?' ಎಂದು ವಿಚಾರಿಸಲು ಬಂದಿದ್ದರು. ಯಾವ ರಿಪೇರಿ ಕೆಲಸವೂ ಇಲ್ಲ. ಹಿಂದೆ ಎಂದೋ ಕೆರೆ ಏರಿ ಬಿರುಕು ಬಿಟ್ಟಿತ್ತು. ನಾವೇ ರಿಪೇರಿ ಮಾಡಿಕೊಂಡೆವು' ಎಂದು ಹೇಳಿದೆವು. ಇದಾದ ಒಂದು ತಿಂಗಳ ನಂತರ ಗೊತ್ತಾಯಿತು ಈ ಕೆರೆ ರಿಪೇರಿ ಮಾಡಿಸಿದ್ದಕ್ಕಾಗಿ 80 ಸಾವಿರ ರೂಪಾಯಿ ಖಜಾನೆಗೆ ಖರ್ಚು ಬಿತ್ತು!

* * *

ಈ ಲೋಕೋಪಯೋಗಿ ಇಲಾಖೆಯಲ್ಲಿ ಲಾಗಾಯ್ತು ಲೂಟಿ ಆಗುತ್ತಿರುವುದು ಲೋಕ ವಿಖ್ಯಾತ. ಆಗಿನ ಕಾಲದಲ್ಲಿ ಕೆಲಸ ಮಾಡಿ, ಕಳಪೆ ಕಾಮಗಾರಿ ಮಾಡಿ ಬಿಲ್ ಗಿಟ್ಟಿಸುತ್ತಿದ್ದರು. ಈಗ ಏನೇನೂ ಮಾಡದೆ ಬಿಲ್ ಗಿಟ್ಟಿಸುವ ಅತ್ಯಾಧುನಿಕ ರೀತಿಯ ಖಜಾನೆ ಕನ್ನ ನಡೆಯುತ್ತಿದೆ! ಭ್ರಷ್ಟಾಚಾರ ಇದೊಂದೇ ಇಲಾಖೆಗೆ ಏಕೆ ಸೀಮಿತವಾಗಬೇಕು? ಅದು ಶಿಕ್ಷಣ ಇಲಾಖೆಗೂ ಹಬ್ಬಿದೆ. ನಮ್ಮ ಶಿಕ್ಷಣ ಸಚಿವರು ಎಷ್ಟೋ ಸಾವಿರ ಶಾಲಾ ಕೊಠಡಿಗಳನ್ನು ಕಟ್ಟಿಸಿರುವುದಾಗಿ ಹೆಮ್ಮೆ ಪಟ್ಟುಕೊಂಡಿದ್ದಾರೆ. ಅಷ್ಟೆ ಅಲ್ಲ. ಅವುಗಳಿಗೆ ಬೇಕಾದ ಎಲ್ಲ ಪೀಠೋಪಕರಣ, ಪಾಠೋಪಕರಣಗಳನ್ನು, ಬಾಲಕರಿಗೆ ಉಪಯುಕ್ತ ಸಾಮಗ್ರಿ, ಸಮವಸ್ತ್ರಗಳನ್ನು ಒದಗಿಸಿರುವುದಾಗಿಯೂ ಹೇಳಿದರು.

ಬಹುಶಃ ಆ ದಿನಗೂಲಿ ಕಟ್ಟಿಸಿದ ಮನೆಯಂಥ ಕೊಠಡಿಗಳು ನಿರ್ಮಾಣವಾಗಿರಬೇಕು!!

ಪಿಠೋಪಕರಣಗಳ ಖರೀದಿಯಲ್ಲಿ ಭ್ರಷ್ಟಾಚಾರವಾಗಿದೆ ಎಂದು ಬಿಜಾಪುರದ ಒಬ್ಬ ಡಿಡಿಪಿಐ ಅವರ ಮೇಲೆ ಲೋಕಾಯುಕ್ತ ದಳದವರು ಖಟ್ಲೆ ನಡೆಸಿದ್ದಾರಂತೆ.

ರಾಷ್ಟ್ರೀಯ ಹೆದ್ದಾರಿಯಲ್ಲಿ ಹೋಗುವಾಗ ಊರುಗಳಲ್ಲಿ ನಗರಗಳಲ್ಲಿ ಗೋಡೆಯ ಮೇಲೆ 'ಸಂಪೂರ್ಣ ಸಾಕ್ಷರತಾ ನಾಡು'. ಎಂದು ಬಂಡಿ-ಗಾಲಿ ಗಾತ್ರದ ಬರಹಗಳು ಕಾಣುತ್ತವೆ.

ಅಂಥ ಒಂದು ಜಿಲ್ಲೆಯ ಒಂದು ತಾಲೂಕು ಮುಖ್ಯ ಪಟ್ಟಣದಲ್ಲಿ, 1996 ಚುನಾವಣೆಯ ಕಾಲಕ್ಕೆ ಪ್ರಿಸೈಡಿಂಗ್ ಆಫೀಸರ್ ಆಗಿ ಕೆಲಸ ಮಾಡಿದ ಎಂಜಿನಿಯರ್ ಒಬ್ಬರು ಸಿಕ್ಕಿದ್ದರು. 'ಮತ ಚೀಟಿಗಳನ್ನು ಪಡೆಯಲು ಬಂದ ಮತದಾರರಿಗೆ ಸಹಿ ಮಾಡಲು ಹೇಳಿದಾಗ ನೂರಕ್ಕೆ ಅರವತ್ತು ಎಪ್ಪತ್ತು ಮತದಾರರು ತಮಗೆ ಸಹಿ ಮಾಡಲು ಬರುವುದಿಲ್ಲವೆಂದು ಹೇಳಿದರು'. ಆದರೂ ನಮ್ಮ ಆ ತಾಲೂಕು ಸಂಪೂರ್ಣ ಸಾಕ್ಷರತಾ ತಾಲೂಕೆಂದು ಮಂತ್ರಿಗಳ ಸಮಕ್ಷಮ ದೊಡ್ಡ ಸಮಾರಂಭ ನಡೆಯಿತು!!

ಹಾಗಾದರೆ ಸಾಕ್ಷರತಾ ಆಂದೋಲನ, ಕಪ್ಪು ಹಲಗೆ ಚಳವಳಿ.... ಇವುಗಳಿಗೆ ಕೊಟ್ಟ ಹಣ ಎಲ್ಲಿ ಹೋಯಿತು? ಪ್ರಚಾರಕರ ಜೇಬಿಗೆ, ರಾಜಕೀಯ ಪುಢಾರಿಗಳ ಬೊಕ್ಕಸಕ್ಕೆ ಅಧಿಕಾರಿಗಳ ಥೈಲಿಗೆ!!

ಇಷ್ಟೇ ಏಕೆ? ಕಳೆದ ವರ್ಷ ಉಗ್ರಪ್ಪ ಸದನ, ಸಮಿತಿ ಅಂಗನವಾಡಿ ಯೋಜನೆಯ ಕೆಳಗೆ ಆಗಿರುವ ಆಗುತ್ತಿರುವ ಭ್ರಷ್ಟಾಚಾರವನ್ನು ಕುರಿತು, ದೀರ್ಘ ವರದಿಯನ್ನು ಒಪ್ಪಿಸಿತು! ಹತ್ತು ಜನ ಮಕ್ಕಳಿಗೆ ತಾಯಂದಿರಿಗೆ ಅನ್ನ ಹಾಲು ಉಣಿಸಿ ಅರವತ್ತು ಎಪ್ಪತ್ತು ಮಕ್ಕಳ ಪಡಿತರ ವೆಚ್ಚವನ್ನು ಹೊಡೆದ ಉದಾಹರಣೆಗಳನ್ನು ಎತ್ತಿ ತೋರಿಸಿದ್ದರು. ಕೂಲಂಕಷವಾಗಿ ವಿಚಾರಣೆ ಮಾಡಿಸಿ ತಪ್ಪಿತಸ್ಥರ ಮೇಲೆ ಕ್ರಮ ಕೈಕೊಳ್ಳಿ ಎಂದು ಶಿಫಾರಸು ಮಾಡಿದ್ದರು! ಆ ವರದಿ ಧೂಳು ಹಿಡಿದು, ಗೆದ್ದಲು ಹಿಡಿದು ವಿಧಾನ ಸೌಧದ ಕೊಠಡಿಯಲ್ಲಿ ಬಿದ್ದಿದೆ!!

ಮೊನ್ನೆ ಇತ್ತೀಚೆಗೆ ಇನ್ನೊಂದು ಸುದ್ದಿ ಹೊರಟಿದೆ. ಹಿಂದುಳಿದ ವರ್ಗ, ಎಸ್.ಸಿ., ಎಸ್.ಟಿ. ಮಕ್ಕಳಿಗಾಗಿ ನಡೆಸುತ್ತಿರುವ ಅನುದಾನಿತ ಹಾಸ್ಟೆಲುಗಳಲ್ಲೂ ಇದೇ ಭ್ರಷ್ಟಾಚಾರವಂತೆ! ಅಲ್ಲಿ ಇಲ್ಲದಿರುವ ಮಕ್ಕಳ ಹೆಸರಿನಲ್ಲಿ ಸರ್ಕಾರದಿಂದ ಅನುದಾನ ಪಡೆಯುತ್ತಿರುವುದು ಬೆಳಕಿಗೆ ಬಂದಿದೆ!! ನೂರು ಬಾಲಕರ ಹಾಸ್ಟೆಲ್ ಎಂದು ಲೆಕ್ಕಪತ್ರ ತಯಾರಿಸಿ, ಸರ್ಕಾರದಿಂದ ಅನುದಾನ ಪಡೆದು ಹತ್ತು ಮಕ್ಕಳಿಗೂ ಅನ್ನ ಹಾಕದಿರುವ ಕಲ್ಪಿತ ಹಾಸ್ಟೆಲುಗಳು ರಾಜ್ಯದ ಎಲ್ಲೆಡೆಯಲ್ಲೂ ಭರ್ಜರಿ ನಡೆಯುತ್ತಿವೆ.

* * *

ಇಂಥ ಇಲ್ಲದಿರುವ ಸಂಸ್ಥೆಗಳಿಗಾಗಿ ಲಕ್ಷಾಂತರ ಹಣ ಸರ್ಕಾರ ಖರ್ಚು ಮಾಡುತ್ತಿರುವುದು ಇತ್ತೀಚೆಗೆ ಆರೋಗ್ಯ ಇಲಾಖೆಯಲ್ಲೂ ಬಯಲಾಯಿತು. ಸಾಗರದ ಸರ್ಕಾರಿ ಆಸ್ಪತ್ರೆಗೆ ಬೇಕಾದ ಉಪಕರಣಗಳಿಗಾಗಿ, ಸೌಕರ್ಯಗಳಿಗಾಗಿ 13 ಲಕ್ಷ ರೂ. ಖರ್ಚಾಯಿತಂತೆ! ವಿಚಿತ್ರವೆಂದರೆ, ಅಲ್ಲಿ ಇನ್ನೂ ಆಸ್ಪತ್ರೆ ಕಟ್ಟಡವೇ ಮುಗಿದಿಲ್ಲ. ಆಗಲೇ ಅದಕ್ಕೆ ಸುಸಜ್ಜಿತ ಮಂಚ, ಹಾಸಿಗೆ.... ಕೊಳ್ಳಲಾಗಿದೆ ಎಂಬ ದಾಖಲೆ!! ಖಜಾನೆಯಿಂದ 13 ಲಕ್ಷ ಹರಿದು ಹೋಗಿದೆ! ಆದರೆ ಯಾರ ಜೇಬಿಗೆ?! (18.5.99ರ ಸಂ. ಕರ್ನಾಟಕ ಪುಟ 7 ನೋಡಿ)

ಆ ಇಲಾಖೆ, ಈ ಇಲಾಖೆ, ಆ ಮಂತ್ರಿ, ಈ ಶಾಸಕ ಎಂದು ಹೇಳುವುದು ಬೇಡ!

ಬೋಫೋರ್ಸ್ ಹಗರಣ, ಯೂರಿಯಾ ಖರೀದಿ, ಪಶು ಆಹಾರ ದಾಸ್ತಾನು, ಈಗ ರಾಜ್ಯಮಟ್ಟದ ಎಲ್ಲ ಇಲಾಖೆಯಲ್ಲೂ ರಾಜಾರೋಷ!

ಬೆಂಗಳೂರು ಮಹಾ ನಗರ ಪಾಲಿಕೆಯ ನೌಕರರಿಗೆ ಸಮವಸ್ತ್ರ, ಚಪ್ಪಲಿ.... ಮುಂತಾದವುಗಳನ್ನು ಖರೀದಿಸಿದ ಪ್ರಕರಣವನ್ನು ಸದಸ್ಯರೇ ಬಹಿರಂಗ ಪಡಿಸಿದ್ದರು! ಆದರೆ ಏನೆಂದರೆ ಏನೂ ಆಗಲಿಲ್ಲ. ತಿಂದವರು ತಿಂದೇ ತಿಂದರು!! ಇದು ಒಟ್ಟು ಬದುಕುವ ದೇಶವಲ್ಲ ಎಂದೇ ದಿಟವಾಗುತ್ತಿದೆ.

ಇದು ಹೇಗೆ ಇಷ್ಟು ಸಲೀಸಾಗಿ ನಡೆಯುತ್ತಿದೆ? ಮಂತ್ರಿಗಳಿಲ್ಲವೆ? ಶಾಸಕರಿಲ್ಲವೆ? ಜಿಲ್ಲಾ ಪಂಚಾಯ್ತಿ ಅಧ್ಯಕ್ಷರು, ಸದಸ್ಯರಿಲ್ಲವೆ?

ಮೊನ್ನೆ ತಾನೇ ತಿಳಿದ ಸಂಗತಿ. ಒಂದು ಕೆರೆಯ ಹೂಳೆತ್ತಲೆಂದು ಸರ್ಕಾದಿಂದ ಎರಡು ಲಕ್ಷ ರೂಪಾಯಿ ಬಿಲ್ ಪಾವತಿ ಆಯಿತು. ಅದು ಇದೇ ಮಾರ್ಚ್ 31ಕ್ಕಿಂತ ಮೊದಲು! ಅದಕ್ಕಿಂತ

ಮೊದಲು ಹೂಳೆತ್ತಲು ಕೆರೆಯಲ್ಲಿ ನೀರಿತ್ತು. ಏಪ್ರಿಲ್ 1ರ ನಂತರ ಹೂಳೆತ್ತಬಹುದೆಂದು ಜನ ತಿಳಿದಿದ್ದರು. ಆದರೆ ಮಳೆ ಬಂದು ಕೆರೆಗೆ ಇನ್ನೂ ನೀರು ತುಂಬಿತು. ಆದರೂ ಎರಡು ಲಕ್ಷ ಖಜಾನೆಯಿಂದ ಎತ್ತಲಾಯಿತು.

'ಏನ್ರೀ ಇದು ಅನ್ಯಾಯ?' ಎಂದು ಒಬ್ಬಾತ ಕೇಳಿದಾಗ

'ಕೋಟಿ ರೂಪಾಯಿ ಖರ್ಚಿನಿಂದ ಮಂತ್ರಿ ಮನೆ ಕಟ್ಟಿಸಲು ನೀನು ಕೊಡತ್ತೀಯಾ? ನಿಮ್ಮಪ್ಪ ಕೊಡುತ್ತಾನಾ?' ಎಂದು ಆ ಎಂಜನಿಯರ್ ದಬಾಯಿಸಿದನಂತೆ!!

ಅಂಥ ಒಬ್ಬ ಜಿಲ್ಲಾ ಪಂಚಾಯ್ತಿ ಎಂಜನಿಯರ್ ಒಂದು ರಾತ್ರಿ ಅವರಿಗೆ ಆಪ್ತರಾದ ವಿಧಾನ ಪರಿಷತ್ ಸದಸ್ಯರ ಮನೆಯಲ್ಲಿ ತಂಗಿದ್ದ. ಬೆಳಗ್ಗೆ ಸೂಟ್‌ಕೇಸ್ ಎತ್ತಿಕೊಂಡು ಹೊರಡಲು ಸಿದ್ದನಾದಾಗ:

'ಎಲ್ಲಿಗೋ? ಸೂಟ್‌ಕೇಸ್ ಭರ್ತಿಯೊ ಖಾಲಿಯೋ' ಎಂದು ಸಲುಗೆಯಿಂದ ಕೇಳಿದರು ಶಾಸಕರು.

'ಇಲಾಖಾ ಮಂತ್ರಿಗಳ ಮನೆಗೆ. ಇದು ತಿಂಗಳ ಮಾಮೂಲು. ಬೇಕಾದರೆ ನೀವೂ ಕಾರಿನಲ್ಲಿ ಬನ್ನಿ ಎಂದ.

ಹೀಗಾದರೆ ಅವರನ್ನು ಯಾರು ಕೇಳಬೇಕು? ಶಾಸಕರಾದರೂ ಪ್ರಶ್ನಿಸಬಹುದಲ್ಲವೆ? ಅವರಿಗೆ ಪಾಲು ಕೊಟ್ಟೇ ಇವರ ಪಾಲು ಪಡೆಯುತ್ತಿರು ವುದು.

ಪ್ರಜೆಗಳಾದರೂ ಕೈ ಹಿಡಿದು ಕೇಳ ಬಹುದಲ್ಲ?

ಪ್ರಜೆಗಳಿಗೂ ಖಜಾನೆ ಲೂಟಿಯಲ್ಲಿ ಪಾಲಿದೆ. ಹೇಗೆಂದಿರೋ?

ಎತ್ತು, ಎಮ್ಮೆ, ಕುರಿ, ಕೋಳಿ.... ಇತ್ಯಾದಿ ಕೊಳ್ಳಲು ಸರ್ಕಾರ ಧನ ಸಹಾಯ ಮಾಡುತ್ತಿದೆ. ಕೊಳ್ಳದಿರುವ ಎತ್ತು ಎಮ್ಮೆಗೆ ಸಾಲ ಪಡೆದು ಕೊಳ್ಳುತ್ತಾರೆ! ಎತ್ತು ಎಮ್ಮೆ ಸತ್ತು ಹೋಯಿತೆಂದು ವರದಿ ಕೊಡುತ್ತಾರೆ. ಕೊಳ್ಳದಿದ್ದ ಪ್ರಾಣಿ ಸತ್ತು ಹೋಯಿತು. ಸಾಲ ಮನ್ನಾ ಆಯಿತು!! ಎತ್ತು ಎಮ್ಮೆ ಹುಟ್ಟಿದ್ದಕ್ಕೆ ಜನನ ರಿಜಿಸ್ಟರ್ ದಾಖಲೆ ಯಿಲ್ಲ. ಅದಕ್ಕೆ ಹೆಸರೂ ಇಲ್ಲ. ಸತ್ತದ್ದಕ್ಕೆ ಮರಣ ದಾಖಲೆಯೂ ಇಲ್ಲ!!

ಇನ್ನು ವೃದ್ಧಾಪ್ಯವೇತನ ವಿಧವಾ ವೇತನ, ಅಂಗವಿಕಲರ ವೇತನ.... ಇತ್ಯಾದಿ ಧನ ಸಹಾಯ ಪಡೆದವರು ವೃದ್ಧರು, ವಿಧವೆಯರೂ, ಅಂಗವಿಕಲರೂ ಅಲ್ಲ, ಆದರೂ ಅವರಿಗೆ ಧನ ಸಹಾಯ ಅವರಾದರೂ ಯಾಕೆ ಬಾಯಿ ಬಿಡುತ್ತಾರೆ.

ಹಾಗಾದರೆ ಸ್ವಾತಂತ್ರ್ಯ ಯೋಧರಾದರೂ ಯಾಕೆ ಸುಮ್ಮನಿದ್ದಾರೆ? ಅವರನ್ನೇ ಕೇಳಿದರೆ ಗೊತ್ತಾಗುತ್ತದೆ! ಅವರಿಗೆ ಮಸಾಶನ ಸಿಕ್ಕುತ್ತದೆ - ಅವರು 1942ರಲ್ಲಿ ಇನ್ನೂ ಹುಟ್ಟಿಲ್ಲದಿದ್ದರೂ!

ಭ್ರಷ್ಟಾಚಾರದ ಈ ಪುರಾಣ ಇನ್ನು ಸಾಕು!! ■

ಘೋಸ್ಟ್ ಕಾಲ್ಸ್


ಫೋನು 'ಟ್ರಿನ್' ಗುಟ್ಟತೊಡಗಿದಾಗ ಅಡುಗೆ ಮನೆಯಿಂದ ನಾನು ಗಡಬಡಿಸಿ ಓಡಿ ಬಂದಿದ್ದೆ. ಫೋನು ಕಿವಿಗಿಟ್ಟುಕೊಂಡು 'ಹಲೋ ಯಾರು' ಎಂದಿದ್ದೆ. ಆ ಕಡೆಯಿಂದ 'ನಾನು ವೆಂಕಟರಮಣ ಸ್ವಾಮಿ' ಹಲೋ ಯಾ.... ಯಾರ್ರೀ.... ಅದು? 'ಹ್ಹಹ್ಹಹ್ಹ' ವಿಕಟ ನಗೆಯೊಂದಿಗೆ ಅತ್ತಕಡೆ ಫೋನು ಡಿಸ್‌ಕನೆಕ್ಟ್ ಆಯಿತು.

ಇನ್ನೊಮ್ಮೆ 'ಏಯ್ ನಾನ್ಯಾರೋ ನಿಂಗೊತ್ತಿಲ್ವಾ?' ಎಂದರೆ ಮತ್ತೊಮ್ಮೆ ಯಾವ ಯಾವುದೋ ಹಾಡುಗಳನ್ನು ಹೇಳುವುದು ಬೇರೆ, ಹೀಗೆ ಇತ್ತೀಚೆಗಂತೂ ಇಂಥ ಸುಮ್ಮನೆ ಫೋನ್ ಮಾಡಿ ತಲೆ ಕೆಡಿಸುವ ಖದೀಮರು ಹೆಚ್ಚಾಗುತ್ತಿದ್ದಾರೆ. ಮಾಡಲು ಕೆಲಸವಿರುವು ದಿಲ್ಲ, ಕೈಯ್ಯಲ್ಲಿ ಡೈರೆಕ್ಟರಿ ಹಿಡಿದುಕೊಂಡು ಸಿಕ್, ಸಿಕ್ ನಂಬರುಗಳಿಗೆ ಫೋನಾಯಿಸಿ, 'ಅಶ್ಲೀಲವಾಗಿ ಮಾತನಾಡುವುದು ಇಲ್ಲಾ ಅಶ್ಲೀಲವಾದ ಹಾಡುಗಳನ್ನು ಹೇಳುವುದು ಇತ್ಯಾದಿ. ಇತ್ತೀಚಿನ 'ಥರ್ಡಗ್ರೇಡ್' ಜನಗಳ ಅಭಿರುಚಿಯಾಗಿ ಬಿಟ್ಟಿದೆ.

ಟೆಲಿಫೋನ್ ನಮಗೆ ವಿಜ್ಞಾನದ ಕೊಡುಗೆ ಆದರೆ ಈ ಮಾಧ್ಯಮವನ್ನು ಈ ರೀತಿ ದುರುಪ ಯೋಗ ಪಡಿಸಿಕೊಳ್ಳುವುದು ಸಮಂಜಸವಲ್ಲ. ಏನೋ ಒಮ್ಮೊಮ್ಮೆ 'ಘೋಸ್ಟ್ ಕಾಲ್'ನ್ನೇನೋ ಸಾಮಾನ್ಯವಾಗಿ ಟೆಲಿಫೋನ್ ಇರೋರ ಮನೆ ಗಳಲ್ಲಿ ರಿಸೀವ್ ಮಾಡ್ತಾನೇ ಇರಬೇಕಾಗುತ್ತೆ, ಆದರೆ ನಿಜವಾಗ್ಲೂ ಈ 'ಘೋಸ್ಟ್'ಗಳ ತರಲೆ ಅಮಾನುಷ. ಮನೇಲಿ ಯಾರಾದ್ರೂ ಒಬ್ರೊಬ್ರೆ ಇದ್ದು ಅವು, ಪುಕ್ಕಲರಾಗಿದ್ದರಂತೂ ಮುಗಿದ ಹಾಗೇ ಕತೆ. ಇಂಥದ್ದೇ ಒಂದು ಉದಾಹರಣೆ ಒಮ್ಮೆ ನನ್ನ ಸ್ನೇಹಿತೆ ಪಾಪ! ತುಂಬಿದ ಗರ್ಭಿಣಿ. ಫೋನಿನ ಕರೆ ಬರುತ್ತಲೂ ಆತುರದಿಂದ ಬಂದು ಫೋನು ಕಿವಿಗಾನಿಸಿಕೊಂಡಳು. ಮನೇಲಿ ಗಂಡ ಹೆಂಡತಿ ಇಬ್ಬರೆ ಇದ್ದದ್ದು. ಇನ್ನೂ ಹೊಸ ಸಂಸಾರ, ಅದು ಆಕೆಯ ಗಂಡ 'ಬೇಗ ಬರ್ತಿನಿ' ಅಂತ ಹೇಳಿ ಹೋಗಿದ್ದರು ಬೇರೆ, 'ನಿಮ್ಮೆಜಮಾನ್ರಿಗೆ ಆ್ಯಕ್ಸಿಡೆಂಟ್ ಆಗಿ ತುಂಬಾ ಸೀರಿಯಸ್ಸಾಗಿದೆ' ಆ ಕಡೆಯಿಂದ ಕರ್ಕಶ ಧ್ವನಿಯೊಂದು ಕಿರುಚಿತು. ಅಷ್ಟೇ ಈ ಗರ್ಭಿಣಿ ದಡಕ್ಕೆಂದು ನೆಲಕ್ಕುರುಳಿದಳು. ನಂತರ ಆಫೀಸಿನಲ್ಲಿ ತನ್ನ ಕೆಲಸದಲ್ಲಿ ಮಗ್ನನಾಗಿದ್ದ ಆಕೆಯ ಪತಿಗೆ ವಿಷಯ ಹೋಗಿ, ಆತ ಅವಳನ್ನು ಆಸ್ಪತ್ರೆಗೆ ದಾಖಲಿಸಿ ಪುನಃ ಆಕೆ ಚೇತರಿಸಿ ಕೊಳ್ಳೊ ಹೊತ್ತಿಗೆ ಸುಮಾರು 15 ದಿನ ಹಿಡೀತು. ಇದು ಎಂಥ ವಿಪರ್ಯಾಸ!

ಇನ್ನು ಚಿಕ್ಕಮಕ್ಕಳಿರುವ ಮನೆಯಲ್ಲಿ ಫೋನಿದ್ದರೆ ಮಕ್ಕಳಿಂದ ಆದಷ್ಟು ಫೋನು ದೂರವಿರಿಸುವುದು ಒಳ್ಳೆಯದು. ಕೆಲವರ ಮನೆಯಲ್ಲಂತೂ ಮಕ್ಕಳು ಫೋನನ್ನು ತಮ್ಮ ಆಟದ ವಸ್ತುವನ್ನಾಗಿ ಮಾಡಿಕೊಂಡಿರುತ್ತಾರೆ. ಸಿಕ್ಕ ಸಿಕ್ಕ ನಂಬರ್‌ಗಳನ್ನು ಒತ್ತಿ ಹಲವರ ತಲೆ ಕೆಡಿಸುವಲ್ಲಿ, ಕೆಲವರ ಸಮಯ ತಿನ್ನುವಲ್ಲಿ, ಕಡೆಗೆ ಮನೆಯವರ ಫೋನ್ ಬಿಲ್ ಏರಿಸಿ ಟೆಲಿಕಾಂ ಆದಾಯ ತುಂಬುವಲ್ಲೂ ಇವರು ಯಶಸ್ವಿಯಾಗುತ್ತಾರೆ. ಇದು ತಪ್ಪಲ್ಲವೇ. ಫೋನು ಹಾಕಿಸಿಕೊಂಡ ಹೊಸದರಲ್ಲೇನೋ ಎಲ್ಲರಿಗೂ ಒಂಥರಾ ಖುಷಿ ಇರುತ್ತೆ. ಹಾಗೆಂದು ಅದನ್ನೇ ಒಂದು ಚಟವನ್ನಾಗಿಸಿ ಕೊಂಡರೆ 'ದೆವ್ವದ ಕರೆ'ಗಳಿಗೆ ಮಿತಿಯೇ ಇರದಂತಾಗುತ್ತದೆ.

■ ಸಿ. ಎಸ್. ಭಾರತಿ



ನಮ್ಮ ಸುತ್ತಮುತ್ತ ಇರುವ ದಾರಿಗಳು

ವ್ಯಕ್ತಿತ್ವ ವಿಕಾಸ - 24

■ ಕೃಶಾಂಗ

ನಿಸರ್ಗವು ನಮಗೆ ನೀಡಿದ ಪರ್ವತ, ಕಡಲು, ಗಾಳಿ, ಬೆಳಕುಗಳಂಥ ಅನುಕೂಲತೆಗಳನ್ನು ವಿಜ್ಞಾನ ತಂತ್ರಜ್ಞಾನಗಳ ಬಲದಿಂದ ಅವುಗಳ ಸ್ವರೂಪ ಬದಲಾವಣೆಯಿಂದಾಗಲೀ, ಅವುಗಳಿಗೆ ತಗ್ಗಿ ಬಗ್ಗಿಯಾಗಲೀ ದುಡಿಸಿಕೊಳ್ಳುತ್ತಿದ್ದೇವೆ. ಸಾಮಾಜಿಕ ವಾತಾವರಣದ ಬಗೆಗೂ ಸಹ ನಮ್ಮಪ್ರತಿಕ್ರಿಯೆ ಹೀಗೆಯೇ ಗತ್ತಿನದಾಗಿರಬೇಕು. ಸಾಮಾಜಿಕ ವಾತಾವರಣಕ್ಕೆ ಹೊಂದಿಕೊಳ್ಳಲು ನಾವು ಕಲಿಯಬೇಕು. ಆ ವಾತಾವರಣವನ್ನೇ ಬದಲಿಸಲು ನಾವು ಶಕ್ತರಾದಾಗ, ಆ ದಿಶೆಯಲ್ಲಿ ಹೆಜ್ಜೆ ಇರಿಸಬೇಕು. ಸುಮ್ಮಸುಮ್ಮನೆ ಮುನ್ನುಗ್ಗಿದರೆ ಸಮಾಜದ ವಿರೋಧವನ್ನೆದುರಿಸಬೇಕಾದೀತು.

ಹಾಗಾದರೆ, ಸಾಮಾಜಿಕ ವಾತಾವರಣವನ್ನು ಬದಲಾಯಿಸಲು ಅಗತ್ಯವಾದ ಶಕ್ತಿ ನಮ್ಮಲ್ಲಿದೆಯೇ ಎಂಬುದನ್ನು ತಿಳಿಯುವುದು ಹೇಗೆ? ನಮ್ಮ ವ್ಯಕ್ತಿತ್ವವು ಸಾಮಾಜಿಕವಾಗಿ ಎಷ್ಟು ಪರಿಣಾಮಕಾರಿಯಾಗಿದೆ ಎಂಬುದನ್ನು ತಿಳಿಯಲು ನಾವು ಪ್ರಯತ್ನಿಸಬೇಕು. ಇದು ಎರಡು ದೃಷ್ಟಿ ಕೋನಗಳನ್ನವಲಂಬಿಸಿರುತ್ತದೆ. ನಾನು ಏನಾಗಿದ್ದೇನೆ ಎಂಬುದು ಮೊದಲದನೆಯದಾದರೆ, 'ಇತರರು ನನ್ನನ್ನು ಹೇಗೆ ಅರ್ಥೈಸಿದ್ದಾರೆ ಎಂಬುದು ಎರಡನೆಯದು. ನಾವೇ ನಿರ್ಮಿಸಿಕೊಂಡ ಲಕ್ಷ್ಮಣರೇಖೆಗಳೆಂಬ ಪ್ರಮಾಣಗಳ ಮೂಲಕ ನಾವು ನಮ್ಮ ವ್ಯಕ್ತಿತ್ವವನ್ನೂ, ಕೃತಿಗಳನ್ನೂ ಬೇರೆ ಬೇರೆ ರಂಗಗಳಲ್ಲಿ ಪ್ರಸ್ತುತ ಪಡಿಸಿ, ಅವುಗಳ ಆಶ್ರಯದಲ್ಲಿಯೇ ನಮ್ಮನ್ನು ಸಮರ್ಥಿಸಿಕೊಳ್ಳಲು ಇಷ್ಟ ಪಡುತ್ತೇವೆ. ಇತರರು ಈ ಪ್ರಮಾಣಗಳನ್ನು ವಿರೋಧಿಸಿದರೆ ನಾವು ಘಾಸಿಗೊಳ್ಳುತ್ತೇವೆ. ಅವರ ಪ್ರಮಾಣಗಳನ್ನು ಒಪ್ಪಿಕೊಳ್ಳುವುದು ನಮ್ಮ ಸ್ವಾಭಿಮಾನಕ್ಕೆ ಕುಂದೆಂಬುದಾಗಿ ಭಾವಿಸುತ್ತೇವೆ.

ಭಿನ್ನ ಭಿನ್ನ ಪ್ರಮಾಣಗಳನ್ನವಲಂಬಿಸಿರುವ ಸಾಮಾಜಿಕ ಗುಂಪುಗಳ ಮಧ್ಯೆಯೂ ವಿಶೇಷವಾಗಿ ಏನನ್ನೂ ಬಲಿಕೊಡದೆ ನಮ್ಮ ಸ್ವಾಭಿಮಾನವನ್ನೂ

> ಸಿರಿ-ಸಂಪತ್ತು, ಸಹ ವ್ಯಕ್ತಿಯ ನಡಾವಳಿಯನ್ನು ಪ್ರಭಾವಿಸುತ್ತದೆ. ಅನೇಕ ಸಿರಿವಂತರು, ಕೊಟ್ಟದ್ದು ತನಗೆ, ಬಚ್ಚಿಟ್ಟಿದ್ದು ಪರರಿಗೆ ಎಂಬ ನೀತಿವಾಕ್ಯದಂತೆ ದಾನಧರ್ಮದಲ್ಲಿ ತೊಡಗಿರುತ್ತಾರೆ.

ಕಾಯ್ದುಕೊಂಡು ಬಾಳಲು ಸಾಧ್ಯವೇ? ಯಾಕಿಲ್ಲ? ಇದಕ್ಕೆ ಬೇಕು ಸಮಯೋಪಾಯ, ತಗ್ಗಿ ಬಗ್ಗಿ ನಡೆಯುವಿಕೆ, ಹೊಂದಾಣಿಕೆ ಈ ಮೂರೂ ಕಲೆಗಳ ಹಿತಮಿತ ಸಂಗಮಾನುಷ್ಠಾನ. ನಾವು ಅಂಗೀಕರಿಸಿದ ಪ್ರಮಾಣಗಳಿಗಿಂತ ಭಿನ್ನವಾದವುಗಳನ್ನು ಎತ್ತಿ ಹಿಡಿದವರೊಡನೆ ನಮಗೇನು ಕೆಲಸ ಎಂದು ಪ್ರಶ್ನಿಸಿ, ಅಂಥವರಿಂದ ದೂರವೇ ಇರೋಣ ಎಂದು ನಿರ್ಧರಿಸುವುದು ತಿಳಿಗೇಡಿತನವೂ, ಅತಾರ್ಕಿಕವೂ ಆಗಬಹುದು. ಏಕೆಂದರೆ ಪ್ರಮಾಣಗಳು ವ್ಯಕ್ತಿಯಿಂದ ವ್ಯಕ್ತಿಗೆ, ಗುಂಪಿನಿಂದ ಗುಂಪಿಗೆ ಬದಲಾವಣೆ ಹೊಂದುವಂಥವು ಎಂಬುದು ವಾಸ್ತವಿಕ ಸತ್ಯ.

ಪಕ್ಕದ ಮನೆಯಲ್ಲಿ ಬಳಗ ಕೂಡಿದೆ; ಎಲ್ಲರ ಭಾವಲಹರಿಯೂ ಒಂದೇ ಬಗೆಯದಾಗಿದೆ; ಕುಟುಂಬದ ಮಹತ್ವದ ಸದಸ್ಯನೊಬ್ಬ ಮರಣಿಸಿದ್ದಾನೆ. ನೀವು ಆತನ ನೆರೆಯವರು. ಅಂದರೆ, ನಿಮ್ಮ ವರ್ತನೆ ಸಹಾನುಭೂತಿಪರವೂ ಸಹಾಯಕವೂ ಆಗಿರಬೇಕಷ್ಟೇ? ಅದೇ ದಿನವೇ ನೀವು ಮಹತ್ತರವಾದ ಯಾವುದೋ ಬಿರುದಿಗೋ, ಸನ್ಮಾನಕ್ಕೋ ಪಾತ್ರರಾದ ಸುದ್ದಿ ನಿಮಗೆ ತಲುಪಿದೆ. ಆ ಕಾರಣ ನೀವು ಆನಂದವಾಗಿ ಹರಟುತ್ತ ಕೈಕುಲುಕುತ್ತ ಮನೆಯ ಹೊರಗೆ ಮಿತ್ರರೊಡನೆ ಗುಂಪು ಗೂಡಿ ನಿಂತರೆ ಹೇಗೆ ಕಂಡೀತು?

'ವ್ಯವಹಾರಜ್ಞಾನ ಇಲ್ಲದ ವ್ಯಕ್ತಿ ಆತ!' ಎಂದು ನಿಮ್ಮ ನೆರೆಯವರು ತಿಳಿದರೆ ತಪ್ಪೇ? ಓಣಿಯಲ್ಲಿ, ಕುಟುಂಬದಲ್ಲಿಯ ಬಹಳಷ್ಟು ಜಗಳಗಳಿಗೆ ಮೂಲ ಇದೇ. ಆದುದರಿಂದ ಸಾಮಾಜಿಕ ಜೀವನದಲ್ಲಿ ನಮಗೆ ಅವಶ್ಯಕವಾಗಿ ಬೇಕಾದುದು ಸಮಯೋಪಾಯ, ತಗ್ಗಿ ಬಗ್ಗಿ ನಡೆಯುವಿಕೆ, ಹೊಂದಾಣಿಕೆ ಎಂಬ ಅಸ್ತ್ರಗಳು.

ಯಾವುದಾದರೊಂದು ಸಂದರ್ಭದಲ್ಲಿ ಅತ್ಯುಚ್ಚ ಶಾಶ್ವತ ಒಳಿತನ್ನು ಗಮನದಲ್ಲಿರಿಸಿಕೊಂಡು ಮಾಡುವ ಕ್ರಿಯೆ ಅಥವಾ ಮಾತನಾಡುವ ಸೂಕ್ಷ್ಮ ಕೌಶಲ್ಯವೇ ಸಮಯೋಪಾಯ. ಇದರ ಉದ್ದೇಶ ಘರ್ಷಣೆ ತಪ್ಪಿಸುವುದು; ದಕ್ಷತೆ ವೃದ್ಧಿಸುವುದು; ಇಚ್ಛಿತ ಸಾಮಾಜಿಕ ಪರಿಣಾಮವನ್ನು ಪಡೆಯುವುದು. ಇತರರ ಜೊತೆಗೆ ಹೊಂದಾಣಿಕೆಗೆ ಅಡೆತಡೆಯಾಗುವ ಅಥವಾ ಆರೋಗ್ಯಕರ ಸಾಮಾಜಿಕ ಪರಿಣಾಮಗಳನ್ನು ನೀಡದ ನಮ್ಮ ವ್ಯಕ್ತಿತ್ವದ ಕೆಲ ಲಕ್ಷಣಗಳನ್ನು ವ್ಯಕ್ತಗೊಳಿಸದಿರುವುದು' ತಗ್ಗಿ ಬಗ್ಗಿ ನಡೆಯುವುದರ ಸಂಕೇತ. ಸಮಯೋಪಾಯ ಅಥವಾ ತಗ್ಗಿ ಬಗ್ಗಿ ನಡೆದುದರ ಫಲವಾಗಿ ಲಭಿಸುವ ಪರಿಣಾಮವೇ 'ಸಾಮಾಜಿಕ ಹೊಂದಾಣಿಕೆ.'

ಆದರ್ಶಗಳು, ಪ್ರಮಾಣಗಳು ಕಾಲ ದೇಶಕ್ಕನುಗುಣವಾಗಿ ಬದಲಾಗುತ್ತಿರುವ ವ್ಯಕ್ತಿಯ ವ್ಯಕ್ತಿತ್ವವನ್ನು ತೂಗಿ ನೋಡುವಾಗ ಆತ ಸೇರಿದ ಸಮಾಜ, ಆತನ ಜೀವಿತಾವಧಿ, ಆತನ ದೇಶ ಇತ್ಯಾದಿಗಳ ಮತ್ತು ಆ ಸಮಾಜ ವಿಧಿಸಿಕೊಂಡ ಆದರ್ಶಗಳ ನಿಕಟ ಪರಿಚಯ ನಮಗಿರಬೇಕಾದದ್ದು ಅತ್ಯಗತ್ಯ. ಆ ವ್ಯಕ್ತಿಯ ಆರ್ಥಿಕ, ಸಾಂಸ್ಕೃತಿಕ ಸ್ತರಗಳ ಗಣನೆಯೂ ಅತಿ ಅವಶ್ಯಕ.

ಶಬಾನಾ ಮತ್ತು ನೀತಾ ಬಾಲ್ಯ ಸ್ನೇಹಿತೆಯರು. ಇಬ್ಬರೂ ಕುಗ್ರಾಮವೊಂದರಲ್ಲಿ ಜನಿಸಿದರೂ, ಭಾಗ್ಯವಶಾತ್ ನೀತಾ ಅಲ್ಲಿಯೇ ತಳವೂರಿದಳು. ಶಬಾನಾ ಜೀವನ ಪಥದಲ್ಲಿ ಪ್ರಗತಿಗೊಳ್ಳುತ್ತಾ ಉಚ್ಚ ಪದವಿ ಗಳಿಸಿ ಈಗ ದೆಹಲಿಯ ಪ್ರತಿಷ್ಠಿತ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕಿ! ಇಂಥವಳು ತನ್ನ ಬಾಲ್ಯ ಸ್ನೇಹಿತೆಯ ಆಮಂತ್ರಣಕ್ಕೆ ಓಗೊಟ್ಟು ಹಳ್ಳಿಗೆ ಬರುವವಳಿದ್ದಾಳೆ. ಹಾಗೆ ಬಂದಾಗ ಒಬ್ಬಳಿಗಾಗಿಯೇ ನಾಲ್ಕು ಸೂಟ್‌ಕೇಸ್ ಭರ್ತಿ ಬಟ್ಟೆ ಬರೆ ತಂದಿದ್ದಾಳೆ. ಅವಳಿಗೆ ನಿತ್ಯವೂ ಅಗತ್ಯವಾದ ಇನ್ನೂ ಅನೇಕ ವಸ್ತುಗಳಿರುವ ಇನ್ನೆರಡು ಸೂಟ್‌ಕೇಸು ಗಳೂ ಬಂದಿಳಿದಿವೆ! ಆರ್ಥಿಕವಾಗಿ ಅಷ್ಟಾಗಿ ಪ್ರಗತಿ ಸಾಧಿಸದ ನೀತಾ ಮತ್ತು ಅವಳ ಗ್ರಾಮ ಸಮಾಜದ ಮೇಲೆ ಇಂಥ ಆಗಮನದ ಪರಿಣಾಮ ಏನಾದೀತು? ಕೃಷ್ಣನೆ ಸುಧಾಮನ ಮನೆಗೆ ಬಂದಿದ್ದರೆ ಬಹುಶಃ ಹೀಗೆ ಆಗಬಹುದಿತ್ತೇನೋ! ತಮ್ಮನ್ನೆಲ್ಲಾ ಅವಮಾನ ಮಾಡಲೆಂದೇ ಶಬಾನಾ ಸಿರಿವಂತಿಕೆಯ ಪ್ರದರ್ಶನ ಮಾಡುತ್ತಿದ್ದಾಳೆಂದು ಆ ಹಳ್ಳಿಗರು ತಿಳಿಯಲು ಅವಕಾಶವಾಯಿತಲ್ಲವೇ? ಬಹಳಷ್ಟು ಹುಡುಗಿಯರು ತಮ್ಮ ಜೋಡಿ ತುಟಿಯಂಚುಗಳನ್ನು ಪಕ್ಕಕ್ಕೆ ಜರುಗಿಸಿ, ನಿನ್ನ ಡೌಲು ತೋರಿಸಬೇಡ, ಎಂದು ಪ್ರತಿಕ್ರಿಯಿಸಿರಲಿಕ್ಕೂ ಸಾಕು! ಒಟ್ಟಿನಲ್ಲಿ ಈ ಭೇಟಿ ಅಹಿತಕರ ಪರಿಣಾಮ ಬೀರಿರುವದಂತೂ ನಿಃಸಂಶಯ.

ಹಾಗಾದರೆ, ತೃಪ್ತಿಕರ ಸಾಮಾಜಿಕ ಹೊಂದಾಣಿಕೆಗಾಗಿ ನಾವು ಒಡನಾಡುವ ಸಮುದಾಯದ ಪ್ರಮಾಣಗಳು ನಮಗೆ ತಿಳಿದಿರಬೇಕಾದುದು ಮಹತ್ವದ್ದು, ನಾವು ಇರಿಸಿಕೊಂಡ ಆದರ್ಶಗಳಂತೆಯೇ ನಾವು ರೂಪುಗೊಳ್ಳುತ್ತೇವೆ. ಆದುದರಿಂದಲೇ ಕಡಿಮೆ ದರ್ಜೆಯ ಮಹತ್ವಾಕಾಂಕ್ಷೆ ಹೊಂದಿರುವುದು ಅಪರಾಧ ಎಂದು ಹಿರಿಯರು ಹೇಳಿರಬೇಕು. ನಾವು ಇರಿಸಿಕೊಂಡ ಆದರ್ಶಗಳನ್ನು ಪಾಲಿಸುತ್ತಿರುವವರೆಗೆ ನಮ್ಮ ವರ್ತನೆಯಲ್ಲಿ ಕಾಣುವ ದೋಷಗಳ ಕಾರಣ ನಮ್ಮನ್ನು ಯಾರೂ ದೂಷಿಸುವಂತಿಲ್ಲ. ಅವರು ದೂಷಿಸಬೇಕಾದದ್ದು - ಆದರ್ಶಗಳನ್ನು, ಆದರ್ಶಗಳ ವಿರುದ್ಧವಾದ ಈ ಕೂಗು ಸುಯೋಜಿತವಾದುದೂ, ಸಮಯೋಪಾಯದಿಂದ ಕೂಡಿದುದೂ ಆಗಿರುವುದು ಅಗತ್ಯ.

ಆದರ್ಶ ಅಥವಾ ಪ್ರಮಾಣಗಳು ರೂಪುಗೊಳ್ಳುವಲ್ಲಿ ಅನೇಕ ಪ್ರಭಾವಗಳಿರುತ್ತವೆ. ಅವುಗಳಲ್ಲಿ ಮೊದಲನೆಯದು, 'ಮನೆ', ತಂದೆ, ತಾಯಿ, ಅಣ್ಣ, ಅಕ್ಕ, ತಮ್ಮ, ತಂಗಿಯರೊಡನೆ ನಾವು ವಾಸಿಸುವ ಸ್ಥಳ. ಮಗುವಿಗೆ ಮನೆಯಲ್ಲಿ ಸಿಗುವ ಔದಾರ್ಯ, ಸಹಾನುಭೂತಿ, ಸ್ವಾತಂತ್ರ್ಯಗಳು ಇನ್ನೆಲ್ಲೂ ಸಿಗುವುದಿಲ್ಲ. ಕುಟುಂಬದ ಸದಸ್ಯರನ್ನು ಬಂಧಿಸುವುದು ಪರಸ್ಪರ ಹಿತ, ಮಮತೆ. ನಿಮ್ಮ ಭಾವನೆ ಮತ್ತು ವಿಚಾರಗಳಿಗೆ ಪೂರ್ಣ ಅಭಿವ್ಯಕ್ತಿ ಸ್ವಾತಂತ್ರ್ಯ ಇಲ್ಲಿದೆ. ಹಿರಿಯರು ನಿಮ್ಮನ್ನು ಕ್ಷಮಿಸುತ್ತಾರೆ. ನಿಮ್ಮ ತಪ್ಪುಗಳನ್ನು ಪ್ರೀತಿಯಿಂದ ತಿದ್ದುತ್ತಾರೆ. ನಿಮ್ಮ ದುರ್ವರ್ತನೆಯ ಕಹಿಯನ್ನು ಮರೆಯುತ್ತಾರೆ. ಆದರೂ ನಿಮ್ಮ ಕೆಲ ತಪ್ಪುಗಳಿಂದಾಗಿ ನೀವು ಶಿಕ್ಷೆ, ಅಪಮಾನಗಳಿಗೆ ಒಳಗಾಗಬಹುದು.

ಕುಟುಂಬದಲ್ಲಿ ಹಟಮಾರಿ ಮತ್ತು ಅವಿಧೇಯನಾದ ಮಗು ಸಮಾಜವನ್ನು ಕುಟುಂಬವೆಂದೇ ತಿಳಿಯುವ ತಪ್ಪು ಮಾಡುವ ಸಂಭವ ಇದೆ. ಮನೆಯಲ್ಲಿ ತಪ್ಪು ಮಾಡಿ ಶಿಕ್ಷೆಗೆ ಗುರಿಯಾದಾಗ ಅತ್ತು, ರಂಪ ಮಾಡಿ ಕಾಲು ಹೊಸೆದು ಮನೆ ಮಂದಿಯನ್ನು ಯದ್ವಾ-ತದ್ವಾ ಬೈದ ಮಗು ಹೊರಗಡೆಯೂ ತಪ್ಪುಗಳಿಗೆ ಶಿಕ್ಷೆ ನೀಡಿದಾಗ ಬೇರೆಯವರಿಗೆ ಬಿರುನುಡಿಗಳನ್ನಾಡಬಹುದು. ಆದರೆ ಮನೆಯಲ್ಲಿಯ ಪ್ರತಿಕ್ರಿಯೆಗೆ ವಿರುದ್ಧವಾಗಿ ಇನ್ನೂ ಹೆಚ್ಚು ಶಿಕ್ಷೆ ವಿಧಿಸಲ್ಪಟ್ಟಾಗ ಮಗುವಿನ ಕಣ್ಣು ಆದರ್ಶ ಭೇದಗಳ ಬಗೆಗೆ ತೆರೆದುಕೊಳ್ಳುವುದು ಖಚಿತ.

ಕುಟುಂಬದಲ್ಲಿದ್ದಂತಹ ಸ್ವಾತಂತ್ರ್ಯದ ಛಾಯೆ ಸ್ನೇಹದಲ್ಲಿಯೂ ಕಂಡು ಬರಬಹುದು. ಆ ಕಾರಣ ನಮಗೆ ಸ್ನೇಹಿತರಲ್ಲಿ ಸಲಿಗೆ ಹೆಚ್ಚು. ಆದರೆ ಅಪರಿಚಿತರೊಂದಿಗೆ ಗಂಭೀರವಾಗಿ, ಯಾವ ಕಟ್ಟುಪಾಡಿಗೂ ಸಿಗದಂತೆ ವರ್ತಿಸುತ್ತೇವೆ. ಕೇಳಿದಾಗ ಮಾತ್ರ, ಸಂದರ್ಭಕ್ಕೆ ತಕ್ಕಂತೆ ನಮಗೆ ತಿಳಿದ ಎರಡು ಮಾತು ಹೇಳುತ್ತೇವೆ. ಇದಕ್ಕೆ ಕಾರಣವೆಂದರೆ ಅವರ ಪ್ರಭಾವ, ಆದರ್ಶಗಳ ಬಗೆಗೆ ನಮಗೆ ಖಚಿತವಾದ ತಿಳಿವು ಇರದಿರುವುದು.

ಸಿರಿ-ಸಂಪತ್ತು ಸಹ ವ್ಯಕ್ತಿಯ ನಡಾವಳಿಯನ್ನು ಪ್ರಭಾವಿಸುತ್ತದೆ. ಅನೇಕ ಸಿರಿವಂತರು, ಕೊಟ್ಟದ್ದು ತನಗೆ, ಬಚ್ಚಿಟ್ಟದ್ದು ಪರರಿಗೆ ಎಂಬ ನೀತಿವಾಕ್ಯದಂತೆ ದಾನಧರ್ಮದಲ್ಲಿ ತೊಡಗಿರುತ್ತಾರೆ. ಅವರ ಜೀವನ ವಿಧಾನ ಹಾಗೂ ಅಭ್ಯಾಸಗಳು ಸಿರಿತನ ಸೂಚಕವಾಗಿರುತ್ತವೆ. ಇಂಥವರು ತಮ್ಮ ಸಿರಿವಂತಿಕೆಯ ಬಲದಿಂದ ಕಡಿಮೆ ಭಾಗ್ಯವಂತರನ್ನು ಹೀಗಳೆಯತೊಡಗಿದರೆ ಅವರ ವ್ಯಕ್ತಿತ್ವಕ್ಕೆ ಹಾನಿಯಾಗುತ್ತದೆ. ಅಂತೆಯೇ ತಮಗಿಂತ ಹೆಚ್ಚಿನ ಸಿರಿವಂತಿಕೆಯ ಮಟ್ಟದವರೊಡನೆ ಹೇವ ತೋರಿಸಲು ಹೋದರೆ ಅದು ಅವರ ನಿರ್ಣಯ ಬುದ್ಧಿಯ ಲೋಪವನ್ನು ಹೊರಹಾಕುತ್ತದೆ.

ವ್ಯಕ್ತಿಯ ವಿದ್ಯಾವಂತಿಕೆಯ ಮಟ್ಟವೂ ಆದರ್ಶಗಳ ನಿರ್ಮಾಣದಲ್ಲಿ ತನ್ನ ಪಾತ್ರ ಬೀರುತ್ತದೆ. ನೀವು ಉಚ್ಚ ವಿದ್ಯಾರ್ಹತೆ ಹೊಂದಿರುವಿರೆಂದುಕೊಳ್ಳಿ, ನೀವು ತೊಡುವ ಬಟ್ಟೆ, ಬಳಸುವ ಭಾಷೆ, ವರ್ತಿಸುವ ರೀತಿ ಇವುಗಳ ಮಟ್ಟವನ್ನು ಎಚ್ಚರಿಕೆಯಿಂದ ಕಾಯ್ದುಕೊಂಡು ಬರಬೇಕಾಗುತ್ತದೆ. ಇಲ್ಲದಿದ್ದರೆ, 'ನಾಯಿಯೊಂದು ಬೊಗಳಿತೆಂದು ನಿಮ್ಮಂಥ ಕಲಿತವರೂ ಅದಕ್ಕೆ ಬೊಗಳಿಯೇ ಉತ್ತರಿಸಬೇಕೆ?' ಎಂಬ ವ್ಯಂಗ್ಯಕ್ಕೆ ಗುರಿಯಾಗುತ್ತೀರಿ. ತನ್ನ ವಿದ್ಯೆಯ ಹೆಚ್ಚಳವನ್ನು ಪ್ರದರ್ಶಿಸುವವನನ್ನು ಸಮಾಜ ಸಹಿಸದು. ಜ್ಞಾನಿಯ ಮುಖ್ಯ ಲಕ್ಷಣವೆಂದರೆ ತನ್ನ ಸುತ್ತಲಿನ ಜನ ತನ್ನ ಆಗಾಧ ಜ್ಞಾನದ ಬಗೆಗೆ ಯೋಚಿಸದಂತೆ ಮಾಡುವುದು ಇತರರ ಜೊತೆಗೆ ಅವರಿಗೆ ತಿಳಿಯುವ ಶಬ್ದಗಳನ್ನುಪಯೋಗಿಸಿ, ಸುಲಲಿತ ಭಾಷಾ ಶೈಲಿಯ ಮೂಲಕ ಕಠಿಣ ವಿಷಯಗಳನ್ನು ಚರ್ಚಿಸಲು ಆತನಿಗೆ ಸಾಧ್ಯವಾಗದಿದ್ದರೆ, ಜನರು ಬಾಯಿ ಆರಳಿಸಿ ಆತನನ್ನೇ ನೋಡುತ್ತ, ಕೇವಲ ಕಿವಿಗಳಿಂದ ಕೇಳುತ್ತ, ಬುದ್ಧಿ ಮನಸ್ಸುಗಳು ವಿಷಯದಲ್ಲಿ ತೊಡಗದಿರುವವರಿಂದ, ಕೆಲ ಸಮಯದಲ್ಲಿಯೇ ಆಕಳಿಸತೊಡಗಬಹುದು. ಉಲ್ಲೇಖಿತ ಜ್ಞಾನಿಯಲ್ಲಿಯ ಸಾಮಾಜಿಕ ಹೊಂದಾಣಿಕೆಯ ಅಭಾವ ಸೂಚಕವಿದು.

ವೃತ್ತಿಧರ್ಮವೆಂಬುದೊಂದಿದೆ. ಇದು ಆಯಾ ವೃತ್ತಿಗಳಿಗೆ ಸಂಬಂಧಿಸಿದ ಪ್ರಮಾಣವೇ ಆಗಿದೆ. ಇದಕ್ಕೆ ಎರಡು ಪ್ರಮುಖ ಉದಾಹರಣೆಗಳು : ವೈದ್ಯ, ನ್ಯಾಯವಾದಿ. ಸಮಾಜ ಈ ಎರಡೂ ವರ್ಗದ ವೃತ್ತಿನಿರತರಿಗೆ ನಿಷ್ಠುರ ಪ್ರಮಾಣಗಳನ್ನು ವಿಧಿಸಿದೆ. ನಮ್ಮ ಹಾಗೂ ತಮ್ಮ ಕುಟುಂಬದ ಗೌರವ ಮತ್ತು ಆರೋಗ್ಯಕ್ಕೆ ಸಂಬಂಧಪಟ್ಟ ರಹಸ್ಯಗಳನ್ನು ನಾವು ಈ ಮಹನೀಯರೊಂದಿಗೆ ಹಂಚಿಕೊಂಡಿರುತ್ತೇವೆ. ಆದುದರಿಂದ ಇವರು ಬಹು ಎಚ್ಚರಿಕೆಯಿಂದ ಸಂವಾದದಲ್ಲಿ ತೊಡಗಿರಬೇಕಾಗುತ್ತದೆ. ಅಲ್ಲದೆ ಸಮಾಜ ಇವರಿಂದ ಹೆಚ್ಚಿನ ತ್ಯಾಗವನ್ನು ಬಯಸುತ್ತದೆ. ತಮ್ಮ ರೋಗಿಗಳ ಹಾಗೂ ಪಕ್ಷಕಾರರ ಹಿತಕ್ಕಾಗಿ ಇವರು ತಮ್ಮ ಹಾಗೂ ಅವಲಂಬಿತರ ಖಾಸಗಿ ಬದುಕಿನ ಸುಖ ಸಂತೋಷಗಳನ್ನು ಬಲಿಗೊಡಬೇಕಾಗುತ್ತದೆ. ಉಚ್ಚ ಆದರ್ಶಗಳನ್ನು ಪ್ರತಿಬಿಂಬಿಸುವ ಜೀವನ ವಿಧಾನಗಳನ್ನವರು ಅಳವಡಿಸಿಕೊಳ್ಳಬೇಕಾಗುತ್ತದೆ. ಸಮಾಜದಲ್ಲಿ ಅವರು ಹೊಂದಿದ ವಿಶೇಷ ಸ್ಥಾನಮಾನಗಳಿಗೆ ಸರಿದೂಗುವಂತೆ ಅವರಿಗೆ ಸಮಾಜ ಕರ್ತವ್ಯಗಳ ಹೊರೆ ಹೊರಿಸಿದೆ. ಇವುಗಳ ಉಲ್ಲಂಘನೆ ಅನೇಕ ಹುಬ್ಬುಗಳು ಏರುವುದಕ್ಕೂ ಗಂಟಿಕ್ಕುವುದಕ್ಕೂ ಕಾರಣವಾದೀತು!

ಈ ದಾರಿಯ ಪ್ರಮಾಣ ಈಗ ತಾನೇ ಅರ್ಧ ಮುಗಿಯಿತು. ಈಗ ವಿಶ್ರಾಂತಿ ಅವಶ್ಯ.

■

1. ಸಿಯೋಲ್‌ನ ಟೇಕ್ ವೋಂಡೋ ಸ್ಪರ್ಧೆಯಲ್ಲಿ ಭಾರತಕ್ಕೆ ವಿಶೇಷ ಪಾರಿತೋಷಕವನ್ನು 1985ರಲ್ಲಿ ನೀಡಲಾಯಿತು. ಯಾವುದು?

2. ಯಾವ ವರ್ಷದಲ್ಲಿ ಮೊದಲಿಗೆ ಅಂತರಾಷ್ಟ್ರೀಯ ಕಬಡ್ಡಿ ಪಂದ್ಯವನ್ನು, ಯಾವ ತಂಡಗಳ ನಡುವೆ ಆಡಿಸಲಾಯಿತು?

3. 'ಅರ್ಜುನ' ಪ್ರಶಸ್ತಿ ಪಡೆದ ಮೊದಲ ಕೇರಮ್ ಆಟಗಾರ ಯಾರು? ಯಾವಾಗ?

4. ಕ್ರೀಡೆಯ ಬಗೆಗೆ ಪ್ರಕಟವಾದ ಮೊದಲ ಭಾರತೀಯ ಪುಸ್ತಕ ಯಾವುದು? ಲೇಖಕರಾರು?

5. ಯಾವ ಆಟಕ್ಕೆ ಸಂಬಂಧಿಸಿದಂತೆ ಫ್ಲೈಯಿಂಗ್ ಸಾಸರ್ಸ್ ಎಂಬ ಪದವನ್ನು ಬಳಸಲಾಗುತ್ತದೆ?

12. ಯಾವ ಕ್ರೀಡಾ ಪದವು Amare (ಪ್ರೀತಿಸಲು) ಎಂಬ ಲ್ಯಾಟಿನ್ ಪದದಿಂದ ಬಂದಿದೆ?

13. Federation of International Football (FIFA) Association ಸ್ಥಾಪಿಸಲು ಏಳು ರಾಷ್ಟ್ರಗಳು ಸೇರಿ ಸಭೆ ನಡೆಸಿದವು. ಈ ಸಭೆ ನಡೆದುದು ಎಲ್ಲಿ?

14. 1920ರ ಒಲಿಂಪಿಕ್ ಆ್ಯಂಟ್‌ವೆರ್ಪ್‌ನಲ್ಲಿ ನಡೆದಾಗ ಹಾಕಿ ಆಟವನ್ನು ಪರಿಚಯಿಸಲಾಯಿತು. 1920 ಮತ್ತು 1928ರಲ್ಲಿ ಚಿನ್ನದ ಪದಕವನ್ನು ಗೆದ್ದ ಹಾಕಿ ತಂಡ ಯಾವುದು?

15. ಸಚಿನ್ ತೆಂಡೂಲ್ಕರ್ ಭಾರತದ ಪರ ಟೆಸ್ಟ್ ರಂಗಕ್ಕೆ ಪದಾರ್ಪಣೆ ಮಾಡಿದಾಗ ಅವರ ವಯಸ್ಸೆಷ್ಟು?

ಕ್ರೀಡೆ ಬಗ್ಗೆ ತಿಳಿಯಿರಿ

6. ಗೋಲ್ ಗೆರೆಯಿಂದ ಎಷ್ಟು ದೂರದಲ್ಲಿ ಪೆನಾಲ್ಟಿ ಹೊಡೆತಕ್ಕೆ ಚೆಂಡನ್ನು ಇಡಲಾಗುತ್ತದೆ?

7. ಕ್ರಿಕೆಟ್‌ನಲ್ಲಿ ಒಂದು ಇನ್ನಿಂಗ್ಸ್‌ನಲ್ಲಿ 7 ವಿಕೆಟ್ ಪಡೆದ ಮೊದಲ ಬೌಲರ್ ಯಾರು?

8. ಗಾಜಿನ ದವಡೆಯವರೆಂದು ಹೆಸರಾದ ಮುಷ್ಟಿಕಾಳಗದ ಪಟು ಯಾರು?

9. ಪುರುಷರ ಸಿಂಗಲ್ಸ್‌ನಲ್ಲಿ ವಿಂಬಲ್ಡನ್ ಚಾಂಪಿಯನ್ ಆದ ಮೊದಲ ಟೆನ್ನಿಸ್ ಪಟು ಯಾರು?

10. ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನವನ್ನು ಗಳಿಸಿದ ಏಶಿಯಾದ ಮೊದಲಿಗನ್ಯಾರು?

11. ಸತತವಾಗಿ ಎರಡು ಒಲಿಂಪಿಕ್ ಪಂದ್ಯಗಳ ಡೈವಿಂಗ್ ವಿಭಾಗದಲ್ಲಿ ಚಿನ್ನದ ಪದಕ ಗೆದ್ದ ಮೊದಲ ಪುರುಷ ಈಜುಗಾರನ್ಯಾರು?

16. ಇಂಗ್ಲೆಂಡಿನ ಮೊಟ್ಟ ಮೊದಲ ಸೈಕ್ಲಿಂಗ್ ಕ್ಲಬ್ ಯಾವುದು?

17. ವಿಶ್ವ ಹೆವಿವೇಟ್ ಬಾಕ್ಸಿಂಗ್ ಬಿರುದಿಗಾಗಿ ಸೆಣಸಿದ ಮೊದಲ ಅಮೇರಿಕ ಕ್ರೀಡಾಪಟು ಯಾರು?

18. ಒಲಿಂಪಿಕ್ ಕ್ರೀಡಾಕೂಟದಲ್ಲಿ ನಾರ್ವೆಯ ಸೋಂಜಾ ಹಿನೀಯವರ ಸಾಧನೆಯೇನು?

19. ಲಾನ್ ಟೆನ್ನಿಸ್ (ಹುಲ್ಲುಹಾಸಿನ ಟೆನ್ನಿಸ್ ಆಟದಲ್ಲಿ ಅಳವಡಿಸುವ ಚೆಂಡು) ಚೆಂಡು ಎಂಬರ್ಥದ ಯಾವ ಗ್ರೀಕ್ ಹೆಸರನ್ನು ಪಡೆದಿದೆ?

20. ಅಲ್ಬೆಟ್ರಾಸ್ ಎಂಬ ಹೆಸರನ್ನೂ ಹೊಂದಿದ್ದ ಖ್ಯಾತ ಈಜುಗಾರ ಯಾರು?

21. 1912ರ ಸ್ಟಾಕ್‌ಹೋಂ ಒಲಿಂಪಿಕ್‌ನಲ್ಲಿ ಯಾವ ದೇಶವು ಅತಿ ಹೆಚ್ಚು ಪದಕಗಳನ್ನು ಗೆದ್ದಿತು?

22. ಡಾಕ್ಟರ್ ಜೇಮ್ಸ್ ಸ್ಮಿತ್‌ರವರು ಸಂಶೋಧಿಸಿದ ಕ್ರೀಡೆ ಯಾವುದು?

23. ಗ್ರೀಸ್‌ನ ಒಲಿಂಪಿಯಾದಲ್ಲಿ ಪ್ರಥಮ ಒಲಿಂಪಿಕ್ ಕ್ರೀಡೆಗಳು ಯಾವಾಗ ನಡೆದವು?

24. ಇಟಲಿಯ ತಾರಾ ಗೋಲು ರಕ್ಷಕರಾದ ಗಿಯಾನಿಯ ಜನಪ್ರಿಯ ಹೆಸರೇನು?

25. ಯು.ಎಸ್. ಪುರುಷರ ಮುಕ್ತ ಟೆನ್ನಿಸ್ ಸಿಂಗಲ್ಸ್ ಪ್ರಶಸ್ತಿಯನ್ನು 1920ರಲ್ಲಿ, 1925ರಲ್ಲಿ ಮತ್ತು 1929ರಲ್ಲಿ ಗೆದ್ದವರು ಯಾರು?

26. Federation of International de Tirea I'Arc (FITA) 1931ರಲ್ಲಿ ಸ್ಥಾಪಿತವಾಯಿತು. ಇದು ಯಾವ ಕ್ರೀಡೆಗೆ ಸಂಬಂಧಿಸಿದ ಒಕ್ಕೂಟ?

27. ಬ್ರಿಟನ್ನಿನ ಯಾವ ಮಹಾ ಕ್ರೀಡಾಪಟು ಓಡುವುದೊಂದು ಶಿಕ್ಷಣವೆಂದು ಹೇಳಿದರು?

28. 1991ರ ಅಕ್ಟೋಬರ್ 25ರಂದು ಶಾರ್ಜಾದಲ್ಲಿ ನಡೆದ ವಿಲ್ಸ್ ಅಂತರ್‌ರಾಷ್ಟ್ರೀಯ ಕ್ರಿಕೆಟ್ ಟೂರ್ನಮೆಂಟ್‌ನ ಅಂತಿಮ ಪಂದ್ಯದಲ್ಲಿ ಭಾರತವು ಪಾಕಿಸ್ತಾನಕ್ಕೆ ಸೋತಿತು. ಈ ಪಂದ್ಯದಲ್ಲಿ ಪಂದ್ಯದ ಪುರುಷೋತ್ತಮರಾದವರು ಯಾರು?

29. ಇಲ್ ಬೂನ್ ಜೈಗಾಂಟ (ಸಭ್ಯದೈತ್ಯ) ಎಂಬ ಉಪಮಾನ ಪಡೆದ (ಹೆಸರು ಪಡೆದ) ವೇಲ್ಸ್‌ನ ಫುಟ್‌ಬಾಲ್ ಆಟಗಾರ ಯಾರು?


30. 203 ಸತತ ಗೆಲುವುಗಳನ್ನು ಪಡೆದು ಅಜೇಯರಾಗಿ ನಿವೃತ್ತ ಹೊಂದಿದ ಜಗತ್ ವಿಖ್ಯಾತ ಜಪಾನಿನ ಜ್ಯೂಡೋ ಪಟು ಯಾರು?

■ ಶಂಕರಗೌಡ. ವೈ. ಪಾಟೀಲ

ಉತ್ತರಗಳು

1. ಹೋರಾಟದ ಉತ್ಸಾಹಕ್ಕಾಗಿ ಬಹುಮಾನ.
2. 1976ರಲ್ಲಿ, ಭಾರತ ಮತ್ತು ಬಾಂಗ್ಲಾದೇಶದ ನಡುವೆ.
3. ಜೆ. ಪಿಚ್ಚಯ್ಯ, 1970ರಲ್ಲಿ.
4. ಕ್ರಿಕೆಟ್‌ಗೈಡ್ (1891) - ಮಹಮ್ಮದ್ ಅಬ್ದುಲ್ಲಾ ಖಾನ್.
5. ಡಿಸ್ಕಸ್ ಥ್ರೊ ಆಟದಲ್ಲಿ.
6. 12 ಗಜ.
7. ವಿನ್ಸಟನ್ ಡೇವೀಸ್ (ವೆಸ್ಟ್ ಇಂಡೀಸ್)
8. ಲಂಡನ್ನಿನ ಫ್ರಾಂಕ್ ಬ್ರೂನೋ.
9. ಸ್ಪೆನ್ಸರ್ ಗೋರ್.
10. ಚೀನಾದ ಹುವಾಂಗ್ ಝಿಹಾಂಗ್ ಎಂಬಾಕೆ, ಶಾಟ್‌ಪುಟ್‌ದಲ್ಲಿ (1991).
11. ಅಮೇರಿಕಾದ ಗ್ರೆಗ್ ಲೂಗಾನಿಸ್. 1984 ಮತ್ತು 1988ರಲ್ಲಿ ಗೆದ್ದರು.
12. ಅಮೇಚೂರ್ (ಹವ್ಯಾಸಿ ಕ್ರೀಡೆಯ ಮೇಲಿನ ಪ್ರೀತಿಯಿಂದಾಗಿ ಆಟವಾಡುವುದು)
13. ಫ್ರಾನ್ಸ್ ದೇಶದ ಪ್ಯಾರಿಸ್‌ನಗರದಲ್ಲಿ.
14. ಗ್ರೇಟ್ ಬ್ರಿಟನ್.
15. ಕೇವಲ 16 ವರ್ಷ, 201 ದಿನಗಳು.
16. 1867ರಲ್ಲಿ ಸ್ಥಾಪನೆಯಾದ ಲಿವರ್‌ಪೂಲ್ ವೆಲಾಸಿಪೆಡ್ ಕ್ಲಬ್.
17. ಟಾಂ ಮಾಲಿನಿಕ್ಸ್.
18. 1928, 32 ಮತ್ತು 36ರಲ್ಲಿ, ಸ್ಕೇಟಿಂಗ್‌ನಲ್ಲಿ ಚಿನ್ನ ಗೆದ್ದದ್ದು.
19. ಸ್ಪೈರಿ ಸ್ಟೊಕ್.
20. ಜರ್ಮನಿಯ ಮೈಕೇಲ್ ಗ್ರಾಸ್.
21. ಸ್ವೀಡನ್.
22. ಬಾಸ್ಕೆಟ್ ಬಾಲ್.
23. ಕ್ರಿಸ್ತಪೂರ್ವ 776ರಲ್ಲಿ.
24. ದಿ ಮ್ಯಾಜಿಕ್ ಕ್ಯಾಟ್.
25. ಅಮೇರಿಕಾದ ಬಿಲ್ ಬಿಲ್ಡನ್.
26. ಧನುರ್ವಿದ್ಯೆ.
27. ಸೆಬಾಸ್ಟಿಯನ್ ಕೊ.
28. ಅಕಿಬ್ ಜಾವೇದ್ (ಪಾಕಿಸ್ತಾನ).
29. ಜಾನ್ ಚಾರ್ಲ್ಸ್.
30. ಯಾಶು ಹಿರೋ ಯಮಾಶಿಟ, 1977-85 ಚಾಂಪಿಯನ್ ಆಗಿದ್ದರು.

ಪ ದ ಬ ಂ ಧ 18



ಪದಬಂಧ 17ರ ಸರಿಯುತ್ತರ

ಎಡದಿಂದ ಬಲಕ್ಕೆ

1.ನಾಗರಾಜ 4.ಮೋಸಗಾರ 6.ನಳ 8.ದೇಹ 9.ಮಗು 10.ಸಕಲ 12.ಜಳ 15.ರುದ್ರಾವತಾರ 18.ನಾಟ್ಯ 19.ಉಸುಕು 21. ಶವ 22.ಭೀಮ 23.ಬರ 25.ದಮಯಂತಿ 26.ಹಗರಣ.

ಮೇಲಿನಿಂದ ಕೆಳಕ್ಕೆ

2.ಗರಡಿ ಮನೆ 3.ಜನ 4.ಮೋಹ 5.ಗಾಳಿ ಬೆಳಕು 7.ಳರಸ 8.ದೇಗುಲ 11.ಕನವರಿಸು 13.ಕರುಣೆ 14.ಸರಕು 16.ಅನಾಥಾಶ್ರಮ 17.ನವಸಾಗರ 19.ಉತ್ತಮ 20.ಕುಟುಂಬ 22. ಭೀತಿ 24. ರಹ

ಎಡದಿಂದ ಬಲಕ್ಕೆ

1. ಅರಾಜಕತೆಯ ಪರಿಸ್ಥಿತಿ ಇದ್ದರೂ ಈತ ಪೂಜಿಸುವಾತ .... (4)
4. ಹತದ ನಡುವೆ ಹಾರಿ ಬಂದ ಆಂಜನೇಯ .... (4)
6. ಕಣ್ಣಲ್ಲಿ ಕಣ್ಣಿಟ್ಟು ಕಾಯ್ದುಕೊಂಡ ಮುತ್ತಿನ ಹರಳು ತಿರುಗಿದೆ ..... (2)
8. ಊರಿಗೆ ಮಹಾಬೇನೆ ಬಂದಾಗ ಶಾಂತಿ ಮಾಡಿಸಿಕೊಂಡ ದುರ್ಗೆ .... (2)
9. ತಜಿ ವಿಜಿ ಗೊಂದಲದ ನಡುವೆ ಮಾಡಿಕೊಂಡ ಒಡಂಬಡಿಕೆ ಒಪ್ಪಿಗೆ.. (2)
10. ಹಿರಿತನದಲ್ಲಿ ಏನೂ ಇಲ್ಲದ್ದು............................. (3)
12. ನುಣುಪಾದ ಆಕಾಶ ತಿರುಗಿದೆ .... (2)
15. ಕದನದಲ್ಲಿ ತೋರಿಸಿದ ಹತ್ತು ಮುಖದ ರೂಪ.................. (5)
18. ಊರ ಜನರು ಮಾಡಿದ ಸಹಿ .... (2)
19. ವಿಮಾನದಲ್ಲಿ ಪ್ರಯಾಣಿಸಿದ ಮನುಷ್ಯ .... (3)
21. ಕೋಟು ತೊಟ್ಟವರಿಗೂ ಬರುವ ಸಿಟ್ಟು......................... (2)
22. ದೀನ ದಲಿತರಿಗೆ ನೀಡಿದ ಸಹಾಯ .... (2)
23. ವಲಯದಲ್ಲಾದ ನಾಶ.. (2)
25. ಕೊನೆಗೆ ಕೈ ಹಿಡಿದ ಈತ ಪ್ರಿಯತಮೆಯ ಪ್ರೀತಿಸುವಾತ........... (4)
26. ಜೋಗದ ಜಲಪಾತದೊಂದಿಗೆ ಪ್ರಸಿದ್ಧಿ ಪಡೆದ ನದಿ .... (4)

ಮೇಲಿನಿಂದ ಕೆಳಕ್ಕೆ

2. ಅರಸರಲ್ಲಿಯೇ ಅಧಿಕ ರಾರಾಜಿಸುವ ಚಕ್ರವರ್ತಿ................. (5)
3. ಹಣಕೊಟ್ಟು ಕೇಳಿದ ಶಕುನ...................................... (2)
4. ದೈತ್ಯರನ್ನು ಸಂಹರಿಸಿದ ಕಮಲನಯನ .... (2)
5. ಗಂಟಲು ಊದಿಕೊಂಡಾಗ ಹೆಸರಿಸಿದ ಕಪಿಯ ಹೆಸರಿನ ಬೇನೆ ... (5)
7. ಮರ ಕಡಿಯಲು ಕಾರಣವಾದ ಹೊಟ್ಟೆಕಿಚ್ಚು........................ (3)
8. ಮಾತು ಕಲಿಸಿ, ಆನೆ ಪಳಗಿಸುವ ಆತ............................ (3)
11. ಅಹಿತಕರ ಘಟನೆ ನಡೆದಾಗ ತಿಳಿಹೇಳಿದ ಸುಬೋಧ ನುಡಿ....... (5)
13. ಕದ ಹಾಕಿ ಮಾಡಿದ ಜಗಳ .... (3)
14. ಶರಣು ಹೊಡೆದರೂ ತಪ್ಪಲಾರದ ಸಾವು .... (3)
16. ಅಣುಕಣಕ್ಕೂ ಅವಶ್ಯವಾದ ಸೂರ್ಯನ ಆಗಮನ.............. (5)
17. ಅಪವಾದ ಹೊತ್ತು, ಸಂಕಟ ಸಮಯದಲ್ಲಿ ಸಹಾಯ ಮಾಡಲು ಬಂದವ... (5)
19. ಮಾನ ಕಳೆಯಲು ಕಾರಣವಾದ ಅಳೆಯುವ ಸಾಧನ .... (3)
20. ವಲದ ನಡುವೆ ಮಾತುಗಾರಿಕೆ ತೋರಿಸಿದ ಕಾಯ್ದೆ ಕಾನೂನು ಓದಿದವ... (3)
22. ಸರದಾರ ಸುತ್ತಿದ ನೂಲು.. (2)
24. ವಿಶೇಷ ಸಮಾಚಾರದೊಂದಿಗೆ ಸಿಕ್ಕ ಜಯ .... (2)

■ ಜವಳಿ ವೀರಣ್ಣ

(ಉತ್ತರ: ಮುಂದಿನ ಸಂಚಿಕೆಯಲ್ಲಿ)

ದೂರ ದರ್ಶನ



ದೂರದರ್ಶನ ಪೆಟಿಗೆಯನ್ನು
ದೂರದಿಂದಲೇ ನೋಡು ಚಿಣ್ಣ
ಸನಿಹ ಕುಳಿತರೆ ಬೆಳಕ ಕಿರಣವು
ಕೆಡಿಸಿ ಬಿಡುವುದು ನಿನ್ನ ಕಣ್ಣ!

–'ಸಿಸು' ಸಂಗಮೇಶ

ಸೂರ್ಯ

ಹೊನ್ನಬಿಂದಿಗೆಯ
ತುಂಬಾ ಬೆಳಕನು
ತರುತಲಿ ಎಲ್ಲೆಡೆ ಚೆಲ್ಲುವನು
(ಹರಡುವನು)



ಸಂಜೆಗೆ ಹೋಗುತ
ಬೆಳಕನು ಬಳಿಯುತ
ಬಿಂದಿಗೆ ತುಂಬುವ ಎಲ್ಲವನು
(ಹೊರಡುವನು)

–'ಸಿಸು' ಸಂಗಮೇಶ

ಅತಿ ಆಸೆ ಗತಿ ಕೇಡು!

ಊರ ಹೊರಗೆ ಕಾಡಿನಲ್ಲಿ
ಕೊಳವು ಇದ್ದಿತು.
ಕೊಕ್ಕರೆಗಳ ಸ್ನೇಹದಲಿ
ಆಮೆ ನಲಿಯಿತು.

ದಿನವು ಪಕ್ಷಿ ಹಾರುವುದನು
ಆಮೆ ನೋಡಿತು.
ಮಿತ್ರರಲ್ಲಿ ಹಾರುವಾಸೆ
ಬಗೆಗೆ ಹೇಳಿತು.

ಕೊಕ್ಕರೆಗಳು ಆಮೆಗಾಗಿ
ಉಪಾಯ ಹುಡುಕಿತು.
'ಕೋಲ ಮಧ್ಯೆ ಕಚ್ಚಿ ನಿಲ್ಲು'
ಸಲಹೆ ಒಪ್ಪಿತು.

ಕೊಕ್ಕರೆಗಳು ಕೋಲ ತುದಿಯ
ಹಿಡಿದು ಹಾರಿತು.
ಹಿಗ್ಗಿ ಆಮೆ ನಕ್ಕು ನಲಿದು
ಹಾಡ ಹೇಳಿತು.

ಬಂಡೆ ಮೇಲೆ ಬಿದ್ದ ಆಮೆ
ಸಾವನಪ್ಪಿತು.
'ಅಯ್ಯೋ ಪಾಪ!' ಪಕ್ಷಿಕುಲ
ದುಃಖಪಟ್ಟಿತು.

ಮೂರ್ಖತನಕೆ ಆಮೆ ಪ್ರಾಣ
ನಷ್ಟ ಹೊಂದಿತು.
ಜಾಣತನದಿ ಯೋಚಿಸೆಂದು
ನೀತಿ ಸಾರಿತು.

■ 'ನಾಗೀ' ಚಲ್ದಿಗಾನಹಳ್ಳಿ

ಪ್ರಕೃತಿ ನಿಯಮ

ವಿಜಯನಗರ ಸಾಮ್ರಾಜ್ಯದಲ್ಲಿ ನರಹರಿ ಎಂಬ ಬ್ರಾಹ್ಮಣನಿದ್ದ. ಇವನು ಅರಣ್ಯಕ್ಕೆ ತೆರಳಿ ಹಲವಾರು ವರ್ಷಗಳ ಕಾಲ ದೇವರನ್ನು ಕುರಿತು ತಪಸ್ಸು ಮಾಡಿದ. ಒಂದು ದಿನ ಅವನ ಭಕ್ತಿಗೆ ಮೆಚ್ಚಿ ದೇವು ಪ್ರತ್ಯಕ್ಷನಾಗಿ ''ಭಕ್ತ ನಿನ್ನ ಭಕ್ತಿಗೆ ಮೆಚ್ಚಿದ್ದೇನೆ. ಈ ಮೂರು ಹಣ್ಣನ್ನು ತೆಗೆದುಕೋ. ನಿನಗೆ ಬೇಕಾದ ಕೋರಿಕೆಯನ್ನು ಮನಸ್ಸಿನಲ್ಲಿಯೇ ಧ್ಯಾನಿಸಿ ಒಂದು ಹಣ್ಣನ್ನು ತಿಂದರೆ ಆ ಕೋರಿಕೆ ನೆರವೇರುತ್ತದೆ. ನಿನಗೆ ಮಂಗಳವಾಗಲಿ'' ಎಂದು ಹೇಳಿ, ಮೂರು ಸುಂದರವಾದ ಹಣ್ಣನ್ನು ನೀಡಿ ಅದೃಶ್ಯನಾದನು. ನರಹರಿಯು ಸಂತೋಷದಿಂದ ಆ ಹಣ್ಣುಗಳನ್ನು ಸ್ವೀಕರಿಸಿ ಮನೆಗೆ ಹಿಂತಿರುಗಿದನು.

ಮನೆಯ ಬಾಗಿಲಲ್ಲಿ ನರಹರಿಯ ಪತ್ನಿಯು ಹಾಲು ಮಾರುವವಳೊಂದಿಗೆ ಜಗಳವಾಡುತ್ತಿದ್ದಳು. ಹಾಲು ಮಾರುವವಳು ಹಾಲಿನ ಜೊತೆ ಸಾಕಷ್ಟು ನೀರನ್ನು ಬೆರೆಸಿರುವುದೇ ಜಗಳಕ್ಕೆ ಕಾರಣವಾಗಿತ್ತು. ಆದರೂ ಹಾಲಿನವಳು ತಾನು ನೀರನ್ನು ಖಂಡಿತವಾಗಿಯೂ ಸೇರಿಸಿಲ್ಲ ಎಂದು ವಾದಿಸುತ್ತಿದ್ದಳು. ನರಹರಿಗೆ ತನ್ನ ಮನೆಯ ಮುಂದಿನ ದೃಶ್ಯವನ್ನು ಕಂಡು ಹಾಲಿನವಳ ಮೇಲೆ ತುಂಬಾ ಕೋಪ ಬಂತು. ಜಗತ್ತಿನಲ್ಲಿ ನೀರಿರುವುದರಿಂದಲೇ ಹಾಲಿನವಳು ಮೋಸ ಮಾಡುತ್ತಿದ್ದಾಳೆ. ಆದ್ದರಿಂದ ಜಗತ್ತಿನಲ್ಲಿರುವ ನೀರೆಲ್ಲವೂ ಹಾಲಾಗಲಿ ಎಂದು ಮನಸ್ಸಿನಲ್ಲಿಯೇ ಧ್ಯಾನಿಸಿ ಒಂದು ಹಣ್ಣನ್ನು ತಿಂದು ಬಿಟ್ಟನು.

ನರಹರಿ ಹಣ್ಣನ್ನು ತಿಂದ ಮರುಕ್ಷಣವೇ ಜಗತ್ತಿನಲ್ಲೆಲ್ಲಾ ಬದಲಾವಣೆಗಳಾದವು. ನದಿ, ಸಮುದ್ರದಲ್ಲಿ ಹರಿಯುವ ನೀರೆಲ್ಲಾ ಹಾಲಾಗಿ ಹೋಯಿತು. ಗುಡಿಯಲ್ಲಿ ತೆಂಗಿನ ಕಾಯಿ ಒಡೆದಾಗ ಅದರಲ್ಲಿ ನೀರಿನ ಬದಲಾಗಿ ಹಾಲು ಹೊರ ಬಂದಿತು. ಮನುಷ್ಯರು ದುಃಖದಿಂದಲೋ, ಸಂತೋಷದಿಂದಲೋ ಅತ್ತರೆ ಕಣ್ಣಲ್ಲಿ ಹಾಲು ಬರಲಾರಂಭಿಸಿತು. ಆ ಸಂಜೆ ಆಕಾಶದಿಂದ ಮಳೆಯ ಹನಿಗಳು ಬಿದ್ದಾಗ, ಅವೆಲ್ಲಾ ಹಾಲಿನ ಹನಿಗಳೇ ಆಗಿದ್ದವು. ಗಿಡ, ಬಳ್ಳಿ, ಹೂವುಗಳ ಮೇಲೆ ಇಬ್ಬನಿಯ ಬದಲಾಗಿ ಹಾಲಿನ ಹನಿಗಳು ಕಂಡು ಬಂದವು.

ಜನರಿಗೆ ಈ ಬದಲಾವಣೆಗಳನ್ನು ಕಂಡು ತುಂಬಾ ಸಂತೋಷವಾಯಿತು. ಇನ್ನು ಮುಂದೆ ತಮಗ್ಯಾರೂ ಹಾಲಿನಲ್ಲಿ ನೀರನ್ನು ಬೆರೆಸಿ ಮೋಸ ಮಾಡುವುದು ಸಾಧ್ಯವಿಲ್ಲವೆಂದು ತಿಳಿದು ಹಿರಿ ಹಿರಿ ಹಿಗ್ಗಿದರು. ಅಂದು ರಾತ್ರಿಯೇ ಪ್ರತಿಯೊಬ್ಬರ ಮನೆಯಲ್ಲಿ ಹಾಲಿನ ಪಾಯಸವನ್ನು ಹೇರಳವಾಗಿ ಮಾಡಿ ತಿಂದರು. ಪ್ರತಿಯೊಬ್ಬ ಪ್ರಜೆಯೂ ನರಹರಿಯನ್ನು ಕಂಡು ಅವನಿಂದ ತಮಗೆ ತುಂಬಾ ಉಪಕಾರವಾಯಿತೆಂದು ತಿಳಿಸಿದರು.

ಪ್ರತಿದಿನದಂತೆ ಮರುದಿನವೂ ಸೂರ್ಯೋದಯದೊಂದಿಗೆ ಬೆಳಗಾಯಿತು. ಜನರು ಮುಖ ತೊಳೆಯಲು ಹೊರಟಾಗಲೇ ನೀರೆಲ್ಲಾ ಹಾಲಾಗಿರುವ ವಿಷಯ ನೆನಪಿಗೆ ಬಂತು. ಹಾಲಿನಿಂದ ಮುಖ ತೊಳೆದರೆ, ಸ್ನಾನ ಮಾಡಿದರೆ ಮೈಯೆಲ್ಲಾ ಅಂಟಂಟಾಯಿತು. ಹಿಂದಿನ ದಿನವೆಲ್ಲಾ ಹಾಲಿನ ಮಳೆ ಬಂದ ಕಾರಣ ರಸ್ತೆಯೆಲ್ಲಾ ಅಂಟಂಟಾಗಿತ್ತು. ರಸ್ತೆಯಲ್ಲಿ ಓಡಾಡುವುದೇ ಕಷ್ಟವಾಗಿತ್ತು. ಹೆಂಗಸರಿಗೆ ಮನೆ ತೊಳೆಯಲು, ಪಾತ್ರೆ ಬೆಳಗಲು, ಅಂಗಳಕ್ಕೆ ರಂಗೋಲಿ ಹಾಕಲು ನೀರಿಲ್ಲದ ಕಾರಣ ತುಂಬಾ ಅನಾನುಕೂಲವಾಯಿತು. ಊಟದ ಸಮಯದಲ್ಲಿ ನೀರಿನ ಬದಲಿಗೆ ಹಾಲನ್ನು ಕುಡಿಯುವುದು ಯಾರಿಗೂ ತೃಪ್ತಿಯನ್ನು ಕೊಡಲಿಲ್ಲ.

ಸಾಯಂಕಾಲದ ವೇಳೆಗೆ ಪ್ರಜೆಗಳಿಗೆಲ್ಲಾ ನಡೆದ ಬದಲಾವಣೆಯ ಅನಾಹುತ ಅರಿವಿಗೆ ಬಂದಿತು. ನರಹರಿಯಿಂದಲೇ ತಮಗೆಲ್ಲರಿಗೂ ಈ ಸಮಸ್ಯೆ ಬಂದಿತೆಂದು ನಿರ್ಧರಿಸಿದ ಜನರು ಅವನ ಮನೆಗೆ ಹೋದರು. ನರಹರಿಯನ್ನು ಕಂಡು, ಹೇಗಾದರೂ ಮಾಡಿ ನೀರು ದೊರಕುವಂತೆ ಮಾಡೆಂದು ಪ್ರಾರ್ಥಿಸಿದರು. ನರಹರಿಯು ಜನರ ಸಮಸ್ಯೆಯನ್ನು ಕೇಳಿ, ಜಗತ್ತಿನಲ್ಲಿ ಹಾಲಿಗಿಂತಲೂ ನೀರೇ ಮಹತ್ವದ್ದೆಂದು ನಿರ್ಧರಿಸಿದನು. ಆ ಕ್ಷಣವೇ ಜಗತ್ತಿನ ಹಾಲೆಲ್ಲಾ ನೀರಾಗಲಿ ಎಂದು ಮನಸ್ಸಿನಲ್ಲಿ ಧ್ಯಾನಿಸಿ ಮತ್ತೊಂದು ಹಣ್ಣನ್ನು ತಿಂದನು. ಜನತೆಯೆಲ್ಲಾ ಸಂತೋಷದಿಂದ ತಂತಮ್ಮ ಮನೆಗಳಿಗೆ ತೆರಳಿದರು.

ಮನೆಗೆ ತೆರಳಿದ ಜನರು ತೃಪ್ತಿಯಾಗುವವರೆಗೆ ನೀರನ್ನು ಕುಡಿದರು. ಮನೆಯನ್ನೆಲ್ಲಾ ಸ್ವಚ್ಛ ಮಾಡಿಕೊಂಡರು. ಆಕಾಶದಿಂದ ಮತ್ತೊಮ್ಮೆ ಮಳೆಯಾಗಿ ರಸ್ತೆಗಳೆಲ್ಲಾ ಸ್ವಚ್ಛವಾದವು.


ಆದರೆ ಮರುಕ್ಷಣವೇ ಮತ್ತೊಂದು ಸಮಸ್ಯೆ ಎದುರಾಯಿತು. ಚಿಕ್ಕ ಮಕ್ಕಳೆಲ್ಲಾ ಹಾಲಿಗಾಗಿ ಹಠ ಮಾಡಲಾರಂಭಿಸಿದವು. ಆಕಳ ಕರು ಕೆಚ್ಚಲಿನಲ್ಲಿ ಹಾಲಿನ ಬದಲಾಗಿ ನೀರು ಜಿನುಗಲಾರಂಭಿಸಿತು.

ಜನರಿಗೆ ಮತ್ತೊಮ್ಮೆ ನಡೆದ ಅನಾಹುತದ ಅರಿವಾಯ್ತು. ಅವರೆಲ್ಲಾ ಒಂದುಗೂಡಿ ನರಹರಿಯ ಮನೆಗೆ ತೆರಳಿದರು. ಹೇಗಾದರೂ ಮಾಡಿ ಆದ ಬದಲಾವಣೆಯನ್ನು ನಿಲ್ಲಿಸಿ, ನೀರು-ಹಾಲು ಮೊದಲಿನಂತೆಯೇ ಇರುವಂತೆ ಮಾಡಬೇಕೆಂದು ಪ್ರಾರ್ಥಿಸಿದರು. ಅಷ್ಟೇ ಅಲ್ಲದೆ ಕೋಪಗೊಂಡಿದ್ದ ಜನರು, ನರಹರಿ ಹಾಗೇನಾದರೂ ಮಾಡದಿದ್ದರೆ ಅವನನ್ನೇ ಕೊಲ್ಲುವುದಾಗಿ ಬೆದರಿಸಿದರು.

ನರಹರಿಗೆ ಕೋಪಗೊಂಡ ಜನರನ್ನು ಕಂಡು ಭಯವಾಯಿತು. ಜೊತೆಗೆ ತನ್ನ ಬದಲಾವಣೆಯಿಂದ ಅಲ್ಲೋಲ ಕಲ್ಲೋಲದ ಅರಿವಾಯಿತು. ತಕ್ಷಣವೇ ಜಗತ್ತಿನಲ್ಲಿ ಹಾಲು-ನೀರಿನ ಪ್ರಮಾಣ ಮೊದಲಿನಷ್ಟೇ ಇರಲೆಂದು ಮನಸ್ಸಿನಲ್ಲಿಯೇ ಧ್ಯಾನಿಸಿ ಮೂರನೆಯ ಹಣ್ಣನ್ನು ತಿಂದನು. ಜಗತ್ತು ಮೊದಲಿನಂತೆಯೇ ಬದಲಾಯಿತು. ಜನತೆಯೆಲ್ಲಾ ನೆಮ್ಮದಿಯಿಂದ ಮನೆಗೆ ತೆರಳಿದರು.


ಹೀಗೆ ಅವಶ್ಯಕವಾಗಿ ಪ್ರಕೃತಿಯ ನಿಯಮಗಳನ್ನು ಬದಲಾಯಿಸಲು ಪ್ರಯತ್ನ ಪಟ್ಟ ನರಹರಿ ತನ್ನ ಅಪೂರ್ವ ತಪಶಕ್ತಿಯಿಂದ ಪಡೆದುಕೊಂಡ ಮೂರೂ ಹಣ್ಣನ್ನು ಕಳೆದುಕೊಂಡಿದ್ದ.

■ ವಸುಧೇಂದ್ರ



ಎಲ್ಲರೂ ಮಾಡೋದು ಹೊಟ್ಟೆಗಾಗಿ ! ....
ಆದರೆ ನಾವೆಲ್ಲಾ ಮಾಡೋದು
ಈ ದೊಡ್ಡ ಹೊಟ್ಟೆಗಾಗಿ !!

ಇತ್ಯರ್ಥವಾದ ಸತ್ಯ



ಸೋಲಾಗುವ ಮುನ್ನವೇ ಅದರ ಛಾಯೆ ಮೂಡಿತು. ಉತ್ತಮ ಗೊಬ್ಬರ ಸಿಗದೇ ಬೆಳೆ ಬಾರದಾಯಿತು. ಕಡೆಗಿತ್ಯರ್ಥವಾದದ್ದು ರಿಮೇಕ್ ಚಿತ್ರಗಳೇ ಸೊಗಸೆಂಬುದು.

ನಮ್ಮ ಒರಿಜಿನಲ್ ಸೃಷ್ಟಿಕರ್ತರು ಯಾಕೋ ದಿನೇ ದಿನೇ ಡಲ್ ಆಗುತ್ತಿದ್ದಾರೆ. ದೇಸಾಯಿ ಮುಖವನ್ನೇ ನೋಡಿ, ನಿರ್ಮಾದಲ್ಲಿ ಅದ್ದಿತೆಗೆದಂತೆ ಪೂರ್ತಿ ಬಿಳುಚಿಕೊಂಡಿದೆ. ಇದಕ್ಕೆ ಅನಾರೋಗ್ಯವೂ ಕಾರಣವಿರಬಹುದು, ಜೊತೆಗೆ ಸೋಲೆಂಬ ಶನಿಯ ಕಾಟ.

'ಪ್ರತ್ಯರ್ಥ' ಚಿತ್ರ ಗಲ್ಲಾಪೆಟ್ಟಿಗೆಯಲ್ಲಿ ಸೋಲುವ ಮುನ್ನವೇ ದೇಸಾಯಿ ಕ್ಷಮಾಯಾಚನೆ ಶುರುಹಚ್ಚಿಕೊಂಡಿದ್ದರು. ಯಾಕೆಂದರೆ ಅವರಿಗೇ ತಮ್ಮ ಸೃಷ್ಟಿಯ ಬಗ್ಗೆ ಖಾತ್ರಿಯಿರಲಿಲ್ಲ. ಕ್ರೈಮ್ ಥ್ರಿಲ್ಲರ್ ಚಿತ್ರಗಳಿಂದಲೇ ಹೆಸರು ಮಾಡಿದ ದೇಸಾಯಿ 'ಪ್ರತ್ಯರ್ಥ' ದಂಥ ಥ್ರಿಲ್ಲರ್‌ನಲ್ಲಿ ಕೈ ಸುಟ್ಟುಕೊಂಡಿದ್ದನ್ನು ನೋಡಿದರೆ, ತನ್ನ ಫೇವರಿಟ್ ಶಾಟ್‌ಗೇ ಬಲಿಯಾಗುವ ಬ್ಯಾಟ್ಸ್‌ಮೆನ್ ನೆನಪಾಗುತ್ತಿದ್ದಾನೆ.

ಇಂಥ ಅನಾಹುತಗಳು ಯಾಕಾಗುತ್ತಿವೆ? ಆತ್ಮವಿಶ್ವಾಸ ಕುಸಿಯುತ್ತಿರುವ ಸೂಚನೆಯೇ?

ನಿಜ, ದೇಸಾಯಿ ವಯಸ್ಸು ಜಾಸ್ತಿಯಾಗುತ್ತಿದ್ದಂತೆ, ಆತ್ಮವಿಶ್ವಾಸ ಕಡಿಮೆಯಾಗುತ್ತಿದೆ. ಆ ಜಾಗದಲ್ಲಿ ಗೊಂದಲ, ಗಲಿಬಿಲಿಗಳು ಆವರಿಸಿಕೊಂಡಿವೆ. ಆಗ ಅವರು ಬದುಕಿನ ಅನಿವಾರ್ಯಗಳ ಬಗ್ಗೆ, ಅದರ ಸಲುವಾಗಿ ಒಂದಿಷ್ಟು ರಾಜಿಯಾಗುವುದರ ಬಗ್ಗೆ, ಹದಗೆಡುತ್ತಿರುವ ಆರೋಗ್ಯದ ಬಗ್ಗೆ, ಸಂಸಾರದ ನೋವು - ನಲಿವುಗಳ ಬಗ್ಗೆ ಮಾತಾಡುತ್ತಿದ್ದಾರೆ. ಸಿನಿಮಾವೇ ನನ್ನುಸಿರು ಎಂದು ಏದುಸಿರು ಬಿಡುತ್ತಿದ್ದ ದೇಸಾಯಿಯೇ ಇಂಥ ಮಾತುಗಳನ್ನಾಡುತ್ತಿದ್ದಾರೆಯೇ ಎಂದು ಅಚ್ಚರಿಪಡುವಷ್ಟು ಅವರ ಧಾಟಿ ಬದಲಾಗಿದೆ. ಸೃಜನಶೀಲನೊಬ್ಬ ತನ್ನೆಲ್ಲಾ ಆದರ್ಶಗಳಿಗೆ ತಿಲಾಂಜಲಿ ಇಡುತ್ತಿರುವುದರ ಮೊದಲ ಸೂಚನೆಯಿದು.

ಹಾಗಿದ್ದೂ ದೇಸಾಯಿಯನ್ನು ನಾವು ದೂರುವಂತಿಲ್ಲ. ಅವರು ತಮಗೊಲ್ಲದ ಜಾಗದಲ್ಲಿ ಹೊಸದನ್ನು ಬೆಳೆಯಹೊರಟರು. ಅದಕ್ಕೆ ಸರಿಯಾದ ಗೊಬ್ಬರ ಸಿಗಲಿಲ್ಲ. ಅವರ ಸುತ್ತಲಿನ ವಾತಾವರಣ ಯಾವ ಪರಿ ಭ್ರಷ್ಟವಾಗಿದೆ ಅಂದರೆ ಈಗ ಅವರಿಗೆ ಅದರ ಜೊತೆ ಲೀನವಾಗದೆ ಅನ್ಯ ಮಾರ್ಗವೇ ಇಲ್ಲ. ಅದಕ್ಕಾಗಿ ದೇಸಾಯಿ ರೀಮೇಕ್ ಮಾಡುತ್ತಿದ್ದಾರೆ. ತಾನು ಮಾಡುತ್ತಿರುವುದು ತಪ್ಪಲ್ಲ ಎನ್ನುವುದನ್ನು ಸಮರ್ಥಿಸಿಕೊಳ್ಳುವುದಕ್ಕೆ ಇನ್ನೊಂದಿಷ್ಟು ಕಥೆಗಳನ್ನು, ವಿವರಣೆಗಳನ್ನು ನೀಡುತ್ತಿದ್ದಾರೆ. ದೇಸಾಯಿ ಚಿತ್ರದ ಅಭಿಮಾನಿಗಳು ಅವರನ್ನು ಸಿಂಪತಿಯಿಂದ ನೋಡುತ್ತಿದ್ದಾರೆ. ಹೋಗ್ಲಿ ಬಿಡಿ, ರೀಮೇಕ್ ಮಾಡಿಯಾದರೂ ದೇಸಾಯಿ ಬದುಕು ಸಾಗಲಿ ಎಂಬರ್ಥದ ಮಾತಾಡುತ್ತಿದ್ದಾರೆ. ಅಲ್ಲಿಗೆ ಕಳೆದ 10 ವರ್ಷದಲ್ಲಿ ದೇಸಾಯಿ ಸಂಪಾದಿಸಿದ ಕ್ರೆಡಿಬಿಲಿಟಿ ಮಣ್ಣುಪಾಲಾದಂತೆ, ಇನ್ನೇನಿದ್ದರೂ ಅವರು ಸಂಪಾದಿಸುವುದು ತುತ್ತು ಅನ್ನಕ್ಕೆ ಬೊಗಸೆ ನೀರಿಗೆ ಬೇಕಾದ ಪರಿಕರಗಳನ್ನು.


ಬಿಜಾಪುರದಿಂದ ಬಂದು ಬೆಂಗಳೂರಲ್ಲಿ ಕನಸಿನ ಅರಮನೆ ಕಟ್ಟಿದ ಹುಡುಗನೊಬ್ಬನ ದುರಂತ ಕಥೆಯಿದು.

★ ★ ★

ಲಾಟರಿ ಯಾರಿಗೆ ಬೇಕಾದರು ಹೊಡೆಯಬಹುದು. ಅದಕ್ಕೆ ವಯಸ್ಸು ಅಥವಾ ಲಿಂಗ ಬೇಧವಿಲ್ಲ. ಅದೇ ರೀತಿ ಸಿನಿಮಾ ಯಶಸ್ಸು ಕೂಡಾ. ಬಿ.ಸಿ. ಪಾಟೀಲರಿಗೆ ಮಧ್ಯವಯಸ್ಸಿನಲ್ಲಿ ಬಂಪರ್ ಹೊಡೆದಿದೆ. ಅವರನ್ನು ಗ್ರಾಮೀಣ ಇಮೇಜ್ ಹೊಂದಿರುವ ನಾಯಕನಟ ಅಂತ ಚಿತ್ರೋದ್ಯಮ ಹಾಗೂ ಸ್ವಲ್ಪ ಮಟ್ಟಿಗೆ ಜನ ಒಪ್ಪಿಕೊಂಡಿದ್ದಾರೆ.

ಮಧ್ಯವಯಸ್ಕ ಹೀರೋ ಎನ್ನುವ ಬಿರುದು ಯಾರಿಗಾದರೂ ಕೊಂಚ ಮುಜುಗರ ತರುವಂಥಾದ್ದೇ. ವಿಷ್ಣುವರ್ಧನ್ ಅಥವಾ ಅಂಬರೀಶ್ ಅವರನ್ನು ಉದ್ಯಮ ಹೀಗೆ ಗುರುತಿಸುವುದಿಲ್ಲ. ಪಾಟೀಲ್‌ಗಷ್ಟೇ ಯಾಕೆ ಈ ಬೇಡದ ಅಭಿದಾನ? ಅವರ ದೇಹ ದಢೂತಿಯಾಗಿದೆ. ಕಣ್ಣಕೆಳಗೆ ಗೆರೆಗಳ ಚಿತ್ತಾರವಿದೆ, ಮುಖದಲ್ಲಿ ಗಡಸುತನವಿದೆ, ಇವೆಲ್ಲವೂ ಸರಿ. ಆದರೆ ತೆರೆಯಮೇಲೆ

ಇವ್ಯಾವುದೂ ಲೆಕ್ಕಕ್ಕೆ ಬರೋದಿಲ್ಲವಲ್ಲ. ಪಾತ್ರವಷ್ಟೆ ಮುಖ್ಯ. ಪಾಟೀಲ್ ಮಾಡಿದ ಪಾತ್ರಗಳೂ ಮಧ್ಯವಯಸ್ಕನವೇ. 'ಕೌರವ'ದಲ್ಲಿ ನಾಯಕಿಯಿಂದಲೇ ಕಪಾಳಮೋಕ್ಷ ಮಾಡಿಸಿಕೊಳ್ಳುವ ಹಳ್ಳಿಹುಂಬ, ಚೆನ್ನಪ್ಪ ಚೆನ್ನೇಗೌಡ ಚಿತ್ರದಲ್ಲಿ ಇದರ ಮುಂದುವರಿದ ಭಾಗ, ಇದೀಗ ಪ್ರೇಮಾಚಾರಿಯಲ್ಲೂ ಮುಗ್ಧ ಹಳ್ಳಿ ಹೈದ.



ಮಧ್ಯವಯಸ್ಕನಾದರೂ ಕನ್ನಡ ನಾಡಲ್ಲೇ ಮೆರೆವೆ

ಪಾಟೀಲ್‌ಗೆ ಕುಣಿಯೋ ವಿದ್ಯೆ ಗೊತ್ತಿಲ್ಲ. ಉತ್ಕಟ ಭಾವ ಪ್ರದರ್ಶನದ ದೃಶ್ಯಗಳಲ್ಲೂ ಇವರ ಮುಖ ಏನನ್ನೂ ಹೇಳಲಾರದು. ಹಾಗಿದ್ದೂ ಅವರನ್ನು ಜನ ಮೆಚ್ಚಿದ್ದಾರೆ. ಅದಕ್ಕೆ ಕಾರಣ ಅವರ ದೈಹಿಕ ನಿಲುವು ಇರಬಹುದೇನೋ. ಎತ್ತರದ ನಿಲುವಿನ ಭರ್ಜರಿ ಮೈಕಟ್ಟಿನ ಆಳು, ಅಗಲ ಮುಖ. ಪೊಲೀಸ್ ಅಧಿಕಾರಿ ಎಂಬ ಹಿನ್ನೆಲೆ ಸಂಗೀತವೂ ಅವರ ಇಮೇಜ್‌ಗೆ ನೆರವಾಗಿರಬಹುದು.

ಪಾಟೀಲ್‌ಗೆ ಇಮೇಜ್ ಹಂಗಿಲ್ಲ. ನಾಯಕಿಯಿಂದ ಒದೆ ತಿನ್ನುವ ಪಾತ್ರಕ್ಕೂ ಅವರು ಸೈ. ಇತರ ಸ್ಟಾರ್‌ಗಳಂತೆ ಸೆಟ್‌ನಲ್ಲಿ ಪಾಟೀಲ್ ಹುಮ್ಮುಬಿಮ್ಮು ತೋರುವವರಲ್ಲ. ನಿರ್ದೇಶಕನ ಸೂಚನೆಯನ್ನುಕಾಯಾವಾಚಾಮಾನಸಾ ಪಾಲಿಸುವುದೇ ನಟನ ಕರ್ತವ್ಯ ಎಂದು ನಂಬಿದವರು. ಅವರ ಈ ಸಜ್ಜನಿಕೆಯೇ ಚಿತ್ರರಂಗದಲ್ಲಿ ಹಾಗೂ ಮಾಧ್ಯಮಗಳಲ್ಲಿ ಅವರಿಗೆ ಸ್ನೇಹಿತರನ್ನು ತಂದುಕೊಟ್ಟಿದೆ. ಹಂಸಲೇಖಾ ಈಗ ರವಿಚಂದ್ರನ್ ಚಿತ್ರಗಳಿಗೆ ನೀಡುತ್ತಿದ್ದ ರಾಗಗಳನ್ನೇ ಪಾಟೀಲ್‌ಗೆ ಕೊಡುತ್ತಿದ್ದಾರೆ. ಫೈನಾನ್ಸಿಯರ್‌ಗಳು ಪಾಟೀಲ್ ಹೀರೋ ಆಗಿರುವ ಚಿತ್ರಕ್ಕೆ ತಕರಾರಿಲ್ಲದೇ ಸಾಲ ಕೊಡುತ್ತಾರೆ.

ಹೀಗೆ ಅಭಿನಯಕ್ಕಿಂತ ಹೆಚ್ಚಾಗಿ ಇತರೇ ಕಾರಣಗಳಿಗೆ ಪಾಟೀಲ್ ಇಲ್ಲಿ ಚಾಲ್ತಿಯಲ್ಲಿದ್ದಾರೆ. ತಮ್ಮನ್ನು 'ಮಧ್ಯವಯಸ್ಕ ಹೀರೋ' ಎಂದು ಎಲ್ಲರೂ ಕೋರಸ್‌ನಲ್ಲಿ ಕರೆದರೂ ಪ್ರತಿಭಟಿಸುವ ಸ್ಥಿತಿಯಲ್ಲಿ ಅವರಿಲ್ಲ. ಅದಕ್ಕೆ ಅವರದ್ದೇ ಸಜ್ಜನಿಕೆ ಅಡ್ಡಬರುತ್ತೆ. ತಮ್ಮಷ್ಟಕ್ಕೇ ಬೇಜಾರು ಮಾಡಿಕೊಳ್ಳುತ್ತಾರೆ. ನಾನೆಲ್ಲೂ 'ನಾನು ಮಧ್ಯವಯಸ್ಕ' ಅಂತ ಘೋಷಿಸಿಲ್ಲ. ಉಳಿದವರಿಗ್ಯಾಕೆ ನನ್ನ ವಯಸ್ಸಿನ ಚಿಂತೆ ಅಂತ ಪಾಟೀಲ್ ಮೊನ್ನೆ ಗೊಣಗಿದ್ದನ್ನು ಯಾರೂ ಕೇಳಿಸಿಕೊಳ್ಳಲಿಲ್ಲ.

★ ★ ★

ನಾಲ್ಕುಕೋಟಿ ಖರ್ಚುಮಾಡಿ 'ಏಕೆ 47' ನಿರ್ಮಿಸಿದ ರಾಮು ತಣ್ಣಗೇ ಕುಳಿತಿದ್ದಾರೆ. ಅದು ಅವರ ಸ್ವಭಾವ. ಊರಿಗೆ ಊರೇ ಚಿತ್ರವನ್ನು ಹೊಗಳಿಕೆಯ ಹಾರಗಳಿಂದ ಅಲಂಕರಿಸುತ್ತಿದ್ದರೆ ರಾಮು ಒಂದು ಸಣ್ಣ ನಗು ಚೆಲ್ಲಿ ಸುಮ್ಮನಾಗುತ್ತಾರೆ.


ಕನ್ನಡ ಚಿತ್ರರಂಗದ ಸಂದರ್ಭಕ್ಕೆ ಅನ್ವಯಿಸಿ ನೋಡುವುದಾದರೆ ರಾಮು ದುಬಾರಿ ನಿರ್ಮಾಪಕ. ಈ ಮಾರುಕಟ್ಟೆಗೆ ಅವರು ಮಾಡುವ ಖ್ಯಾತಿ. 'ಮಾಲಾಶ್ರೀ'ಯನ್ನು ಮದುವೆಯಾದ ಬಳಿಕ ರಾಮುಗೆ ದುರಾದೃಷ್ಟ ಅಂಟಿಕೊಂಡಿತು ಎಂಬ ಅಪಪ್ರಚಾರ ಸುಳ್ಳಾಗಬೇಕಿದ್ದರೆ ಏಕೆ 47 ಚಿತ್ರ ಕ್ಲಿಕ್ ಆಗಬೇಕು.

ಮೇಲ್ನೋಟಕ್ಕೆ ಪರಮ ಸಾಧುವಿನಂಥ ಕಾಣಿಸುವ ರಾಮು ಎಂಥ ವಿಚಿತ್ರ ವ್ಯಕ್ತಿಯೆಂದರೆ, ಸಾಮಾನ್ಯ ಪ್ರತಿಭೆಯುಳ್ಳ ನಿರ್ದೇಶಕ ಎಂದೇ ಗುರುತಿಸಲ್ಪಡುವ ಓಂಪ್ರಕಾಶನ್ನೇ ನೆಚ್ಚಿಕೊಂಡು ಕೋಟಿ ಸುರಿಯುತ್ತಾರೆ. ಓಂಪ್ರಕಾಶ್ ಕೂಡಾ

ರಾಮ್‌ನಾಮ್ ಸತ್ಯ ಹೈ

ಖರ್ಚನ್ನು ಸಹಿಸಿಕೊಳ್ಳುವ ಶಕ್ತಿಯಿಲ್ಲ. ಚತುಷ್ಕೋಟಿ ಕನ್ನಡಿಗರೆಲ್ಲಾ ಉಫೇ ಉಫೇ ಅಂದರಷ್ಟೇ ಅವರ ಚಿತ್ರಗಳು ಲಾಭ ಮಾಡುವುದಕ್ಕೆ ಸಾಧ್ಯ? ಇದು ರಾಮುವಿಗೂ ಗೊತ್ತಿದೆ. ಯಾಕಾಗಬಾರದು, ಎಲ್ಲರೂ ನೋಡುವಂಥ ಚಿತ್ರ ಮಾಡ್ತೀನಿ ಅನ್ನೋದು ಅವರ ಹಠ. ಉಳಿದವರಿಗೆ ನೆಪವಾಗುವ ಟೀವಿ, ವಿಡಿಯೋ ಸಮಸ್ಯೆ, ಕ್ರಿಕೆಟ್ ಎಂಬ ವಿಲನ್, ಮಳೆಯೆಂಬ ಅನಪೇಕ್ಷಿತ ಅತಿಥಿ, ಇವ್ಯಾವುದೂ ರಾಮುಗೆ•ಗೋಚರಿಸುವುದಿಲ್ಲ. ಅವರಿಗೆ ಅವರ ಸಿನಿಮಾ ಅಷ್ಟೇ ಮುಖ್ಯ. ಚಿತ್ರ ಚೆನ್ನಾಗಿದ್ದರೆ, ತಲೆಮೇಲೆ ಮರ ಬಿದ್ದರೂ ಜನ ನೋಡಿಯೇ ನೋಡುತ್ತಾರೆ ಎಂಬ ಸಿದ್ಧಾಂತ.

ಇಂಥ ಹುಚ್ಚುಧೈರ್ಯ ತಂದೊಡ್ಡುವ ಅಪಾಯ ರಾಮುಗೇ ಗೊತ್ತಿಲ್ಲದೇ ಇಲ್ಲ. ಹೋದರೆ ಎರಡು ಕೋಟಿ, ಬಂದರೆ ನಾಲ್ಕು ಕೋಟಿ. ಜೊತೆಗೆ ಇನ್ನೊಂದು ಜನ್ಮಕ್ಕಾಗುವಷ್ಟು




ಫಾರ್ ಎ ಚೇಂಜ್ ಎಲ್ಲರೂ ಅಚ್ಚರಿಗೊಳ್ಳುವಂಥ ಚಿತ್ರವನ್ನು ನೀಡಿದ್ದಾರೆ. ಆದರೆ ಚಿತ್ರದ ನಿರ್ದೇಶಕ ಯಾರೇ ಇರಲಿ, ಕೊನೆಗೆ ಇದು ಐಡೆಂಟಿಫೈ ಆಗೋದು ರಾಮು ಚಿತ್ರವೆಂದೇ. ಚಿತ್ರ ಗೆದ್ದರೂ ಅಷ್ಟೇ ಸೋತರೂ ಅಷ್ಟೆ. ಈ ಛಾನ್ಸ್ ಕಡಿಮೆ. ■

ಭ್ರಷ್ಟಾಚಾರ ಬೆಳವಣಿಗೆ


ವಿಜಯಾನಂದ ಬಿ. ಕಾಲವಾಡ




ಮಾನ್ಯ ಮಂತ್ರಿಗಳೇ! ಇವರು ನನ್ನ ಪತಿ, ನಮಗೆ ಬೇರೆ ಬೇರೆ ಕಡೆಗೆ ಟ್ರಾನ್ಸ್‌ಫರ್ ಆಗುವುದನ್ನು ಕ್ಯಾನ್ಸಲ್ ಮಾಡಿಸಿ ಇದೇ ಸಿಟಿಯಲ್ಲೆ ವಾಸಿಸುವ ಅವಕಾಶ ಮಾಡಿಕೊಡಿ.



ಇವರಿಬ್ಬರು ನನ್ನ ಮಕ್ಕಳು. ಕಷ್ಟಪಟ್ಟು ಫಸ್ಟ್‌ಕ್ಲಾಸಿನಲ್ಲಿ ಪಾಸ್ ಮಾಡಿಸಿದ್ದೇನೆ. ಒಬ್ಬನಿಗೆ ಇಂಜಿನಿಯರ್, ಇನ್ನೊಬ್ಬನಿಗೆ ಡಾಕ್ಟರ್ ಕೆಲಸ ಕೊಡಿಸಬೇಕಾಗಿ ಕೈ ಜೋಡಿಸುತ್ತೇನೆ.



ಓ ಬನ್ನಿ, ಬನ್ನಿ... ಸ್ವಲ್ಪ ನಿಲ್ಲಿ. ಕೈ ಬೆಚ್ಚಗೆ ಮಾಡಿ ಒಳಗೆ ಹೋಗುವಿರಂತೆ!



ಇವನು ನನ್ನ ಮಗಳ ಗಂಡ ಅಂದರೆ ನನ್ನ ಅಳಿದೇವ್ರು ಇವನಿಗೆ ಪ್ರೊಮೋಷನ್ ಕೊಡಿಸಿ ಕೊಡಬೇಕು ದೇವ್ರು.



BISILA BADUKU KANNADA Monthly JULY 1999 RNI No. 67406 / 97 Regd. BGW / 394